Government of Mysore. Department of Public Instruction.

ಸಾಹಿತ್ಯ ಸಂಕಲನ



ಎಸ್. ಎಸ್. ಸಿ. ಪರೀಕ್ಷೆ, ೧೯೬೭–೬೮

ಕನ್ನಡ ಪತ್ರ

(ಮಂಗಳೂರು, ಬೆಳಗಾವಿ, ಧಾರವಾಡ ಮತ್ತು ಕಾರವಾರ ವಿಭಾಗಗಳಿಗೆ ಮಾತ್ರ)

ಬೆಲೆ: ರೂ. ೧-೦೦

(ವಿಜಾಪೂರ, ಬೆಳಗಾವಿ, ಧಾರವಾಡ ಹಾಗೂ ಕಾರವಾರ ಜಿಲ್ಲೆಗಳಲ್ಲಿ ೧೧ನೆಯ ವರ್ಗವನ್ನು ಹೊರ್ತುಪಡಿಸಿ ಇನ್ನಾವ ವರ್ಗದಲ್ಲಿಯೂ ಉಪಯೋಗಿಸಕೂಡದು)

KARN... GRA... Acc. No. ... L...

ಸಾಹಿತ್ಯ ಸಂಕಲನ

ಎಸ್. ಎಸ್. ಸಿ. ಪರೀಕ್ಷೆ, ೧೯೫೯-೬೦

ಕನ್ನಡ ಪತ್ರ

ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್, ಮೈಸೂರು-ಬೆಂಗಳೂರು

೧೯೫೯.

ಬೆಲೆ : ರೂಪಾಯಿ ಒಂದು

ಸಂಪಾದಕ ಸಮಿತಿ :

ಪ್ರೊ. ಸ. ಸ. ಮಾಳವಾಡ, ಎಂ. ಎ., (ಅಧ್ಯಕ್ಷರು).

ಶ್ರೀ ಎಸ್. ಡಿ. ಇಂಚಲ, ಬಿ. ಎ., ಬಿ. ಟಿ.

ಶ್ರೀ ಎಂ. ಕೆ. ವರಗಿರಿ, ಎಂ. ಎ., ಎಂ. ಇಡಿ. ಡಿ. ಬಿ. ಇ.

ಮುದ್ರಕರು : ಶ್ರೀ ಹ. ರಾ. ಪುರೋಹಿತ, ಸಂಯುಕ್ತ ಕರ್ನಾಟಕ ಮುದ್ರಣಾಲಯ ಹುಬ್ಬಳ್ಳಿ
ಪ್ರಕಾಶಕರು: ಎ. ಸಿ ದೇವೇಗೌಡ, ಮೈಸೂರ ಸರಕಾರದ ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್, ಬೆಂಗಳೂರು.

ಪೀಠಿಕೆ

ಮುಂಬಯಿ ಕರ್ನಾಟಕ ವಿಭಾಗದ ಎಸ್. ಎಸ್. ಸಿ. ಪರೀಕ್ಷೆಗಾಗಿ (೧೯೬೦) ಕನ್ನಡ ಗದ್ಯ-ಪದ್ಯಗಳ ಸಂಗ್ರಹವನ್ನು ಸಿದ್ಧಗೊಳಿಸಲು ಒಂದು ಸಂಪಾದಕ ಸಮಿತಿಯನ್ನು ಮೈಸೂರು ವಿದ್ಯಾಭ್ಯಾಸ ಇಲಾಖೆಯ ಡಾಯರೆಕ್ಟರ್ ಅವರು ೧೯೫೯ನೆಯ ನವೆಂಬರ್ ತಿಂಗಳ ಕೊನೆಯಲ್ಲಿ ನಿಯಮಿಸಿದರು. ಸಂಪಾದಕ ಸಮಿತಿಯಲ್ಲಿ (೧) ಪ್ರೊ. ಸ. ಸ. ಮಾಳವಾಡ ಅವರು ಅಧ್ಯಕ್ಷರಾಗಿಯೂ (೨) ಶ್ರೀ ಎಸ್. ಡಿ. ಇಂಚಲ ಹಾಗು (೩) ಶ್ರೀ ಎಂ. ಕೆ. ನದಗಿ ಅವರು ಸದಸ್ಯರಾಗಿಯೂ ನೇಮಕಗೊಂಡರು. ಸಮಿತಿಯವರು ಫೆಬ್ರುವರಿ ತಿಂಗಳ ಮಧ್ಯದೊಳಗಾಗಿ ಪಠ್ಯಪುಸ್ತಕದ ಹಸ್ತಪ್ರತಿಯನ್ನು ಒಪ್ಪಿಸಬೇಕಾದುದರಿಂದ, ಸಮಿತಿಗಾಗಿ ಇದ್ದ ಈ ಅಲ್ಪ ಅವಧಿಯಲ್ಲಿಯೇ ಈ ಸಂಕಲನ ಕಾರ್ಯವನ್ನು ಪೂರ್ತಿಗೊಳಿಸುವುದು ಅನಿವಾರ್ಯವಾಯಿತು.

ಎಸ್. ಎಸ್. ಸಿ. ಪರೀಕ್ಷೆಯ ವಿದ್ಯಾರ್ಥಿಗಳ ಮಟ್ಟವನ್ನು ಮತ್ತು ಈ ಮೊದಲು ಪುಣೆಯ ಎಸ್. ಎಸ್. ಸಿ. ಬೋರ್ಡಿನವರು ಪ್ರಕಟಿಸಿದ ಸಂಗ್ರಹವನ್ನು ಸಮಿತಿಯವರು ಗಮನಿಸಿ ಸಂಕಲನ ಕಾರ್ಯವನ್ನು ಕೈಕೊಂಡರು. ಕನ್ನಡದ ವಿವಿಧ ಕವಿಗಳ, ಗದ್ಯಲೇಖಕರ, ಹಾಗು ವಿವಿಧ ಸಾಹಿತ್ಯರೂಪಗಳ ಪ್ರಾತಿನಿಧ್ಯವನ್ನು ಕಾಯ್ದುಕೊಳ್ಳುವದು ; ಪ್ರಾದೇಶಿಕ ಪ್ರಾತಿನಿಧ್ಯಕ್ಕೆ ಸಾಧ್ಯವಿದ್ದ ಮಟ್ಟಿಗೆ ಅವಕಾಶವನ್ನೀಯುವದು ; ಪ್ರಾಚೀನ ಕಾವ್ಯವು ಅರ್ವಾಚೀನ ಕಾವ್ಯವಾಗಿ ರೂಪಗೊಂಡುದನ್ನು ತೋರಿಸುವದು; ಹಾಗೆಯೇ ಕನ್ನಡ ಗದ್ಯಶೈಲಿಯು ಬಗೆಬಗೆಯಾಗಿ ಬೆಳೆದು ಬಂದುದರ ಪರಿಚಯ ಮಾಡಿಕೊಡುವದು—ಈ ಕೆಲವು ದೃಷ್ಟಿಕೋನಗಳಿಂದ ಈ ಸಂಕಲನವು ರೂಪುಗೊಂಡಿದೆ.

ವಿಪುಲವಾಗಿ ವೈವಿಧ್ಯಪೂರ್ಣವಾಗಿ ಮೈದಾಳಿ ಬಂದಿರುವ ಹಾಗು ಹೊಸ ಜೀವನಕ್ಕೆ ಹೊಂದಿಕೊಂಡು ಮುನ್ನಡೆಯುತ್ತಿರುವ ಕನ್ನಡ ಸಾಹಿತ್ಯಸೃಷ್ಟಿಯಲ್ಲಿಯ ಕೆಲವು ಸುಂದರ ಭಾಗಗಳನ್ನು ನಮ್ಮ ಎಸ್. ಎಸ್. ಸಿ. ವಿದ್ಯಾರ್ಥಿಗಳಿಗೆ ಒಗ್ಗುವಂತಹ ರೀತಿಯಲ್ಲಿ ಪರಿಚಯ ಮಾಡಿಕೊಟ್ಟು, ಆ ಮೂಲಕ ಅವರಲ್ಲಿ ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಒಳ್ಳೆಯ ಅಭಿರುಚಿಯು ಕುದುರಬೇಕೆಂಬ ದೃಷ್ಟಿಯನ್ನಿಟ್ಟುಕೊಂಡು ಈ ಸಂಕಲನವನ್ನು ಪೋಣಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಈ ಸಂಕಲನದಲ್ಲಿಯ ಗದ್ಯ-ಪದ್ಯಗಳ ಲಘುಪರಿಚಯದ ದೃಷ್ಟಿಯಿಂದ ಕೆಲವು ಮಾತುಗಳನ್ನು ಇಲ್ಲಿ ಹೇಳಬಹುದು.

ಗದ್ಯವಿಭಾಗ

ಇಂದಿನ ಕನ್ನಡ ಗದ್ಯಕ್ಕೆ ತಳಹದಿಯಂತಿರುವ ಶಿವಶರಣರ ವಚನಗಳ ಸಂಕಲನ ವನ್ನು ಮೊದಲಿಗೆ ಅಳವಡಿಸಲಾಗಿದೆ. ಮುದ್ದಣನ ರಾಮಾಶ್ವಮೇಧದ ಗಂಭೀರ ಗದ್ಯಶೈಲಿಯು ಹಳಗನ್ನಡದ ಪರಿಚಯ ಮಾಡಿಕೊಡಲು ಸಹಾಯಕಾರಿಯಾಗು ತ್ತದೆ. ಇದೇ ದೃಷ್ಟಿಯಿಂದ ದುರ್ಗಸಿಂಹನ ಪಂಚತಂತ್ರದ ಕಥಾಭಾಗವನ್ನು ಪಂಡಿತ ಪೂಜಾರರು ಸಂಗ್ರಹಿಸಿದಂತೆ ಇಲ್ಲಿ ಆಯ್ದುಕೊಳ್ಳಲಾಗಿದೆ. ಹರಿಹರನ ರಗಳೆಯಲ್ಲಿಯ ಅಚ್ಚಗನ್ನಡದ ಓಟವು ಕನ್ನಡಗದ್ಯಶೈಲಿಯ ವಿಕಾಸದಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಆದುದರಿಂದ ಸಂಚಿಯಣ್ಣನ ಬಾಲ್ಯದ ಒಂದು ಭಾಗವು ಇಲ್ಲಿ ಸಮಾವೇಶವಾಗಿದೆ. ಕಾಳಿದಾಸನ ಶಾಕುಂತಲ ನಾಟಕವನ್ನು ಸಮರ್ಥ ವಾಗಿ ಕನ್ನಡಿಸಿದ ಬಸವಪ್ಪಶಾಸ್ತ್ರಿಗಳ ಶಾಕುಂತಲದಿಂದ ಏಳನೆಯ ಅಂಕದ ಭಾಗವನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಹೊಸಗನ್ನಡ ಗದ್ಯಶೈಲಿಗೆ ನಂದಾ ದೀಪವನ್ನಿಟ್ಟಂತೆ ಇರುವ ಗಂ. ಮ. ತೊರಮರಿ ಅವರ ಗದ್ಯಭಾಗದ ಅಭ್ಯಾಸ ನಮ್ಮ ವಿದ್ಯಾರ್ಥಿಗಳಿಗೆ ಅವಶ್ಯಕ. ಆದುದರಿಂದ ಮಹಾಶ್ವೇತೆಯ ಪ್ರೇರಣೆಯ ಮೇರೆಗೆ ಚಂದ್ರಾಪೀಡನು ಕಾದಂಬರಿಯನ್ನು ಸಂದರ್ಶಿಸಿದ ಭಾಗವನ್ನು ಇಲ್ಲಿ ಕೊಡಲಾಗಿದೆ.

ಇಂದಿನ ಕನ್ನಡ ಶೈಲಿಯು ಸತ್ವಯುತವಾಗಿ ಮುಂದುವರಿದು ಗಹನತರ ವಿಷಯ ಗಳನ್ನೂ ಕನ್ನಡಿಸುವ ಶಕ್ತಿಯನ್ನೂ ಪಡೆದಿರುವುದನ್ನು ಶ್ರೀ ಕುಮಾರಸ್ವಾಮಿಗಳ 'ಮಾನವ ಧರ್ಮ' ಎಂಬ ಬರೆಹದಿಂದ ತಿಳಿಯಬಹುದು. ಕನ್ನಡದ ಸುಪ್ರಸಿದ್ಧ ಸಣ್ಣಕತೆಗಾರರಾದ ಶ್ರೀ. ಮಾಸ್ತಿಯವರ ಸಣ್ಣಕತೆಯು ಮುಂದಿನ ಆಯ್ಕೆ ಯಾಗಿದೆ. ಮಹಾಭಾರತವೆಂಬ ಖಣಿಯಲ್ಲಿಯ ರತ್ನಗಳನ್ನು ಆರಿಸಿ ಕನ್ನಡಕ್ಕೆ ತಂದುಕೊಟ್ಟ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳ 'ವಚನಭಾರತ'ದಿಂದ 'ಯಕ್ಷ ಪ್ರಶ್ನೆ' ಎಂಬ ಭಾಗವನ್ನು ಸೇರಿಸಿಕೊಂಡಿದೆ. ಶ್ರೀ ವಿ. ಸೀತಾರಾಮಯ್ಯ ಅವರ 'ಮೈಸೂರು ರುಮಾಲು' ಎಂಬ ಹರಟೆಯು ವಿನೋದದ, ವಿಡಂಬನೆಯ ಮಾದರಿ ಯಾಗಿದೆ. 'ಧರ್ಮಮ್ಮ' ಎಂಬ ನೇಡಿಯಾಪು ಕೃಷ್ಣಭಟ್ಟರ ಕಥೆಯಲ್ಲಿ ಕನ್ನಡ ನುಡಿಯ ಸೊಬಗು—ಪರಿಶುದ್ಧತೆಗಳು ಮೈದಾಳಿ ಬಂದಿವೆ. ಇಲ್ಲಿ ಹಳೆಯ ಕತೆಗೆ ಹೊಸ ಬಗೆಯ ಮುಖವಾಡವನ್ನು ತೊಡಿಸಲಾಗಿದೆ. ಕನ್ನಡ ಸಂಸ್ಕೃತಿಯ ಹೃದಯದಂತಿದ್ದ 'ಕನ್ನಡ ಗರತಿ' ಜನಪದ ಸಾಹಿತ್ಯದಲ್ಲಿ ಮೂಡಿ ನಿಂತ ಬಗೆ ಯನ್ನು ಹೃದಯಂಗಮವಾಗಿ ಚಿತ್ರಿಸಿದ ಸೌ. ಶಾಂತಾದೇವಿ ಮಾಳವಾಡ ಅವರ ಲೇಖನವನ್ನು 'ಕನ್ನಡತಾಯಿ' ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ಜನಪದ ಸಾಹಿತ್ಯದಲ್ಲಿಯ ಪದಪ್ರಯೋಗವು ಕನ್ನಡ ನುಡಿಯ ಸಂಪತ್ತನ್ನು ಹೆಚ್ಚಿಸಬಲ್ಲದು. ಸರ್ವಜ್ಞನ ನುಡಿಯ ಕೆಚ್ಚನ್ನು ಅರಗಿಸಿಕೊಂಡ ಶ್ರೀ. ಉತ್ತಂಗಿ ಚನ್ನಪ್ಪನವರ 'ತಿರುಕನ ಹಾಡು' ಎಂಬ ಲೇಖನವು ಸಾಹಿತಿಯ ಆತ್ಮಕಥನವಾಗಿದೆ. ನವೀನ ಸಮಾಜರಚನೆಯ ವೈಷಮ್ಯದಲ್ಲಿ ಸಮರಸವನ್ನು ಕಾಣುವ ಬಗೆಯನ್ನು ಶ್ರೀ. ವಿ ಕೃ. ಗೋಕಾಕರು 'ಸಮರಸವೇ ಜೀವನ' ಎಂಬ ತಮ್ಮ ಕಾದಂಬರಿಯಲ್ಲಿ ಸಮರ್ಥ ವಾಗಿ ಚಿತ್ರಿಸಿದ್ದಾರೆ. ಆ ಕಾದಂಬರಿಯಲ್ಲಿಯ 'ಸಹಸ್ರಶೀರ್ಷನಾದ ಸಮಾಜ

ಪುರುಷ' ಎಂಬುದು ಮುಂದಿನ ಗದ್ಯಭಾಗವಾಗಿದೆ. ಹಳಗನ್ನಡದ ಶಾಸನಗಳ ಶೈಲಿಯನ್ನು ಸಮುಚಿತವಾಗಿ ಬೆಳೆಸಿಕೊಂಡ ಸವೋತ್ತಮರಲ್ಲಿ, ರಾಮರಾಯರ 'ತಲಕಾಡುಗೊಂಡ' ಎಂಬ ಐತಿಹಾಸಿಕ ನಾಟಕದ ಏಳನೆಯ ದೃಶ್ಯದಲ್ಲಿ ವಿಷ್ಣು-ವರ್ಧನನ ಓಲಗದ ಚಿತ್ರವಿದೆ. ಅಲ್ಲಿ ಓಲಗದ ವಾತಾವರಣ ಮತ್ತು ವಿಷ್ಣುವರ್ಧನನ ಔನ್ನತ್ಯ ಇವುಗಳನ್ನು ಗುರುತಿಸಬಹುದು.

ಕನ್ನಡದ ಪಿತಾಮಹರಾದ ಶ್ರೀ ಆಲೂರ ವೆಂಕಟರಾಯರ 'ಕರ್ನಾಟಕ ವೀರ ರತ್ನಗಳು' ಎಂಬ ಗ್ರಂಥದಿಂದ ಆಯ್ದುಕೊಂಡ 'ಚಾಲುಕ್ಯ ವಿಕ್ರಮ' ಎಂಬ ಲೇಖನದಲ್ಲಿ ಓಜಸ್ಸಿದೆ. 'ಜಕ್ಕಣನ ಜಾತ್ರೆ' ಎಂಬ ಪ್ರವಾಸ ಲೇಖನದಲ್ಲಿ ಶ್ರೀರಂಗರ ಹಾಸ್ಯದ ಮೋಡಿಯಿದೆ. ಶ್ರೀ ಸಿದ್ದಯ್ಯ ಪುರಾಣಿಕ ಅವರ 'ಸಾಹಿತ್ಯಸಂಪಾದನೆ' ಎಂಬ ಲೇಖನದಲ್ಲಿ ಸಾಹಿತ್ಯದ ಹಿರಿಮೆಯನ್ನು ಸ್ಪಷ್ಟಪಡಿಸಲಾಗಿದೆ. ಶ್ರೀ ಶಿವರಾಮ ಕಾರಂತರ 'ಹಳ್ಳಿಯ ಹತ್ತು ಸಮಸ್ತರು' ಎಂಬ ಹೊತ್ತಿಗೆಯಿಂದ ಎತ್ತಿಕೊಂಡ 'ಅಕ್ಕಸಾಲಿ ತಿಮ್ಮಪ್ಪ' ಎಂಬುದು ಗ್ರಾಮಜೀವನದ ಒಂದು ಸುಂದರ ವ್ಯಕ್ತಿಚಿತ್ರವಾಗಿದೆ. ರಾಘವಾಂಕನ ಸಿದ್ಧರಾಮ ಚಾರಿತ್ರವನ್ನು ಆಧರಿಸಿ ಶ್ರೀ ಜಿ. ಎಸ್. ಶಿವರುದ್ರಪ್ಪನವರು ಬರೆದ 'ಕರ್ಮಯೋಗಿ' ಎಂಬ ಗ್ರಂಥದಿಂದ 'ಅನುಭಾವಸಿದ್ಧಿ' ಎಂಬ ಸೊಗಸಾದ ಭಾಗವನ್ನು ತೆಗೆದುಕೊಳ್ಳಲಾಗಿದೆ. ನುರಿತ ಕತೆಗಾರರೂ ಕಾದಂಬರಿಕಾರರೂ ಆದ ಶ್ರೀ ಬಸವರಾಜ ಕಟ್ಟೀಮನಿಯವರ 'ಸುಂಟರಗಾಳಿ' ಎಂಬ ಸಂಕಲನದಿಂದ ಆಯ್ದ 'ಮುದ್ದು' ಎಂಬ ಸಣ್ಣಕತೆಯಲ್ಲಿ ನಾಯಿಯ ಮೂಕವೇದನೆಯ ಕರುಣಾಮಯವಾದ ಚಿತ್ರವಿದೆ. ಸಿಂಪಿ ಲಿಂಗಣ್ಣನವರ 'ಸ್ವರ್ಗದೋಲೆಗಳು' ಎಂಬ ಹೊತ್ತಿಗೆಯಿಂದ ಎತ್ತಿಕೊಂಡ 'ವಿದ್ಯಾರಣ್ಯರ ವಿಜಯ ಮಂತ್ರ' ಎಂಬ ಕಾಲ್ಪನಿಕ ಪತ್ರಲೇಖನ ಪರಿಣಾಮ-ಕಾರಿಯಾಗಿದೆ.

ಈ ಗದ್ಯವಿಭಾಗದಲ್ಲಿ ವಚನ, ಹಳಗನ್ನಡ ಗದ್ಯ, ನಾಟಕ, ಕತೆಗಳು, ವೈಚಾರಿಕ ಪ್ರಬಂಧ, ವಿಮರ್ಶೆ, ಕಾದಂಬರಿಯ ಭಾಗ, ಹರಟೆ, ವಿಡಂಬನ, ಪ್ರವಾಸ ಸಾಹಿತ್ಯ, ಚರಿತ್ರೆ, ಸಾಹಿತ್ಯಮೀಮಾಂಸೆ, ವ್ಯಕ್ತಿಚಿತ್ರ, ಪತ್ರಲೇಖನ, ಆತ್ಮಚರಿತ್ರೆ ಮೊದಲಾದ ಗದ್ಯಸಾಹಿತ್ಯದ ವಿವಿಧ ರೂಪಗಳನ್ನು ಅಳವಡಿಸಲಾಗಿದೆ.

ಪದ್ಯವಿಭಾಗ

ಸ್ಥಳಾವಕಾಶದ ಪರಿಮಿತಿಯನ್ನು ಅನುಲಕ್ಷಿಸಿ ಹಳಗನ್ನಡ ಹೊಸಗನ್ನಡ ಕಾವ್ಯಗಳಲ್ಲಿ ಪ್ರಾತಿನಿಧಿಕ ಕವಿಗಳ ಕೆಲವು ಉತ್ತಮ ಭಾಗಗಳನ್ನು ಇಲ್ಲಿ ಪವಣಿಸಲು ಪ್ರಯತ್ನ ಮಾಡಲಾಗಿದೆ. ಕನ್ನಡಕ್ಕೊಡೆಯನಾದ ಆದಿಕವಿ ಪಂಪನ 'ವಿಕ್ರಮಾ-ರ್ಜುನ ವಿಜಯ'ದ ವಸಂತಋತುವಿನ ವರ್ಣನಾ ಭಾಗದಿಂದ ಪದ್ಯಸಂಕಲನವು ಆರಂಭವಾಗಿದೆ. ಅಲ್ಲಿ ಸೌಂದರ್ಯೋಪಾಸಕ ಪಂಪನ ನಿಸರ್ಗಪ್ರೇಮ, ಸೂಕ್ಷ್ಮವಾದ ನಿರೀಕ್ಷಣೆ, ವರ್ಣನಾಕೌಶಲ ಇವುಗಳನ್ನು ನೋಡಬಹುದು. ಕನ್ನಡದ ವೀರ ಶೈಲಿಯನ್ನಳವಡಿಸಿಕೊಂಡ ಕವಿ ರನ್ನನ 'ಗದಾಯುದ್ಧ' ಕಾವ್ಯದಿಂದ ದುರ್ಯೋ-

ಧನನ ಛಲವನ್ನು ನಿರೂಪಿಸುವ ಕೆಲವು ಪದ್ಯಗಳನ್ನು ಆರಿಸಿಕೊಳ್ಳಲಾಗಿದೆ. ವೀರ ಕೌರವನ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಛಲವು ಈ ಪದ್ಯಗಳಲ್ಲಿ ಸ್ಫುಟವಾಗಿ ಹೊಮ್ಮಿದೆ. ರನ್ನನ ನಾಟಕಗುಣಾತ್ಮಕ ಶೈಲಿಯ ಬಗೆಯನ್ನೂ ಇಲ್ಲಿ ಗುರುತಿಸಬಹುದು. ಇವೆರಡೇ ಚಂಪೂ ಕಾವ್ಯಭಾಗಗಳು ಈ ಸಂಕಲನದಲ್ಲಿವೆ.

ಇದರ ಮುಂದಿನ ಭಾಗವು ಷಟ್ಪದಿಯ ಸಂಪ್ರದಾಯವನ್ನು ಮೊದಲು ಮಾಡಿದ ರಾಘವಾಂಕನ ಹರಿಶ್ಚಂದ್ರ ಕಾವ್ಯದೊಳಗಿನದು. "ಸತ್ಯಸಿದ್ಧ ಹರಿಶ್ಚಂದ್ರ" ಎಂದು ಹೆಸರಿಸಲಾದ ಈ ನುಡಿಗಳಲ್ಲಿ ಹರಿಶ್ಚಂದ್ರನ ಸತ್ಯಸಾಕ್ಷಾತ್ಕಾರವು ನಡುಗನ್ನಡದಲ್ಲಿ ಮೂಡಿಬಂದಿದೆ. "ಮಾಯಾದೇವಿಯ ಬಾಲ್ಯ" ವನ್ನು ಚಾಮರಸನ ಪ್ರಭುಲಿಂಗಲೀಲೆಯಿಂದ ಆನಯಿಸಿಕೊಳ್ಳಲಾಗಿದೆ. ಅಲ್ಲಿ ಕವಿಯ ಲೋಕಾನುಭವ ರಂಜಿತ ವರ್ಣನಾ ರೀತಿಯನ್ನೂ ಭಕ್ತಿಯ ಬಗೆಯನ್ನೂ ಗಮನಿಸಬಹುದು. ಸರಳವೂ ಮಧುರವೂ ಆದ ಭಾಷೆ ಹಾಗೂ ಭಾವಗಳ ಸುಂದರ ಸಮ್ಮಿಲನವು ಮನೋಜ್ಞವಾಗಿದೆ. ಕುಮಾರವ್ಯಾಸನ ಭಾರತದಿಂದ ತೆಗೆದುಕೊಂಡ 'ದ್ರೌಪದಿಯ ಉದ್ವೇಗ' ಎಂಬ ಭಾಗವು ದ್ರೌಪದಿಯ ವ್ಯಕ್ತಿತ್ವಕ್ಕನುಗುಣವಾಗಿ ಚಿತ್ರಿತವಾಗಿದೆ. ಅವಮಾನದ ಕಿಚ್ಚಿನಿಂದ ಕೆರಳಿದ ಹೆಂಗರುಳಿನ ಉದ್ವೇಗವನ್ನು ಇಲ್ಲಿ ಕುಮಾರವ್ಯಾಸನು ಅತ್ಯಂತ ಪರಿಣಾಮಕಾರಿಯಾಗುವಂತೆ ಬಣ್ಣಿಸಿದ್ದಾನೆ. "ಕಲ್ಯಾಣದೇಶ" ಎಂಬ ಭಾಗವನ್ನು ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಿಂದ ಆಯ್ದುಕೊಳ್ಳಲಾಗಿದೆ. ಅಲ್ಲಿ ಕವಿಯ ವರ್ಣನಾವೈಖರಿಯನ್ನೂ ಕರುನಾಡಿನ ಬಗೆಗೆ ಅವನಿಗಿರುವ ಕಕ್ಕುಲತೆಯನ್ನೂ ಮನಗಾಣಬಹುದು. ನಾದಲೋಲನಾದ ಲಕ್ಷ್ಮೀಶನ ಕನ್ನಡ "ಜೈಮಿನಿ ಭಾರತ" ದಿಂದ ಚಂದ್ರಹಾಸನ ಬಗೆಗೆ ಇರುವ ಕೆಲವು ಪದಗಳನ್ನು ತೆಗೆದುಕೊಳ್ಳಲಾಗಿದೆ. ಇಲ್ಲಿ ಲಕ್ಷ್ಮೀಶನ ಮೃದುಪದಗಳ ಲಾಲಿತ್ಯಮಯವಾದ ಸೊಬಗಿನ ಕಥಾ ನಿರೂಪಣಾಕಲೆಯು ಹೃದಯಂಗಮವಾಗಿದೆ. ಷಟ್ಪದಿಯ ವಿವಿಧ ರುಚಿಗಳನ್ನು ನಡುಗನ್ನಡ ಶೈಲಿಯ ಈ ಕಾವ್ಯಭಾಗಗಳಲ್ಲಿ ಕಾಣಬಹುದು. ರಸಋಷಿಯಾದ ರತ್ನಾಕರವರ್ಣಿಯ 'ಭರತೇಶ ವೈಭವ' ದಿಂದ ಆಯ್ದುಕೊಂಡ 'ಭರತೇಶನ ಆರೋಗಣೆ' ಎಂಬುದು ಸಾಂಗತ್ಯದ ಸಂಗೀತಮಯ ಶೈಲಿಗೆ ನಿದರ್ಶನವಾಗಿದೆ. ಅಲ್ಲಿ ಭರತಚಕ್ರೇಶ್ವರನ ಕೌಟುಂಬಿಕ ಜೀವನದಲ್ಲಿಯ ಸೌಂದರ್ಯ—ಸಂಸ್ಕೃತಿಗಳು ಪ್ರತಿಬಿಂಬಿತವಾಗಿವೆ. ಮುಂದೆ ಬರುವ ಸರ್ವಜ್ಞನ ತ್ರಿಪದಿಗಳಲ್ಲಿ ಅವನ ಅತುಲವಾದ ಲೋಕಾನುಭವದ ಝರಿಯು ಹಾಸ್ಯರಸಭರಿತವಾಗಿ ಹರಿದಿದೆ. ಅವನ ಮಾತಿನಲ್ಲಿ ವಿಮರ್ಶೆಯ ಮೊನೆಯಿದೆ; ಅನುಭವದ ಮಾಧುರ್ಯವಿದೆ. ಮುಂದೆ ಬರುವ ಪುರಂದರದಾಸ ಕನಕದಾಸರ ಪದಗಳಲ್ಲಿಯ ಸಾಮಾಜಿಕ ಮತ್ತು ನೈತಿಕ ವಿಚಾರ ಸರಣಿಗಳನ್ನು ಗಮನಿಸಬಹುದು. ಶ್ರೀ ನಿಜಗುಣಶಿವಯೋಗಿ, ಸರ್ಪಭೂಷಣ ಶಿವಯೋಗಿ ಇವರ ಅನುಭಾವಗೀತಗಳಲ್ಲಿ ರಾಗದ ಲಾಲಿತ್ಯ, ಅನುಭಾವದ ಗಭೀರತೆ ಇವುಗಳು ಕಂಡುಬರುತ್ತವೆ.

ಕುವೆಂಪು ಅವರ 'ಹುಣ್ಣಿಮೆ' ಎಂಬ ಕವನದಲ್ಲಿ ರಮ್ಯತೆ ಮೋಹಕತೆಗಳ ಸೊಬಗನ್ನು ಕಂಡರೆ ಅಂಬಿಕಾತನಯ ದತ್ತರ 'ಸಖೀಗೀತೆ' ಎಂಬ ಅನು

ಕೊಂಡ ಪದ್ಯಗಳಲ್ಲಿ ಮಲೆನಾಡ ನಿಸರ್ಗ ಸೌಂದರ್ಯದ ಹಿನ್ನೆಲೆಯಲ್ಲಿ ಸಹಜ ಜೀವನದ ಚಿತ್ರವನ್ನು ಕಾಣಬಹುದು. ಅನುಭಾವಕವಿಯಾಗಿದ್ದ ಮಧುರಚೆನ್ನರ 'ಸಿಡಿಲು' ಕವನದಲ್ಲಿ ಒಂದು ಭೀಕರ ಸನ್ನಿವೇಶದ ಸರಳ ನಿರೂಪಣೆಯಿದ್ದು ಅಲ್ಲಿ ಒಂದು ಉದಾತ್ತವಾದ ಅರ್ಥಗಾಂಭೀರ್ಯವೂ ಇದೆ. 'ನಾಲಿಗೆಗಾರನ ಮಾತು' ಎಂಬ ಕವನವನ್ನು ಆನಂದಕಂದರ 'ಒಡನಾಡಿ' ಎಂಬ ಪದ್ಯಸಂಗ್ರಹದಿಂದ ಆರಿಸಿಕೊಳ್ಳಲಾಗಿದೆ. ಅದೊಂದು ಸುಂದರವಾದ ರೂಪಕ ಕವನ. ಸಮಾಜದ ಕೃತ್ರಿಮ ನಾಗರಿಕತೆಗೆ ಬೇಸತ್ತ ಕವಿ ಕಡೆಂಗೋಡ್ಲು ಶಂಕರಭಟ್ಟರು ನಿಸರ್ಗದ ಸಹಜ ಸೊಬಗಿಗೆ ಮಾರುಹೋಗುವುದನ್ನು ಅವರ 'ಕಾಡು ನಾಡಿನ ಹಗಲು' ಎಂಬ ಪದ್ಯದಲ್ಲಿ ಗಮನಿಸಬಹುದು. ಶ್ರೀ. ರಂ. ಶ್ರೀ. ಮುಗಳಿ ಅವರ ಹೊಸ ಕಾಲದ 'ನವಿಲು' ಎಂಬ ಕವನದಲ್ಲಿ ಹೊಸಗಾಲವನ್ನು ನವಿಲಿಗೆ ಹೋಲಿಸಿದ ಸ್ವರಮಾಧುರ್ಯದ ಚಿತ್ರವಿದೆ. ಗಾಂಧೀಜಿಯವರ ಕೊನೆಯ ಗಳಿಗೆಯನ್ನು ಕುರಿತ 'ಆತ್ಮಜ್ಯೋತಿ' ಎಂಬ ಶ್ರೀ. ಟಿ. ಎಸ್. ಶರ್ಮ ಅವರ ಕವನವು ಕರುಣರಸದ ಸ್ಪಂದನವನ್ನು ಚಿತ್ರಿಸಿದೆ. ಚೆನ್ನವೀರ ಕಣವಿ ಅವರು 'ಭಾವಜೀವಿ' ಎಂಬ ಕವನದಲ್ಲಿ ತಮ್ಮ ಭಾವಜೀವನವು ವಿಕಾಸಗೊಂಡಬಗೆಯನ್ನು ಚಿತ್ರಿಸಿದ್ದಾರೆ. ಇದನ್ನು ಅವರ 'ಭಾವಜೀವಿ' ಎಂಬ ಖಂಡಕಾವ್ಯದಿಂದ ಆರಿಸಿಕೊಳ್ಳಲಾಗಿದೆ. 'ನವಯುಗ' 'ಸ್ವರಾಜ್ಯ' ಎಂಬ ಕೊನೆಯ ಎರಡು ಭಾವಗೀತೆಗಳನ್ನು ರಚಿಸಿದ ಕವಿಗಳು ಅನುಕ್ರಮವಾಗಿ ಶ್ರೀ. ಎಸ್. ಡಿ. ಇಂಚಲ ಮತ್ತು ಶ್ರೀ. ಗಂಗಪ್ಪ ವಾಲಿ ಅವರಾಗಿದ್ದಾರೆ. ಪ್ರಕೃತಿಯ ಸೊಬಗಿನಲ್ಲಿಯೂ ನವಯುಗದ ವಾಣಿಯನ್ನು ಕೇಳಿದ ಕವಿಯು ಅದನ್ನು ಸಹಜ ಸುಂದರವಾಗಿ ಮೂಡಿಸಿದ್ದಾರೆ. 'ಸ್ವರಾಜ್ಯ'ವೆಂಬುದು ಬರಿಯ ರಾಜಕೀಯಕ್ಕೆ ಸಂಬಂಧಿಸಿದುದಲ್ಲ. ಅದು ಮಾನವೀಯತೆಗೂ ಅನ್ವಯಿಸಬೇಕೆಂಬುದು ಕವಿಯ ಸಂದೇಶವಾಗಿದೆ. ತಿಳಿಯಾದ ಸುಲಭವಾದ ಪದಗಳಲ್ಲಿ ಶ್ರೀ. ಗಂಗಪ್ಪನವರು ಉದಾತ್ತ ಸಂದೇಶವನ್ನು ಚಿತ್ರಿಸಿದ್ದಾರೆ. ಸಾಹಿತ್ಯ ಸಂಕಲನದ ಈ ಕೊನೆಯ ಭಾಗವು ಅರ್ಥಪೂರ್ಣವಾಗಿದೆಯೆಂದು ಭಾವಿಸಬಹುದು.

ಈ ಪದ್ಯಸಂಗ್ರಹದಲ್ಲಿ ಛಂದೋವೃತ್ತಗಳು, ಷಟ್ಪದಿ, ಸಾಂಗತ್ಯ, ತ್ರಿಪದಿ, ಹಾಡುಗಬ್ಬ, ಆಧುನಿಕ ಭಾವಗೀತೆಗಳು—ಈ ವೈವಿಧ್ಯವನ್ನು ಕಾಣಬಹುದಾಗಿದೆ.

ಈ ಸಂಕಲನದಲ್ಲಿ ತಮ್ಮ ಕೃತಿಗಳನ್ನು ಸೇರಿಸಲು ಅನುಮತಿಯಿತ್ತು ಸಹಕರಿಸಿದವರಿಗೆಲ್ಲ ಮೈಸೂರು ಸರಕಾರದ ವಿದ್ಯಾಭ್ಯಾಸ ಇಲಾಖೆಯ ಪರವಾಗಿ ಸಂಪಾದಕ ಸಮಿತಿಯವರು ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ. ಅಲ್ಲದೆ ಇಂತಹ ಒಂದು ಸಂತೋಷಕರವಾದ ಕಾರ್ಯದ ಅವಕಾಶವನ್ನು ಒದಗಿಸಿಕೊಟ್ಟ ವಿದ್ಯಾಭ್ಯಾಸದ ಇಲಾಖೆಯವರಿಗೆ ಸಂಪಾದಕ ಸಮಿತಿಯವರು ಉಪಕೃತರಾಗಿದ್ದಾರೆ.

ಬೆಂಗಳೂರು — ಸ. ಸ. ಮಾಳವಾಡ

೧೨—೨—೧೯೫೯ — ಸಂಪಾದಕ ಸಮಿತಿಯ ಪರವಾಗಿ

ಪ ರಿ ವಿ ಡಿ

(ಗದ್ಯ ವಿಭಾಗ)

(ಪದ್ಯ ವಿಭಾಗ)

ಗದ್ಯವಿಭಾಗ

೧. ವಚನಗಳು

೧ ನುಡಿದರೆ ಮುತ್ತಿನ ಹಾರದಂತಿರಬೇಕು.
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದರೆ ಲಿಂಗ ಮೆಚ್ಚಿ 'ಅಹುದಹುದೆ'ನಬೇಕು.
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ ?

೨ ಹಾಲ ತೊಱೆಗೆ ಬೆಲ್ಲದ ಕೆಸಱು, ಸಕ್ಕರೆಯ ಮಳಲು,
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು,
ಬೇಱೆ ಬಾವಿಯ ತೋಡಿ ಉಪ್ಪ ನೀರನುಂಬವನ ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲ ಸಂಗಮದೇವಾ.

೩ ಆದ್ಯರ ವಚನ ಪರುಷ ಕಂಡಣ್ಣಾ :
ಸದಾಶಿವನೆಂಬ ಲಿಂಗವ ನೆರೆ ನಂಬುವುದು :
ನಂಬಲೊಡನೆ ನೀ ವಿಜಯಿ ಕಂಡಣ್ಣಾ.
ಅಧರಕ್ಕೆ ಸಿಹಿ, ಉದರಕ್ಕೆ ಕಹಿ :
ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ !

೪ ಕೆಱೆ ಹಳ್ಳ ಬಾವಿಗಳು ಮೈದೆಗೆದರೆ
ಗುಳ್ಳೆ ಗೊರಜೆ ಚಿಪ್ಪುಗಳು ಕಾಣಬಹುದು :
ವಾರಿಧಿ ಮೈದೆಗೆದರೆ ರತ್ನಂಗಳು ಕಾಣಬಹುದು !
ಕೂಡಲ ಸಂಗನ ಶರಣರು ಮನದೆಱೆದು ಮಾತನಾಡಿದರೆ
ಲಿಂಗವೆ ಕಾಣಬಹುದು.

೫ ಕರಿ ಘನ : ಅಂಕುಶ ಕಿಱಿದೆನ್ನಬಹುದೇ ? ಬಾರದಯ್ಯಾ.
ಗಿರಿ ಘನ : ವಜ್ರ ಕಿಱಿದೆನ್ನಬಹುದೇ ? ಬಾರದಯ್ಯಾ.
ತಮಂಧ ಘನ : ಜ್ಯೋತಿ ಕಿಱಿದೆನ್ನಬಹುದೇ ? ಬಾರದಯ್ಯಾ
ಮಱಹು ಘನ : ನಿಮ್ಮ ನೆನೆವ ಮನ ಕಿಱಿದೆನ್ನಬಹುದೇ ?
ಬಾರದಯ್ಯಾ, ಕೂಡಲ ಸಂಗಮದೇವಾ.

೬ ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು ?
ಕೋಳಿಯೊಂದು ಕುಟುಕ ಕಂಡರೆ
ಕೂಗಿ ಕರೆಯದೆ ತನ್ನ ಕುಲವೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ.
ಕೂಡಲ ಸಂಗಮದೇವಾ !

೭ ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುಱಿಸುವಂತೆ,
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು
ಒಲೆದುಯ್ಯಾಲೆಯಾಡುವಂತೆ—
ಕೂಡಲ ಸಂಗನ ಶರಣರೊಡನೆ ಮಱೆದು ಸರಸವಾಡಿದರೆ
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ !

೮ ಮಾಡಿದೆನೆಂಬುದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡಂಗುರ !
ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ.
ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ
ಬೇಡಿತ್ತನೀವ ಕೂಡಲ ಸಂಗಮದೇವ.

೯ ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ ;
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ.
ಗುಹೇಶ್ವರಾ, ನಿನಗಾಗಿ ಸತ್ತವರನಾರನೂ ಕಾಣೆ.

೧೦ ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಬುದೆ ?
ಕಡೆಗೀಲು ಬಂಡಿಗಾಧಾರ.
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಶರಣರ ನುಡಿಗಡಣವೆ ಕಡೆಗೀಲು
ಕಾಣಾ, ರಾಮನಾಥಾ.

೧೧ ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ ;
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ.
ನಿಮ್ಮ ಶರಣರ ಸೂಳ್ನುಡಿಯ ಒಂದು ಗಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ, ರಾಮನಾಥಾ.

೧೨ ಹೊಲೆಯರ ಬಾವಿಯಲೊಂದು ಎಲುವು ನಟ್ಟಿದ್ದರೆ
'ಹೊಲೆ ಹೊಲೆ' ಎಂಬುದೀ ಲೋಕವೆಲ್ಲ.
ಹಲವೆಲುವಿದ್ದ ಬಾಯಲ್ಲಿ ಅಲ್ಲದುದ ನುಡಿದರೆ
ಅದು ಹೊಲೆಯರ ಬಾವಿಯಿಂದ ಕರಕಷ್ಟ
ಕಾಣಾ, ರಾಮನಾಥಾ.

೧೩ ಕಾಯಕದಲ್ಲಿ ನಿರತನಾದರೆ
ಗುರು ದರ್ಶನವಾದರೂ ಮಱೆಯಬೇಕು,
ಲಿಂಗ ಪೂಜೆಯಾದರೂ ಮಱೆಯಬೇಕು,
ಜಂಗಮ ಮುಂದಿದ್ದಡೆಯೂ ಹಂಗ ಹಱಿಯಬೇಕು,
ಕಾಯಕವೇ ಕೈಲಾಸವಾದ ಕಾರಣ !
ಅಮಳೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.

೧೪ ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧನಾಗಿ ಕಾಯಕವ ಮಾಡುವ ಸದ್ಭಕ್ತಂಗೆ
ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು,
ಮಾರಯ್ಯಪ್ರಿಯ ಅಮಳೇಶ್ವರ ಲಿಂಗದ ಸೇವೆಯುಳ್ಳನಕ್ಕ.

೧೫ ಬಂಡಿಯ ಮೇಲಣ ಹೆಳವನಂತೆ
ಕಂಡ ಕಂಡ ಕಡೆಗೆ ಹಲುಬಿದರೆ ನಿಮಗೆ ಬಂದುದೇನಯ್ಯಾ ?
ಆ ಮಹಾಘನವನಱಿಯದನ್ನಕ್ಕ
ಹಾಡಿದರಿಲ್ಲ ಹರಸಿದರಿಲ್ಲ ಕೇಳಿದರಿಲ್ಲ ;
ಏನ ಮಾಡಿದರೂ ವಾಯಕ್ಕೆ ವಾಯವೆಂದರು
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

೧೬ ಅರ್ಚನೆ ಪೂಜನೆ ನೇಮವಲ್ಲ, ಮಂತ್ರತಂತ್ರ ನೇಮವಲ್ಲ,
ಧೂಪದೀಪಾರತಿ ನೇಮವಲ್ಲ !
ಪರಧನ ಪರಸ್ತ್ರೀ ಪರದೈವಂಗಳಿಗೆಱಗದಿಪ್ಪುದೇ ನೇಮ
ಶಂಭು ಜಕ್ಕೇಶ್ವರ ದೇವರಲ್ಲಿ.
ಇದು ಕಾರಣ ಇದು ನಿತ್ಯ ನೇಮ.

೧೭ ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದೊಡೆ
ನಾ ಕೈಮುಟ್ಟಿ ಎತ್ತಿದೆನಾದೊಡೆ ನಿಮ್ಮಾಣೆ,
ನಿಮ್ಮ ಪ್ರಮಥರಾಣೆ !
ಅದೇನು ಕಾರಣವೆಂದೊಡೆ, ನೀನಿಕ್ಕಿದ ಭಿಕ್ಷೆಯಲ್ಲಿಪ್ಪೆನಾಗಿ !

ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆಮಾಡಿದೆನಾದೊಡೆ
ನೀನಾಗಲೆ ಎನ್ನ ನರಕದಲ್ಲದ್ದಿ ನೀನೆದ್ದು ಹೋಗಾ,
ಶಂಭು ಜಕ್ಕೇಶ್ವರಾ.

೧೮ ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವ ತೆರನಂತೆ,
ಮನ ಬಂದುದ ಬಯಸಿ ಬೇವುತ್ತಿದ್ದೇನೆ, ಅಯ್ಯಾ !
ಎನ್ನ ಮನದ ದುರಾಶೆಯ ಮಾಣಿಸಿ ನಿಮ್ಮತ್ತ ತೋಱಾ,
ಚೆನ್ನ ಮಲ್ಲಿಕಾರ್ಜುನಾ.

೧೯ ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ.
ಬಂಧನಕ್ಕೆ ಬಂದ ಗಿಳಿ
ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ.
'ಕಂದಾ, ನೀನಿತ್ತ ಬಾ' ಎಂದು
ನೀವು ನಿಮ್ಮಂದವ ತೋಱಯ್ಯಾ,
ಚೆನ್ನ ಮಲ್ಲಿಕಾರ್ಜುನಾ.

೨೦ ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ !
ಎನಗುಳ್ಳುದೊಂದು ಮನ ;
ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ ಎನಗೆ ಭವವುಂಟೆ
ಚೆನ್ನ ಮಲ್ಲಿಕಾರ್ಜುನಾ ?

೨೧ ಅಱಿಯದವರೊಡನೆ ಸಂಗವ ಮಾಡಿದಡೆ
ಕಲ್ಲು ಹೊಯ್ದು ಕಿಡಿಯ ತೆಗೆದುಕೊಂಬಂತೆ !
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ !
ಚೆನ್ನ ಮಲ್ಲಿಕಾರ್ಜುನಯ್ಯ,
ನಿಮ್ಮ ಶರಣರ ಸಂಗ ಕರ್ಪುರದ ಗಿರಿಯನುರಿ ಕೊಂಬಂತೆ !

೨೨ ಕಲ್ಯಾಣವೆಂಬುದಿನ್ನಾರಿಗು ಹೊಗಬಾರದು, ಅಸಾಧ್ಯವಯ್ಯಾ !
ಆಸೆ ಆಮಿಷವನಳಿದಂಗಲ್ಲದೆ
ಕಲ್ಯಾಣದತ್ತಲಡಿಯಿಡಬಾರದು.

ಒಳಹೊರಗು ಶುದ್ಧವಾದಂಗಲ್ಲದೆ
ಕಲ್ಯಾಣವ ಹೊಗಬಾರದು.
ನೀನೆಂಬುವನಱಿದು, ನಾನೆಂಬುದ ಮಱೆದು,
ತಾನು ತಾನಾದಂಗಲ್ಲದೆ ಕಲ್ಯಾಣವ ಹೊಕ್ಕು ಬೆರಸಬಾರದು.

— ವಚನಕಾರರು

ವಚನಗಳು— ೧–೮ ಬಸವಣ್ಣ. ೯ ಅಲ್ಲಮಪ್ರಭುದೇವರು. ೧೦–೧೨ ದೇವರ ದಾಸಿಮಯ್ಯ. ೧೩ ಆಯ್ದಕ್ಕಿಯ ಮಾರಯ್ಯ. ೧೪ ಆಯ್ದಕ್ಕಿಯ ಮಾರಯ್ಯನವರ ಪ್ರಣ್ಯಾಂಗನೆ ಲಕ್ಕಮ್ಮ. ೧೫ ಹಡಪದ ಅಪ್ಪಣ್ಣನವರ ಧರ್ಮಪತ್ನಿ ಲಿಂಗಮ್ಮ. ೧೬–೧೭ ಸತ್ಯಕ್ಕ. ೧೮–೨೨ ಅಕ್ಕಮಹಾದೇವಿ.

೨. ಅಣ್ಣನ ಆಣತಿ

ಲಕ್ಷ್ಮಣಂ ನಡೆತಂದು, ಪೊಂದೇರನಣಿಗೆಯ್ದು, ದಿವ್ಯಾಶ್ವಂಗಳಂ ಪೂಡಿ, ವಾಗೆಯಂ ಕೈಯೊಳೀಟ್ಟು, ತಾನಡರದೊಯ್ಯನೆ ದೇವಿಯರ ಕನ್ನೆಮಾಡದ ಕಟ್ಟಿದಿರೊಳಿರಿಸಿ, ಮೊಗವಾಡದ ಬಾಗಿಲೊಳ್ ನಿಂದಾದಂ ಕಲ್ಮನನಾಗಿ— ಮಾತೆ! ಇದೆ ಇದೆ ಬಣ್ಣದೇರ್, ವನಕುಯ್ವೊಡೆಂದ ರಾಘವನಟ್ಟಿದಂ, ತಳ್ವದೆ ಪೋಱಮಡಿಪೆಂದಂ.

ವನಕ್ಕೆಯ್ದಿ ಪುಣ್ಯಾಶ್ರಮಂಗಳಂ ಮೇಣೊರ್ಮೆಯುಂ ಕಂಡು ಪಾವನೆಯಪ್ಪೆನೆಂದು ಬಗೆದ ಪಂಬಲ್ ಬೆಟ್ಟಿತಾಗೆ ಸೀತೆಗೆ ಕಣ್ಣೊಳೆ ಬೆಳಗಪ್ಪುದುಂ, ಪೊಱವಾಗಿಲೊಳ್ ಪೆಸರ್ವಿಡಿದು ಕರೆವ ದನಿಯುಂ ಲಕ್ಷ್ಮಣಸಂಪಱಿತು, ಪಱಿದೆಱೆದು ಪೊಱವಂದು, ಅರೆನೊಗದೊಳಿರ್ಪ ಸೌಮಿತ್ರಿಗೆ — ಏನಯ್ ಮೈದುನ, ಜೀವಿತೇಶನೆನ್ನೊಂದು ಬಿನ್ನಪಮಂ ತೂಱದೆ ನಲ್ಮೆ ಮಿಗೆ ಪೂರೆಡಸೆ! ನಿನ್ನಂ ಪೇೞ್ದಟ್ಟಿದನೆ! ಕರುಣಾಕರನಲ್ತೆ! ದೀನೆಯಂ ನಲ್ಲನಲ್ಲದೆ ಮೇಣಾವಂ ಕಾವಂ? ಆಳ್ದನಡಿದಾವರೆಗಳಾವಗಂ ಸೊಗಮಿರ್ಕೆ! ಆದೊಡಿನಿತೊಂದು ಬೇಗದಿಂ ಪೊೞ್ತುವೆಯೊಳೇಂ ತೇರಂ ತಂದಯ್? ಪಗಲಿನ್ನುಮೊರ್ಮೊಟಿಂ ಮೀಱತಿಲ್ಲಂ, ಅನತ್ತೆವಿರ್ಗೆಱಗಿ ಪರಕೆಗೊಂಡೆನಿಲ್ಲ! ಮಾಳವಿಯರಂ ಬೆಸಗೊಂಡೆನಿಲ್ಲ! ಚಂದ್ರಮತಿಗೆ ಪೇೞ್ದೆನಿಲ್ಲ! ಏಗೆಯ್ವೆನೆನುತೆ ವಿಚಾರದಿಂ— ಅಪ್ಪುದಪ್ಪುದು ನಿಡುಮಯಣಂ ಇರ್ಕೆ ರಾಘವಂ ಪೇೞ್ವಂ ಅಲ್ಲದೊಡೆ ತಾಂತಮಗೆ ನೆಲೆಗೆಯ್ವರ್. ಎಂತುಂ ಕಿಱಿದುಂ ದಿನಕ್ಕೆ

ಮರಳ್ದು ಬರ್ಪವಳ್ತೆ! ಆಗಳ್ ಋಷಿಪತ್ನಿಯರೆಂಬ ನಲ್ಗತೆಯುಂ ಮೇಣುಂ ವನ ದೊಳ್ ಕಂಡ ಪೊಸ ಬಿನದಮುಂ ಬಂದಱಿಪೆ ಸಂತಸಮಿರ್ಮಡಿಕುಂ ಆಯಿತ್ತಾಯ್ತು! ಪೋಪಂ ಪೋಪಮೆಂದು ಆನಂದಾಶ್ರು ವಿಲುಳಿತ ಕಮಲವಿಲೋಚನೆ ಚಂದ್ರಮುಖಿ ಮುನಿಕಾಂತಾದರ್ಶನೋತ್ಕಂಠೆ ಪುಳಕಿತಸರ್ವಾಂಗಿ ಇಂತಾತುರದೊಳಿರ್ದಳ್.

ಎನ್ನ ರನ್ನಗೆಯ್ಪಿಡಿ! ಕವಡನಱಿಯದ ಜಾಲಿ ಮೆಯ್ಪೊರ್ಚಿನ ನಲ್ಲನೊಲೆ ತನ್ನೊಳಿಂತು ನನ್ನಿಯೆಂದೇ [ಬಗೆದು] ಸೊಗವಯಣಾದ ಬಯಕೆಯಿಂ ಬೇಗಿ ನುಡಿಯೆ ಕೇಳ್ದು ಮನಮುಱುಗದವರಾರೊ? ಪಾಲ್ಗಡಲೊಳಮರ್ದು ಪುಟ್ಟಿದುದಂ ನೆನೆದಳಲ್ಲದೆ ನಂಜುರ್ಕಿದುವನೇಗೆಯ್ದುಂ ಬಗೆಯುದಾದಳ್. ಆಃ! ಭಾಗ್ಯಲಕ್ಷ್ಮಿ! ನಿನಗಮೀ ವಿಧಿಯಾಯ್ತೆ! ಕೂಟಿಮ್ಗಂಗಳೊಳೊಡಂಬಾಟ್ಪೊಂದು ಬವಣೆ ನೇರ್ಪಟ್ಟುದೇ!

ಆಗಳೂರ್ಮಿಳೆಯರಸಂ ಜಾನಕಿಗೆ— ಮಾತೆ! ವನಕೆ ಪೋಪೆನೆಂದು ಕಾಂತನನೇತರ್ಕೆ ಬೇಡಿದಾ! ಏಂ ಸೊಗಮುಂ ಕಾಣ್ಬುದುಂಟು! ಮುನ್ನುಂಡುದು ಸಾಲದೆ! ವಿಪಿನಂ ಕ್ರೂರವ್ಯಾಳವೃಕಸೂಕರಚಮೂರುಕಂಠೀರವನಿಷೇವಿತ-ಮಲ್ತಾ! ಈ ಬಗೆಗೇವೇಟ್ರೆನೊ! ಎಂಬುದುಂ; ಸೀತೆ— ಏನಯ್ ಲಕ್ಷ್ಮಣ ಇಂತೇಕುಸಿರ್ದಯ್? ವನಮುಂ ಕಾಣೆನೆ? ದುಷ್ಟ ಮೃಗಂಗಳೆಮಗೇಂ ಗೆಯ್ಗುಂ? ಬೇಂಟೆಗೆ ಪೋದಪೆವೆ? ಋಷ್ಯಾಶ್ರಮಕ್ಕೆ ಪೋಪರ್ಗೆ ಮೃಗಂಗಳ ಗೊಡವೆಯೇಕೆ? ಮುನಿಪತ್ನಿಯರ್ ವನದೊಳಿರರೆ? ಎಂತೆಂತೊ ಕಾಂತನಂ ಕಾಡಿ ಬೇಡಿ ಅನು-ಗೊಂಡೆನಿದಂ ತಡೆವುದಂದಮೆ ಕಂದ! ಶ್ರೀರಘುಕುಲವಾರ್ಧಿಪೂರ್ಣಶಶಾಂಕನೊಲ್ಮೆ ಎನ್ನೊಳಿರೆ ಬನ್ನಮಾವುದುಮೊಂದದಯ್; ನಿಕ್ಕುವಂ ತಳ್ವದೆ ಪೋಪಂ ಇತ್ತಲ್ ರಥಮುಂ ಕೂಡಿವಾರಾ! ಎನುತುಸಿರ್ದಳ್. ಇಂತಾಗೆ ದೇವಿಯರ್ ಬಯಸು ವಂತಿರೆ ಪಯಣಂ ಲೇಸಕ್ಕೆ ಎನುತೆ ಮನದೊಳ್ ಭಾಸ್ಕರನಂ ಬೇಡಿ ಮತ್ತಂ ಪ್ರಕಾಶದೊಳ್— ಇದೆ ರಥಂ ಸಿದ್ಧಮಡರಿಮೆಸೆ; ಅಕ್ಕೆ ಎಂದೊಂದು ಮೂಱಡಿ ನಡೆದು ಸಸಂಭ್ರಮಂ ಲಕ್ಷ್ಮಣಂಗೆ—ಓ ಓ! ಇರಿರ್; ಬಂದೆಂ ಪುಣ್ಯತಪೋ ವನಮುಂ ಕಾಣ್ಬೊಂದಾತುರಂ ಪಿರಿದಾಗೆ ಮುನಿಕಾಮಿನಿಯರ್ಗೆಂದು ಕಟ್ಟಿದ ಬಾಯನಂಗಳಂ ಮಱೆತೆನಲಾ! ತಂದಪೆನೆನುತೊಳಪೊಕ್ಕಳ್.

ಅಂತು ದೇವಿ ಪುಗುವುದುಂ, ಲಕ್ಷ್ಮಣಂ ಮುಂತಿರ್ಪ ತೇರಂ ದಿಟ್ಟಿಸಿ— ಎಲೆ ಪೊಂದೇರೆ! ನೀನುಮೆನ್ನಂತಿರೆ ಮುಮ್ಮೆಯ್ಯೊಳೇಂ ದುಷ್ಕೃತಿಯಂ ಕಟ್ಟಿದೆಯೊ? ಸೂಳಯ್ಪು ಕಾಳೆಗವಱೆಗಳ್ ಮುಂತಿರೆ, ಕಿಳಿರ್ವ ತುರಗದಟಿಂ ಪಿಂತೆವರೆ, ನಡೆವ ಕಾಲಾಳ್ಪಡೆ ಕೆಲಬಲನೊಳಿರೆ, ಚಂಡ ಭಂಡನಕೆಂದರಿರಾಜರೊಳೆತ್ತಿ ನಡೆವ ಗಂಡು-ಗಲಿಯುಂ ಕುಳ್ಳಿರಿಸಿ ಕೊಂಡುಯ್ವ ಸಯ್ಪುಳ್ಳಂಗೆ ನಿನಗಿಂದು ಪೆಣ್ಣಂ ಪೆಟ್ಗೊಲೆ-ಗೆಂತಂತು ವನಕೆ ಕೊಂಡುಯ್ಪುದಾಯ್ತೇ! ಮಿಳಿರ್ವ ಕೇತನಮೀಗಳೆತ್ತವೋ-

ದುದೊ ? ಪಾಪಮೇನಾಯ್ತೋ ? ಆಃ ! ನಿನ್ನೀ ಭಾಗ್ಯಮೆ ! ತುರಂಗಮಂಗಳಿರ ! ನೀಮುಮೇನಂ ಸಂಚಿಸಿದಿರಯ್ ? ಇನ್ನೆಬರಂ ರಾಯನ ಹಯಶಾಲೆಯೊಳ್ ಬಳೆದುಂ ಬಾೞ್ದುಮೀಮುತ್ತದಿನಂಗಳೊಳಿಂತೊಂದು ಯೋಗಂ ದೊರೆಕೊಂಡುದೆ ! ಎಂದಾಡಿ ಮತ್ತಂ ಬಿಸುಸುಯ್ದು ರಥಹಯಂಗಳ್ಗೆ—ಓ ! ಕೊಲೆಗನಾನಿರೆ ನಿರ್ನೆರಂ ನಿಮ್ಮನೇನೆಂದು ಪೞಿವೆನೊ ? ತೇರೆ ! ನೀನೀಕಡೆವೊೞ್ತಿಗಂ ಭೂಮಿಯಂತಿರೆ ಭೂಸುತೆಯಂ ಪೊಱುವೆ ಗಡ ! ತುರಗಂಗಳೇ ! ನೀಮುಂ ಧನ್ಯರ್ ; ಸೀತಾ-ಕಟಾಕ್ಷವೀಕ್ಷಣಪರಿಪೂತ ಗಾತ್ರರಪ್ಪಿರಲ್ತೆ! ಅಱಿಗುಲಿಯೆನಾನೊರ್ವನೆ ದೇವಿಯರ-ನೇವೊೞ್ತುಂ ಸೇವಿಸಿಯುಮಿಂದಿಂಗಳ್ ಪುಲಿಕರಡಿಸಿಂಗಂಗಳ ಬಾಯೊಳ್ ತೂಂತ-ಲೆಂದೆ ಕೊಂಡುಯ್ದಪೆಂ—ಅಕ್ಕಟಾ ! ಅಬ್ಬೆ ಎನ್ನನೇನೆಂದು ಪೆತ್ತಳೊ ! ಮೇಣಯ್ಯ ನೇನೆಂದು ಸಾಕಿದನೊ ! ಮುನ್ನಮೆಳವರೆಯದೊಳೀರೇೞ್ಗಾಲಂ ವನಂಬೊಕ್ಕು ನಿದ್ರಾಹಾರಂಗಳನುೞಿದು ಶ್ರೀರಾಮಚಂದ್ರಮನಂ ತ್ರಿಕರಣಶುದ್ಧಿಯಿಂ ನೇವಿ-ಸಿಯುಂ ಪಡೆದ ಸೈಪಿನೇೞ್ಗೆಗಿನಿತೊಂದು ಫಲಮಾಯ್ತೇ ! ಹರಹರಾ ! ಎನುತೆ ಚಿಂತಿಸುತಿರ್ದಂ. ಅನ್ನೆಗಂ—

[ಸೀತೆ] ತಾನೆ ಐರದಾಳಿಯ ಬಿಜ್ಜೋಲೆಯ ಚಂದನದ ಕುಂಕುಮದ ಕರ್ಮಣಿಯ ಕಸ್ತೂರಿಯ ಕರ್ಪೂರದ ಕಮ್ಮೆಣ್ಣೆಯ ಕಾವಿಗಪ್ಪಡದ ಕರಂಡಮಂ ಕೆಯ್ಯೊಳ್ಕೊಂಡು ಅಂತಃಪುರದಿಂ ಪೊಱಮಟ್ಟು ಪೊಱವಾಗಿಲ್ಗೆ ಬಂದು—ತಳ್ವದಿರ್ ಪೋಪಂ ಪೋಪಮೆಂದು ಮೈದುನಂಗೆ ಕೇಳಿಸಿದಳ್. ಆಗಳ್ ಜಿತಾತಿಕಾಯಂ ಕಾಯದೊಂದು ಕಾಯ್ಪುಂ ಒಡಲಿನೊಂದು ಸೂಡುಂ ಸೀತಾಂಗನಾವದನ-ಶೀತಾಂಶುದರ್ಶನದತ್ತಣಿಂ ತಿಳಿದು ಮಾಪರ್ಟ್ಟುದೋ ಎನೆ ದೃಢಚಿತ್ತನಾಗಿ ಚಿಕ್ಕನೆ ಕೆಲನನಿೞಿದು ಪೂಡಿದ ರಥಮಂ ನೂಂಕಿ ಸಜ್ಜುಗೆಯ್ದು ಕೆಯ್ಯ ಕರಂಡಮಂ ತಾಂ ಕೊಂಡಿಟ್ಟು, ದೇವಿಯರಂ ರಥಮನಲಂಕರಿಪುದೆಂಬುದುಮಂತೆಯೆ ಸಂಭ್ರಮದ ನಾಟ್ಯದಿಂ ತೇರನೇಱಿದಳ್. ಇಂತು ಜಾನಕಿ ರಥದೊಳ್ ಕುಳ್ಳಿರಲೊಡಂ ಲಕ್ಷ್ಮಣಂ ಬಗೆಯೊಳೆ ಕುಲದೈವಮಂ ಭಾವಿಸಿ, ಗುರುಜನಮಂ ನೆನೆದು, ತ್ರಿವಿಕ್ರಮ ಮೂರ್ತಿಯಂ ಸ್ಮರಿಸಿ, ಧರೆಯನೆನೆ ರಥಮಂ ಬಲವಂದು, ಹಯಂಗಳಂ ಬೋಳಯ್ಸಿ, ತಾನುಮಡರ್ದು, ಎಡೆಗೆಯ್ಯೊಳ್ ವಾಗೆಯಂ ಸಡಿಲ್ವಿಡಿದು, ಬಲ-ಗೆಯ್ಯ ಕಸೆಗೋಲನಲುಗಿ ಚಪ್ಪರಿಸಿ ಜಡಿದಂ.

ಸಾಧ್ವೀ ! ನಳ ನಳಕೂಬರ ಮಾತಲಿಗಳಂ ಸಾಟಿಗೆಯ್ವ ಸಾರಥಿಗೆಯ್ಮೆ ಯೊಂದು ಜಾಣ್ಮೆಯಿಂ ಸೂಟಿಯಿಂ ನೂಂಕೆ ಪಾಱಿ ನಾಡಿಂ ನಾಡಿಂಗೆ ಧೀಂಕಿ-ಟ್ಟುವೋ ಎನೆ ಪವನಜವಮಂ ಮುಂಚಿ ವಾಜಿಗಳೋಟಂಗೊಂಡುವು. ತಿಱ್ಱನೆ ಸುತ್ತುವ ಪಾಱುಂಬಳೆಯ ಗಱಿಗಱಿಮುಂ ಬಿಜ್ಜನೆ ತೂಱಿ ಬೀಸುವ ಪ್ರತಿಕೂಲ ಪವನನೊಂದು ಭುಗಿಭುಗಿಲುಂ, ದಿಮ್ಮನೆ ಕುದಿವ ಕುದುರೆಗಳ ಖುರಪುಟದ ಪಟ-ಪಟಮುಂ, ದೇವಿಯರಂ ಬಿಡುವುದಾಗದನ್ನೆಯಮಕ್ಕುಮೆಂದು ಕೂಗಿ ಮಱುಕದ

ನೊಳ್ಳಿಯಿಂ ಬೇಟ್ಟುವೆನೆ ರಾಘವಾನುಜನ ಕಿವಿಗೆ ಕಠೋರವಾಯ್ತು. ಪತಾಕೆಯೊಂದು ರಾಘವನನೂಣೆಯುಮಂ ಕಾಣೆನೆಂದು ವಿಮುಖಮಾದುದು ; ಕೆಲಬಲನ ಸ್ಥಾವರಜಂಗಮಂಗಳ್ ಕಂಡುಂ ಕಾಣದಂತಿರೆ ಕಣ್ಮುಚ್ಚಿಯಾದುವು.

(ರಾಮಾಶ್ವಮೇಧ)

—ಮುದ್ದಣ

೩. ಶಿವಭೂತಿಯ ಕಥೆ

ಒಂದು ಮಹಾಟವಿಯೊಳ್ ಕಂಬಳಕನೆಂಬ ಬೇಡನೊಂದು ಪುಲಿ ತನ್ನನಟ್ಟಿವರೆ ಪ್ರಾಣಭಯದಿಂ ದೆಸೆಗಾಣದೆ ಪುರಾಣಕೂಪದೊಳ್ ಬಿಟ್ಟಂ. ಆ ಪುಲಿಯುಂ ಕೋಪಾಂಧಮಪ್ಪುದಱಿಂದದಱೊಳೆ ಬಿಟ್ಟುದು. ಅಷ್ಟಗನೊಂದು ಚಪಲಕನೆಂಬ ಕಪಿ ನೀರ್ಗುಡಿಯಲೆಂದಾ ಬಾವಿಗೆ ಬಂದು ಅದಱ ಸಮೀಪದೊಳ್ ನಿಂದು ಪೋಗಲಿಂಬಿಲ್ಲದೆ ತಡಿವಿಡಿದೆಳಲುತ್ತಿರ್ದ ಸರ್ಪನ ಜಾಲಮಂ ಬಳ್ಳಿಗೆತ್ತು ಪಿಡಿದಿೞಿಯುತ್ತುಮಹಿಸಹಿತಂ ಆ ಬಾವಿಯೊಳೆ ಬಿಟ್ಟುದು. ಅನಿತಱೊಳಲ್ಲಿ ತೀರ್ಥಯಾತ್ರಾನಿಮಿತ್ತದಿಂ ಪೋಗುತಿರ್ದ ಶಿವಭೂತಿವೆಸರ ದಯಾಪರನಪ್ಪ ಪಾರ್ವನೊರ್ವಂ ಆ ಕೂಪಮಂ ಕಂಡು ತನ್ನ ಕೈಯ ಕಳಶಮಂ ಬಳ್ಳಿಯೊಳ್ ಕಟ್ಟಿ ನೀರಂ ತೆಗೆವಾಗಳದು ಪುಲಿ ಪಿಡಿದು ನೆಲ್ವುದುಂ ಅದು ಕೈಗೆ ಬಿಣ್ಣಿತ್ತಾಡೊಡೆ ಅದಂ ನೋೞ್ಪೆನೆಂದು ಬಲಿದು ಪಿಡಿದು ಮೆಲ್ಲನೆ ತೆಗೆಯೆ ಪುಲಿ ಪೊಱಮಟ್ಟು ಪೊಡೆವಡೆ ಕಂಡು ಚೋದ್ಯಂಬಟ್ಟು ನೀನೀ ಬಾವಿಯೊಳ್ ಬಿಟ್ಟ ಕಾರಣಮಾವುದೆಂದು ಭೂಸುರಂ ಬೆಸಗೊಳೆ ತಾನುಂ ಬೇಡನುಂ ವ್ಯಾಳನುಂ ಗೋಲಾಂಗೂಲನುಂ ಬಿಟ್ಟ ತೆಱನಂ ಪೇೞ್ದು ನಿಮ್ಮಡಿಗಳ ದಯೆಯಿಂ ಮೃತ್ಯುಮುಖದಿಂ ಪೊಱಮಟ್ಟು ಬರ್ದುಂಕಿದೆಂ, ಆನೀ ತೋರ್ಪ ಪಿರಿಯ ಗಿರಿಯ ತಪ್ಪಿಲ ಗುಹೆಯೊಳಿರ್ದಪೆನಲ್ಲಿಗೆ ಬನ್ನಿಂ; ನಿಮಗಮೂಲ್ಯಮಪ್ಪ ವಸ್ತುಗಳನೀವೆಂ ಎಂದೊಡೆ ಪಾರ್ವಂ— ನೀಂ ಪೇೞ್ದ ಪ್ರಾಣಿಗಳಂ ತೆಗೆದು ತೀರ್ಥಯಾತ್ರೆಗೆಯ್ದು ಮಗುೞ್ದು ಬರ್ಪಲ್ಲಿ ನಿನ್ನಲ್ಲಿಗೆ ಬರ್ಪೆಂ ಎಂದೊಡೆ ಆ ಶಾರ್ದೂಲಂ— ಅಂತಪ್ಪೊಡೆ ವ್ಯಾಧನನೊರ್ವನಂ ಎಂದುಂ ತೆಗೆಯದಿರಿಂ; ನೀಚಂಗೆನಿತುಪಕಾರಂಗೆಯ್ದೊಡಂ ಒಳ್ಳಿತುಗೆಯ್ವನಲ್ಲಂ. ಪಾವಿಂಗೆ ಪಾಲನೆಱೆದೊಡೆ ನಂಜು ಪೆರ್ಚುವಂತೆ ನೀಚರ್ಗುಪಕಾರಮಂ ಮಾಡಿದೊಡೆ ಅಪಕಾರಮೆ ಪ್ರತಿಫಲಮಕ್ಕುಂ ಎಂದು ಪೇೞ್ದು ಪುಲಿ ಪೋಪುದುಂ; ಆ ಪಾರ್ವಂ ಬಾವಿಯೊಳಿರ್ಪ ವ್ಯಾಳ

ನುಮಂ ಗೋಲಾಂಗೂಲನುಮಂ ತೆಗೆವುದುಮವೆರಡುಂ ಪೊಱಮಟ್ಟು ಪೊಡಮಟ್ಟು ಪೋಪಾಗಳ್ ಆ ವಲೀಮುಖಂ ನಿಮ್ಮಡಿ, ನಿಮ್ಮ ಪ್ರಸಾದದಿಂದೆನಗೆ ಪ್ರಸನ್ನಮಾದುದು; ಆಂ ಬದರಿಕಾಶ್ರಮದುಪವನದೊಳಿರ್ಪೆಂ, ಅಲ್ಲಿಗೆತ್ತಾನುಂ ಬಂದಿರಪ್ಪೊಡೆ ಎನ್ನಾರ್ಪ ಶಕ್ತಿಯಿಂ ಭಕ್ತಿಗೆಯ್ವೆನೆಂದು ಪೇೞ್ದೊಡೆ ಉರಗನುಂ—ನಿಮ್ಮಡಿ, ನೀವೆನಗೆ ಪ್ರಾಣದಾನೋಪಕಾರಂಗೆಯ್ದಿರ್; ನಿಮಗೇನಾನುಮಘ್ನಾನಮಾದಾಗಳೆನ್ನಂ ನೆನೆದೊಡಾಂ ಬಂದು ದೇವರ ಸೇವೆಯಂ ಮಾಡಿ ಪೋಪೆಂ ಎಂದು ಪೇೞ್ವುದುಂ ಅವು ತಂತಮ್ಮೆಡೆಗೆ ಪೋದುವು. ಆಗಳಾ ದ್ವಿಜಂ ಮನದೊಳ್ ಈ ತಿರ್ಯಗ್ಜಂತುಗಳಂ ತೆಗೆದುಂ ಮಾನಿಸನಪ್ಪ ಬೇಡನಂ ತೆಗೆಯದಿರ್ಪುದು ಉಚಿತಮಲ್ಲ, ಪಕ್ಷಪಾತಂ ಪೊಲ್ಲದು; ಈತಂ ದುರಾತ್ಮನೆಂದು ಪುಲಿ ಪೇೞ್ದಿತ್ತಾದೊಡಂ ಒಡಲಿರ್ಪನ್ನೆವರಂ ಪರೋಪಕಾರಂಗೆಯ್ಯದೆ ಮನುಜಂಗೆ ಸಲ್ಲದು, ಎಂದು ಬಗೆದು ಕರುಣಾರ್ದ್ರಹೃದಯನಾಗಿ ಕಿರಾತನಂ ತೆಗೆವುದುಂ ಆತನುಂ ಪೊಡೆಮಟ್ಟು — ನಿಮ್ಮಡಿಯ ಧರ್ಮದಿನಾಂ ಬರ್ದುಂಕಿದೆಂ; ಆಂ ಪದ್ಮನಗರದೊಳಿರ್ಪೆಂ; ನೀಮೆತ್ತಾನುಂ ಬಾರ್ತೆಯಪ್ಪೊಡಲ್ಲಿಗೆ ಬನ್ನಿಂ, ಎನ್ನಾರ್ಪನಿತು ಶಕ್ತಿಯೊಳುಪಕರಿಸಿದಪ್ಪೆಂ ಎಂದು ನುಡಿದು ಪೋದಂ. ಶಿವಭೂತಿಯುಂ ಕೆಲವು ಕಾಲಕ್ಕೆ ತೀರ್ಥಯಾತ್ರೆಗೆಯ್ದು ಮಗುೞ್ದು ಬರುತ್ತುಂ ಉತ್ತುಂಗ ಶಿಖರಿಯ ತಪ್ಪಲೊಳ್ ಬರ್ಪುದನಾ ವ್ಯಾಘ್ರಂ ಕಂಡು ಶೀಘ್ರಮಿದಿರಂ ಬಂದು ಶಿವಭೂತಿಗೆ ಪಾದಾವನತನಾಗಿ ತನ್ನಿರ್ಪ ಗುಹೆಗೊಡಂಗೊಂಡು ಪೋಗಿ ಅತ್ಯಾದರದಿಂ ಸತ್ಕರಿಸಿ ಹಾರಾಂಗದ ಕುಂಡಲಕಿರೀಟಾದಿ ಭೂಷಣಂಗಳಂ ಇತ್ತುದು. ಅಂತಾ ತುಡಿಗೆಗಳಂ ಪುಲಿಯತ್ತಣಿಂ ಪಡೆದು ಶಿವಭೂತಿ ಪರಮವಿಭೂತಿಗಾಸ್ಪದನಾದೆನೆಂದು ಸಂತಸಂ ಬಟ್ಟು ಅಲ್ಲಿಂ ತಳರ್ದು ಬದರಿಕಾಶ್ರಮವನಕ್ಕೆ ಬಂದು ಮಾರ್ಗಪರಿಶ್ರಮವನಾಱಿಸಲೆಂದು ಒಂದು ಮಾಮರದಡಿಯೊಳ್ ವಿಶ್ರಮಿಸಿರ್ಪುದುಂ ಆ ವನದೊಳಿರ್ಪ ವಲೀಮುಖಂ ಕಂಡು ಅತಿ ಪ್ರೀತಿಯಿಂ ಪ್ರಸನ್ನಮುಖನಾಗಿ ಬಂದು ಪೊಡೆಮಟ್ಟು ಪನಸಾಮ್ರನಾರಂಗನಾರಿಕೇಲಕದಲೀಕಪಿತ್ಥಾದಿ ಫಲಾವಳಿಯಂ ತಂದೀಯೆ ಶಿವಭೂತಿ ಆ ಪಣ್ಣಲಂಗಳಂ ಕೊಂಡು ತಣಿದು ಅಂದಿನ ದಿವಸಮಲ್ಲಿರ್ದು ಕೆಲವಾನುಂ ದಿವಸಕ್ಕೆ ಪದ್ಮನಗರಮನೆಯ್ದಿ ಕುಂಬಳಕನ ಮನೆಯನಱಸುತ್ತುಂ ಬರ್ಪುದುಮಾ ಕಿರಾತಂ ಕಂಡು ಪೊಡೆಮಟ್ಟು ಮನೆಗೊಡಂಗೊಂಡುಯ್ದು ಶಿವಭೂತಿಗಭ್ಯಾಗತಪ್ರತಿಪತ್ತಿಯಂ ಮಾಡಲುಪಾಯಮಿಲ್ಲದೆ ಉಸಿರದಿರ್ಪುದುಂ ಅದಂ ಕಂಡು ಭೂಸುರಂ ಏಂ ಮಗನೆ, ಚಿಂತಿಸುತಿರ್ದಪೆ? ಎಂಬುದುಂ—ನಿಮ್ಮಡಿಗಳ್ ಬಿಜಯಂಗೆಯ್ದಿರ್ ಈಗಳಾಂ ನಿರುಪಾಯನಾಗಿರ್ದಪೆಂ ಎಂದು ಕಿರಾತಂ ನುಡಿಯೆ ಶಿವಭೂತಿ ಇನ್ನಿದರ್ಕಿನಿಸುಂ ಚಿಂತೆಗೆಯ್ಯಲ್ವೇಡ; ನಿನಗಂ ಬಾೞ್ವುಪಾಯಮಂ ಆಂ ಮಾೞ್ಪೆಂ ಎಂದೇಕಾಂತದೊಳ್ ಕುಳ್ಳಿರ್ದು ತನ್ನ ತಂದಮೂಲ್ಯವಸ್ತುಗಳನವಂಗೆ ತೋಱುವುದುಂ ಆ ವನಚರಂ ಈ ಪಾರ್ವನೆನಗೆ ಹಿತನೆಂಬುದುಂ ಬಗೆಯದೆ ಕೃತಘ್ನನಾಗಿ ತೊಟ್ಟನಾತಂಗೆ ಒಂದಪಾಯಮಂ ಬಗೆದಂ.

ಅದೇನೆನೆ—ಆ ಅವಿವೇಕಿ ಪೊಟಿಲನಾಳ್ವರಸನಲ್ಲಿಗೆ ಪೋಗಿ ದೇವಾ, ನಿಮ್ಮ ತುಡುವಾಭರಣಂಗಳುಂ ಪಲವನಮೂಲ್ಯವಸ್ತುಗಳಂ ತಂದು ಎನ್ನ ಮನೆಯೊಳ್ ಪಾರ್ವನೊರ್ವಂ ಬಂದಿರ್ದಪಂ ಎಂದು ಪೇಳ್ದಂ. ಅದನರಸಂ ಕೇಳ್ದು ತಳಾರರ್ಗೆ ಪೇಳಲೊಡಂ ಅವರ್ ಪರಿದು ಬಂದು ಆ ಪಾರ್ವನಂ ಪಿಡಿದು ಪೆಡಗೈಯುಂ ಕಟ್ಟಿ ತಂದೊಪ್ಪಿಸುವುದುಂ, ಅರಸನಾತನ ಬಳಿಯೊಳಿರ್ದ ವಸ್ತುಗಳೆಲ್ಲಮಂ ಕೊಂಡು ಬಳಿಕ್ಕೆ ಸೆಱೆಯೊಳಿಕ್ಕೆ ಶಿವಭೂತಿ ಕಿಱಿದು ಬೇಗಂ ಬೆಱಗಾಗಿರ್ದು ತನ್ನ ಮರುಳ್ತನಕ್ಕೆ ತಾನೇ ಹಾಸ್ಯಂಗೆಯ್ದು ತನಗೆ ಬಂಧನಮೋಕ್ಷೋಪಾಯಮಂ ಚಿಂತಿಸಿ—ನಿನಗಪ್ಪಾನಮಾದಾಗಳೆನ್ನಂ ನೆನೆವುದೆಂದು ಪಾವು ಪೇಳ್ದು ಪೋದುದಂ ನೆನೆದು ನೋೞ್ಪೆನೆಂದು ಪಾವಂ ನೆನೆಯಲೊಡಮಾ ಪಾವು ತೊಟ್ಟನಲ್ಲಿಗೆ ಬಂದು ಪೊಡೆಮಟ್ಟು, ಬೆಸನೇನೆಂಬುದುಂ— ಈ ಪೊಟಿಲನಾಳ್ವರಸನೆನ್ನರ್ಥಮೆಲ್ಲಮಂ ಕೊಂಡುದಲ್ಲದೆಯುಮೆನಗಿಂತಪ್ಪವಸ್ಥೆಯುಂ ಮಾಡಿದಂ; ಇದರ್ಕೆ ತಕ್ಕುದಂ ನೀನೆ ಬಲ್ಲೆಯೆಂಬುದುಮಾ ಪಾವು ಇದಾವ ಗಹನಂ? ಅರಸನ ಪಿರಿಯ ಮಗನಂ ಈಗಳೆ ಪೋಗಿ ಕರ್ಚಿದಪೆಂ, ನಿಮಗಲ್ಲದೆ ಪೆಱರಾರ್ಗಂ ಸಾಧ್ಯಮಾಗೆಂ, ನೀವೊಂದುಪಾಯದಿಂ ಬಂದು ನೀರನಭಿಮಂತ್ರಿಸಿ ತಳಿಯಲೊಡಂ ವಿಷಮಿೞಿವುದು; ಅಲ್ಲಿ ನಿಮ್ಮ ಸ್ವಾರ್ಥಮೆಲ್ಲಮಂ ತೀರ್ಚಿಕೊಳ್ಳಿಮೆಂದು ಪೇಳ್ದು ಪೋಗಿ ನಂದನವನದೊಳಾಡುತಿರ್ದ ನೃಪನಂದನನಂ ಕಂಡು ವಿಷದಂಷ್ಟ್ರಾಭೀಕರನಪ್ಪ ದರ್ವೀಕರಂ ಕಲಾಧರನಂ ರಾಹು ಕೊಳ್ವ ತೆರದಿಂ ಕೊಂಡುದು. ಅಂತು ಪಾವು ಕೊಳಲೊಡಂ ವಿಷಮವಿಷಧರದಷ್ಟನಾದ ಕುಮಾರನಂ ಗಾರುಡಿಗರ್ ಬಂದು ಕಂಡು, ತಂತಮ್ಮಱಿವಂದದಿಂ ಮಂತ್ರಿಸಿದೊಡಮೆಂತುಂ ವಿಷಮಿೞಿಯದಿರ್ಪುದನರಸಂ ಕಂಡು, ಈ ಕುಮಾರನನೆತ್ತಿದಂಗೆ ಬೇಡಿದುದಂ ಕುಡುವೆನೆಂದು ಡಂಗುರಂಬೊಯ್ಸಲೊಡಂ, ಶಿವಭೂತಿ ಕೇಳ್ದು ತಾನೆತ್ತುವೆನೆಂದು ಪೇೞ್ದೊಡರಸಂ ಕೇಳ್ದು ಪರಿತಂದು ಶಿವಭೂತಿಯುಂ ಸೆಱೆಯಿಂ ಬಿಟ್ಟೊಡಂಗೊಂಡು ಪೋಪುದುಮಾತಂ ಪೋಗಿ ಗುಂಡಿಗೆಯ ನೀರನಭಿಮಂತ್ರಿಸಿ ತಳಿಯಲೊಡಮಾಕುಮಾರಂ ಇಷ್ಟನಂ ಕಂಡಂತೆ ಭೋಂಕನೆೞ್ದು ಕುಳ್ಳಿರ್ದಂ. ಆಗಳರಸಂ ಸಂತಸಂಬಟ್ಟು ಶಿವಭೂತಿಗೆ ಪಿರಿದುಂ ವಿಭೂತಿಯುಂ ಮಾಡಿ ಆತಂಗೆ ಕಿರಾತನಿಂದಾದವಸ್ಥೆಯುಂ ಕೇಳ್ದು ಕಿರಾತನಂ ದಂಡಿಸಿದಂ.

(ದುರ್ಗಸಿಂಹನ ಪಂಚತಂತ್ರ)

—ಮ. ಪ್ರ. ಪೂಜಾರ

೪. ನಂಬಿಯಣ್ಣನ ಬಾಲ್ಯ

ನಂಬಿಯಣ್ಣಂ ಶಿಶುವೇಷದೊಳು ನಳನಳಿಸಿ ತೊಳತೊಳಗಿ ಕಂಡವರ ಕಣ್ಣ ಮಣಿ ಎತ್ತಿದರ ಹಸ್ತದಮೃತಫಳಂ ಮುಟ್ಟಿದರ ಮೆಯ್ಯ ಪುಳಕಂ ಅಪ್ಪಿದರುರದೊಪ್ಪಂ ಸಾಗಿಸುವರ ಸೋಗಿಲ ಧನಂ ಕೈಕೊಂಬರ ಕಡವರವೆನಿಸಿ ಪರವೆನಾಚಿ ಸಂಕಿಲೆನಾಚಿಯರನಪ್ಪುವ ತೋಳ್ಗಳಿವೆಂಬಂತೆ ತೋಳಾಡಿಸುತ್ತುಂ, ಮುಂದೆ ಶಿವನೊಡನಾಡುವ ಜಗಳಂ ಪುಸಿಜಗಳವೆಂಬುದಂ ಸೂಚಿಸುವಂತೆ ತೊದಳ್ನುಡಿಗಳ ನುಡಿವುತುಂ, ದೇವನಂ ತನಗೆ ಕುಂಟಣಿಮಾಡಿ ನಡೆಯಿಸುವ ತೆಱನೀ ತೆಱನೆಂಬುದಂ ತೋಱುವಂತೆ ಮೆಲ್ಲಮೆಲ್ಲನೆ ದಟ್ಟಡಿಯಿಡುತ್ತುಂ, ಪುಟ್ಟಿಸಿದರ್ ತಾವೆಂದು ಬಗೆದು ಮುದ್ದಾಡಿಸುವ ತಾಯ್ತಂದೆಗಳ ಮೊಗಮಂ ನೋಡಿ ನಗುವಂತೆ ಮುಗುಳ್ನಗೆ ನಗುತ್ತುಂ, ದೇವ ಸಂಸಾರಂ ನೆಱೆ ಪುಗದ ಮುನ್ನ ನೀನೆಂದು ಬಂದೆನ್ನಂ ತೊತ್ತುಗೊಂಬೆಯೆಂಬುಮ್ಮಳಿಕೆಯಿಂದಳುವಂದದಿಂಮೊಮ್ಮೊಮ್ಮೆ ಬೆಚ್ಚಿಬೆಚ್ಚಿಯಳುತ್ತುಂ, ಈ ತೆಱದೊಳೊಂದೆರಡು ಮೂಱು ನಾಲ್ಕಯ್ದು ವತ್ಸರಂಬರಂ ನೆಱೆದು ನೆರೆಹೊರೆಯ ಕೆಲದ ಕೇರಿಯ ಸಕ್ಕಜದ ಮಕ್ಕಳೊಡನೊಕ್ಕಲಿಕ್ಕಿ ನಲಿನಲಿದು ನರ್ತಿಸುತ್ತಿರಲ್.

ಒಂದು ದಿನಂ ತನ್ನೊಡನೆಯ ಮನ್ನಣೆಯ ಮಕ್ಕಳೆಲ್ಲಂ ನೆರೆದೊಂದು ಮರದ ಬಂಡಿಯಂ ಮಾಡಿ ತಂಡದೊಳ್ ನಲಿದು ಮುಂದೆ ಬಂದತಿರಥನಪ್ಪ ನಂಬಿಯಣ್ಣನಂ ನಡುವೆ ಕುಳ್ಳಿರಿಸಿ ನೀನರಸು ನಾವೆಲ್ಲಂ ಪರಿವಾರವೆಂದಲ್ಲಿಯ ಬಲ್ಲಿದ ಬೆವಹಾರಿಗಳ ಮಕ್ಕಳೆಲ್ಲಂ ನೆರೆದು ಕೆಲಂಬರು ಸುತ್ತಿಮುತ್ತಿ ಕೆಲಂಬರು ಬಂಡಿಯ ಮುಂಕಣಿಯಂ ಪಿಡಿದು ಪುರದ ತಿರುವೀಥಿಯೊಳು ನಡೆತಪ್ಪಾಗಳು — ಆ ಪಟ್ಟಣದ ನರಸಿಂಗಮೊನೆಯರ ಪಟ್ಟದಾನೆ ಸಂಚಿತ ತಿಲಕಿತ ಅರ್ಧಕಪೋಲಿತ ಅತಿವರ್ತಿತ ಅಧೋನಿಬಂಧಿನಿ ಕ್ರೋಧಿನಿ ಗಂಧಚಾರಿಣಿಯೆಂಬ ಸಪ್ತಾವಸ್ಥೆಯ ಮದದಿಂ ಮುಂದುಗಾಣದೆ ಮಾವಂತರಂ ಮುಱಿದಿಕ್ಕುತುಂ, ಆರೆಕಾಱರನರೆದು ಸಣ್ಣಿಸುತ್ತುಂ, ಮಂದಿಯಂ ಮುಂದುಗೆಡಿಸುತ್ತುಂ, ನೆರವಿಯಂ ಪರಿದೋಡಿಸುತ್ತುಂ, ಸಿಕ್ಕಿದರಂ ಸೀಳ್ದು ಬಿಸುಡುತ್ತುಂ ಘುಳುಘುಳಿಸಿ ಬರ್ಪ ಮತ್ತಗಜಮಂ ಭೋಂಕನೆ ಕಂಡು ಬಂಡಿಯಂ ಬಿಟ್ಟು ಮಕ್ಕಳೆಲ್ಲಂ ಚೆಲ್ಲಿ ಪೋಗೆ, ಸಿಂಹದ ಮಱಿಯಂತೆ ಕಿಱುವಂಡಿಯೊಳಿರ್ದ ನಂಬಿಯಣ್ಣನಲ್ಲಿಗೆ ಸೊಕ್ಕಿದಾನೆ ಮಿಕ್ಕು ಮೀಱಿ ಬಂದು ಮುಂದೆ ನಿಂದು, ಕೈಲಾಸಕ್ಕೆ ಬಿಜಯಂಗೆಯ್ವಂದೈರಾವತವೀ ತೆಱದಿಂ ಬರ್ಪುದೆಂಬುದುಂ ಸೂಚಿಸುವಂತೆ ಬಂದಿಯಂ ಬಲವಂದು ಕಾಲ್ಗೆಱಗಿ ಮೇಲ್ದುಡಿಗಟ್ಟಿ ಹೆಱಮೆಟ್ಟಿ ಸಱ್ಱನೆ ತಿರುಗಲಲ್ಲಿಯ ಮಾವಂತರುಂ ಆರೆಕಾಱರುಂ ನೆರೆದ ನೆರವಿಯೆಲ್ಲಂ ಪರಿದು ಬಂದು ಸುತ್ತಿ

ಮುತ್ತಿ ಬಂಡಿಯೊಳಿರ್ದ ನಿಸ್ಸೀಮನಂ ಕಂಡು ಇದಾವ ಕಾರಣಿಕನೊ ಇದಾವ ಸಾಮರ್ಥ್ಯದ ಬೀಜವೊ ಇದಾವ ಪುಣ್ಯದಂಕುರವೊ ಇದಾವ ಸತ್ಯದ ಮುಗುಳೊ ಇದಾವ ನಿತ್ಯದ ಫಳವೊ ಇದಾವ ಭಕ್ತಿಯ ಬೆಳೆಯೊ ಎಂದು ಕೊಂಡಾಡುತಿರೆ—

ಅಲ್ಲಿಯೊರ್ವಂ ನೆರವಿಯೊಳು ಪರಿದು ಬಂದರಮನೆಯಂ ಪೊಕ್ಕು ಮಕುಟವರ್ಧನರ ಮಂತಣದ ನಡುವೋಲಗಂಗೊಟ್ಟು ಕುಳ್ಳಿರ್ದ ನರಸಿಂಗ ಮೊನೆಯರ್ಗೆ ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು— ದೇವದೇವ ಇಂದೀಗಳೀಗ ಪುರದ ತಿರುವೀಥಿಯೊಳೇನಂ ಬಿನ್ನವಿಪೆನದೊಂದಾಶ್ಚರ್ಯವದೊಂದು ಕೌತುಕವದೊಂದು ವಿಪರೀತಂ ಚಿತ್ತೈಸು ; ನಮ್ಮ ಪಟ್ಟದಾನೆ ಸಪ್ತಾವಸ್ಥೆಯ ಮದದಿಂ ಮುಂದುಗಾಣದೆ ತಿರುವೀಥಿಯೊಳುರುವಣಿಸಿ ಬರುತ್ತಿರಲೊಂದು ಕಿಱುವಂಪಿಯೊಳೊರ್ವ ಶಿಶುವಂ ಮಕ್ಕಳೆಲ್ಲಂ ಬಿಟ್ಟೋಡಿ ಪೋಗಲಲ್ಲಿಗೆ ಮತ್ತಗಜಂ ಪರಿತಂದು ಬಲವಂದು ನಿಂದು ಗುಡಿಗಟ್ಟಿ ಪೊಡಮಟ್ಟು ಪೋಪುದೆನಲ್— ಆ ಮಾತಿಂ ಮುನ್ನಿರ್ದ ಪರಿಯಲೆರ್ದು ಕೈವಿಡಿದು ಕಾಲ್ನಡೆಯೊಡನೆ ಬರ್ಪ ಮಂತ್ರಿಗಳ ಸಚಿವರ ರಾಜಪುತ್ರರ ಸಾವಂತರ ಸಲುಗೆಯಾಳ್ಗಳ ರಾಯನಾಯಕರ ಸಂದಣಿಯೊಳ್ ಎತ್ತಿದ ಝಲ್ಲರಿಗಳ ಮುತ್ತುವ ಕೈವಾರಿಗಳ ಕೋಳಾಹಳದಿಂ ನಡೆತಂದು, ಮುಂದೆ ಸಂದಣಿಸಿದ ನೆರವಿಯನೆಬ್ಬಟ್ಟಿ ನರಸಿಂಗ ಮೊನೆಯರ್ ಬಂದು ನಿಂದು ನೋಡುವಾಗಳು ನಕ್ಷತ್ರಗಣಂಗಳ ನಡುವಣ ಚಂದ್ರಬಿಂಬವಂತಿರ್ದ ನಂಬಿಯಣ್ಣನಂ ಕಂಡು ಇದಾರ ಮಗನಿದಾರ ಸಾಮರ್ಥ್ಯವಿದಾರ ಪುಣ್ಯದ ಪುಂಜವಿದಾರ ಚೆಲ್ವಿನಂಕುರವೆಂದು ಮೂಗಿನೊಳ್ ಕೈಯಿಟ್ಟು ತಲೆದೂಗಿ ಬೆಱಗಾಗಿ ನರಸಿಂಗ ಮೊನೆಯರ್ ಬೆಸಗೊಳ್ಳುತ್ತಿರಲ್—

ಇತ್ತಲೆಳಲ್ವ ಜೆಡೆಯಿಂದಿಳಿವ ಕಣ್ಣನೀರಿಂದಱತ ವಿಭೂತಿಯ ತಿಲಕದಿಂದರೆಯರೆಗಟ್ಟುವ ಕೈಯಿಂಡೆಯಿಂ ಸಡಿಲ್ವ ರುದ್ರಾಕ್ಷಿಯ ಮಾಲೆಯಿಂ ಕಳಲ್ವ ಉಡಿಗೆಯಿಂ ಮಗನೆ ಮಗನೆ, ನಂಬಿ ನಂಬಿ, ಪಟ್ಟದಾನೆಗೆ ಪಡಿಸಣವಾದಾ— ಎಂದು ಜೆಡೆಯನಾಯನಾರುಂ ಯಿಸೈಜ್ಞಾನಿದೇವಿಯರುಂ ಪಳವಿಸಿ ಪಲುಂಬುತುಂ ಪರಿತಂದು ಬಂಡಿಯೊಳು ಬರ್ದುಂಕಿ ಕುಳ್ಳಿರ್ದ ಮಗನಂ ಕಂಡೆತ್ತಿ ತರ್ಕಯ್ಸಿ ಕಣ್ ಬಂದಂತೆ ಉಸುರ್ ಬಂದಂತೆ ಹರಣದಳಲುಮಂ ಪರಿಹರಿಸಿಕೊಂಡು ಸಿಡಿಲು ಸೋಂಕಿ ಬರ್ದುಂಕಿದ ಮೊಲ್ಲೆಯ ಮುಗುಳೆ, ರಾಹು ಮುಟ್ಟಿ ಬರ್ದುಂಕಿದ ಚಂದ್ರಕಳೆಯೆ, ಮಹಾಕಂಟಕಂ ತಪ್ಪಿದ ಮಹಾಮಹಿಮನೆ ಎಂದು ಕೊಂಡುಕೊನೆವುತ್ತಿರ್ಪ ತಾಯ್ತಂದೆಗಳಂ ಕಂಡು ಕಂಡ ನೆರವಿಯಲ್ಲಿಂ ಫಳಫಳನೆ ಕಣ್ಣನೀರಂ ತುಂಬುತ್ತಿರಲ್—

ಆ ಸಮಯದೊಳು ನರಸಿಂಗಮೊನೆಯರ್ ತಮಗೆ ಮಕ್ಕಳಿಲ್ಲಪ್ಪುದಱಿಂ ಪುತ್ರಾರ್ಥಿಯಿಂದಿಂತೆಂದರ್— ಎಲೆ ಜೆಡೆಯನಾಯನಾರೆ, ಕೇಳಿ ಈತಂಗೊಂದ ಪಾಯಂ ಬಂದು ಪುಣ್ಯದಿಂ ತಪ್ಪಿತೆಂಬ ಮಾತನಱಿಯದಾದಿದಿರಿ ; ಈತಂ ನಿಮ್ಮ

ಮಗನೆಂಬ ಭಾವನೆಯುಮಂ ಬಿಟ್ಟು ಕಳೆವುದು. ಈ ಬಾಲಕಂ ಭೂಪಾಲಕರ ಕಯ್ಯಂ ಮುಗಿಸಿಕೊಂಡು ಬರ್ದುಂಕುವಧಿಗತ ಪರಮಾರ್ಥನಪ್ಪತ್ಯಂತ ಕಾರಣಿಕಂ. ನಿಮ್ಮ ವಶಮಲ್ಲಂ, ಈತನ ಸಾಗಿಸುವ ತೆಱನೀ ತೆಱನಲ್ಲ. ಹಂಸೆಯ ತುಪ್ಪುಳ ಹಾಸಿನ ಮೇಲೆ ಬಿಜಯಂಗೆಯ್ಸಿ ದಿವ್ಯಾನ್ನ ದಿವ್ಯಫಳ ದಿವ್ಯಾಮೃತರಸಂಗಳನೂಡಿ ದಿವ್ಯಾಭರಣ ದಿವ್ಯ ವಸ್ತ್ರಂಗಳಿಂದಲಂಕರಿಸಿ ಕಣ್ಣೊಳು ಮುದ್ದಾಡಿ ಮನದ ಮಗ್ಗುಲೊಳಿರಿಸಿ ಚಿತ್ತದೊಳಚ್ಚೊತ್ತಿ ಜೀವದೊಡನೋವಿ ಇಂತು ಸುಕುಮಾರನಾಗಿ ಸಾಗಿಸಿಕೊಂಬಾನಂದಕಂದಂ ಎತ್ತಾನುಮೊಂದು ಕಾರಣದಿಂ ಬಂದನಂತಲ್ಲದೆ ನೀವಿಕ್ಕುವ ಕೀರೆಗಂ ಬರಗಿನೋಗರಕ್ಕಂ ಪುಟ್ಟಿದವನಲ್ಲ. ಈತಂ ಮುಂದೇನಾಗಲಿರ್ದಪನೆಂದಱಿಯಲ್ಕಾರಮ. ಈ ಪುಣ್ಯದ ಪುಂಜಮನೆನಗೆ ಕೊಟ್ಟೊಡೆ ನಿಮ್ಮ ಬಡತನಂ ತೀರ್ವುದೆನ್ನ ಮನೋರಥಮಪ್ಪುದು—ಎಂದುಳ್ಳುದಂ ನುಡಿದು ತಾಯ್ತಂದೆಗಳ ಕಯ್ಯಂ ಪಿಡಿದು ಬೇಡಿಕೊಳ್ವುದುಂ—

ಜೆಡೆಯನಾಯನಾರಂ ತಮ್ಮ ವಧುವಪ್ಪ ಯಸ್ಯಜ್ಞಾನಿದೇವಿಯರ ಮೊಗಮಂ ನೋಡಿ ಅರಸು ತಾನೆ ಬಂದು ಬೇಡಿಕೊಳುತಿರ್ದಪಂ ; ಅವರೆಂದಂತೀ ಪುತ್ರಂ ಕಾರಣಿಕನಾಗಿರ್ದಪಂ : ನಮ್ಮ ಕೈಯೊಳಡಂಗುವನಲ್ಲ ; ಅದಲ್ಲದೆಯುಂ ನರಸಿಂಗಮೊನೆಯರೆಂದೊಡಂ ನಾಮೆಂದೊಡಂ ಬೇಱಿಲ್ಲ. ಕೊಡುವುದೆ ಕಾರ್ಯವೆಲ್ಲಿಯಾದೊಡಂ ಪುತ್ರಂ ಸುಖದೊಳಿರ್ಪುದೆ ಸಾಲ್ಗುಮೆಂದಿರ್ವರುಂ ಒಡಂಬಟ್ಟು, ಪರಮಾನುರಾಗದಿಂ ಪರೀಕ್ಷಕನ ಕೈಯ್ಯೊಳನರ್ಘ್ಯರತ್ನಮಂ ಕೊಡುವಂತೆ ವಸಂತರಾಜನ ಕೈಯ್ಯೊಳು ಕಲ್ಪತರುವಿನ ಸಸಿಯಂ ಕೈಯಲೆಡೆಗೊಡುವಂತೆ ನರಸಿಂಗಮೊನೆಯರ ಕಯ್ಯೊಳು ನಂಜಿಯಣ್ಣನಂ ಕೊಡಲೊಡಂ, ನೆನೆವ ಬಯಕೆ ಮನವಾದಂತೆ ನೋಡುವ ರೂಪು ಕಣ್ಣಾದಂತೆ ಸರ್ವಸಂತೋಷಮಂ ತಳೆದು ತನ್ನ ಪುಣ್ಯದ ಫಲವನಪ್ಪುವಂತೆ ನಂಜಿಯಣ್ಣನಂ ತೆಗೆದಪ್ಪಿ ದಿವ್ಯಾಭರಣಂಗಳಂ ತರಿಸಿ ತೊಡಿಸಿ ಪಟ್ಟದಾನೆಯಂ ತರಿಸಿ ನೀಲಗಿರಿಯ ಮೇಲೆ ಬಾಲಾರ್ಕನುದಯಿಸುವಂತೆ ಪೂರ್ವಾಸನದೊಳು ನಂಜಿಯಣ್ಣನಂ ಕುಳ್ಳಿರಿಸಿ ಪಶ್ಚಿಮಾಸನದೊಳು ತಾನವತರಿಸಿ ಪುರದೊಳ್ ಕೂಡೆ ಗುಡಿಗಟ್ಟಿಸಿ ಮೃದುಮೃದಂಗ ನಿಸ್ಸಾಳ ಭೇರೀ ಶಂಖ ಕಹಳೆಗಳ ಬಹಳ ಧ್ವನಿಯುಣ್ಮೆ ಹಸ್ತ್ಯಶ್ವರಥಪದಾತಿವೆರಸಿ ವೀಥಿವೀಥಿಗಳೊಳ್ ಕೂಡೆ ಮೆಱೆದು ಪುತ್ರೋತ್ಸವಂ ಕೊಂಡಾಡಿ ಸಕಲಸಂಭ್ರಮದಿಂದರಮನೆಗೆ ಬಂದು ಮಣಿಖಚಿತ ಸಿಂಹಾಸನಕ್ಕೆ ಬಿಜಯಂಗೆಯ್ದು ಕುಮಾರನಂ ತೊಡೆಯನೇಱಿಸಿಕೊಂಡು ರಾಣೆವಾಸಮಂ ಕರೆಸಿ ತನ್ನರಸಿಯ ಕಯ್ಯೊಳ್ ನಂಜಿಯಣ್ಣನಂ ಕೊಟ್ಟು ಪ್ರಸೂತಭಾವಮನುಂಟುಮಾಡಿ ಜಾತಕರ್ಮವಂ ನೆನೆದು ತೀರ್ಚಿ ಅತ್ಯಂತ ಚೆಲ್ವನಪ್ಪುದಱಿಂ ಸೌಂದರಪೆರುಮಾಳೆಯೆಂದು ಪೆಸರಿಟ್ಟು ಜೆಡೆಯನಾಯನಾರ್ಗಂ ಯಸ್ಯಜ್ಞಾನಿದೇವಿಯರ್ಗಂ ಸಂತಸದೊಳುಡಲ್ ಕೊಟ್ಟು ಮನೆತುಂಬಿದ ಪೊನ್ನಂ ಪೊಯ್ದು ಮನಂ ತೀವಿದ ಪರಿಣಾಮತೆಯಂ ಕೊಟ್ಟು ಅವರಂ ಕಳುಪಿ ಕುಮಾರನಂ

ಕಣ್ತೀವಿ ನೋಡಿ ತೆಗೆದಪ್ಪಿ ಮುಂಡಾಡಿ ಕೊಂಡಾಡಿ ಸವಿಗಳನೂಡಿ ಸುಕುಮಾರತೆಯನುಡಿಸಿ ಕಾಂತಿಗಳಂ ತೊಡಿಸಿ ಪರಿಮಳಮಂ ಮುಡಿಸಿ ಸ್ನೇಹಮಂ ಕಾಪಿಟ್ಟು ನೆನಹಿನೊಳಚ್ಚೊತ್ತಿ ಮನದೊಳ್ ತೂಪಿಱಿದು ಚೆಲುವಂ ಸಲಹುವಂತೆ ಸುಮುಹೂರ್ತಮಂ ಸಾಗಿಸುವಂತೆ ಬಲವಂ ಬಲಿವಂತೆ ಬೆಳಗಂ ಬೆಳಸುವಂತೆ ಭಕ್ತಿಯನೊಪ್ಪವಿಡುವಂತೆ ಜೀವನನೋವುವಂತೆ ಅಂದಂದಿಂಗೆ ಮೋಹಂ ಮೂವಡಿಸಿ ಸಲಹುತ್ತುಂ....ಇರ್ದಂ.

(ಸಂಬಿಯಣ್ಣನ ರಗಳೆ)
—ಹರಿಹರದೇವ

೫. ಮಿಲನ

(ಸಿಂಹದ ಮರಿಯನ್ನು ಎಳೆದಾಡುತ್ತಾ ಬಾಲಕನು ತಾಪಸಿಗಳೊಡನೆ ಬರುವನು)

ಬಾಲಕನು—ಎಲೆ ಸಿಂಹದ ಮರಿಯೆ, ಆಕಳಿಸು. ನಿನ್ನ ಹಲ್ಲುಗಳನ್ನು ಲೆಕ್ಕ ಮಾಡುವೆನು.

ಮೊದಲನೆಯವಳು— ಎಲೈ ದುರಳನೆ, ನಮಗೆ ಮಕ್ಕಳಂತಿರುವ ಪ್ರಾಣಿಗಳನ್ನು ಏತಕ್ಕೆ ನೋಯಿಸುವೆ ? ಇನ್ನೇನು ಗತಿ ? ನಿನ್ನ ಚಲ ಹೆಚ್ಚೇ ಹೆಚ್ಚಿತು ; ನಿನಗೆ ಋಷಿಗಳು ಸರ್ವದಮನನೆಂದು ಹೆಸರಿಟ್ಟದ್ದು ಯುಕ್ತವಾದದ್ದೆ.

ರಾಜಂ— ಇದೇನು ? ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲಿ ಮನಸ್ಸು ಅನುರಾಗಿಸುವಂತೆ ಈ ಬಾಲಕನಲ್ಲಿ ಅನುರಾಗಪಡುವದು ! ನಿಜ ; ಮಕ್ಕಳಿಲ್ಲದ್ದು ಹೀಗೆ ವಾತ್ಸಲ್ಯವನ್ನು ಉಂಟುಮಾಡಬಹುದು.

೨ನೆಯವಳು— ಎಲೈ ಸರ್ವದಮನನೆ, ಇದರ ಮರಿಯನ್ನು ನೀನು ಬಿಡದಿದ್ದರೆ ಈ ಹೆಣ್ಣು ಸಿಂಹವು ನಿನ್ನ ಮೇಲೆ ಬೀಳುವುದು.

ಬಾಲ— (**ನಕ್ಕು**) ಓಹೋ ! ನನಗೆ ಬಹು ಭಯವುಂಟಾಯಿತು ! (**ಎಂದು ತುಟಿಯನ್ನು ತೋರಿಸುವನು**).

ರಾಜಂ— ಕಂದ ॥ ಅಮಮಾಸ್ಫುಲಿಂಗದಶೆಯೊಳ್ ।
ಸಮಿತ್ತುಗಳನೆಳಸುತಿರ್ಪ ವಹ್ನಿಯ ತೆರದಿಂ ॥
ಸುಮಹಾತೇಜೋಬೀಜಂ ।
ಕುಮಾರನಿವನೆನಗೆ ನೋಡೆ ಕಾಣುತ್ತಿರ್ಪಂ ॥

೧ನೆಯವಳು— ಎಲೈ ವತ್ಸನೆ, ಈ ಸಿಂಹದ ಮರಿಯನ್ನು ಬಿಡು. ನಿನಗೆ ಆಡು ವದಕ್ಕೆ ತಕ್ಕ ಇನ್ನೊಂದು ಪದಾರ್ಥವನ್ನು ಕೊಡುವೆನು.

ಬಾಲ— ಎಲ್ಲಿ ? ಅದೇನು ಕೊಡು. (ಎಂದು ಹಸ್ತವನ್ನು ನೀಡುವನು)

ರಾಜಂ— (**ನೋಡಿ ಆಶ್ಚರ್ಯದಿಂದ ಕೂಡಿ**) ಇದೇನು ! ಈ ಬಾಲಕನು ಚಕ್ರವರ್ತಿ ಲಕ್ಷಣದಿಂದಲೂ ಕೂಡಿರುವನು. ಹಾಗೇಯೇ ಸರಿ—

ಕಂದ ॥ ಬೇಡಲ್ಕಿಷ್ಟವಸ್ತುವ ।
ನೀಡಿದ ಕೈ ತೆರಪನುಳಿದ ಬೆರಳ್ಗಳಿನೆಸೆಗುಂ ॥
ಮೂಡಣ ಕೆಂಪಿಂದಲದೊರ್ಡ- ।
ಗೂಡಿದ ದಳದಿಂದೆ ಮೆರೆವ ಸರಸಿರುಹಂಬೊಲ್ ॥

೨ನೆಯವಳು— ಎಲೌ ಸುವ್ರತೆಯೇ, ವಾಙ್ಮಾತ್ರದಿಂದ ಇವನನ್ನು ಸುಮ್ಮನಿರಿ ಸಲಾರೆನು; ನಡೆ, ನನ್ನ ಪರ್ಣಶಾಲೆಯಲ್ಲಿ ಋಷಿಪುತ್ರನಾದ ಮಾರ್ಕಂಡೇಯ ನಾಡುವ ಬಣ್ಣದ ಮಣ್ಣಿನ ನವಿಲಿರುವದು, ಅದನ್ನು ತೆಗೆದುಕೊಂಡು ಬಾ.

೧ನೆಯವಳು— ಹಾಗಾಗಲಿ; (ಎಂದು **ಹೋಗುವಳು**)

ಬಾಲ— ಆ ವರೆಗೂ ಇವರ ಸಂಗಡಲೇ ಆಡುವೆನು. (ಎಂದು **ತಾಪಸಿಯನ್ನು ನೋಡಿ** ನಗುವನು)

ರಾಜಂ— ದುರುಳತನವುಳ್ಳ ಈ ಬಾಲಕನಲ್ಲಿ ನನ್ನ ಮನಸ್ಸು ಆಸೆಪಡುವದು-

ವೃತ್ತ ॥ ಪೊಳೆವಲ್ಗೋಭಿಸೆ ನಿರ್ನಿಮಿತ್ತಹಸಿತಂ ಚೆಲ್ವಾಗೆ ಲಾಲಾಜಲಂ ।
ತುಳುಕಲ್ ಪರ್ವ ತೊದಳ್ನನಂಗೊಳಿಸಲಂಕಾರೋಹಕಿಚ್ಛೈಪ ಮ-॥
ಕ್ಕಳ ನಿಕ್ಕೆರ್ಗಗಳಿಸೆತ್ತಿಕೊಂಡು ನಲವಿಂ ತದ್ದೇಹ ಪಂಚದ್ರಜೋ-।
ಮಳಿನಾಂಗರ್ಕಳೆನಿಪ್ಪ ಮಾನವರೆ ತಾಂ ಧನ್ಯರ್ ವಲಂ
ಧಾತ್ರಿಯೊಳ್ ॥

ತಾಪಸಿ— ಒಳ್ಳೆಯದು, ಆಗಲಿ, ಇವನು ನನ್ನನ್ನು ಗಣನೆ ಮಾಡುವುದಿಲ್ಲ. (ಎಂದು ಎಡಬಲವನ್ನು **ನೋಡಿ**) ಋಷಿಕುಮಾರರಲ್ಲಿ ಇಲ್ಲಿ ಯಾರೂ ಇಲ್ಲವೆ ! (ರಾಜನನ್ನು **ನೋಡಿ**) ಎಲೈ ಸೌಮ್ಯಮುಖನೆ, ಇತ್ತ ಬಾ. ಬಿಡಿಸುವದಕ್ಕೆ ಅಶಕ್ಯವಾದ ಮುಷ್ಟಿಯಿಂದ ಹಿಡಿದು ಹುಡುಗತನದಿಂದ ಇವನು ಬಾಧಿಸುವ ಸಿಂಹದ ಮರಿಯನ್ನು ಬಿಡಿಸು.

ರಾಜಂ— (**ನಗೆಯಿಂದ ಕೂಡಿ ಸಮೀಪಕ್ಕೆ ಬಂದು**)

ಕಂದ ॥ ಎನಸುಂ ನಿನ್ನೇಕಾಶ್ರಮ- ।
ಕನುಚಿತವಹ ಗುಣದೆ ಜಂತುಗಳ ತವಿಸದ ಪು- ॥
ಟ್ಟಿನ ಸಂಯಮಗುಣಮಂ ಚಂ- ।
ದನತರುವಂ ಕೃಷ್ಣಸರ್ಪಶಿಶುವೋಲ್ಕಿಡಿಪೈ

ತಾಪಸಿ— ಎಲೈ ಸೌಮ್ಯಮುಖನೆ, ಈತನು ಋಷಿಕುಮಾರನಲ್ಲವಲ್ಲಾ.

ರಾಜಂ— ಆಕಾರಕ್ಕೆ ತಕ್ಕ ಇವನ ನಡತೆಯೇ ಹೇಳುವುದು. ಆಶ್ರಮದ ನಂಬಿಕೆಯಿಂದ ನಾವು ಹೀಗೆ ಊಹಿಸಿದೆವು. (**ತನ್ನ ಇಚ್ಛಾನುಸಾರವಾಗಿ ಬಾಲಕನನ್ನು ಆಲಂಗಿಸಿಕೊಂಡು ಸ್ಪರ್ಶಸುಖವನ್ನು ಹೊಂದಿ ತನ್ನಲ್ಲಿ ತಾನು**)

ಕಂದ ॥ ಇವನಾವನ ಕುವರನೊ ನಾ- ।
ನಿವನಂ ತಕ್ಕೈಸಲಿಂತು ಸುಖವೆನಗಾದ- ॥
ತ್ತವನಿಯೊಳಗೆ ತನ್ನಂ ಪೆ- ।
ತ್ತ ವಿಪುಲ ಪುಣ್ಯಂಗೆ ಸುಖವನೆನಿತಿತ್ತಪನೋ ॥

ತಾಪಸಿ—(**ಇಬ್ಬರನ್ನೂ ನೋಡಿ**) ಆಶ್ಚರ್ಯ! ಆಶ್ಚರ್ಯ!

ರಾಜಂ—ಆಶ್ಚರ್ಯವೇನು ?

ತಾಪಸಿ—ಈ ಬಾಲಕನ ರೂಪು ನಿನ್ನ ಸಂಬಂಧವನ್ನು ಹೋಲುವುದೆಂದೂ ನೀನು ಅಪರಿಚಿತನಾದರೂ ನಿನ್ನಲ್ಲಿ ಇವನು ಅನುಕೂಲನಾಗಿರುವನೆಂದೂ ವಿಸ್ಮಿತಳಾದೆನು.

ರಾಜಂ—(**ಬಾಲಕನನ್ನು ಮುದ್ದಿಸಿ**) ಎಲೌ ಪೂಜ್ಯಳೆ, ಇವನು ಮುನಿಕುಮಾರನಲ್ಲದಿದ್ದರೆ ಯಾವ ಕುಲದಲ್ಲಿ ಹುಟ್ಟಿದವನು ?

ತಾಪಸಿ—ಇವನು ಪುರುಕುಲದಲ್ಲಿ ಹುಟ್ಟಿದವನು.

ರಾಜಂ—(**ತನ್ನಲ್ಲಿ ತಾನು**) ಇವನು ನಮ್ಮ ಕುಲದವನೆ? ಆದುದರಿಂದಲೇ ಪೂಜ್ಯೆಯಾದ ಈಕೆಯು ಇವನನ್ನು ನನ್ನ ಹೋಲಿಕೆಯುಳ್ಳವನೆಂದು ಹೇಳಿದಳು. ಪುರುವಂಶದವರಿಗೆ ಮುಪ್ಪಿನಲ್ಲಿ ವನನಿವಾಸವು ಕುಲವ್ರತವಾಗಿರುವುದಷ್ಟೆ!

ಕಂದ ॥ ಇಳೆಯಂ ಸಲುಹಲ್ಕುಂ ಮುಂ- ।
ಜುಳಸೌಧಾವಾಸಕೆಳಸುವಾ ಪುರುಕುಲಜರ್ ॥
ಬಳಿಕಂ ವಾನಪ್ರಸ್ಥ- ।
ಕ್ಕಳವಡೆ ತಾಂ ವೃಕ್ಷಮೂಲಮುಂ ಮನೆಗೈವರ್ ॥

(**ಪ್ರಕಾಶವಾಗಿ**) ಈ ದೇವಭೂಮಿಯು ಮನುಷ್ಯರಿಗೆ ಗೋಚರವಾಗತಕ್ಕುದಲ್ಲವಲ್ಲಾ.

ತಾಪಸಿ—ಎಲೈ ಸೌಮ್ಯಮುಖನೆ, ನೀನು ಹೇಳಿದ್ದು ಸರಿ ; ಆದರೆ ಈತನ ತಾಯಿ ಅಪ್ಸರಸ್ತ್ರೀಗೆ ಮಗಳಾದ ಕಾರಣ ದೇವಗುರುಗಳಾದ ಮಾರೀಚ ಮುನಿಗಳ ಈ ತಪೋವನದಲ್ಲಿ ಇವನನ್ನು ಹೆತ್ತಳು.

ರಾಜಂ—(**ಮರೆಯಾಗಿ**) ಅಹ! ಆಸೆಯನ್ನು ಹುಟ್ಟಿಸುವುದಕ್ಕೆ ಇದು ಎರಡನೆಯದು. (**ಪ್ರಕಾಶವಾಗಿ**) ಆಕೆಗೆ ಪತಿಯಾದ ರಾಜಋಷಿಯ ಹೆಸರೇನು ?

ತಾಪಸಿ—ಧರ್ಮಪತ್ನಿಯನ್ನು ಬಿಟ್ಟವನ ಹೆಸರನ್ನು ಎತ್ತುವುದಕ್ಕೆ ಯಾರಿಗೆ ತಾನೇ ಮನಸ್ಸು ಬಂದೀತು?

ರಾಜಂ—(ತನ್ನಲ್ಲಿ ತಾನು) ಇದೇನು, ಈ ಕಥೆ ನನ್ನನ್ನೇ ಗುರಿಮಾಡುವುದು? ಒಳ್ಳೆಯದು. ಈ ಬಾಲಕನ ತಾಯಿ ಹೆಸರನ್ನು ಕೇಳೋಣ; ಅಥವಾ ಪರ ಪತ್ನಿಯ ವಿಚಾರವು ಸರಿಯಾದುದಲ್ಲ.

(ಮಣ್ಣಿನ ನವಿಲನ್ನು ಹಿಡಿದುಕೊಂಡು ತಾಪಸಿ ಬರುವಳು)

ತಾಪಸಿ—ವತ್ಸ, ಸರ್ವದಮನನೇ, ಶಕುಂತಲಾವಣ್ಯವನ್ನು ನೋಡು.

ಬಾಲ—(ಕಣ್ಣೆತ್ತಿ ನೋಡಿ) ಎಲ್ಲಿ ನಮ್ಮ ಅಮ್ಮ?

ಇಬ್ಬರು—(ನಕ್ಕು) ತಾಯಿ ಹಂಬಲುಳ್ಳ ಈ ಬಾಲಕನು, ಶಕುಂತಲಾವಣ್ಯವೆಂದು ನಾನು ಆಡುವುದನ್ನು ಕೇಳಿ, ನಾಮಸಾದೃಶ್ಯದಿಂದ ಭ್ರಮಿಸಿದನು.

೨ನೆಯವಳು—ವತ್ಸ, ವತ್ಸನೇ, ಈ ಮಣ್ಣಿನ ನವಿಲ ಚೆಲುವಿಕೆಯನ್ನು ನೋಡೆಂದು ಹೇಳಿದಳು.

ರಾಜಂ—(ತನ್ನಲ್ಲಿ ತಾನು) ಈ ಬಾಲಕನ ತಾಯಿ ಹೆಸರು ಶಕುಂತಳೆಯೆಂದೇ? ಒಂದೇ ಹೆಸರಿನವರು ಬಹಳವಾಗಿ ಉಂಟಷ್ಟೆ, ಆದರೂ ಈ ಹೆಸರು ಮಾತ್ರ ಮೃಗತೃಷ್ಣಿಕೆಯಂತೆ ನನಗೆ ವಿಷಾದವನ್ನುಂಟುಮಾಡುವುದು.

ಬಾಲ—ಅಮ್ಮಾ, ಈ ಬಣ್ಣದ ನವಿಲು ನನಗೆ ಬೇಕು. (ಎಂದು ಆಟದ ನವಿಲನ್ನು ತೆಗೆದುಕೊಳ್ಳುವುದಕ್ಕೆ ಕೈ ನೀಡುವನು)

೧ನೆಯವಳು—(ಭಯದಿಂದ ಕೂಡಿ) ಓಹೋ! ರಕ್ಷಾಯಂತ್ರವು ಈತನ ಮುಂಗೈಯಲ್ಲಿ ಕಾಣುವುದಿಲ್ಲ!

ರಾಜಂ—ಭಯಪಡಬೇಡಿ, ಸಿಂಹದ ಮರಿಯನ್ನು ಮರ್ದಿಸುವಾಗ ಇದೋ ಜಾರಿ ಬಿದ್ದಿದೆ. (ಎಂದು ತೆಗೆದುಕೊಳ್ಳುವನು)

ಇಬ್ಬರೂ—ಬೇಡ ಬೇಡ, ಇನ್ನೇನು ಗತಿ? ತೆಗೆದುಕೊಂಡನಲ್ಲ! (ಎಂದು ಆಶ್ಚರ್ಯದಿಂದ ಎದೆಯಲ್ಲಿ ಕೈಗಳನ್ನು ಇಟ್ಟುಕೊಂಡು ಒಬ್ಬರನ್ನೊಬ್ಬರು ನೋಡುವರು)

ರಾಜಂ—[illegible] ಮುಟ್ಟಬೇಡವೆಂದು ಹೇಳಿದಿರಿ?

೧ನೆಯವಳು—ಎಲೈ, ಮಹಾರಾಜನೆ ಕೇಳು, ಇದು ಅಪರಾಜಿತೆಯೆಂಬ ಮೂಲಿಕೆಯು. ಇದನ್ನು ಇವನಿಗೆ ಜಾತಕರ್ಮಮಾಡುವಲ್ಲಿ ಭಗವಾನ್ ಮಾರೀಚರು ಕಟ್ಟಿದರು. ನೆಲಕ್ಕೆ ಬಿದ್ದರೆ ಇದನ್ನು ತಂದೆತಾಯಿಗಳೂ ಇವನೂ ಹೊರತಾಗಿ ಇತರರು ಮುಟ್ಟುವಂತಿಲ್ಲ.

ರಾಜಂ—ಒಂದು ವೇಳೆ ಮುಟ್ಟಿದರೆ?

೧ನೆಯವಳು—ಮುಟ್ಟಿದ ಕ್ಷಣವೇ ಸರ್ಪವಾಗಿ ಕಚ್ಚುವದು.

ರಾಜಂ— ನೀವು ಹೇಳಿದ ಹಾಗೆ ಯಾವಾಗಲಾದರೂ ನಡೆದಿರುವುದನ್ನು ನೋಡಿ ರುವಿರಾ ?

ಇಬ್ಬರೂ— ಅನೇಕಾವೃತ್ತಿ.

ರಾಜಂ— (ಸಂತೋಷದೊಡನೆ ಕೂಡಿ) ಈಗ ಪೂರ್ಣವಾದ ನನ್ನ ಮನೋ ರಥವನ್ನು ಇನ್ನು ಹೇಗೆ ತಾನೇ ಕೊಂಡಾಡದಿರಲಿ. (ಎಂದು ಬಾಲನನ್ನು ಆಲಿಂಗಿಸುವನು)

ತಿನೆಯವಳು—ಎಲೌ ಸುವ್ರತೆ ನಡೆ, ನಿಯಮನಿರತೆಯಾಗಿರುವ ಶಕುಂತಳೆಗೆ ಈ ವೃತ್ತಾಂತವನ್ನು ತಿಳಿಸೋಣ. (ಎಂದು ಹೊರಡುವರು)

ಬಾಲ— ನನ್ನನ್ನು ಬಿಡು, ನಾನು ತಾಯ ಬಳಿಗೆ ಹೋಗುವೆನು.

ರಾಜಂ—ಎಲೈ ಪುತ್ರನೆ, ನನ್ನೊಡನೆಯೇ ನಿನ್ನ ತಾಯನ್ನು ಸಂತೋಷ ಪಡಿಸುವೆ, ತಾಳು.

ಬಾಲ— ನನ್ನ ತಂದೆಯಾದರೋ ದುಷ್ಯಂತನು, ನೀನು ಯಾರು ?

ರಾಜಂ— (ನಗೆಯೊಡನೆ ಕೂಡಿ) ಈ ವಿವಾದವೆ ನನಗೆ ವಿಶ್ವಾಸವನ್ನುಂಟು ಮಾಡುವುದು. (ಅನಂತರ ಒಂದೇ ಜಡೆಗಟ್ಟಿದ ಮುಡಿಯುಳ್ಳ ಶಕುಂತಳೆ ಬರುವಳು)

ಶಕುಂತಳೆ— ಸರ್ವದಮನನ ಕಯ್ಯಲ್ಲಿದ್ದ ಮೂಲಿಕೆಯು ಸರ್ಪವಾಗದೇ ಇದ್ದ ಸಂಗತಿಯನ್ನು ಕೇಳಿದಾಗ್ಯೂ ನನ್ನ ಭಾಗ್ಯದಲ್ಲಿ ನನಗೇನೂ ಕೋರಿಕೆಯುಂ ಟಾಗಲಿಲ್ಲ; ಒಂದು ಪಕ್ಷಕ್ಕೆ ಸಾನುಮತಿ ಹೇಳಿದಂತೆ ಸಂಭಾವಿಸಲ್ಪಡ ಬೇಕಾಗಿದೆ.

ರಾಜಂ — (ಶಕುಂತಳೆಯನ್ನು ನೋಡಿ) ಆಹಾ ! ಇದೋ ಪೂಜ್ಯಳಾದ ಶಕುಂತಳೆ !

ಕಂದ ॥ ಧರಿಸಿದ ಮಲಿನಾಂಬರದಿಂ ।
ಕೊರಗಿದ ಮೊಗದಿಂದದೊಂದೆ ಜಡೆಯಿಂದಿದೊ ನಿ- ॥
ಷ್ಕರುಣನುಮಾದೆನ್ನಯ ಚಿರ- ।
ವಿರಹವ್ರತಮಂ ಸುಶೀಲೆ ತಾಂ ತಳೆದಿರ್ಪಳ್ ॥

ಶಕುಂ — (ಪಶ್ಚಾತ್ತಾಪದಿಂದ ಕಳೆಗುಂದಿದ ರಾಜನನ್ನು ನೋಡಿ) ಆರ್ಯಪುತ್ರನ ಹಾಗಿಲ್ಲವಲ್ಲಾ ! ಇವನಾವನು ? ಕಟ್ಟಿದ ರಕ್ಷೆಯಿಂದ ಮಂಗಳಾಂಗನಾದ ನನ್ನ ಮಗನನ್ನು ಮುಟ್ಟಿ ಅಪರಿಶುದ್ಧನನ್ನು ಮಾಡುವನು.

ಬಾಲ —(ತಾಯ ಬಳಿಗೆ ಬಂದು) ಅಮ್ಮಾ, ಪರಕೀಯನಾದ ಇವನಾವನು? ನನ್ನನ್ನು ಪುತ್ರನೆಂದು ಆಲಿಂಗಿಸುವನು.

ರಾಜಂ— ಎಲೆ ಪ್ರಿಯೆ, ನಿನ್ನ ವಿಯೋಗದಿಂದ ಬಡವಾಗಿರುವ ನನ್ನ ಆಕೃತಿಯನ್ನು

ನೋಡಿ ಆರ್ಯಪುತ್ರನ ಹಾಗಿಲ್ಲವೆಂದು ನುಡಿದ ಕಾರಣದಿಂದ ನಾನು ನಿನ್ನಲ್ಲಿ ನಡೆಸಿದ ಕ್ರೂರತನವೂ ಅನುಕೂಲವಾಗಿ ಪರಿಣಮಿಸುವುದಾಯಿತು-ಎಂದು ತಿಳಿವೆನು.

ಶಕುಂ— (ತನ್ನಲ್ಲಿ ತಾನು) ಎಲೆ ಮನಸ್ಸೆ, ಸಂತೈಸಿಕೊ, ಸಂತೈಸಿಕೊ. ಮತ್ಸರವನ್ನು ಬಿಟ್ಟ ಮಹಾರಾಜನ ಕರುಣಕ್ಕೆ ಪಾತ್ರಳಾದೆನು; ಈತನೇ ಆರ್ಯಪುತ್ರನು.

ರಾಜಂ— ಕಂದ ॥ ರಾಹು ತೊರೆದೊಡನೆ ಶಶಿಯಂ ।
ರೋಹಿಣಿ ಬಳಿವೊರ್ದಿದಂತೆ ನೆನಪಿಂದಿರದಾ ॥
ಮೋಹತಮಮಳಿಯೆ ಸುಕೃತದೆ ।
ನೀಹಾರಕರಾಸ್ಯೆ ಸೇರ್ದೆಯೆನ್ನಯ ಬಳಿಯಂ ॥

ಶಕುಂ— ಆರ್ಯಪುತ್ರನೆ, ಜಯಶೀಲನಾಗು (ಎಂದು ಅರ್ಧೋಕ್ತಿಯಲ್ಲಿ ಕಣ್ಣೀರು ಕುತ್ತಿಗೆಯನ್ನು ಹಿಡಿಯಲು ಸುಮ್ಮನಿರುವಳು)

ರಾಜಂ— ಕಂದ ॥ ಸುದತಿಯೆ ಜಯ ಶಬ್ದಂ ಗ- ।
ದ್ಗದದಿಂ ಪೊರಮಡದೊಡಂ ಜಯಾನ್ವಿತನಾದೆಂ ॥
ಇದೊ ನಿನ್ನ ಪಾಟಲಾಧರ ।
ವದನಾಬ್ಜವನಾಂ ವಿಲೋಕಿಸಿದ ಕತದಿಂದಂ ॥

ಬಾಲಂ— ಅಮ್ಮಾ, ಈತನಾರು ?

ಶಕುಂ— ಎಲೆ ಮಗನೆ, ನಿನ್ನ ಭಾಗ್ಯಗಳನ್ನು ಕೇಳು.

ರಾಜಂ— (ಶಕುಂತಳೆಗೆ ಮಣಿದು)

ವೃತ್ತ ॥ ಬರಿದೆ ನಿಜೇಶನೆನ್ನ ತೊರೆದಂ ಗಡೆನುತ್ತಿಲೆ ಮಂಗಳಾಂಗಿ ಮ- ।
ತ್ಸರಿಸದಿರೇತರಿಂದವೊ ಮನಕ್ಕರಿವಿಲ್ಲದೆ ಪೋದುದೆಂದು ಕೇಳ್ ॥
ಪಿರಿದು ಶುಭಂಗಳೊಳ್ಮರವೆಯುಳ್ಳರೊಳೀ ಪರಿಯಲ್ತೆ ವರ್ತನಂ ।
ಸಿರದೆಡೆಗಿಟ್ಟ ಮಾಲೆಯುಮನಂಧನಹಿಭ್ರಮೆಯಿಂದೆ ನೂಂಕುವಂ ॥

ಶಕುಂ— ಆರ್ಯಪುತ್ರನೆ, ಏಳು, ಏಳು. ನಿಜವಾಗಿ ನನ್ನ ಸುಕೃತಪ್ರತಿಬಂಧಕವಾದ ಪುರಾಕೃತ ಕರ್ಮವು ಆಗ ಪರಿಣಮಿಸತೊಡಗಿತು; ಆದುದರಿಂದಲೇ ದಯಾಳುವಾದ ನೀನೂ ನನ್ನ ವಿಷಯದಲ್ಲಿ ಆ ತೆರನಾದೆ. (ರಾಯನು ಏಳುವನು) ಆಯಿತು; ಆರ್ಯಪುತ್ರನೆ, ದುಃಖಭಾಜನೆಯಾದ ನನ್ನನ್ನು ಆಮೇಲೆ ಹೇಗೆ ಸ್ಮರಿಸಿದೆ ?

ರಾಜಂ— ನನ್ನ ದುಃಖಶಲ್ಯವನ್ನು ತೆಗೆದು ಹಾಕಿ ಬಳಿಕ ಹೇಳುವೆನು.

ಕಂದ ॥ ಅರಸೀ ಮರವೆಯೊಳಾನಂ- ।
ದೊರಸಲನಾದರಣೆಗೈದ ನಿನ್ನಯ ಪಕ್ಷ್ಮಂ- ॥

ತರಲಗ್ನ ಬಾಷ್ಪಬಿಂದುವ- ।
ನೊರಸುತುಮಿಂದೆನ್ನ ದುಗುಡವಂ ಪರಿಹರಿಪೆಂ ॥

(ಎಂದು ಕಣ್ಣೀರನ್ನು ಒರಸುವನು)

ಶಕುಂ— (ರಾಜನಾಮಾಂಕಿತವಾದ ಉಂಗುರವನ್ನು ನೋಡಿ) ಆರ್ಯಪುತ್ರನೆ, ಇದು ಆ ಉಂಗುರವಲ್ಲವೆ ?

ರಾಜಂ— ಹೌದು.

ಶಕುಂ— ಆರ್ಯಪುತ್ರನಿಗೆ ನಂಬಿಕೆಯನ್ನುಂಟುಮಾಡುವ ಕಾಲದಲ್ಲಿ ಇದು ನನಗೆ ದೊರೆಯದೆ ಕೆಡಕು ಮಾಡಿತು.

ರಾಜಂ— ಹಾಗಾದರೆ ಪ್ರಸಕ್ತ ಋತುಸಂಬಂಧಕ್ಕೆ ಗುರುತಾಗಿ ಬಳ್ಳಿಯು ಕುಸುಮವನ್ನು ಪಡೆಯುವಂತೆ ನೀನು ಈ ಉಂಗುರವನ್ನು ಧರಿಸಿಕೋ.

ಶಕುಂ— ಇದರಲ್ಲಿ ನನಗೆ ವಿಶ್ವಾಸವಿಲ್ಲ. ಆರ್ಯಪುತ್ರನೇ ಇದನ್ನು ಧರಿಸಿಕೊಳ್ಳಬೇಕು.

(ಮಾತಲಿ ಪ್ರವೇಶಿಸುವನು)

ಮಾತಲಿ— ಎಲೈ ಆಯುಷ್ಮಂತನೆ, ದೈವಯೋಗದಿಂದ ಧರ್ಮಪತ್ನಿಯನ್ನು ಕೂಡಿದುದರಿಂದಲೂ, ಪುತ್ರನ ಮುಖವನ್ನು ನೋಡಿದುದರಿಂದಲೂ ಉಂಟಾದ ಸಂತೋಷದಿಂದ ನೀನು ವರ್ಧಿಸುವೆಯಾ ?

ರಾಜಂ— ಸನ್ಮಿತ್ರನಾದ ನಿನ್ನ ದೆಸೆಯಿಂದ ನನ್ನ ಮನೋರಥವು ಸರಸವಾಗಿ ಸಫಲವಾಯಿತು. ಮಾತಲಿಯೇ, ಈ ನನ್ನ ಪ್ರಯೋಜನವು ಇಂದ್ರನಿಗೆ ತಿಳಿಯಲಿಲ್ಲವಲ್ಲಾ.

ಮಾತಲಿ— (ನಗೆಯಿಂದ ಕೂಡಿ) ದೇವತೆಗಳಿಗೆ ತಿಳಿಯದುದು ಯಾವುದು ತಾನೆ ಉಂಟು ? ಎಲೈ ಆಯುಷ್ಮಂತನೆ, ನಡೆ ನಡೆ. ಪೂಜ್ಯರಾದ ಮಾರೀಚ ಮುನಿಗಳು ನಿನಗೆ ದರ್ಶನವನ್ನು ಕೊಡುವರು.

ರಾಜಂ— ಎಲೆ ಶಕುಂತಲೆ, ಪುತ್ರನನ್ನು ಎತ್ತಿಕೊ. ನಿನ್ನೊಡನೆ ಪೂಜ್ಯರನ್ನು ನೋಡಲಿಚ್ಛೈಸುವೆನು.

ಶಕುಂ— ಆರ್ಯಪುತ್ರನೊಡನೆ ಗುರುಸನ್ನಿಧಿಗೆ ಬರುವುದಕ್ಕೆ [illegible] ನಾಚುವೆನು.

ರಾಜಂ— ಸಾಕು, ನಾಚಿಕೊಳ್ಳುವುದೇಕೆ ? ಅಭ್ಯುದಯಕಾಲದಲ್ಲಿ ಹೀಗೇ ನಡೆದುಕೊಳ್ಳಬೇಕು; ಬಾ, ಬಾ.

(ಶಾಕುಂತಲ ನಾಟಕ)
—ಬಸವಪ್ಪ ಶಾಸ್ತ್ರಿ

೬. ಕಾದಂಬರಿಯ ದರ್ಶನ

ಬಳಿಕ ಮಹಾಶ್ವೇತೆಯು ಜಪವನ್ನು ಮುಗಿಸಿ— 'ತರಲಿಕೇ, ನೀನು ಕಾದಂಬರಿಯನ್ನು ಕಂಡೆಯಾ? ಆಕೆ ಸುಖದಿಂದಿರುವಳೇ? ನನ್ನ ಮಾತು ಮನ್ನಿಸುವಳೇ?' ಎಂದು ಕೇಳಿದ್ದಕ್ಕೆ ತರಲಿಕೆಯು— 'ತಾಯಿ, ಕಾದಂಬರಿಯನ್ನು ನೋಡಿದೆನು. ಆಕೆ ಸುಖರೂಪ ಇದ್ದಾಳೆ. ನಿನ್ನ ನಿರೋಪವನ್ನು ಅವಳಿಗೆ ನಿವೇದಿಸಿದೆನು. ಅದಕ್ಕೆ ಆಕೆ ಕಣ್ಣೀರು ಸುರಿಸಿ, ತಿರುಗಿ ಹೇಳಿದ ನಿರೋಪವನು ತನ್ನ ಸಂಗಡ ಬಂದ ಆಕೆಯ ಪ್ರೀತಿ ಹಿಡಿಯುವ ಈ ಕೇಯೂರಕನೇ ಹೇಳುವನು,' ಎಂದು ಸುಮ್ಮನಾದ ಕೂಡಲೆ, ಆತನು ಮುಂದೆ ಬಂದು— "ತಾಯಿ ಮಹಾಶ್ವೇತೆ, ಕಾದಂಬರೀ ದೇವಿಯು ನಿಮಗೆ ಆಲಿಂಗಿಸಿ, ವಿಜ್ಞಾಪಿಸುವದೇನೆಂದರೆ, 'ತರಲಿಕೆಯ ಕೂಡ ನೀನು ಹೇಳಿಕಳುಹಿಸಿದ ನಿರೋಪವೇನು ನನ್ನ ಮನಸು ಪರೀಕ್ಷಿಸುವದಕ್ಕೋ, ಅಥವಾ ನಾನು ಮನೆಯಲ್ಲಿ ನಿಂತುಕೊಂಡದ್ದಕ್ಕೆ ನನ್ನ ಮೇಲಿನ ಪ್ರಕೋಪವೋ ನನಗಂತೂ ತಿಳಿಯದು. ನಿನ್ನ ಸಲುವಾಗಿ ನನ್ನ ಹೃದಯವು ಪ್ರೇಮಘಟಿತವಾದದ್ದೆಂದು ನಿನಗೆ ಮನವರಿಕೆಯಾಗಿದ್ದು, ಇಂಥ ನಿಷ್ಠುರ ನಿರೋಪ ಹೇಳಿ ಕಳಿಸಿದ ಬಗೆ ಏನು? ಮಧುರ ಮಾತಿನ ಮಾನಿನೀ, ನಿನಗೆ ಇಂಥ ಕಠೋರ ಭಾಷಣವನ್ನು ಯಾರು ಕಲಿಸಿದರು? ಸುಹೃಜ್ಜನರ ದುಃಖದಿಂದ ದುಃಖಿತರಾದವರ ಮನಸಿಗೆ ಸುಖದ ಆಸೆಯೂ ಶಾಂತಿಯೂ ಇನ್ನೆಲ್ಲಿಯದು? ಸೂರ್ಯನ ವಿಯೋಗದಿಂದ ಮ್ಲಾನವಾದ ಪದ್ಮಿನಿಯನ್ನು ಕಂಡು ಚಕ್ರವಾಕ ಪಕ್ಷಿಯು ಸಹ ಖಿನ್ನವಾಗಿ ದುಃಖ ತೋರಿಸುತ್ತದೆ; ನಮ್ಮಂಥ ಸ್ತ್ರೀಯರು ಸುಮ್ಮನಿರುವರೇ? ಪ್ರಿಯನ ವಿರಹದಿಂದ ದುಃಖಿತ ಪ್ರಿಯಸಖಿಯಾದ ನಿನಗೆ ಹಗಲೂ ಇರುಳೂ ಮರೆಯಾದ ನನ್ನ ಮನಸು ಪ್ರಬಂಧನನ್ನು ಇಚ್ಛಿಸುವ ಬಗೆ ಯಾವದು? ವಿರಹ ದುಃಖ ಮೂಲಕವಾಗಿ ನೀನು ತಪಶ್ಚರ್ಯ ಮಾಡುತ್ತ ದೇಹವನ್ನು ದಣಿಸಿ ಕಷ್ಟಗಳನ್ನು ಅನುಭೋಗಿಸುವಾಗಲೇ ನಾನು ನಿನ್ನ ದುಃಖಗಳನ್ನು ಲೆಕ್ಕಿಸದೆ ಮದುವೆ ಮಾಡಿಕೊಳ್ಳಬೇಕೇ? ಆ ಮಾತು ಕನಸು ಮನಸಿನಲ್ಲಿ ಸಹ ತೆಗೆಯಬೇಡ. ನನ್ನ ಜೀವವು ನಿನ್ನ ಕೂಡ ಮನದಲ್ಲಿಯೇ ಅದೆ ಎಂದು ತಿಳಿ', ಎಂದು ನಿಮಗೆ ಕೈಮುಗಿದು ಕಾಲು ಹಿಡಿದು ಬಿನ್ನವಿಸಿದಳು" ಎಂದು ಹೇಳಿದನು.

ಮಹಾಶ್ವೇತೆಯು ಆ ಮಾತು ಕೇಳಿ ಮನದೊಳಗೆ ಸ್ವಲ್ಪ ಹೊತ್ತು ಆಲೋಚಿಸಿ, 'ನೀನು ಹೋಗು, ನಾನೇ ಅಲ್ಲಿಗೆ ಬರುತ್ತೇನೆ.' ಎಂದು ಹೇಳಿ ಕೇಯೂರಕನಿಗೆ ತಿರುಗಿ ಹೋಗಲಪ್ಪಣೆ ಕೊಟ್ಟು, ಚಂದ್ರಾಪೀಡನಿಗೆ— "ಎಲೈ ಭಾಗ್ಯಶಾಲಿಯಾದ ರಾಜಕುಮಾರನೇ, ನೀನು ಹೇಮಕೂಟ ಪರ್ವತವನ್ನು ನೋಡಿರಲಿಕ್ಕಿಲ್ಲ!

ಅದರ ಮೇಲೆ ಚಿತ್ರರಥ ಗಂಧರ್ವರಾಜನ ಅತಿ ರಮಣೀಯವಾದ ರಾಜಧಾನಿ ಯುಂಟು; ಅದು ಕಿಂಪುರುಷರೂ ಗಂಧರ್ವರೂ ಇರುವ ಕೌತುಕದ ಸುಂದರ ಲೋಕವು; ಅಲ್ಲಿ ಸರಳ ಮನಸಿನ ನನ್ನ ಜೀವದ ಗೆಳತಿ ಕಾದಂಬರಿಯು ಇದ್ದಾಳೆ. ದಾರಿ ನಡೆಯುವದರಿಂದ ನಿಮಗೆ ಶ್ರಮವಾಗದ ಹಾಗಿದ್ದರೆ, ನಿಮ್ಮ ಕಾರ್ಯಕ್ಕೆ ಅಡ್ಡಿ ಯಾಗದಂತಿದ್ದರೆ, ಆ ಅಪೂರ್ವ ಲೋಕವನ್ನು ನೋಡುವ ಕೌತುಕವನ್ನು ನೆರವೇರಿಸ ಬೇಕೆಂಬ ಇಚ್ಛೆಯಿದ್ದರೆ, ನನ್ನ ಪ್ರಾರ್ಥನೆಯನ್ನು ವ್ಯರ್ಥ ಮಾಡದ ಹಾಗಿದ್ದರೆ, ಅನು ಗ್ರಹಕ್ಕೆ ನಾವು ಪಾತ್ರರೆಂದು ಮನವರಿಕೆಯಾದರೆ, ನೀವು ದಯೆ ಮಾಡಿ ನನ್ನ ಸಂಗಡ ಅಲ್ಲಿಯವರೆಗೆ ಬಂದು, ಕಾದಂಬರೀ ದರ್ಶನ ತಕ್ಕೊಂಡು, ಆಕೆಯ ಹಟ ವನ್ನು ನಿರಸನ ಮಾಡಿ, ಅಲ್ಲಿ ಒಂದು ದಿನ ವಿಶ್ರಮಿಸಿಕೊಂಡು, ನಾಳೆಗೆ ಇಲ್ಲಿಗೆ ತಿರುಗಿ ಬರಬೇಕು. ಕಾರಣವಿಲ್ಲದೆ ನಮ್ಮ ನಿಮ್ಮ ಬಂಧುತ್ವ ಘಟಿಸಿತು; ನಿಮ್ಮ ದರ್ಶನ ವಾದಾಗಿನಿಂದ ನನ್ನ ಚಿತ್ತವು ಸ್ವಸ್ಥವಾಗಿದೆ; ನಿಮಗೆ ನನ್ನ ವೃತ್ತಾಂತವನ್ನೆಲ್ಲ ಹೇಳಿ ಕೊಂಡುದರಿಂದ ನನ್ನ ಶೋಕವು ಕಡಿಮೆಯಾಯಿತು. ಸಜ್ಜನರ ಸಮಾಗಮದಿಂದ ದುಃಖಿಗಳಿಗೆ ಸಹ ಸಮಾಧಾನವಾಗುತ್ತದೆ. ನಿಮ್ಮಂಥ ಮಹಾಪುರುಷರ ಗುಣೋ ದಯವು ಎರಡನೆಯವರಿಗೆ ಸುಖ ಕೊಡುವದರಲ್ಲಿಯೇ ತತ್ಪರವಾಗಿರುತ್ತದೆ" ಎಂದು ಹೇಳಿಕೊಂಡಳು. ಮಹಾಶ್ವೇತೆಯ ಈ ಮಾತುಗಳನ್ನು ಕೇಳಿ ಚಂದ್ರಾ ಪೀಡನು, —"ತಾಯಿ, ನಿನ್ನ ದರ್ಶನವಾದಾಗಿನಿಂದ ಈ ದೇಹವು ನಿನ್ನದಾಗಿದೆ; ನಿನ್ನ ಇಚ್ಛೆಯೇ ನನ್ನ ಇಚ್ಛೆಯು" ಎಂದು ಹೇಳಿ ಆಕೆಯ ಸಂಗಡ ಹೇಮಕೂಟ ಪರ್ವತಕ್ಕೆ ಹೊರಟನು.

ಚಂದ್ರಾಪೀಡನೂ ಮಹಾಶ್ವೇತೆಯೂ ಗಮನಕ್ರಮದಿಂದ ಹೇಮಕೂಟ ಪರ್ವತವನ್ನೇರಿ ಹೋಗಿ, ಗಂಧರ್ವರಾಜನ ಕೋಟೆಯನ್ನು ದಾಟಿ, ಕನಕ ತೋರಣ ಗಳಿಂದ ಶೋಭಿಸುವ ಏಳು ಚೌಕುಗಳೊಳಗಿಂದ ಕನ್ಯಾಂತಃಪುರದ ಮಹಾದ್ವಾರದ ಹತ್ತರ ಹೋದರು. ಅಲ್ಲಿ ಮಹಾಶ್ವೇತೆಯನ್ನು ನೋಡಿದ ಕೂಡಲೇ, ಬಂಗಾರದ ಬೆತ್ತ ಹಿಡಿಯುವ ಕಂಚುಕಿಗಳು ಓಡಿ ಮುಂದೆ ಬಂದು, ತಲೆಬಾಗಿ ನೆಲಮುಟ್ಟಿ ವಂದನೆ ಮಾಡಿ ಮುಂದೆ ಮುಂದೆ ಮಾರ್ಗ ತೋರಿಸಲು, ಆ ಮಾರ್ಗದಿಂದ ಮಹಾ ಶ್ವೇತೆಯೊಡನೆ ಚಂದ್ರಾಪೀಡನು ಒಳಗೆ ಹೊಕ್ಕು ನೋಡುತ್ತಾನೆ, ಆ ಕನ್ಯಾಂತಃ ಪುರದೊಳಗೆ ವಸ್ತ್ರಾಲಂಕಾರಗಳಿಂದ ಭೂಷಿತರಾದ ಸುಂದರ ಸ್ತ್ರೀಯರೇ ಇದ್ದರು; ಪುರುಷರ ಸಂಪರ್ಕ ಕೂಡ ಅಲ್ಲಿ ಇದ್ದಿಲ್ಲ. ಆದದರಿಂದ ಅದೊಂದು ಸ್ತ್ರೀಮಯ ವಾದ ಎರಡನೆಯ ಲೋಕವೋ ಏನೋ ಅನ್ನುವಂತೆ ಅವನಿಗೆ ತೋರಿತು.

ಆ ಕನ್ಯಾಂತಃಪುರದೊಳಗೆ ಕಾದಂಬರಿಯ ಸೇವೆ ಮಾಡುವದಕ್ಕೆ ನೆರದಿದ್ದ ನೂರಾರು ದಾಸಿಯರು ತಟ್ಟನೆ ಇಬ್ಭಾಗವಾಗಿ ಕೊಟ್ಟ ಮಾರ್ಗದಿಂದ ಹಾಯ್ದು, ಚಂದ್ರಾಪೀಡನು ಕಾದಂಬರಿಯು ಕುಳಿತ ಮಂಟಪದ ಹತ್ತಿರ ಹೋದನು. ಸುತ್ತು ಮುತ್ತು ನೂರಾರು ಸುಂದರ ಕನ್ಯೆಯರು ಉಲ್ಲಾಸದಿಂದ ಕುಳಿತಿದ್ದಾರೆ: ಎಡ

ಬಲಪಲ್ಲಿ ಬಡನಡು ಬಳುಕುವ ಚೆನ್ನೆಯರಿಬ್ಬರು ನಿಂತುಕೊಂಡು, ರತ್ನಖಚಿತವಾದ ಕಾವಿನ ಚಾಮರಗಳನ್ನು ಹಿಡಿದು ಸೊಕ್ಕಿರಿದು ತೋಳುಗಳನ್ನು ನೆಗವಿ ಢಾಳಿಸುತ್ತಾರೆ; ಬಾಯಿಯಿಂದ ಬಂದ ಸೇವೆಯನ್ನು ಮುಂದುವರಿದು ಮಾಡಬೇಕೆಂದು ಹಾರೈಸಿಕೊಂಡು, ಹಲವು ಹೆಂಗಳೆಯರು ಸಂದಣಿಗೊಂಡು ಮುಂಭಾಗದಲ್ಲಿ ನಿಂತಿದ್ದಾರೆ; ಆ ಮಂಟಪದ ಮಧ್ಯದಲ್ಲಿ ಹಸ್ತಿದಂತದ ಮಂಚದ ಮೇಲೆ ರೇಶಿಮೆಯ ದಿಂಬುಗಳಿಗೆ ಆತು ಸಖಿಯರ ಕೂಡ ವಿನೋದದ ಮಾತುಗಳನ್ನಾಡುತ್ತ, ಹಾಗೂ ತನ್ನ ಎದುರಿಗೆ ಕುಳಿತುಕೊಂಡು ತನ್ನನ್ನು ವರ್ಣಿಸುವ ಕೇಯೂರಕನ ಕೂಡ, "ಆತನು ಯಾರು? ಯಾರ ಮಗನು? ಎಷ್ಟು ವಯಸ್ಸಿನವನು? ಆತನ ಹೆಸರೇನು? ಏನು ಅನ್ನುತ್ತಿದ್ದನು? ಆತನ ಕೂಡ ಮಾತಾಡಿದಿಯಾ? ಎಷ್ಟು ಹೊತ್ತು ಆತನ ಬಳಿಯಲ್ಲಿದ್ದಿ? ಅವನಿಗೂ ಮಹಾಶ್ವೇತೆಗೂ ಹ್ಯಾಗೆ ಗುರುತಾಯಿತು? ಆತನು ಇಲ್ಲಿಗೆ ಬರುವನೋ? ಇಲ್ಲಿಗೆ ಬರುವಂತೆ ಏನು ಉಪಾಯ ಮಾಡಬೇಕು?" ಎಂದು ತನ್ನ ಸಂಬಂಧದ ಮಾತುಗಳನ್ನೇ ಮಾತಾಡುತ್ತ ಕುಳಿತ ಕಾದಂಬರಿಯನ್ನು ಚಂದ್ರಾಪೀಡನು ನೋಡಿದನು.

ಲೋಕೋತ್ತರ ಲಕ್ಷಣಯುಕ್ತಳಾಗಿ, ರೂಪಯೌವನಸಂಪನ್ನಳಾದ ಕಾದಂಬರಿಯನ್ನು ಪ್ರತಿಬಂಧವಿಲ್ಲದೆ ಯಥೇಚ್ಛವಾಗಿ ನೋಡುವಂಥ ತನ್ನ ಕಣ್ಣುಗಳು ಜನ್ಮಾಂತರದಲ್ಲಿ ಎಷ್ಟು ಪುಣ್ಯ ಮಾಡಿದ್ದಾವು! ಇದೇನು ಕಾದಂಬರಿಯ ರೂಪವೋ ಬ್ರಹ್ಮನು ನಿರ್ಮಿಸಿದ ಲಾವಣ್ಯದ ನಿಧಿಯೋ! ಎಂದು ಮನದೊಳಗೆ ಆಲೋಚಿಸುತ್ತ ಆಶ್ಚರ್ಯಗೊಂಡು ಆದರದಿಂದ ನೋಡುವ ಚಂದ್ರಾಪೀಡನ ಕಡೆಗೆ ಕಾದಂಬರಿಯ ದೃಷ್ಟಿ ಹೋಯಿತು. ಆಗ ಆತನ ರೂಪಾತಿಶಯವನ್ನು ಕಂಡು ಇಷ್ಟೊತ್ತಿನ ತನಕ ಕೇಯೂರಕನು ವರ್ಣಿಸಿದ ಚಂದ್ರಾಪೀಡನು ಈತನೇ ಆದಾನು ಎಂದು ತಿಳಿದು, ಬೆರಗಾಗಿ ಪ್ರೀತಿಯಿಂದ ಆತನ ಮುಖವನ್ನು ನೋಡುವಾಗ ಅವಳ ನೇತ್ರಗಳು ಪ್ರಫುಲ್ಲಿತವಾದವು; ಮೈಮೇಲೆ ರೋಮಾಂಚಗಳೆದ್ದವು; ಹೃದಯದೊಳಗೆ ನಮುಗೂ ನಾಚಿಕೆಯೂ ಹುಟ್ಟಿದವು. ಇದರಂತೆಯೇ ಚಂದ್ರಾಪೀಡನಿಗೂ ಕಾಮ ಭಾವಗಳಾದವು.

ಬಹಳ ದಿವಸಕ್ಕೆ ಮಹಾಶ್ವೇತೆಯ ದರ್ಶನವಾಯಿತೆಂದು ಕಾದಂಬರಿಯು ಆನಂದಭರಿತಳಾಗಿ ಎದ್ದು ಮುಂದಕ್ಕೆ ಬಂದು ಪ್ರೇಮದಿಂದ ಆಕೆಯ ಕೊರಳಿಗೆ ತೆಕ್ಕೆ ಬೀಳಲು, ಅವಳು ಈಕೆಯನ್ನು ಅಪ್ಪಿಕೊಂಡಳು. ಬಳಿಕ ಮಹಾಶ್ವೇತೆಯು—"ಸಖೀ ಕಾದಂಬರೀ, ಭೂಲೋಕದಲ್ಲಿ ಸಮುದ್ರವಲಯಾಂಕಿತ ಪೃಥ್ವಿಯನ್ನು ಆಳುವಂಥ, ಉತ್ತಮರೀತಿಯಿಂದ ಪ್ರಜರನ್ನು ಪಾಲಿಸುವಂಥ ತಾರಾಪೀಡನೆಂಬ ಸಾರ್ವಭೌಮ ರಾಜನಿದ್ದಾನೆಂದು ನೀನು ಕೇಳಿ ಬಲ್ಲಿಯಷ್ಟೆ; ಆತನ ಮಗನು ಈ ಚಂದ್ರಾಪೀಡನು. ಈ ಪರಾಕ್ರಮಶಾಲಿಯು ದಿಗ್ವಿಜಯಾರ್ಥ ಹೊರಟು ಈ ಲೋಕಕ್ಕೆ ಬಂದಿದ್ದಾನೆ. ಈತನ ದರ್ಶನವಾದ ಬಳಿಕ ಕಾರಣವಿಲ್ಲದೆ ಈತನಿಗೂ

ನನಗೂ ಬಂಧುತ್ವ ಘಟಿಸಿತು ; ಸರ್ವಸಂಗ ಪರಿತ್ಯಾಗ ಮಾಡಿ ವಿರಕ್ತಳಾದ ನನ್ನ ಚಿತ್ತವೃತ್ತಿಯನ್ನು ಈತನು ತನ್ನ ಸರಳ ಸ್ವಭಾವದಿಂದ ಪ್ರಸನ್ನ ಮಾಡಿರುವನು. ಚತುರನಿದ್ದು ಅನುಕೂಲತನದಿಂದ ವರ್ತಿಸುವಂಥ, ಕಾರ್ಯವಿಲ್ಲದೆ ಮಿತ್ರತ್ವವನ್ನು ಕಾಯುವಂಥ, ನಿಷ್ಕೃತ್ರಿಮ ಅಂತಃಕರುಣವುಳ್ಳಂಥ ಪುರುಷರು ದೊರೆಯುವದು ಬಹಳ ವಿರಳ. ಆದದರಿಂದ, ಈತನನ್ನು ನೋಡಿ ರೂಪದ ನಿರ್ಮಾಣಸತ್ವವನ್ನೂ, ಲಕ್ಷ್ಮಿಯ ಯೋಗ್ಯನಿವಾಸವನ್ನೂ, ಸತ್ಕೃತಿ ನಿಮಿತ್ತದಿಂದ ಸೃಷ್ಟಿಗೆ ಉಂಟಾದ ಸುಂ ರೂಪತನವನ್ನೂ, ದೇವಲೋಕಕ್ಕಿಂತ ಮರ್ತ್ಯಲೋಕದ ಮೇಲ್ಮೆಯನ್ನೂ, ನಮ್ಮ ಕಣ್ಣುಗಳ ಸಾಫಲ್ಯವನ್ನೂ, ಒಂದೇ ಸ್ಥಳದಲ್ಲಿ ಒಟ್ಟುಗೂಡುವ ಸಕಲ ಗುಣಗಳನ್ನೂ, ಬ್ರಹ್ಮನ ಚಾತುರ್ಯ ಔದಾರ್ಯಗಳನ್ನೂ ನೀನೂ ನನ್ನಂತೆಯೇ ನೋಡುವಂತಾಗಬೇಕು ಎಂದು ನಾನು ಆಗ್ರಹದಿಂದ ಈತನನ್ನು ನಿನ್ನೆಡೆಗೆ ಕರೆದುಕೊಂಡು ಬಂದೆನು. ಆದರೆ ಹೊಸದಾಗಿ ದರ್ಶನವಾದವರಿಂದ ಉಂಟಾಗುವ ನಾಚಿಕೆಗೆ ಇಂಬುಗೊಡದೆ, ಪರಿಚಯವಿಲ್ಲದ ಮೂಲಕವಾಗಿ ತೋರುವ ಅವಿಶ್ವಾಸವನ್ನು ತೊರೆದು, ಸ್ವಭಾವಗುಣ ಲಕ್ಷದ ಕಾರಣ ಹುಟ್ಟುವ ಶಂಕೆಯನ್ನು ಬಿಟ್ಟು, ನನ್ನ ಕೂಡ ವರ್ತಿಸುವಂತೆಯೇ ಈತನ ಕೂಡ ವರ್ತಿಸು. ಈತನು ನಿನ್ನ ಆಪ್ತನು''. ಎಂದು ಆಕೆ ಮಾತಾಡುವಂತೆ ಕೂಡಲೆ ಚಂದ್ರಾಪೀಡನು ಕಾದಂಬರಿಗೆ ಅತಿವಿನಯದಿಂದ ವಂದಿಸಿದನು. ಕಾದಂಬರಿಯೂ ಕಡುಮಮತೆಯ ಕಡೆಗಣ್ಣಿನ ನೋಟದಿಂದ ಆತನ ಮುಖ ನೋಡುತ್ತ, ಮುಗುಳ್ನಗೆ ನಗುತ್ತ, ಚಂದ್ರಾಪೀಡನ ಚರಣಕ್ಕೆರಗಿದಳು. ಆಗ ಸುತ್ತುಮುತ್ತು ಕುಳಿತ ಕನ್ನಿಕೆಯರು ಕೌತುಕದಿಂದ ಚಂದ್ರಾಪೀಡನನ್ನೇ ನೋಡಹತ್ತಿದರು.

ಕಾದಂಬರಿಯು ಮಹಾಶ್ವೇತೆಯ ಕೈಹಿಡಿದು ಕರೆದುಕೊಂಡು ತನ್ನ ಮಂಚದ ಮೇಲೆ ಕೂಡಿಸಿಕೊಂಡಳು. ಅಷ್ಟರೊಳಗೆ ದಾಸಿಯರು ತವಕದಿಂದ ತಂದಿಟ್ಟ ಮಣಿಮಂಚದ ಮೇಲೆ ಚಂದ್ರಾಪೀಡನು ಕುಳಿತನು. ಆ ಸಮಯದಲ್ಲಿ ಕಾದಂಬರಿಯ ಇಂಗಿತವನ್ನು ತಿಳಿಯುವ ದ್ವಾರಪಾಲಿಕೆಯರು ಅಲ್ಲಿ ಆಗುವ ವೇಣು ವೀಣಾ ಮೃದಂಗ ಧ್ವನಿಗಳನ್ನೂ, ಗಾನಗಾರ್ತಿಯರ ಗಾಯನವನ್ನೂ, ಸ್ತುತಿಪಾಠಗೈಯುವ ಸುಂದರಿಯರ ಜಯಜಯಕಾರವನ್ನೂ ಕಣ್ಸನ್ನೆಯಿಂದ ಕಟ್ಟು ಮಾಡಿದರು.

ಆಗ ಕಾದಂಬರಿಯು ಎದ್ದು ದಾಸಿಯರು ತಂದುಕೊಟ್ಟ ನೀರು ತಕ್ಕೊಂಡು ತಾನೇ ಮಹಾಶ್ವೇತೆಯ ಕಾಲ್ತೊಳೆದು ಮೇಲುದದಿಂದ ಒರಸಿ ಆಸನದ ಮೇಲೆ ಹೋಗಿ ಕುಳಿತುಕೊಂಡಳು. ಕಾದಂಬರಿಯ ಜೀವದ ಗೆಳತಿ ಮದಲೇಖೆ ಎಂಬವಳು ಚಂದ್ರಾಪೀಡನ ಇಚ್ಛೆಯಿಲ್ಲದಿದ್ದಾಗ್ಯೂ ಆಗ್ರಹದಿಂದ ಕೋಮಲ ಹಸ್ತವ ಚಾಚಿ ಆತನ ಕಾಲಹೆಬ್ಬೆರಳು ಹಿಡಿದು ಚನ್ನಾಗಿ ನೀರಿನಿಂದ ಪಾದಪ್ರಕ್ಷಾಳನ ಮಾಡಿ ತನ್ನ ಸೀರೆಯ ಸೆರಗಿನಿಂದ ಒರಸಿದಳು.

ಮಹಾಶ್ವೇತೆಯು ಪ್ರೇಮದಿಂದ ಕಾದಂಬರಿಯ ಹೆಗಲ ಮೇಲೆ ತನ್ನ ಎಡ ದೋಳು ಹಾಕಿ, ಚಾಮರದ ಗಾಳಿಗೆ ಹಾರಿ ಹಣೆಯ ಮೇಲೆ ಬಂದ ಆಕೆಯ

ಮುಂಗುರುಳುಗಳನ್ನು ಬಲಗೈಬೆರಳುಗಳಿಂದ ತಿದ್ದಿ, ಸುಕ್ಷೇಮವನ್ನು ಕೇಳಿದಳು. ಸಖಿಯು ಸಂಕಟಪಡುತ್ತಿದ್ದಾಗ ತಾನು ಮನೆಯಲ್ಲಿಯೇ ನಿಂತುಕೊಂಡದ್ದೊಂದು ತಪ್ಪಾಗಿದೆ ಎಂದು ಕಾದಂಬರಿಯು ನಾಚುತ್ತ ಸುಖರೂಪವಲ್ಲಿದ್ದೇನೆಂದು ಕಷ್ಟಪಟ್ಟು ಉತ್ತರಕೊಟ್ಟು, ಮಹಾಶ್ವೇತೆಯ ದುಃಖವನ್ನು ಮನದೊಳಗೆ ನೆನೆಸಿ, ಅಂತಃಕರಣದೊಳಗೆ ಶೋಕತಾಪಿಷ್ಠಳಾಗಿ ಅವಳ ಮೋರೆ ನೋಡುತ್ತ, ಸಹವಾಸಿ ಚಂದ್ರಾಪೀಡನ ಮುಖವನ್ನು ಓರೆ ನೋಟದಿಂದ ನೋಡಿ ನೋಡಿ ಆತನ ವಶಕ್ಕೆ ಮೋಹಿತಳಾದಳು. ಈ ಪರಿಯಾಗಿ ಎರಡು ಗಳಿಗೆ ಹೊತ್ತು ಹೋದ ಬಳಿಕ, ಕಾದಂಬರಿಯು ಮಹಾಶ್ವೇತೆಗೆ ತಾಂಬೂಲ ಕೊಡಲುಹೋಗಲು, ಮಹಾಶ್ವೇತೆಯು,—"ಸಖೀ ಕಾದಂಬರೀ, ನಾವೆಲ್ಲರೂ ಹೊಸದಾಗಿ ಮನೆಗೆ ಬಂದ ಚಂದ್ರಾಪೀಡನಿಗೆ ಸನ್ಮಾನ ಮಾಡತಕ್ಕದ್ದು; ಮೊದಲು ಅವನಿಗೆ ತಾಂಬೂಲ ಕೊಡು" ಎಂದ ಮಹಾಶ್ವೇತೆಯ ಮುಖ ನೋಡುತ್ತ, ಕಾದಂಬರಿಯು—"ಅಪರಾ ನನ್ನ ಪರಿಚಯವಿಲ್ಲದ ಪುರುಷ ಅವನಿಗೆ ತಾಂಬೂಲ ಕೊಡಲಿಕ್ಕೆ ನಾನು ನಾಚುವವಳಾಗುತ್ತೇನೆ; ನೀನೇ ಈ ತಾಂಬೂಲ ತಕ್ಕೊಂಡು ಅವನಿಗೆ ಕೊಡು"— ಎಂದು ಮೆಲ್ಲನೆ ನುಡಿಯಲು ಅವಳು ಕಾದಂಬರಿಗೆ, 'ನೀನೇ ಕೊಡತಕ್ಕದ್ದು' ಎಂದು ಬಹಳ ಬಗೆಯ ಹೇಳಿದಳು. ಅದರಿಂದ ಕಾದಂಬರಿಯು ಲಜ್ಜೆಯಿಂದ ಗ್ರಾಮ್ಯಸ್ತ್ರೀಯಂತೆ ಅಂಜುತ್ತ ಮಹಾಶ್ವೇತೆಯ ಮುಖ ನೋಡುತ್ತ ಚಂದ್ರಾಪೀಡನ ಕಡೆಗೆ ತಾಂಬೂಲದ ಕೈಯನ್ನು ಸಾವಕಾಶ ಚಾಚಿದಳು; ಅದನ್ನು ಕಂಡು ಚಂದ್ರಾಪೀಡನು ವಿನಯದಿಂದ ಮುಂದಕ್ಕೆ ಬಾಗಿದ್ದು ಕೈಯೊಡ್ಡಲು, ಅವಳು ತನ್ನ ಮನಸ್ಸನ್ನು ಆತನ ವಶಮಾಡುತ್ತಾಳೋ ಎನೋ ಅನ್ನುವಂತೆ ಅವನ ಕೈಯೊಳಗೆ ತನ್ನ ಕೈಮುಟ್ಟಿ ತಾಂಬೂಲ ಕೊಟ್ಟು, ಸ್ಪರ್ಶಸುಖದಿಂದ ಅತಿ ಹರ್ಷಿತಳಾಗಿ, ಕೃತಾರ್ಥಳಾದೆನೆಂದು ಭಾವಿಸಿಕೊಂಡು ಎರಡನೆಯ ತಾಂಬೂಲವನ್ನು ತೆಗೆದುಕೊಂಡು ಮಹಾಶ್ವೇತೆಗೆ ಕೊಟ್ಟಳು.

ಅಷ್ಟರೊಳಗೆ ಒಬ್ಬ ಕಂಚುಕಿಯು ಬಂದು ಮಹಾಶ್ವೇತೆಗೆ ತಲೆಬಾಗಿ,—"ತಾಯಿ ಆಯುಷ್ಮತೀ, ಚಿತ್ರರಥರಾಜನೂ ಮದಿರಾದೇವಿಯೂ ನಿಮ್ಮನ್ನು ನೋಡಲುತ್ಕಂಠಿತರಾಗಿ ನಿಮ್ಮ ಮಾರ್ಗ ನಿರೀಕ್ಷಿಸುತ್ತಾರೆ" ಎಂದು ಹೇಳಿದ ಕೂಡಲೆ ಮಹಾಶ್ವೇತೆಯು ಅತ್ತ ಹೋಗಲುವಾಗಿ—'ಸಖೀ ಕಾದಂಬರೀ, ಇನ್ನು ಈ ಚಂದ್ರಾಪೀಡನು ಎಲ್ಲಿರಬೇಕು ?' ಎಂದು ಕೇಳಿದಳು. ಅದಕ್ಕೆ ಕಾದಂಬರಿಯು ಮನದೊಳಗೆ ನನ್ನ ಹೃದಯವೇ ಇವನಿಗೀಗ ಮಂದಿರವಾಗಿರಲು, ಇನ್ನು ಬೇರೆ ಸ್ಥಳವೇಕೆ ? ಎಂದು ತುಸು ನಕ್ಕು,—"ಸಖೀ ಮಹಾಶ್ವೇತೆ, ನೀನು ಹೀಗೆ ಕೇಳುವ ಬಗೆಯೇನು? ಮನಸಿಗೆ ಬಂದಲ್ಲಿ ಇರಲಿ, ಇದ್ದಲ್ಲಿ ಸರ್ವಸಾಹಿತ್ಯದ ಸಿದ್ಧತೆಯುಂಟು" ಎಂದು ಹೇಳಿದಳು. ಕಾದಂಬರಿಯ ಈ ಮಾತು ಕೇಳಿ, ಮಹಾಶ್ವೇತೆಯು—"ನಿನ್ನ ಪ್ರಾಸಾದದ ಬಳಿಯ ಪ್ರಮದವನದೊಳಗಿನ ಕ್ರೀಡಾ

ಪರ್ವತದ ಮೇಲಿನ ಮಣಿಮಯ ಗೃಹದೊಳಗೆ ಚಂದ್ರಾಪೀಡನು [illegible] ಹೇಳಿ ಗಂಧರ್ವರಾಜನ ದರ್ಶನಕ್ಕೆ ಹೋದಳು. ಚಂದ್ರಾಪೀಡನು [illegible] ಹೊರಟಬಳಿಕ ಕೇಯೂರಕನು ತೋರಿಸಿದ ಮಾರ್ಗದಿಂದ ಆ [illegible] ಮೇಲಿನ ಮಣಿಮಯ ಮಂದಿರಕ್ಕೆ ಹೋದನು. ಇತ್ತ [illegible] ಯರಿಗೆ ಹೋಗಲಿಕ್ಕೆ ಕೊಟ್ಟು ಒಬ್ಬ ಗೆಳತಿಯನ್ನು ಕರೆದುಕೊಂಡು ತನ್ನ [illegible] ಪ್ಪರಿಗೆಯನ್ನೇರಿದಳು.

ಪ್ರಾಸಾದದ ಶಿಖರವನ್ನು ಹತ್ತಿ, ಕಾದಂಬರಿಯು ಆಗಾಗ್ಗೆ ಆ ಕ್ರೀಡಾ ಪರ್ವತದ ಕಡೆಗೆ ನೋಡಿ ನೋಡಿ, ಚಿಂತಿತಳಾಗಿ ಒಂದು, [illegible] ಒರಗುವಳು; ಹೊತ್ತು ಹೋಗುವದಕ್ಕಾಗಿ ಗೆಳತಿಯು [illegible] ಗೂಡದೆ ಮೆಲ್ಲನೆ ಕಣ್ಣು ಮುಚ್ಚುವಳು: ಒಮ್ಮೆ [illegible] "ಈತನನ್ನು ಸ್ವಪ್ನದಲ್ಲಿ ನಾನು ಎಂದೂ ನೋಡಿದ್ದಿಲ್ಲ [illegible] ಇಂಥ ಅಪರಿಚಿತನನ್ನು ಬಯಸುವದಕ್ಕೆ ನಾನು [illegible] ರಿರುವ ಗೆಳತಿಯರು ನನಗೆ [illegible] ಪುರುಷನ ಮನಸು ಹ್ಯಾಗಿರುವದೆಂಬುದನ್ನು [illegible] ಒಮ್ಮೆಯಾದರೂ ಅವನಿಗೆ ಮನಸ್ಸು [illegible] ಗುರುಹಿರಿಯರ ಅಂಜಿಕೆಯನ್ನೂ [illegible] ತೋರಿದೆನು; ಇಂದು ನನ್ನ ಮನಸಿನ [illegible] ಮೋಹದಿಂದ ಕಂಗೆಟ್ಟೆನು; ಮಹಾಶ್ವೇತೆಯು [illegible] ನಾನು ಎಂಥ ಮಂದಮತಿಯು! ಈ ನನ್ನ [illegible] ಈ ಚತುರ ಸಖಿಯರಿಗೂ ಮದನ ವ್ಯಥೆಯನ್ನು ಅನುಭವಿಸಿದ ಆ ಮಹಾಶ್ವೇತೆಗೂ ತಿಳಿಯವ್ರೋ? ಅಲ್ಪ ಪುಣ್ಯದ [illegible] ನಾನು ಎಲ್ಲ [illegible] ಗತಿಗೆಟ್ಟೆನು; ಸುದ್ದಿ ಹತ್ತಿದರೆ ನನಗೆ ನನ್ನ ತಾಯಿತಂದೆಗಳೇನೆಂದಾರು? [illegible]? ಇನ್ನೇನು ಮಾಡಲಿ? ಯಾರಿಗೆ ಹೇಳಲಿ? ಕಾಮನಂತೂ [illegible] ನನ್ನ ಎದೆ ಹೋಳು ಮಾಡಿದನು; ಮಹಾಶ್ವೇತೆಯು [illegible] ಮಾಡಿಕೊಂಡ ನೇಮವೇನಾಯಿತು! ಕೇಯೂರಕನ ಕೂಡ ಮಹಾಶ್ವೇತೆಗೆ [illegible] ಸ್ತನದ ಪ್ರತಿಸಂದೇಶ ಹೇಳಿ ಕಳಿಸಿದೆನೇನು! ಈಗ ಈ ಆತನಿಗೆ [illegible]! ನಾನು ಎಂಥ ಚಂಚಲ ಮನಸ್ಕಳು?"—ಎಂದು ಮನದೊಳಗೆ ಆಲೋಚಿಸುತ್ತ ನಾಚಿ ತನ್ನನ್ನು ತಾನೇ ಹಳಿದುಕೊಳ್ಳುವಳು. 'ಇನ್ನೊಮ್ಮೆ ಚಂದ್ರಾಪೀಡನು ನನ್ನ ಮಂದಿರಕ್ಕೆ ಬಂದಾನೇ? ನನ್ನ ಕಣ್ಣಿಗೆ ಬಿದ್ದಾನೇ?' ಎಂದು ಆಲೋಚಿಸುತ್ತ, ಚಟ್ಟನೇ ಎದ್ದು, ಕಿಡಿಕಿಯ ಜಾಳಿಗೆಯೊಳಗಿಂದ ಕ್ರೀಡಾಪರ್ವತದ ಕಡೆಗೆ ಮರಳಿ ಮರಳಿ ನೋಡುತ್ತ ನಿಲ್ಲುವಳು.

ಅತ್ತ ಆ ರಮಣೀಯ ಮಣಿಮಯ ಗೃಹದೊಳಗೆ ಮೃದುವಾದ ತಿವಾಸಿಗೆ

ಯನ್ನು ಹಾಸಿ, ಅದರ ಮೇಲೆ ರತ್ನಗಂಬಳಿ ಹಾಕಿ, ದಿಂಬುಗಳನ್ನು ಇಟ್ಟಿದ್ದರು. ಅದರ ಮೇಲೆ ಚೆಂಬ್ರಾಲೀಯನು ಸ್ವಾತಂತ್ರ್ಯದಿಂದ ಕಾಲು ಚಾಚಿಕೊಂಡು ಒರಗಿದ್ದನು ; [illegible] ಮಾಡುತ್ತಿದ್ದನು ; ಕುರಿಲ ಕನ್ನಿಕೆಯರು [illegible], [illegible] ವಾದ್ಯಗಳನ್ನು [illegible] ಮನೋಹರವಾದ ಹಾಡು ಹಾಡುತ್ತಿದ್ದರು ; ಆಗ ಚೆಂಬ್ರಾಲೀಯನು ಕಾಡುಬಡಿಯ ಎದುರಿಗೆ [illegible] ಅಪ್ಪನ ಹಾಗೆ [illegible] ಕಾಡುಬಡಿಯು [illegible] ಎಷ್ಟು ಬೇಗ ನನ್ನ ಅಂತಃಕರಣವನ್ನು ಎಳೆಕೊಂಡೆ ! [illegible] ನನ್ನನ್ನು [illegible], ನಾನು [illegible] ಮಾನವರೊಳಗೆ [illegible] ನನ್ನ ನಾನು [illegible] ನನ್ನ [illegible] ? ನಾನು ಸ್ವತಂತ್ರನಾಗಿರೆನು ? [illegible] ಎಂದು [illegible] — [illegible] ; [illegible] ; ಅವನ್ನು [illegible], ನನ್ನ [illegible], ಈಗ ಸ್ವತಂತ್ರನಾಗಿ [illegible] [illegible], ಎಷ್ಟು [illegible], ಆ ಕನ್ನಿಕೆಯರ [illegible] ಮುಂತಾದ [illegible] [illegible], ಅಕ್ಷಿಂದ ಎದ್ದು, ಉದ್ಯಾನದೊಳಗೆ [illegible], [illegible], ಕಾಡುಬಡಿಯನ್ನು ದಿಟ್ಟಿಸಿ ನೋಡುತ್ತ ನಿಂತುಕೊಂಡನು.

ಇತ್ತ ಕಾಡುಬಡಿಯೂ ಆ ಚೆಂಬ್ರಾಲೀಯನನ್ನು ನೋಡಿ ಮಹಾಪ್ರೀತಿ [illegible] [illegible] ಪ್ರತಿಧ್ವನಿ [illegible], [illegible] ಮೇಲೆ ಹತ್ತಿ [illegible] ಕಡೆಗೆ ನೋಡುತ್ತ [illegible] ನಿಂತುಕೊಂಡನು.

([illegible])

— ಗಂ. ಮ. ಕುರವಂಡಿ

೭. ಮಾನವಧರ್ಮ

ಮಾನವಪ್ರವೃತ್ತಿ ಮಾನವಮಾತ್ರರಿಗೆಲ್ಲ ಅನ್ವಯಿಸುವುದು. ಮಾನವ ಜನಾಂಗವು ಕಲಿಯುತ್ತ ಅವರಲ್ಲಿ ಬುದ್ಧಿಭಾವನೆಗಳು ಬೆಳೆಯುತ್ತ ಬಂದಂತೆ ಈ ಮಾನವಪ್ರವೃತ್ತಿ ವಿಕಾಸಹೊಂದುತ್ತ ಸಾಗಿರುವುದು. ಇದು ದೇಶ ಕಾಲ ಪರಿಸ್ಥಿತಿ

ಗಳಿಗಾಗಿ ಸಂಬಂಧಪಟ್ಟುದಲ್ಲ ; ಒಬ್ಬನಿಂದ ಪ್ರಕಟಿತ ಎಂಬುದೂ ಇಲ್ಲ. ಹಾಗಾದರೆ ಪ್ರಪಂಚದಲ್ಲಿ ಈಗಿದ್ದ ಧರ್ಮಗಳ ಗತಿಯೇನು ? ಅವು [illegible]ವಾಗಿ ನಿರ್ಮಿತವಾಗಿಲ್ಲವೇ ? ಅವು ಧರ್ಮಸಂಸ್ಥಾಪಕರ ವ್ಯಕ್ತಿ[illegible] ಬಂದವು ? — ಎಂಬಿವೇ ಮೊದಲಾದ ಪ್ರಶ್ನೆಗಳಿಗೆ ಸಮಾಧಾನ ಕೊಡಬೇಕು. ಪ್ರತಿಯೊಂದು ಧರ್ಮವು ದೇಶ ಕಾಲ ಪರಿಸ್ಥಿತಿಗನುಗುಣವಾಗಿ ಸಂಸ್ಥಾಪಕನ [illegible] ಕಲ್ಪಿಸಿ ಕೊಟ್ಟಿತೆಂಬುದೂ ಐತಿಹಾಸಿಕ ಸತ್ಯವು. ಆ ಸಂಸ್ಥಾಪಕನ ವ್ಯಕ್ತಿತ್ವ ಉದಾತ್ತವಾಗಿತ್ತು. ಜನಸಾಮಾನ್ಯರಿಗಾಗಿ ಕಳಕಳಿಯುಳ್ಳ [illegible] ಕಾಣುತ್ತಿತ್ತು. ಆದರೆ ಜನಕ್ಕಾಗಿ ಅವರು ಕಂಡುಹಿಡಿದ [illegible] ಕಲ್ಪನೆಯಿಂದ, ಕಾಲವು ಗತಿಸಿದಂತೆ ಆ ಸಂಸ್ಥಾಪಕರ [illegible]ಗಳ ಅರಿವಿಲ್ಲದೆ, ಪ್ರಸರಿಸಿದ ಜನಜಂಗುಳಿಯಲ್ಲಿ [illegible] ಅವರಿಮಿತವಾದ ಅನಾಹುತವು ತಲೆದೋರ[illegible]. [illegible] ಸಂಸ್ಥಾಪಕರು ಪ್ರಚಾರಗೊಳಿಸಿದ ದಾರ್ಶನಿಕ ಭಾವನೆಯನ್ನು [illegible] ಧರ್ಮದ ಕಲ್ಪನೆಯಲ್ಲಿ ಮೇಲುಕೀಳುಗಳ ದೃಷ್ಟಿಯು ಬೆಳೆದು, [illegible] ಜಾತೀಯತೆಗೆ ಕಾರಣವಾಗಿ, ಕಾಲಾಂತರದಲ್ಲಿ [illegible]ಯಿತು ; ಜಾತಿ-ಜಾತಿಗಳ ಜಗಳಗಳೂ ಅಸೂಯೆ[illegible]. ಸತ್ಯದಲ್ಲಿ ಉದಾತ್ತವೆನಿಸುವ ಯಾವ ಧರ್ಮವನ್ನು ತೆಗೆದುಕೊಂಡರೂ [illegible] ಮತ ಪಂಥ ಪಂಗಡಗಳ ಸಂಕುಚಿತ ದೃಷ್ಟಿಯು ಅಂಟಿಕೊ[illegible] [illegible]ಯನ್ನು ಪಡೆದಿರುವುದಿಲ್ಲ. ಈ ಮತದೃಷ್ಟಿಯಿಂದ ದೂರವಿರುವುದಕ್ಕಾಗಿ [illegible]ಸಿದ ಮಾನವಬುದ್ಧಿಯು ತಿಳಿಯಿಂದ [illegible], [illegible]ರಿಂದ ಹೊರಹೊಮ್ಮಿದ ಮಾನವ ಸಂಸ್ಕೃತಿಯು [illegible] ಧರ್ಮದ ಸತ್ಯಸ್ವರೂಪವು ವ್ಯಕ್ತವಾಗುವುದು. ಇಂತಹ ಧರ್ಮವು [illegible] ಸಂಬಂಧಪಡುವುದರಿಂದ ಇದು ಮಾನವಧರ್ಮವೆನಿಸಿಕೊಳ್ಳುವುದು.

ಧರ್ಮದ ವಿವೇಚನೆಯನ್ನು ಮಾಡುವಾಗ ಅದರಲ್ಲಿಯ [illegible] ಮತಿದೃಷ್ಟಿ ಇವುಗಳಿಂದ ಅದರ ಪರಿಶೀಲನೆ ಮಾಡಬಹುದು. [illegible] ಬೆಳೆತು ರೂಢವಾಗಿರುವ ಧರ್ಮಗಳೆಲ್ಲ ಸಾಮಾನ್ಯವಾಗಿ ಪೌರಾಣಿಕ ಧರ್ಮಗಳೆನಿಸಿಯೂ, ನಿರ್ಮಲವಾದ ಮತಿದೃಷ್ಟಿಯಿಂದ ಬೆಳೆತು ರೂಪುಗೊಳ್ಳುವ ಧರ್ಮವು ಪ್ರಾಗತಿಕ ಧರ್ಮವಾಗಿಯೂ ಪರಿಣಮಿಸುವವು. ಮತದೃಷ್ಟಿಗಾಗಿ ಪೌರಾಣಿಕ ಧರ್ಮದಲ್ಲಿ [illegible]ಯುಂಟು. ಮತಿದೃಷ್ಟಿಗಾಗಿ ಪ್ರಾಗತಿಕ ಧರ್ಮದಲ್ಲಿ ವೈವಿಧ್ಯವಿಲ್ಲ. ಮಾನವ ಜನಾಂಗವೆಂಬುದು ಅಖಂಡವಾಗಿರುವುದೆಂಬ ಭಾವನೆಯಿರುವುದರಿಂದ ಅದು [illegible] ಬೇಕಾದ ಧರ್ಮದಲ್ಲಿ ಕೂಡ ವಿವಿಧತೆಗೆ ಅವಕಾಶವುಂಟಾಗದು. ಪೌರಾಣಿಕ ಧರ್ಮದಲ್ಲಿ ಜಾತೀಯತೆಯು ಕುರುಡು ನಂಬುಗೆ, ಅರ್ಥವಾಗದ ಅದ್ಭುತ[illegible], ಶುಷ್ಕವಾದ ಆಚಾರ ಪದ್ಧತಿಗಳ ಪರಂಪರೆ, ಇದ್ದುದೆಲ್ಲಿ ಸರಿಯಾಗಿದೆ [illegible]ವಾಗಿದೆ

ಎಂಬ ಮೂಢ ವಿಚಾರ, ಧರ್ಮಬಂಧುಗಳಲ್ಲದವರಿಗೆ ತನ್ನಲ್ಲಿ ಇಂಬೀಯಲರಿಯದ ಅಂಧತೆ, ಇಂದಿತ್ತರೂ ಹುಟ್ಟಿನಿಂದ ಬಂದವರಲ್ಲವೆಂಬ ಅಸ್ಪೃತೆ, ಹೊಂದುಗೆಯಿಂದ ಬಂದಾದವರಲ್ಲಿ ಮೇಲುಕೀಳುಗಳನ್ನು ಕಾಣುವ ಸಂಕುಚಿತ ವೃತ್ತಿ ಇವೆಲ್ಲ ಮನೆಮಾಡಿಕೊಂಡಿರುವವು. ಇದರಿಂದಾಗಿ ಇಂಥ ಧರ್ಮಾನುಯಾಯಿಗಳಿಗೆ ಪ್ರಗತಿಪರ ವಿಚಾರಗಳೇ ನಿಲುಕವು. ಪ್ರಾಗತಿಕ ಧರ್ಮದ ಕಾರ್ಯವು ಮಾತ್ರ ಇದರಿಂದ ಭಿನ್ನವಾಗಿರುವದು. ಅಲ್ಲಿ ಇದ್ದ ಸಂಗತಿಗಳ ಯಥಾರ್ಥಜ್ಞಾನವೇ ಮತಿದೃಷ್ಟಿಗೆ ಲಕ್ಷ್ಯವಾಗಿರುವದರಿಂದ, ಇದ್ದುದನ್ನು ಇಲ್ಲವೆಂದು ಹೇಳುವ ಇಲ್ಲದೆ ಇಲ್ಲದುದನ್ನು ಇದೆ ಎಂದು ತಿಳಿಸುವ ಮಾತಿಲ್ಲ. ಅನಪೇಕ್ಷಣ ಅತ್ಯಪೇಕ್ಷಣಗಳಿಗೆ ಪ್ರಾಗತಿಕ ಧರ್ಮದಲ್ಲಿ ಎಳ್ಳಿನಿತು ಇಂಬಿಲ್ಲ. ಸತ್ಯಾನ್ವೇಷಣವೂ ಸಮ್ಯಕ್‌ಜ್ಞಾನವೂ ಪ್ರಾಗತಿಕ ಧರ್ಮದೃಷ್ಟಿಯಲ್ಲಿ ಪ್ರಾಮುಖ್ಯವಾದ ವಿಷಯಗಳಾಗಿರುವದರಿಂದ ಅಲ್ಲಿ ಭಿನ್ನ ದೃಷ್ಟಿಯು ಇಲ್ಲ; ಮೇಲು ಕೀಳಿನ ಮಾತಿಲ್ಲ; ದ್ವೇಷಾಸೂಯೆಗಳಿಗೆ ಅವಕಾಶವಿಲ್ಲ. ಸತ್ಯ, ಪ್ರೇಮ, ದಯೆ, ಸಮತೆ ಮೊದಲಾದ ಕಲ್ಯಾಣ ಗುಣಗಳ ಆಗರವಾಗಿ ಪ್ರಾಗತಿಕ ಧರ್ಮವು ಕಂಗೊಳಿಸುವದು. ಇಂಥ ಪ್ರಾಗತಿಕ ಧರ್ಮವೇ ಮಾನವ ಧರ್ಮವು.

ಈ ಮಾನವಧರ್ಮದ ತತ್ವಗಳನ್ನು ಅರಿತುಕೊಳ್ಳಲು ಕಷ್ಟಪಡಬೇಕಾದುದಿಲ್ಲ. ಸುತ್ತುಮುತ್ತಿನ ಸಮೀಪದ ವಸ್ತು-ವಿಷಯಗಳಲ್ಲಿ ಕೇವಲ ತಮ್ಮ ತಮ್ಮ ಭೂಮಿ-ಸೀಮೆ, ಬಂಧು-ಬಳಗ ಮಡದಿ-ಮಕ್ಕಳು ಮಾತ್ರವೇ ಸಮಾವೇಶವಾಗುವುದಿಲ್ಲ. ಇದಕ್ಕಿಂತ ಸಮೀಪದ ಕೆಲವು ವಸ್ತುಗಳೂ ಉಂಟು. ತನಗೆ ತನ್ನ ದೇಹವೇ ಪ್ರಿಯವಾದುದು. 'ತನ್ನಂಗಕ್ಕಿಂತ ಹಿತವಾದುದೇ ಜಗದಿ?' ಈ ದೇಹಕ್ಕೆ ಸಂಬಂಧಪಟ್ಟ ಧರ್ಮವಿಚಾರವೂ ಉಂಟು. ಅದುವೇ ದೇಹಧರ್ಮ. ಅದನ್ನರಿತುಕೊಂಡು ಅಂತೆ ಆಚರಣೆಯನ್ನಿಟ್ಟುಕೊಳ್ಳುವದು ಮಾನವನ ಆದ್ಯ ಕರ್ತವ್ಯವಾಗಿರುವದು. ಆದರೆ ಪೌರಾಣಿಕ ಧರ್ಮವು, ವಿಶೇಷವಾಗಿ ಭಾರತದಲ್ಲಿಯ ಪೌರಾಣಿಕ ಧರ್ಮವು ಹೇಳುತ್ತಿರುವುದೇನನ್ನು? 'ದೇಹ ಬಿಡೆಯಾಕೋ? ಈ ದೇಹಕ್ಕೆ' ಎಂದು!

[illegible] ; [illegible] ಎಂದು [illegible]. [illegible] ! [illegible] ' [illegible] ' ಎಂದು [illegible] ! ' [illegible] ' ಎಂದು [illegible]. [illegible] ? [illegible] ಧರ್ಮವನ್ನು [illegible] ? ಅದಕ್ಕಾಗಿ ದೇಹದ [illegible] ಅವಶ್ಯವಾಗಿ ಬೇಕು. ಅನ್ನವನ್ನು ಅರೆದು [illegible] ತಿಂದು ತೇಗಿದವರು

ಅಷ್ಟೇ; ಅನ್ನವಿಲ್ಲದೆ ಬಳಲಿ ಬೆಂದು ಬೇಗುದಿಗೊಂಡರೂ ಅಷ್ಟೇ—ಎಂದು ಹೇಳುವದು ಶರೀರಧರ್ಮವನ್ನರಿತು ಹೇಳುವ ಮಾತಲ್ಲ. ಸಾವಿರಾರು ವರ್ಷಗಳಿಂದ ಹಿಂದೂ ಧರ್ಮವು ಹೇಳುತ್ತ ಬಂದ ವಿರತಿಭಾವದಿಂದ ಆದಾವ ಗೌರವದ ಕಾರ್ಯವಾಗಿದೆ? ತ್ಯಾಗದ ಅತಿರೇಕವು ರಾಷ್ಟ್ರವನ್ನು ಯಾವ ಮಟ್ಟಕ್ಕೆ ನಿಲುಕಿಸಿದೆ? ಅಲ್ಪಸಂತೋಷದಿಂದ ಅಳವಟ್ಟುದು ತಿರುಪೆಯ ವೃತ್ತಿ, ಬಡತನ, ದುಃಖ, ದಾರಿದ್ರ್ಯ! ಉದಾತ್ತ ದೈವಭಾವನೆಯೂ ಅಂಗವಿಸಲಿಲ್ಲ; ಸತ್ತು ಸ್ವರ್ಗವನ್ನು ಕಾಣಲಿಲ್ಲ, ಇದ್ದು ಸುಖವನ್ನೂ ಉಣಲಿಲ್ಲ ಎಂಬಂತಾಗಿದೆ.

ಅನ್ನದೇವರ ಮುಂದೆ ಇನ್ನು ದೇವರು ಉಂಟೆ? ಅನ್ನಕ್ಕಾಗಿ ಕಳವಳ ಕೋಲಾಹಲ! ಜಗತ್ತಿನಲ್ಲಿ ಕಾಲಕಾಲಕ್ಕೆ ಉಂಟಾದ ಕ್ರಾಂತಿಗಳ ಬುಡದಲ್ಲಿ—ಅದು ಅಮೇರಿಕೆಯ ಸ್ವಾತಂತ್ರ್ಯದ ಕ್ರಾಂತಿಯೇ ಇರಲಿ, ಫ್ರಾನ್ಸದ ಪ್ರಜಾಪ್ರಭುತ್ವದ ಕ್ರಾಂತಿಯೇ ಇರಲಿ, ಇಲ್ಲವೆ ರಶಿಯದ ಕೂಲಿಕಾರರ ಕ್ರಾಂತಿಯೇ ಇರಲಿ ಅದರ ಬುಡದಲ್ಲಿ—ಅಡಗಿದ ಗೂಢವನ್ನು ಹುಡುಕಬೇಕು. ಅದೆಲ್ಲ ಅನ್ನಕ್ಕಾಗಿ, ಅರಿವೆಗಾಗಿ! ರಾಷ್ಟ್ರದ ಆರ್ಥಿಕ ಸ್ಥಿತಿಯು ಕೆಟ್ಟು, ಹೊಟ್ಟೆಗೆ ಹಿಟ್ಟು ಮೈಗೆ ಬಟ್ಟೆ ದೊರೆಯದಂಥ ಪರಿಸ್ಥಿತಿಯೊದಗಲು ಕ್ರಾಂತಿಯ ಕಹಳೆಯೂದಲೂ ಬೇಕು. ಎಲ್ಲರೂ ಮಾಡುವದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ. ಅನ್ನ-ಅರಿವೆಗಳಿಗೆ ಬಡಿದಾಟವೇಳುವುದು ಸ್ವಾಭಾವಿಕವಾದುದು. ಹಸಿದ ಹೊಟ್ಟೆಗೆ ಬೇಕಾದುದು ಹಿಟ್ಟು; ಧರ್ಮವಲ್ಲ. ಅದಕ್ಕಾಗಿ ಧರ್ಮ ಮಾಡೆಂದರೆ ತಲೆ ಸಿಡಿತವೇಳುವುದನ್ನಾದರೂ ನೆನೆಸಿಕೊಳ್ಳಬೇಕು. ತಿಂದುಂಡು ತೇಗುವ ಅಧಿಕಾರ ನಮಗೆ; ತಿರಿದು ಎಂಜಲು ಉಣ್ಣುವ ಅಧಿಕಾರ ನಿಮಗೆ—ಎಂಬುದು ಗಂಡಸಿನ ಮಾತಲ್ಲ. ಅದನ್ನು ಕೇಳುವದು ಗಂಡುಗಲಿಯ ಮಾತಂತೂ ಮೊದಲೇ ಅಲ್ಲ.

೬೪ ಲೀಲೆಗಳನ್ನಾಡಿದ ಶಿವನು ಭಿಕ್ಷಾಟನ ಲೀಲೆಯನ್ನು ಆಡಿದನೆಂದು ಪೌರಾಣಿಕ ಧರ್ಮದ ಹೇಳಿಕೆ. ದೇವನೇ ಬಿಕ್ಕೆಬೇಡಿದ ಮೇಲೆ ದೇವಭಕ್ತರಾದ ನಾವು ಏಕೆ ಬೇಡಬಾರದು-ಎಂಬ ಭಾವವು ಜನಾಂಗಕ್ಕೆ ಅಂಟಿಕೊಳ್ಳುವದೂ ಸಹಜವಾಯಿತು. ತಿರಿಯುವ ವೃತ್ತಿಯುಳ್ಳವನು ದೇವನೇ ಅಲ್ಲ. ತಿರುಕನೆಂತು ದೇವನಾಗಬಲ್ಲನು? ದೇವನೂ ಸಹ ತಿರುಕನೆಂಬುದು ತಿರುಪೆಯ ಕೆಲಸಕ್ಕೆ ಅನುಕೂಲಿಸುವಂತೆ ಮಾಡಿದ ಒಂದು ಕಲ್ಪನೆ. ಇಂಥ ಕಲ್ಪನೆಯ ಕನಸಿನಿಂದ ಕಾರ್ಯದ ನೆನವಾಗಿ ತಿರುಕರ ಪಿಡುಗು ಇನ್ನೂ ಹೆಚ್ಚಾಯಿತು. ಅದರಂತೆ ದೇವನು ಅಲ್ಲಿಹನು, ಇಲ್ಲಿಹನು; ಅದರಲ್ಲಿ ಉಂಟು, ಇದರಲ್ಲಿ ಉಂಟು—ಎಂಬುದು ಬರಿಯ ಕಲ್ಪನೆಯು. ಅದು ಬರಿಯ ಭ್ರಾಂತಿಯೇ! ಅವನು ಗುಡ್ಡದಲ್ಲಿಲ್ಲ, ಗವಿಯಲ್ಲಿಲ್ಲ, ಗದ್ದೆಯಲ್ಲಿಲ್ಲ, ದೇವಿಕೆಯಲ್ಲಿಲ್ಲ, ದಾರದಲ್ಲಿಲ್ಲ, ಕಲ್ಲಿನಲ್ಲಿಲ್ಲ, ಕಟ್ಟೆಗೆಯಲ್ಲಿಲ್ಲ, ಬೆಂಕಿಯಲ್ಲಿಲ್ಲ, ಮಣ್ಣಿನಲ್ಲಿಲ್ಲ, ಮರದಲ್ಲಿಲ್ಲ, ಸಗಣಿಯಲ್ಲಿಲ್ಲ, ಬುಟ್ಟಿಯಲ್ಲಿಲ್ಲ, ಕ್ರಾಸಿನಲ್ಲಿಲ್ಲ, ಕ್ರಿಸೆಂಟಿನಲ್ಲಿಲ್ಲ. ಇವಾವುದರಲ್ಲಿಯೂ ದೇವನಿಲ್ಲ! ಧರ್ಮವೂ ಇಲ್ಲ! ಕಲ್ಪನೆಯ ಕನಸಿನಲ್ಲಿ ಆ ದೇವನಿಲ್ಲ.

ಕಾರ್‍ಯದ ನೆನಸಿನಲ್ಲಿ ಅವನನ್ನು ಕಾಣಬೇಕು.

ಮನುಷ್ಯನಾದವನಿಗೆ ಅವಶ್ಯವಾದ ಅನ್ನ ಅರಿವೆಗಳು ದೊರೆತ ಹೊರತು ಇನ್ನೇನೂ ಬೇಕೆನಿಸುವುದಿಲ್ಲ. ಇವು ಸಾಕಷ್ಟು ಸಿಕ್ಕಬಳಿಕ ಅವನಲ್ಲಿ ಉಚ್ಚ ವಿಚಾರಗಳ ಅಂಕುರವು ಮೂಡುವುದಿಲ್ಲವೆಂಬುದಿಲ್ಲ. ಅನ್ನ ಅರಿವೆಗಳ ಹೊರತು ಅವನಿಗೆ ಆಶ್ರಯ ಔಷಧಗಳ ಸೌಕರ್ಯವು ಬೇಕು. ಜೀವನಕ್ಕೆ ಅವಶ್ಯವಾಗಿ ಬೇಕಾಗುವ ಈ ಒಡವೆಗಳ ಅನುಕೂಲತೆಯು ಉಂಟಾದ ಬಳಿಕ ಅರಿವಿನ ಕಡೆಗೆ ಅವನ ದೃಷ್ಟಿಯು ಏಕೆ ಹೊರಳಲಿಕ್ಕಿಲ್ಲ? ಹೊರಳುವದು! ಆಗ ಅನ್ನ ಅರಿವೆ ಆಶ್ರಯ 'ಅವುಷದ' ಅರಿವು ಇವೇ ಶಿವಪಂಚಾಯತನವಾಗುವವು ಅವನಿಗೆ. ಕಲ್ಯಾಣಬುದ್ಧಿಯಿಲ್ಲದೆ ಶಿವಪಂಚಾಯತನವಲ್ಲಿರಿಸಿದ ಪೂಜ್ಯಭಾವವು ಪೂಜೆಯಲ್ಲಿ ಪರಿಣಮಿಸದೆ ಅದು ಬರಿಯ ಪೂಜೆಯಾಗುವದು. ಕಳ್ಳಪೇಟೆಯಲ್ಲಿ ಲಕ್ಷ ಧನವ ಗಳಿಸಿ ನೂರು ಕೊಡುವುದು ದಾನವಲ್ಲ, ಧರ್ಮವಲ್ಲ. ಜನತೆಯೇ ದೈವವು. ಜನತೆಯ ಸೇವೆಯೇ—ದೇವಪೂಜೆಯೇ ಅವಶ್ಯವಾಗಿ ಇಂದು ಬೇಕಾಗಿರುವವು. ಐದು ವಸ್ತುಗಳನ್ನು ಒದಗಿಸಿಕೊಡುವುದೇ ಶಿವಪಂಚಾಯತನ ಪೂಜೆಯು. ಆದುದರಿಂದ ದೇಹಧರ್ಮವನ್ನು ಪಾಲಿಸುವುದೂ ಅದನ್ನು ಪರಿಪಾಲಿಸಲಿಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುವುದೂ ಮಾನವಧರ್ಮದ ಮುಖ್ಯ ಲಕ್ಷಣವಾಗಿದೆ.

ಮಾನವದೇಹದ ಮಹತಿಯನ್ನರಿತ ಬಳಿಕ ಅದನ್ನು ವ್ಯರ್ಥವಾಗಿ ಕಂಪಿಸಿ ಕುಂದಿಸಿ ಬಂಧನಕ್ಕೆ ಒಳಗಾಗಿರಿಸಬಾರದು. ಸ್ಥೂಲದೇಹವಿರುವ ವರೆಗೆ ಈ ಬಾಹ್ಯ ಸೃಷ್ಟಿಯೂ ಅವಶ್ಯವೆನಿಸುವುದರಿಂದ ಕರ್ತಾರನ ಕಮ್ಮಟವೆನಿಸುವ ಈ ಕರ್ಮಭೂಮಿಯನ್ನು ಕಡೆಗಣಿಸಿ ನೋಡಬೇಕಾಗಿಲ್ಲ. 'ಇಹಲೋಕಕ್ಕಿಂತ ಮಿಗಿಲಾದ ಸ್ವರ್ಗ ಕೈಲಾಸಲೋಕಗಳೆಂಬವುಂಟು ; ಅವುಗಳಲ್ಲಿಯ ಜೀವನವು ಶ್ರೇಷ್ಠವಾದುದು, ಸುಖಮಯವಾದುದು, ಈ ಭೂಲೋಕದಲ್ಲಿಯ ಬಾಳುವೆಯು ದುಃಖಮಯವಾದುದು'—ಎಂದು ಈ ಕಣ್ಣಿಗೆ ಕಾಣದ ಲೋಕಗಳ ಅನುಭವಕ್ಕೆ ನಿಲ್ಲುತ್ತದೆ ಅಲಸವೃತ್ತಿಯ ಮನವು. ಕಲ್ಪನೆಯ ಸಸಿಯಾದ ರಾಜ್ಯವೊಂದನ್ನು ಹೊಗಳಿ ಮಾನವ ಜೀವನಕ್ಕೆ ಎಲ್ಲ ರೀತಿಯಿಂದಲೂ ಅನುಕೂಲಿಸುವ ದಿಟವಾದ ಈ ಲೋಕವನ್ನು ತೆಗಳಿ ನುಡಿಯುವುದು ನಮ್ಮ ಮೇಲಾದ ಪೌರಾಣಿಕ ಧರ್ಮದ ಪರಿಣಾಮದಿಂದ. ಶಾಸ್ತ್ರದೃಷ್ಟಿಯಿಂದ ಅನುಭಾವದೃಷ್ಟಿಯಿಂದ ಅರೆದು ಒರೆದು ನೋಡಿದರೆ, ಈ ನಿಸರ್ಗವು ಈ ಪ್ರಕೃತಿಯು ಅತಿ ನಿಯಮಬದ್ಧವಾಗಿ ಸಾಗಿದುದೆಂಬುದು ವ್ಯಕ್ತವಾಗುವುದು. ಸ್ಥೂಲ ತನುವಿನಿಂದಿರಲು ಈ ಪೃಥ್ವಿಯೇ ಯೋಗ್ಯವಾದ ಸ್ಥಾನವೆನಿಸಿಹುದು. ಚಂದ್ರ ಮಂಗಳ ಲೋಕಗಳಿಗೆ ವಂಡಯಾತ್ರೆಗೈಯ್ದು ಅಲ್ಲಿಯ ಆವಾಸದ ಸವಿಸುಖವನ್ನು ಬಯಸುವ, ಬಯಸಿ ಹೋದಬೇಕೆನ್ನುವ ಸಾಹಸದ ಕಾರ್‍ಯಗಳಿಗೂ ಅಣಿಯಾಗಿದೆಯೆನ್ನೋಣ. ಆದರೆ ಅಲ್ಲಿಗೆ ಮುಟ್ಟುವ ಪೂರ್ವದಲ್ಲಿಯೇ ಯಾವ ಸ್ಥಿತಿಯೊದಗುವುದು ಹೇಳುವರಾರು ? ಒಂದು ದಿವಸದ

ಅಷ್ಟು ಅವಧಿಯಲ್ಲಿ ಆರು ತಾಸಿನ ಉಗ್ರ ಶಕೆಯೂ ಆರು ತಾಸಿನ ತೀವ್ರ ಚಳಿಯೂ ಇರುವುದೆಂದು ಊಹಿಸಲಾದ ಚಂದ್ರಲೋಕದಲ್ಲಿ ಸೇರಿ ನೆಲಸುವ ಸುಖವಾದರೂ ಎಂಥದು ? ಸೃಷ್ಟಿಯಲ್ಲಿ ತೋರುವ ಭಯಪ್ರದವಾದ ವ್ಯತ್ಯಾಸಗಳಿಂದ ಅಂಜಿ ಕೊಂಡು ಕೊರಗುವದು ಭಾರತೀಯರಿಗೆ ಸಹಜವಾಗಿದೆ. ಪ್ರಕೃತಿಯೊಡನೆ ಹೋರಾಟವೆಂದರೆ ಅವರಿಗೆ ಅರಿಯದ ವಿಷಯ. ಅವರಷ್ಟು [illegible] ವ್ಯತ್ಯಾಸಗಳಿಗೆ ಭಯಪಟ್ಟು ಅದರ ಶಾಂತತೆಗಾಗಿ ಈ ದೇವರ [illegible] ಪ್ರಾರ್ಥಿಸಿಕೊಂಡುದೂ ಅಷ್ಟಿಷ್ಟಲ್ಲ. ಪ್ರಾರ್ಥನೆಗಳ ಫಲವಾದರೂ ಏನಾಯಿತು ? ಪಾಶ್ಚಿಮಾತ್ಯರು ಪ್ರಕೃತಿಯೊಡನೆ ಹೋರಾಡಿ ಅದರಲ್ಲಿಯ ಅಮೂಲ್ಯವಾದ ಅದೃಶ್ಯವಾದ ತತ್ವಗಳನ್ನು ಕಂಡುಹಿಡಿದು ಆನಂದಗೊಳ್ಳುತ್ತಿರುವಾಗ ನಾವು ದೇವರಿಂದ ಆನಂದವನ್ನಾದರೂ ಅಳವಟ್ಟಿದೆಯೇ ? ಇಲ್ಲ, ಹೋರಾಟದ ರಹಸ್ಯವೂ ತತ್ವವೂ ತಿಳಿದಿಲ್ಲ. ಕಾಲ್ಪನಿಕ ರಾಜ್ಯಸುಖಭೋಗವೇ ಲಕ್ಷ್ಯವಾಗಿರುವ [illegible]ರಿಗೆ ಹೋರಾಟದ ಹರುಷಸುಖವು ಸಿಗುವದೆಂತು ? ಸ್ವರ್ಗದ ಕಾಲ್ಪನಿಕ [illegible] ಸುಖಸ್ವಪ್ನಗಿಂತ ನಿಸರ್ಗದಲ್ಲಡಗಿದ ಅಮೂಲ್ಯ ರತ್ನಗಳ ಶೋಧನೆಯ ಸುಖದ [illegible] ವವೂ ಅದು ನಮಗೆ ಬೇಕು. ಇದರಿಂದ ಮಾನವ ಲೋಕದ [illegible] ವಾಗಬೇಕು. ಅವರ ಅಮಿತವಾದ ಪ್ರತ್ಯಕ್ಷಾನುಭವದ ಆನಂದ[illegible] ಇಂಥ ಮರ್ತ್ಯಲೋಕದ ಮಹಿಮೆಯನ್ನರಿತುಕೊಳ್ಳುವುದೂ [illegible] ಲಕ್ಷಣವಾಗಿರುವದು.

ಪ್ರಪಂಚದಲ್ಲಿ ಎದುರುಗೊಳ್ಳುವ ಸುಖ—ದುಃಖ, ಇಷ್ಟ-ಅನಿಷ್ಟ, ನ್ಯಾಯ-ಅನ್ಯಾಯಗಳ ದ್ವಂದ್ವದಲ್ಲಿ ಒಂದು ಇನ್ನೊಂದರ ಅಭಾವವೆಂದು ದೇವರ ದ್ವಂದ್ವದ ದಂದುಗವನ್ನು ಪರಿಹರಿಸುವ ಪುರುಷಪ್ರಯತ್ನವನ್ನು ಪೌರಾಣಿಕ ಭಕ್ತರು ಒಪ್ಪಿಕೊಳ್ಳುವದೇ ಇಲ್ಲ. 'ಎಲ್ಲವೂ ದೈವಾಧೀನ, ಬಂದ ಬರಲಿ [illegible]' ಎಂದು ಅನ್ನುವ ಭಕ್ತರ ನುಡಿಯೂ ಈ ಪುರುಷ ಪ್ರಯತ್ನದ ಅಭಾವವನ್ನು [illegible] ಪಡಿಸುವುದು. 'ಬುದ್ಧಿಃ ಕರ್ಮಾನುಸಾರಿಣೀ' ಎಂದು ಹೇಳುವ ಪೌರಾಣಿಕ [illegible] ಮಾತು ಸಾಕು. 'ಕರ್ಮವು ಬುದ್ಧಿಯನ್ನು ಅನುಸರಿಸುತ್ತದೆ' ಎಂಬ [illegible] ತಿಳಿವು ನಮಗೆ ಬೇಕು. ಅಲ್ಲದ ಕಾರ್ಯಗಳು ಮನುಷ್ಯನಿಗೆ [illegible] ಪ್ರೇರಿಸುವಂತೆ, ಸಲ್ಲುವ ಕಾರ್ಯ ಮಾಡುವುದು ನಮಗೆ ಒಳ್ಳೆ ಬುದ್ಧಿ [illegible] ಗುವ ಕರ್ತೃತನ ಬುದ್ಧಿಗೆ ಬಿಟ್ಟದ್ದುಂಟು. ಸ್ವ[illegible] ([illegible] ಮಹಾತ್ಮನೆನಿಸಿದ ಮಾನವನ ಬಗೆಗೆ ದೇವರನ್ನು [illegible] ಹೋರಾಡಲು, ಹೋರಾಡಿ ಹರುಷಗೊಳ್ಳ ಹಚ್ಚಲು ಮಾನವನ ಬುದ್ಧಿ [illegible] ಉತ್ಕಟವಾದ ಇಚ್ಛೆ ಅವನ ಸಂಕಲ್ಪಶಕ್ತಿಗಳೇ ಕಾರಣವಾಗಿವೆ. [illegible] ಬುದ್ಧಿಯ ಬಲವುಳ್ಳವನು ದ್ವಂದ್ವದ ದಂದುಗವನ್ನು ನಿವಾರಿಸಿಕೊಳ್ಳಲು [illegible] ದಿರನು. ಭೌತಿಕ ಸೃಷ್ಟಿಯಲ್ಲಿ ಕ್ರಿಯೆ-ಪ್ರತಿಕ್ರಿಯೆಗಳಂತೆ, [illegible]

ನ್ಯಾಯ–ಅನ್ಯಾಯ, ಸತ್ಯ–ಅಸತ್ಯ, ಸುಖ–ದುಃಖಾದಿಗಳೂ ಸಮತೂಕದ ಪ್ರತಿಯೋಗಿಗಳಾಗಿರುವವು. ಆದುದರಿಂದ ಅನ್ಯಾಯ ಅಸತ್ಯ ದುಃಖಾದಿಗಳ ಬಲವನ್ನು ಕುಗ್ಗಿಸಿ, ನ್ಯಾಯ ಸತ್ಯ ಸುಖಾದಿಗಳ ಬಲವನ್ನು ಹಿಗ್ಗಿಸಬೇಕು. ಬುದ್ಧಿವಂತನಾದವನು ತನ್ನ ಬುದ್ಧಿಯ ಸಾಮರ್ಥ್ಯವನ್ನು ಕಾಣಬೇಕು. 'ಕರಿ ಘನ ಅಂಕುಶ ಕಿರಿದೆನ್ನಬಹುದೇ! ತಮ್ಮಂಥ ಘನ ಜ್ಯೋತಿ ಕಿರಿದೆನ್ನಬಹುದೇ? ಮರಹು ಘನ ನೆನವ ಮನ ಕಿರಿದೆನ್ನಬಹುದೇ ? ಬಾರದು !' ಎಂಬಂತೆ ಅನ್ಯಾಯಾದಿಗಳು ಎಷ್ಟು ಘನವಾಗಿ ಕಂಡರೂ ನ್ಯಾಯಾದಿಗಳೆದುರು ಕಿರಿದಾಗಿಯೇ ಕಾಂಬುವು. ಹಿರಿದೆನಿಪ್ಪ ಅನ್ಯಾಯಾದಿಗಳನ್ನು ಕಿರಿದೆನಿಪ್ಪ ನ್ಯಾಯಾದಿಗಳ ಅಂಕಿತಕ್ಕೆ ಒಳಗು ಮಾಡಬೇಕು. ಇದುವೇ ವ್ಯಕ್ತಿಧರ್ಮ, ಇದುವೇ ಮಾನವನ ಧರ್ಮ, ಪಶುಪತಿ ಧರ್ಮವೆಂದರೂ ಇದೇ. ಅನ್ಯಾಯ ಮೊದಲಾದವು ಪಶುವೃತ್ತಿಯ ಲಕ್ಷಣವಾಗಿಹವು. ಅವು ಅಳಿಯುವದಿಲ್ಲ; ಆದರೆ ಬುದ್ಧಿಬಲದಿಂದ ಪತಿಯ ಲಕ್ಷಣವಾದ ನ್ಯಾಯ ಮೊದಲಾದವುಗಳ ಅಂಕಿತದಲ್ಲುಳಿಯುವವು. ಹೀಗೆ ಅವು ಅಂಕಿತದಲ್ಲುಳಿಯಲು ಹೋರಾಡಬೇಕು. ಅದುವೆ ಹರುಷದಾಗರವಾಗಿಹುದು. ದೈವ-ವಾದದ ಅದೃಷ್ಟದ ಮಾತು-ನಂಬುಗೆಗಳು ಭಾರತದೇಶದಲ್ಲಿ ಹೇಡಿಗಳ ಬಲಹೀನರ ತಂಡವನ್ನೇ ನಿರ್ಮಿಸಿದವು ; ಆತ್ಮವಿಶ್ವಾಸದ ಸ್ವಾಭಿಮಾನವನ್ನೇ ಕಳೆದುಬಿಟ್ಟವು ; ನಿಶ್ಚಯ ಧೋರಣೆ, ನಿರ್ಣಯಾತ್ಮಕ ಬುದ್ಧಿಗಳನ್ನೇ ಹಾಳುಮಾಡಿದವು ; ಮಾನವ ಧರ್ಮವಾವುದು ಎಂಬ ವಿಚಾರಶಕ್ತಿಯನ್ನೇ ಕುಗ್ಗಿಸಿದುವು. ಆದುದರಿಂದ ಕಲ್ಪನೆಯಲ್ಲಿ ಮೂಡಿ ಮರವಾಗಿ ಬೆಳೆದ ಈ ದೈವವಾದ ಅದೃಷ್ಟಗಳ ನಂಬುಗೆ ಸಾಕು ; ಮನುಷ್ಯ ಪ್ರಯತ್ನದ ಹಂಬಲು ಬೇಕು ; ಅರ್ಥಾತ್ ಮಾನವಧರ್ಮ ಪರಿಪಾಲನೆಗೆ ಸಿದ್ಧರಾಗಬೇಕು. ಈ ಅದೃಷ್ಟವಾದದ ಆಶ್ರಯದಲ್ಲಿ ಬೆಳೆದ ನಮ್ಮ ಜನರಿಗೆ ಪ್ರಪಂಚದಲ್ಲಿ ಜರುಗುವ ಘಟನೆಗಳ ಕಾರ್ಯ-ಕಾರಣಗಳ ಸಂಬಂಧದ ಅರಿವು ಇಲ್ಲದಾಗಿದೆ. ಯಾವ ಘಟನೆಯೇ ಇರಲಿ — ಚಿಕ್ಕದಿರಲಿ ದೊಡ್ಡದಿರಲಿ—ಅದಕ್ಕೊಂದು ಕಾರಣವಿರಲೇಬೇಕು. ಕಾರಣವಿಲ್ಲದೆ ಕಾರ್ಯವಾಗದು. ಶೋಧಕ ಬುದ್ಧಿಗೆ ಆ ಕಾರಣವು ಈಗಲೇ ಕಾಣಬಹುದು ; ಇಲ್ಲವೆ ಕಾಲಾಂತರದಲ್ಲಿ ಕಾಣಬಹುದು. ಆದರೆ ಅದೃಷ್ಟವಾದದಿಂದ ಅದನ್ನು ಸಿದ್ಧಿಸಲೆತ್ನಿಸುವುದು ಪುರುಷಾರ್ಥದ ಲಕ್ಷಣವಲ್ಲ. ಕಾರ್ಯಕ್ಕೆ ಕಾರಣವನ್ನು ಕಂಡುಹಿಡಿದು ಬುದ್ಧಿಸಾಮರ್ಥ್ಯದಲ್ಲಿ ನಂಬುಗೆಯನ್ನು ಬೆಳೆಸಿಕೊಳ್ಳುವುದು ಮಾನವಧರ್ಮವೇ ಆಗಿರುವುದು. ಮಾನವತೆಯ ಅರಿವು ಬೆಳೆದು ಅದರ ಘನತೆಯು ಪ್ರಕಟವಾಗಬೇಕಾದರೆ ಮಾನವಧರ್ಮ ಪರಿಪಾಲನೆಯು ಅವಶ್ಯವಾಗಿ ಸಾಗಬೇಕು.

ಒಟ್ಟಾರೆ, ಪೌರಾಣಿಕ ಧರ್ಮವು ಪುಣ್ಯಶಾಲಿಗಳ ಮೇಲ್ಮೆಯನ್ನು ಎತ್ತಿಹಿಡಿದು ಪುಣ್ಯದ ಫಲವು ಎಂದೆಂದಿಗೂ ದೊರೆಯುವಂತೆ ಮಾಡಿಕೊಳ್ಳಬೇಕೆಂದು ಬೋಧಿಸುವುದಾದರೆ, ಮಾನವಧರ್ಮವು ಪುಣ್ಯಾಪಾಪಗಳು ತಮ್ಮಿಷ್ಟ ಕರ್ತಾರನ ಬುದ್ಧಿಯನ್ನವ

ಲಂಬಿಸಿ ರೂಪುಗೊಳ್ಳುವವು—ಎಂದು ತಿಳಿಸಿ ಸಮರ್ಥರಾದ ಮಾನವರ ನಿರ್ಮಾಣ ಗೊಳಿಸುವುದು. ಪೌರಾಣಿಕ ಧರ್ಮವು ಅವತಾರಿಕರ ಹೆಚ್ಚಳವನ್ನು ಹೇಳಿ ಮಾನವನು ಮಾನವನೇ ದೇವನಾಗಲಾರ ಎಂದು ಸಮರ್ಥಿಸಿದರೆ, ಮಾನವ ಧರ್ಮವು ಮಾನವನು ಮಹತ್ತರವಾದ ವ್ಯಕ್ತಿಯಾಗಬೇಕು, ತನ್ನ ಅಸ್ತಿತ್ವವನ್ನರಿತು ಅನ್ಯರು ಅದನ್ನರಿಯುವಂತೆ ಮಾಡಬೇಕು—ಎಂದು ಹೇಳಿ ದೇವ-ಮಾನವರಲ್ಲಿ ಹೊಂದುಗೆಯನ್ನು ಸಾರುತ್ತದೆ. ಪೌರಾಣಿಕ ಧರ್ಮವು ಮಾನವನು ಸಾಮಾನ್ಯವಾಗಿ ಜನಿಸಿ ಕ್ಷುದ್ರ ಜೀವಿಯಾಗಿ ಬಾಳಿ, ಒಂದು ದಿನ ಅಳಿದು ಹೋಗುವನು ಎಂಬ ಕ್ಷಣಿಕತ್ವದ ಮಾತನ್ನು ಒತ್ತೊತ್ತಿ ಹೇಳಿದರೆ, ಮಾನವ ಧರ್ಮವು ಮಾನವನು ಸಾಮಾನ್ಯನಲ್ಲ, ಅತಿಮಾನವನಾಗುವ ಸಾಮರ್ಥ್ಯವು ಅವನಲ್ಲಿದೆ, ಆದುದರಿಂದ ಮಾನವನು ಅತಿಮಾನವನಾಗಬೇಕು—ಎಂಬುದನ್ನು ಎತ್ತಿ ಎತ್ತಿ ಹೇಳುತ್ತದೆ. ಪೌರಾಣಿಕ ಧರ್ಮವು ಕಾರಣವನ್ನು ಕಂಡುಹಿಡಿಯಲಾರದೆ ಘಟನೆಗಳಿಗೆ ದೈವವಾದದ ಮುಸುಕನ್ನಂಟಿಸಿ ಪುರುಷಪ್ರಯತ್ನವನ್ನೇ ಅಲ್ಲಗಳೆದು ಕೈಲಾಗದವರ ನೆಪವನ್ನು ಬೆಳೆಸುವುದಾದರೆ, ಮಾನವ ಧರ್ಮವು ಕಾರ್ಯಕ್ಕೊಂದು ಕಾರಣವುಂಟು ಅದನ್ನರಿತುಕೊಳ್ಳಬೇಕು; ಅದರಲ್ಲಿ ಪುರುಷಾರ್ಥ, ಅದಕ್ಕಾಗಿ ಪುರುಷಪ್ರಯತ್ನ; ಪುರುಷಪ್ರಯತ್ನವಿದ್ದಲ್ಲಿ ಹರುಷ, ಅದುವೆ ಪರುಷ; ಇಂತಹ ಪರುಷಮಣಿಯ ನೆರವಿನಿಂದ ಜೀವನದ ಸಾರ್ಥಕ್ಯವನ್ನು ಮಾಡಿಕೊಳ್ಳಬೇಕು—ಎಂದು ತಿಳಿಸುವುದು. ಇಂತಹ ಧರ್ಮದ ತಿರುಳು ಜೀವನದ ಹುರುಳಾಗಲಿ.

(ಬೀನ್ ಕಣ)
— ಶ್ರೀ ಕುಮಾರಸ್ವಾಮಿಗಳು

೮. ಸಾವಿಯಬ್ಬೆ

೧

ಸಾವಿಯಬ್ಬೆ ಕಾಳಗದಲ್ಲಿ ಜೀವವಳಿದ ವಾರ್ತೆಯನ್ನು ಅವಳ ತಮ್ಮ ಮಾಧವನು ಬಂಕಾಪುರದಲ್ಲಿದ್ದ ಅರಸನಿಗೆ ತಂದು ತಿಳಿಸಿದನು.

ಚಲದುತ್ತರಂಗ ಗಂಗವಜ್ರ ಮಾರಸಿಂಹ ಭೂಪನಿಗೆ ಸಾವಿನ ಸುದ್ದಿ ಕೇಳುವುದು ಹೊಸತೇನಲ್ಲ. ಆದರೂ ಸೋದರಸೊಸೆ ಮಡಿದ ಮಾತನ್ನು ಕೇಳಿ ಅವನು ಬಹು ದುಃಖಪಟ್ಟನು.

ಸಾವಿ ಮಾರಸಿಂಹನಿಗೆ ಸೋದರಸೊಸೆಯಾಗಿ ಹುಟ್ಟಿದ ಮಗನೂ ಮಗಳೂ ಆಗಿ ಬೆಳೆದಿದ್ದಳು. ಮಾರಸಿಂಹನಿಗೆ ಚಿಕ್ಕಂದೇ ಹೆಂಡಿರು [illegible] ಸಂಸಾರದಲ್ಲಿ ವೈರಾಗ್ಯ ಹುಟ್ಟಿತು. ರಾಜನಾದ ಕಾರಣದಿಂದ ತನ್ನ ಕರ್ತವ್ಯದಿಂದ ಭ್ರಷ್ಟನಾಗಬಾರದೆಂದು ಅವನು ರಾಜ್ಯರಕ್ಷಣೆಯಲ್ಲಿ ನಿಂತಿದ್ದನು. ವಂಶವನ್ನು ಅರಳಿಸುವುದಕ್ಕೆ ತಂಗಿ ಜಾಬವ್ವೆಯ ಮಗು ಒಂದನ್ನು ದತ್ತು ಮಾಡಿಕೊಳ್ಳುವುದೆಂದು ಅವನು ಯೋಚಿಸಿದನು. ಆಗ ಗರ್ಭಿಣಿಯಾಗಿದ್ದ ಜಾಬವ್ವೆ ಹೆಣ್ಣು ಮಗುವನ್ನು ಹೆತ್ತಳು. ಅರಸನು ಅದನ್ನೇ ತನ್ನದೆಂದು ತಂದು ಸಾಕಿದನು.

ವಿರಕ್ತನಾದ ವೀರ ಮಾತುಲನ ರಕ್ಷಣೆಯಲ್ಲಿ ಸಾವಿ ಒಬ್ಬ ಕುಮಾರನ ಶಿಕ್ಷೆಯನ್ನು ಪಡೆದಳು. ಎಳೆಯ ಹುಡುಗಿ ಸಾಕುತಂದೆಯೊಡನೆ ನಿಂತು ಸಮರ ಸನ್ನಾಹ ಯುದ್ಧ ಕೋಲಾಹಲಗಳ ಸಂಭ್ರಮದ ಗಾಳಿಯಲ್ಲಿ ಬೆಳೆದಳು. ಹನ್ನೆರಡು ವರ್ಷದ ಬಾಲೆ ಅರಸುವರರೊಡನೆ ಜೋಡಿಯಾಡಹೋಗಿ, ಕುದುರೆ ಏರುವದರಲ್ಲಿ, ಸರಳನ್ನು ಎಸುವುದರಲ್ಲಿ, ಗುರಿಯನ್ನು ಕೆಡಹುವದರಲ್ಲಿ ಜೊತೆಯ ತರುಣರಿಗೆ ಸಮ ಎಂಬ ಮಿಗಿಲಾದ ಚಾತುರ್ಯವನ್ನು ತೋರಿದಳು. ಗಂಗವಜ್ರನು ತನ್ನ ಈ ಸೊಸೆ ಮಣಿಪುರದ ಚಿತ್ರಾಂಗದೆಯ ಅಪರಾವತಾರ ಎಂದೊಮ್ಮೆ, ಮಂಗಳರೂಪಿಣಿ ಮಹಿಷಾಸುರಮರ್ದಿನಿ ಜಿನಧರ್ಮದಲ್ಲಿ ಬೆಳೆಯಲೆಂದು ಈ ಹುಡುಗಿಯಾಗಿ ಬಂದಿರುವಳೆಂದು ಇನ್ನೊಮ್ಮೆ, ಹೆಮ್ಮೆಯಿಂದುಬ್ಬುವನು.

ಹದಿನಾರು ವರ್ಷ ಕಳೆದ ಹುಡುಗಿಗೆ ಅರಸು ಮದುವೆ ಮಾಡಲು ಬಯಸಿದನು. ಅರಸನ ಜ್ಞಾತಿವರ್ಗದಲ್ಲಿ ಹಲವರು ತಕ್ಕ ತರುಣರುಂಟು. ಇವರಲ್ಲಿ ಯಾರನ್ನಾದರೂ ಒಪ್ಪುವೆಯಾ ಎನ್ನಲು ತರುಣಿ ಅವರೊಂದಿಗೆ ತಾನು ದ್ವಂದ್ವಯುದ್ಧ ಮಾಡಿ ಯಾರ ವಿಕ್ರಮ ತನಗೆ ಒಪ್ಪಿದರೆ ಅವರನ್ನು ಮದುವೆಯಾಗುವೆನೆಂದಳು.

ಅರಸನು ತರುಣರನ್ನು ಒಂದುದಯ ಅರಮನೆ ಮುಂದಣ ಅಂಗಳಕ್ಕೆ ಬರಮಾಡಿ ಪರನಾಡಿನ ಒಬ್ಬ ಯೋಧನು ಬಂದಿರುವನೆಂದೂ ಅವರು ಅವನೊಂದಿಗೆ ಕಾದಬೇಕೆಂದೂ ಅವರಿಗೆ ತಿಳಿಸಿದನು. ಅವರು ಆಗಬಹುದೆಂದರು.

ಸಾವಿ ಗಂಡುಡೆ ಉಟ್ಟು ಮೊಗವಾಡವನ್ನು ಧರಿಸಿ ಬಿಡಾರದಿಂದ ಬಂದಂತೆ ಕಣವನ್ನು ಸಾರಿದಳು. ನಾಲ್ವರು ತರುಣರು ಒಬ್ಬರಾದ ಮೇಲೆ ಒಬ್ಬರು ಅವಳೊಡನೆ ಸ್ಪರ್ಧಿಸಿ ಸೋತು ಹಿಮ್ಮೆಟ್ಟಿದರು. ಮಾರಸಿಂಹನ ಸೋದರದ ಶಾಖೆಯ ಲೋಕಣ್ಣನೊಬ್ಬನು ಮಾತ್ರ ಅವಳ ಪೆಟ್ಟಿಗೆ ಸೋಲದೆ ದೃಢವಾಗಿ ನಿಂತನು.

ಅದೇ ಕ್ಷಣ ಆ ಪ್ರಚ್ಛನ್ನ ಯೋಧಮೂರ್ತಿ ತನ್ನ ಮೊಗವಾಡವನ್ನು ತೆಗೆದು ಲೋಕಣ್ಣನ ಬಳಿಗೆ ನಡೆಯಿತು.

ಕಾಳಗವನ್ನು ನೋಡುತ್ತಿದ್ದ ಯೋಧಪ ದಂಡನಾಯಕರಿಗೆ ಹೇಳತೀರದ ಆಶ್ಚರ್ಯ. ಮಾರಸಿಂಹನೊಬ್ಬನು ಮಾತ್ರ ಆಶ್ಚರ್ಯಪಡಲಿಲ್ಲ. ಅವನು ಪೀಠದಿಂದೆದ್ದು ಕಳದೊಳಕ್ಕೆ ನಡೆದು ಯುವಕನಿಗೆ, "ಈ ಕನ್ಯೆಯನ್ನು ಒಲ್ಲೆಯಾ" ಎಂದನು.

ಲೋಕನು ಆ ಮುನ್ನ ಸಾವಿಯನ್ನು ನೋಡಿ ಮೆಚ್ಚಿದ್ದನು. ಆದರೆ ರಾಜನ ಸಾಕುಮಗಳನ್ನು ಬಯಸಿ ಕೇಳುವುದೆಂತು? ಆದುದರಿಂದ ಸುಮ್ಮನಾಗಿದ್ದನು. ಈಗ ಅವನ ಬಯಕೆ ತಾನೇ ಕೈಗೂಡಿ ಬಂದಿತು. ಅವನು, "ನಿಮ್ಮ ಹಸಾದ, ಒಲ್ಲೆನೇಕೆ" ಎಂದನು.

ಲೋಕವಿದ್ಯಾಧರನಿಗೆ ಶ್ರಾವಕೀ ದೇವಿಗೆ ವಿವಾಹ ಆಯಿತು. ಮಾರಸಿಂಹನು ಅದನ್ನು ಎಲ್ಲಿಯೂ ಇಲ್ಲದ ವೈಭವದಿಂದ ನೆರವೇರಿಸಿದನು. ಇದಾಗಿ ಈಗ ನಾಲ್ಕು ವರ್ಷವಾಯಿತು.

ಒಂದು ತಿಂಗಳ ಹಿಂದೆ ಬಡಗಣಿಂದ ಹಗೆಗಳ ಎರಡು ತಂಡ ದಾಳಿಮಾಡಿಕೊಂಡು ತನ್ನ ರಾಷ್ಟ್ರದತ್ತ ಹಾಯ್ದು ಬರುತ್ತಿರುವುದಾಗಿ ಅರಸನಿಗೆ ಸುದ್ದಿ ಬಂದಿತು. ಬೇರೆ ಬೇರೆ ಪಾಳೆಯಗಳಿಗೆ ಬೇಹನ್ನಟ್ಟಿ ಅವನು ಗಡಿಯ ರಕ್ಷಣೆಗೆ ದಳಪತಿಗಳನ್ನು ನೇಮಿಸಿ ಕಳುಹಿಸಿದನು. ಬಾಗಿಯೂರ ಕಡೆಗೆ ತಾನು ಹೋಗುವೆನೆಂದು ಲೋಕಣ್ಣ ಮುಂದಾದನು.

ಚಲದುತ್ತರಂಗನು ತನ್ನಷ್ಟಕ್ಕೆ ಯುದ್ಧವೆಂದರೆ ಹೆದರುವವನಲ್ಲ. ಈ ಮೊದಲು ಅವನು ಅನೇಕ ದಳಪತಿಗಳನ್ನು ಯುದ್ಧಭೂಮಿಗೆ ಕಳುಹಿಸಿದ್ದುಂಟು. ತರುಣನಾದ ಲೋಕನನ್ನೂ ಯುದ್ಧಕ್ಕೆ ಕಳುಹಿಸಿದ್ದುಂಟು. ಆದರೆ ಈ ಬಾರಿ ಲೋಕನು ಯುದ್ಧಕ್ಕೆ ಹೋಗುವುದು ಇವನಿಗೆ ಬೇಡವೆನ್ನಿಸಿತು. ಲೋಕನು ಸಾವಿಯ ಇನಿಯ ಎಂಬುದಷ್ಟೆ ಇದರ ಕಾರಣ. ಇದನ್ನು ನರಪತಿ ಬಲ್ಲನು. ಆದರೆ ಇಂಥ ಕಾರಣ

ಕ್ಕಾಗಿ ಒಬ್ಬ ದಳಪತಿ ಸೇನೆಯೊಡನೆ ಹೋಗಬಾರದೆನ್ನುವುದು ರಾಜಧರ್ಮವಲ್ಲ; ರಂಗವಂಶದ ಧರ್ಮವಲ್ಲ; ಚಲದುತ್ತರಂಗನ ಧರ್ಮವಲ್ಲ; ಹೇಗೆ ಮಾಡುವುದು? ಲೋಕನು ಯುದ್ಧಕ್ಕೆ ಹೊರಟರೆ ತಾನು ಬೇಡ ಎನ್ನಬಾರದು, ಎಂದು ದೊರೆ ನಿಶ್ಚಯಿಸಿಕೊಳ್ಳುವ ವೇಳೆಗೆ ಸಾವಿ ತನ್ನ ಸಾಕು ತಂದೆಯ ಬಳಿಗೆ ಬಂದಳು. ಲೋಕನು ಬಾಗಿಯೂರ ಕಡೆ ಸೇನೆಯೊಡನೆ ಹೊರಟಾಗ ತಾನೂ ಅವನೊಡನೆ ಹೊರಡಲು ಅಪ್ಪಣೆ ಬೇಡಿದಳು.

ಸಾವಿ ಸೇನೆಯೊಡನೆ ಹೋಗುವುದು ದೊರೆಗೆ ಹೊಸತಲ್ಲ. ಆದರೆ ಗಂಡನೊಡನೆ, ಅದರಲ್ಲೂ ಅವನು ಸೇನೆಯನ್ನು ನಡೆಸಬೇಕಾಗಿರುವ ವೇಳೆ, ಇವಳು ಜೊತೆಗೆ ಹೋಗುವುದೆಂದರೆ ಒಪ್ಪಬಹುದೇ ಎಂದು ಅವನು ಯೋಚಿಸಿದನು. ಕದನದಲ್ಲಿ ಜೀವ ಬಿಡಬೇಕಾಗಿ ಬಂದರೆ ಪಾಳೆಯದಲ್ಲಿರುವ ಪ್ರಿಯೆಯನ್ನು ನೆನೆದು ನೇನಾಸಿ ಧೃತಿಗೆಟ್ಟಾನೊ? ಕೆಟ್ಟರೆ ಹೇಗೆ? ಸೇನೆಯ ಗತಿಯೇನು?

ತಂದೆಯ ಯೋಚನೆಯನ್ನು ಕೇಳಿ ತಿಳಿದಂತೆ ಸಾವಿ, "ನಾನು ಪಾಳೆಯದಲ್ಲಿ ನಿಲ್ಲುವಷ್ಟಕ್ಕಾಗಿ ಜೊತೆ ಸಾರುವುದಿಲ್ಲ. ನಿಮ್ಮಳಿಯನೊಡನೆ ಕಾಳಗಕ್ಕೂ ಹೋಗುತ್ತೇನೆ. ನೀವು ನನ್ನನ್ನು ಮಗನಂತೆ ಸಾಕಿದಿರಿ. ಈಗ ಒಬ್ಬ ಮಗನಂತೆ ಕಳುಹಿಕೊಡಿ. ಗೆದ್ದರೆ ಇಬ್ಬರೂ ಗೆಲ್ಲುವೆವು. ಸೋತೇವು. ಆಗಲೂ ನಮಗೆ ಗೆಲವೇ. ಆಶೀರ್ವಾದ ಮಾಡಿ, ನಗುತ್ತ ಕಳುಹಿ." ಎಂದಳು.

ದೊರೆ ನಗಲಾರದೆ ಹೋದನು. ಮಗನಂತೆ ಸಾಕಿದ ಮಾತು ನಿಜ. ಮಗನಂತೆ ಕೊಲ್ಲಲು ಎಣಿಸಿದ್ದನೆ? ರಣದೇವತೆಗೆ ಮಗನ ಬಲಿ ಉಂಟು. ಮಗಳ ಬಲಿ ಉಂಟೇ?

ಮಗಳು ಬೇರೆ ಆಗಿದ್ದರೆ ಇಲ್ಲವೇನೊ. ಆದರೆ ಸಾವಿಯಂಥ ಮಗಳು? ಎಲ್ಲರಂತೆ ಬಾಳುವುದಕ್ಕೆ ಇಂಥ ದಿಟ್ಟೆ ಹುಟ್ಟಲೇಕೆ? ದೈವದ ಇಚ್ಛೆಯನ್ನು ದೈವ ಬಲ್ಲದು. ಹೀಗೆ ಸಾಕಿದ ದೈವ ಹೇಗೆ ಮುರಿಸುವುದೋ? ಅದಕ್ಕೆ ಯುಕ್ತವೆಂದು ತೋರಿದ ರೀತಿಯಲ್ಲಿ ನಡೆಸಲಿ. ಹೊರೆಯಬಹುದಾದರೆ ಹೊರೆದು ಹಿಂದಿರುಗಿಸಲಿ.

ಹೀಗೆಂದು ಯೋಚಿಸಿ ದೊರೆ ಸಮ್ಮತಿಯಿತ್ತನು. ಅವರನ್ನು ಆ ಗಡಿಯತ್ತ ಕಳುಹಿ ತಾನು ಬಂಕಾಪುರದ ಗಡಿಯತ್ತ ಬಂದನು. ಒಂದು ತಿಂಗಳಾಯಿತು. ಇಂದು ಈ ಸುದ್ದಿ ಬಂದಿತು.

೪

ಬಂಕಾಪುರಕ್ಕೆ ಬಂದ ಒಂದೆರಡು ದಿನದಲ್ಲಿ ರಾಜನಿಗೆ ದುರ್ನಿಮಿತ್ತಗಳು ತೋರಿದವು. ಅವನು ಅದನ್ನು ಹೇಗೋ ಸಾವಿಯಬ್ಬೆಯ ಬಾಳುವೆಗೆ ಅನ್ವಯಿಸಿದನು. ಅವಳನ್ನು ಕುರಿತು ಇಂದಲ್ಲ ನಾಳೆ ಕೆಟ್ಟಸುದ್ದಿ ಬರುವುದು, ಎಂದೇ ಅವನ ಮನಸ್ಸಿಗೆ ತೋಚಿತು.

ಹಗೆ ಬಂಕಾಪುರದ ಕಡೆ ಪಂಡೆತ್ತಿ ಬರಲಿಲ್ಲ. ಸ್ವಲ್ಪ ದೂರದಲ್ಲಿದ್ದನು. ಅರಸು ಪಾಳೆಯದಲ್ಲಿ ದಳಪತಿ ರಾಚಮಲ್ಲನನ್ನು ನಿಲ್ಲಿಸಿ ತಾನು ಬಂಕಾಪುರದಲ್ಲಿ ಅಜಿತಸೇನ ಭಟ್ಟಾರಕರ ಸನ್ನಿಧಿಯಲ್ಲಿ ಧರ್ಮಶ್ರವಣಕ್ಕೆ ನಿಂತನು.

ಸಾವೇನು, ನೋವೇನು, ಬಾಳೇನು, ಬಗೆಯೇನು ಎಂದು ಒಂದು ತಿಂಗಳ ಕಾಲ ದಿನವೂ ಗುರುಸನ್ನಿಧಿಯಲ್ಲಿ ಪ್ರಣಿಪಾತ ಪರಿಪ್ರಶ್ನೆಯಿಂದ ಕೇಳಿ ತಿಳಿದಿದ್ದ ತಿಳಿವು ಇಂದು ಸಾರ್ಥಕ ಆಗ ಬಂದಿತು.

ದೊರೆ ಮಾಧವನನ್ನು ಸಾವಿ ಮಡಿದ ತೆರನನ್ನು ಹೇಳು ಎಂದು ಕೇಳಿದನು. ಸಾವಿಯು ಆ ನೋದರನು ಕಣ್ಣೀರಿಡುತ್ತ ಹೇಳಲಾರದೆ ಆ ಕತೆಯನ್ನು ಹೇಳಿದನು.

ನಾಲ್ಕು ದಿನದ ಹಿಂದೆ ಹಗೆಯ ಸೇನೆ ಬಾಗಿಯೂರ ಬಳಿ ಸಾರಿತು. ಗಂಗ ರಾಜನ ಸೇನೆ ಎದ್ದು ಮುಂದರಿದು ಅದನ್ನು ತಾಗಿತು. ಸೇನೆಯ ಮುಂದುಗಡೆಲ್ಲಿ ಲೋಕ, ಸಾವಿ ಇದ್ದರು. ಮಾಧವನು ಒಂದು ಪಕ್ಕದಲ್ಲಿ ನಡೆಯುತ್ತಿದ್ದನು.

ಬಹು ಹೊತ್ತು ಕದನ ನಡೆಯಿತು. ಇವರ ಸೇನೆ ಗೆಲ್ಲಬೇಕೆಂದೇ ಕಾಣುತ್ತಿದ್ದಿತು. ಅಷ್ಟರಲ್ಲಿ ಹಗೆಯ ಪಕ್ಕದಿಂದ ಒಂದು ಆನೆ ನುಗ್ಗಿ ಬಂದಿತು ; ಲೋಕನ ಕುದುರೆ ಬೆದರಿತು. ಅವನು ಅದನ್ನು ಹಿಡಿದು ನಿಲ್ಲಿಸಿಕೊಳ್ಳುವುದರಲ್ಲಿ ಹಗೆ ಅವನ ಎದೆಯಲ್ಲಿ ಎರಡು ಸರಳನ್ನು ನಾಟಿದನು.

ಲೋಕನು ನೆಲಕ್ಕೆ ಬಿದ್ದನು. ಸೇನೆಯಲ್ಲಿ 'ಹಾ'ಕಾರ ಎದ್ದು ಈ ಸಂಗತಿ ಮಾಧವನಿಗೆ ಮುಟ್ಟಿತು. ಲೋಕನು ಕೆಳಗೆ ಬಿದ್ದರೂ ಸೈನ್ಯ ಮುಂದುವರಿಯಿತು. ಅವನನ್ನೂ ಸಾವಿಯನ್ನೂ ಮಧ್ಯೆ ನಿಲ್ಲಿಸಿಕೊಂಡು ಹಗೆಯನ್ನು ತಡೆಯಿತು.

ಮಾಧವನು ಸಾವಿಗೆ, ಲೋಕವಿದ್ಯಾಧರನೊಡನೆ ಸೇನೆಯ ಹಿಂಭಾಗಕ್ಕೆ ಹೋಗೋಣ, ಎಂದು ಹೇಳಿದನು. ಸಾವಿ, 'ಅವನಿಗೆ ನೆನಪಿದ್ದರೆ ಇಂಥ ಮಾತಿಗೆ ಅವನು ಒಪ್ಪುತ್ತಿರಲಿಲ್ಲ. ಮೈಮರೆತನೆಂದು ಇಂಥ ಹೀನಾಯವನ್ನು ಅವನಿಂದ ಮಾಡಿಸುವುದೆ ? ಚಾಣಿ ಮುಂದರಿಯಲಿ. ನೀನಿಲ್ಲಿರು. ನಾನು ಮುಂದೆ ಹೋಗಿ ಹಗೆಯನ್ನು ಹಿಮ್ಮೆಟ್ಟಿಸಿ ಬರುವೆನು,' ಎಂದಳು.

ಮಾಧವನು ಲೋಕನ ಪಕ್ಕದಲ್ಲಿ ಕುಳಿತನು; ಸಾವಿ ಮುಂದರಿದಳು.

ಮತ್ತೆ ಅಷ್ಟರಲ್ಲಿ 'ಹಾಹಾ'ಕಾರವೆದ್ದಿತು. ಹಗೆಯ ಆನೆ ಈ ದಳದ ಮೇಲೆ ನುಗ್ಗಿ ಬಂದಿತು. ಸಾವಿಯ ಕುದುರೆ ಹೆದರಿ ಹಿಂದಕ್ಕೆ ಹಾರಿತು. ಸಾವಿ ಅದನ್ನು ತಡೆದು ನಿಲ್ಲಿಸುವ ವೇಳೆಗೆ ಇವಳಿದ್ದ ಕಡೆಗೆ ಬಂದು ಸೇರಿದ್ದಿತು.

ಸಾವಿ ಕುದುರೆಗೆ ಸಾಂತ್ವನ ಹೇಳಿದಳು; ಓಡದಂತೆ ಅದನ್ನು ನಿಲ್ಲಿಸಿ ಹಿಂತಿರುಗಿಸಿದಳು.

ಎದುರಿಗೆ ಮತ್ತೆ ಆ ಆನೆ. ಅದರ ಮೇಲಿದ್ದ ಆ ಯೋಧನು ಸಾವಿಯನ್ನು ಕುರಿತು ಒಂದು ಸರಳನ್ನು ಬಿಟ್ಟನು.

ಮಾಧವನು, 'ಎಲವೊ, ಹೇಡಿ, ಹೆಣ್ಣೆಂಬ ಹೇವ ಬೇಡ ? ತಡೆ ಮೂಳ,

ಎಂದು ಮೊರೆದನು.

ಮೊರೆತ ಹಗೆಯು ಕಿವಿಗೆ ಮುಟ್ಟಿರಬೇಕು. ಅವನು ಮತ್ತೆ ಸರಳನ್ನು ಬಿಡಲಿಲ್ಲ. ಆದರೆ ಮೊದಲು ಬಿಟ್ಟ ಸರಳು ಇವಳ ಪಕ್ಕೆಯಲ್ಲಿ ತೂರಿ ಸಿಕ್ಕಿಕೊಂಡಿತ್ತು. ಇವಳು ಕುದುರೆಯಿಂದ ಕೆಳಗೆ ಬಿದ್ದಳು; ಗಂಡನ ಕಾಲ ಬಳಿಗೆ ಸರಿದು ಅದನ್ನು ಮುಟ್ಟಿದಳು.

ಲೋಕನ ಜೀವ ಹೋಗಿರಲಿಲ್ಲ. ಆದರೂ ಅವನು ಬದುಕುವನೆಂದು ಹೇಳುವಂತಿರಲಿಲ್ಲ. ಸಾವಿ ಮಾಧವನನ್ನು ಕರೆದು ತನ್ನ ಉಡಿಯಿಂದ ಒಂದು ಸಂಪುಟವನ್ನು ತೆಗೆದುಕೊಡೆಂದು ಹೇಳಿದಳು. ಅದು ಏನೆಂದು ತಿಳಿಯದೆ ಇವನು ಅದನ್ನು ತೆಗೆದುಕೊಟ್ಟನು. ತರುಣಿ ಅದನ್ನು ತೆಗೆದು ಅದರಿಂದ ಒಂದು ಗುಳಿಗೆಯನ್ನು ಬಾಯಿಗೆ ಹಾಕಿಕೊಂಡಳು.

ಗುಳಿಗೆಯನ್ನು ತೆಗೆದ ಕ್ಷಣದಲ್ಲಿ ಮಾಧವನು ಅದನ್ನು ಸಾವಿ ಗಂಡನಿಗೆ ಕೊಡಬಯಸಿದ ಯಾವುದೋ ಔಷಧ ಎಂದು ನೆನೆದನು. ಯಾವಾಗ ಅವಳೇ ಅದನ್ನು ಬಾಯಿಗೆ ಹಾಕಿಕೊಂಡಳೋ ಆಗ ಅವನಿಗೆ, ಅದು ವಿಷ ಇರಬೇಕು, ಎನ್ನಿಸಿತು.

ಈ ಮಧ್ಯೆ ಇವರ ಸೈನ್ಯ ಮತ್ತೆ ಅತ್ತ ಇತ್ತಲಿಂದ ಬಂದಿತು; ಆನೆಯನ್ನು ಕಾದಿತು; ಅದನ್ನು ಬೇರೆ ಕಡೆ ತಿರುಗಿಸಿತು. ಕದನ ಮುಖ ನೂರು ಮಾರು ಮುಂದಕ್ಕೆ ಹೋಗಿದ್ದಿತು.

ವಿಷ ನುಂಗಿ ಸಾವಿ ಕ್ಷಣಮಾತ್ರ ಗಂಡನ ಕಡೆ ನೋಡಿ ಕಣ್ಣು ಮುಚ್ಚಿದಳು; ತಮ್ಮನ ಗಲ್ಲವನ್ನು ಮುಟ್ಟಿ ತನ್ನ ಬಾಯಿಗಿಟ್ಟುಕೊಂಡಳು ; ಲೋಕನನ್ನು ನೋಡಿಕೋ ಎಂದು ಸನ್ನೆ ಮಾಡಿದಳು.

ವಿಷ ಬಹಳ ಪ್ರಬಲವಾದದ್ದಿರಬೇಕು. ಕೆಲವೇ ನಿಮಿಷದಲ್ಲಿ ಅವಳ ಮೈ ತಣ್ಣಗಾಗಿ ಹೋಯಿತು.

ಇದಾದ ಕ್ಷಣದಲ್ಲಿ ಲೋಕನಿಗೆ ನೆನವು ಬಂದಿತು. ಅವನು ಕಣ್ತೆರೆದನು ; ‘ ಸಾವಿಯೆಲ್ಲಿ ’ ಎಂದು ಕೇಳಿದನು.

ಮಾಧವನು ಉತ್ತರ ಕೊಡಲಿಲ್ಲ ; ಅವಳ ಕಳೇಬರದತ್ತ ನೋಡಿದನು ; ತಡೆಯಲಾರದೆ ಕಣ್ಣೀರು ಬಿಟ್ಟನು.

ಲೋಕನು, ‘ ತೀರಿಕೊಂಡಳೆ ? ’ ಎಂದನು. ಮಾಧವನು ಹೌದು ಎಂದು ತಲೆ ಆಡಿಸಿದನು....

ಲೋಕನು ಮೈದುನನಿಗೆ, ‘ ಇದನ್ನು ಎಳೆ ಬಾ ’, ಎಂದನು. ಮಾಧವನು, ‘ ವೈದ್ಯ ಬರಲಿ, ರಕ್ತ ಸೋರದಂತೆ ಕಟ್ಟಿ ಮತ್ತೆ ಸರಳನ್ನು ಎಳೆಸುತ್ತೇನೆ ’ ಎಂದನು.

ಲೋಕನು, ‘ ನಾನು ಅಲ್ಲಿ ಹೋದೆನೆಂದು ನಾನು ಒಂಟಿಯಾಗದಂತೆ ಸಾವಿ ಮಡಿದಳು. ನಾನು ಇಲ್ಲಿ ಉಳಿದರೆ ಅವಳು ಚಿಂತೆಗೆ ಈಡಾಗುವಳು. ಬಾ, ಇದನ್ನು

ಎಳೆ. ತಡಮಾಡಬೇಡ, ಎಳೆದುಹಾಕಿ ದಳದೊಡನೆ ಸಾರು. ಹಗೆ ಹಿಮ್ಮೆಟ್ಟಿದ ಮೇಲೆ ಮತ್ತೆ ಇತ್ತ ಬಾ, ಬಾ ತಮ್ಮ ಬೇಗ,' ಎಂದನು.

ಮಾಧವನು ಅವನ ಮಾತನ್ನು ಮೀರಲಾರದೆ ಆ ಸರಳನ್ನು ಎಳೆದು ಹಾಕಿದನು ; ತನ್ನ ಭಾವನ ಜೀವವನ್ನು ತಾನೇ ತೆಗೆದನು.

ಹಗೆ ಸೋತು ಹಿಮ್ಮೆಟ್ಟಿದನು. ಇವರ ಪಡೆಗೇ ಜಯವಾಯಿತು. ಲೋಕಣ್ಣ ಸಾವಿ ಮಾತ್ರ ತೀರಿಕೊಂಡಿದ್ದರು.

೫

ತನ್ನ ಅಳಿಯ ಹೇಳಲಾರದೆ ಹೇಳಿದ ಈ ಕತೆಯನ್ನು ನೊಳಂಬಾಂತಕ ಗಂಗ ವಜ್ರನು ಕೇಳಲಾರದೆ ಕೇಳಿದನು. ಸಾವಿ ಮಡಿದು ಅವನಿಗೆ ತನ್ನ ಜೀವ ಹೋದಂತೆ ತೋರಿತು. ತಾನು ಎತ್ತಿದ ಕೂಸು, ತಾನು ಸಾಕಿದ ಉಸಿರು, ತನ್ನ ಕಣ್ಣನ್ನು ಮುಚ್ಚುವುದೆಂದು ಎಣಿಸಿದ್ದ ಬಾಳುವೆ, ತನ್ನ ಕಣ್ಣೆದುರಿಗೆ ಹೀಗೆ ಮರೆಯಾಗಿ ಹೋಯಿತು. ಇನ್ನು ತಾನು ಇದ್ದೂ ಇಲ್ಲದಂತೆಯೇ.

ಬಾಳೇನು, ಸಾವೇನು, ನೋವೇನು, ನಗೆಯೇನು, ಇದೆಲ್ಲವನ್ನೂ ಅರಿತು ನೋಸ ಹೋಗದೆ ನಡೆಯುವ ಬಗೆಯೇನು, ಎಂದು ಒಂದು ತಿಂಗಳ ಕಾಲ ಕೇಳಿ ತಿಳಿದಿದ್ದ ಉಪದೇಶ ಇಂದು ಫಲಿಸಿತು. ತನ್ನಂಥ ಬಾಳಿಗೆ ಬಗೆಯೇನು, ಎಂಬುದನ್ನು ಅರಸನಿಗೆ ಅವನು ಸಾಕಿದ ಸಾವಿ ತೋರಿದ್ದಳು.

ಭಟ್ಟಾರಕರು ಹೇಳಿದ್ದರು : ಕೃಚ್ಛ್ರದಲ್ಲಿ ಸಲ್ಲೇಖನ ಕರ್ತವ್ಯ ಎಂದು. ಈಗ ಕೃಚ್ಛ್ರ ಒದಗಿತ್ತು. ಗಂಗವಜ್ರನು ಸಲ್ಲೇಖನವನ್ನು ನಿಶ್ಚಯಿಸಿದನು. ಆಗಲೆ ಅಜಿತ ಸೇನ ಗುರುವಿನ ಅನುಮತಿಯನ್ನು ಪಡೆದನು. ಅಂದೇ ಉಪವಾಸವನ್ನು ಆರಂಭಿಸಿ ಮೂರು ದಿನದ ಮೇಲೆ ಉಸಿರನ್ನು ಮುಡುಪಿದನು.

೬

ಸಾವಿಯಬ್ಬೆಗೆ ಸ್ವರ್ಗದಲ್ಲಿ ಇನಿಯನ ಒಲವಿನಂತೆ ತಂದೆಯ ವಾತ್ಸಲ್ಯವೂ ಒದಗಿತು. ಭೂಮಿಯಲ್ಲಿ ಒಂದು ವೀರಗಲ್ಲು ಅವಳ ಕೀರ್ತಿಯನ್ನು ಸಾರಿತು.

ಶ್ರಾವಕ ಧರ್ಮದೊಳ್ ದೊರೆಯೆನಲ್ ಹೆರರಿಲ್ಲೆನೆ ಸಂದ ರೇವತಿ
ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ರೂಪಿನೊಳ್
ದೇವಕಿ ತಾನೆ ಪೆಂಪಿನೊಳರುಂಧತಿ ತಾನೆ ಜಿನೇಂದ್ರಭಕ್ತಿ ಸದ್
ಭಾವದೆ ಸಾವಿಯಬ್ಬೆ ಜಿನಶಾಸನ ದೇವತೆ ತಾನೆ ಕಾಣಿರೇ.

— ಶ್ರೀನಿವಾಸ

೯. ಯಕ್ಷ ಪ್ರಶ್ನೆ

ಎಷ್ಟು ಹೊತ್ತಾದರೂ ನಕುಲನು ಬರದಿದ್ದದ್ದನ್ನು ನೋಡಿ ಯುಧಿಷ್ಠಿರನು ಸಹದೇವನನ್ನು ಕಳುಹಿಸಿದನು. ಅವನು ಬಂದು ನೋಡಿದರೆ, ಅಣ್ಣನು ಸತ್ತುಬಿದ್ದಿದ್ದಾನೆ! ತನಗೋ ಸಹಿಸಲಾರದ ಬಾಯಾರಿಕೆ; ಆದ್ದರಿಂದ ನೀರು ಕುಡಿಯಲು ಮುಂದುವರಿದಾಗ ಹಿಂದಿನಂತೆಯೇ ಆಕಾಶವಾಣಿಯಾಯಿತು; ಅದನ್ನು ಅಲಕ್ಷ್ಯ ಮಾಡಿ ನೀರು ಕುಡಿಯಲು ಅವನೂ ಸತ್ತುಬಿದ್ದನು.

ಆ ಮೇಲೆ ಅರ್ಜುನನು ಹೋಗಿ ತಮ್ಮಂದಿರಿಬ್ಬರೂ ಸತ್ತು ಬಿದ್ದಿದ್ದನ್ನು ನೋಡಿದನು; ಬಿಲ್ಲನ್ನು ಎತ್ತಿಹಿಡಿದು ಸುತ್ತಲೂ ನೋಡಿದನು; ಒಂದು ಪ್ರಾಣಿಯೂ ಕಾಣಲಿಲ್ಲ: ನೀರು ಕುಡಿಯುವದಕ್ಕೆ ಹೋದಾಗ ಹಿಂದಿನಂತೆ ವಾಣಿಯಾಯಿತು; ಅರ್ಜುನನು "ಯಾರದು? ನನ್ನ ಕಣ್ಣಿಗೆ ಬೀಳು ಬಾ; ನೀನು ಮತ್ತೆ ನೋಲ್ಲುತ್ತದಂತೆ ಮಾಡುತ್ತೇನೆ!" ಎಂದು ಮಂತ್ರಾಸ್ತ್ರಗಳಿಂದಲೂ ಶಬ್ದವೇಧಿ ಬಾಣಗಳಿಂದಲೂ ಹೊಡೆಯಲು ಮೊದಲು ಮಾಡಿದನು. ಆಕಾಶವೆಲ್ಲ ಬಾಣದಿಂದ ತುಂಬಿತು. ತನ್ನ ಬಾಣಗಳೆಲ್ಲಾ ವ್ಯರ್ಥವಾದದ್ದನ್ನು ನೋಡಿ, ಅರ್ಜುನನು ಬಾಯಾರಿಕೆ ಸಹಿಸಲಾರದೆ ನೀರು ಕುಡಿದು ಕೆಳಕ್ಕೆ ಬಿದ್ದನು. ಆ ಮೇಲೆ ಭೀಮನೂ ಬಂದು ಮಿಕ್ಕವರಂತೆಯೇ ನೀರನ್ನು ಕುಡಿದು ಸತ್ತುಬಿದ್ದನು.

ಧರ್ಮರಾಜನಿಗೆ ತುಂಬ ಚಿಂತೆ ಹತ್ತಿತು. ಆದ್ದರಿಂದ ಅವನೂ ಹೊರಟು ಬರಬೇಕಾಯಿತು. ಬಂದು ನೋಡಿದರೆ, ತಮ್ಮಂದಿರೆಲ್ಲರೂ ಸತ್ತು ಮಲಗಿದ್ದಾರೆ! ಅದನ್ನು ಕಂಡು ಅವನು ಕಣ್ಣಿನಲ್ಲಿ ನೀರು ತಂದುಕೊಂಡು ಉದ್ದವಾಗಿ ನಿಟ್ಟುಸಿರು ಬಿಟ್ಟು, 'ಇವರು ಏನು ಕಾರಣದಿಂದ ಸತ್ತಿರಬಹುದು? ಒಬ್ಬರ ಮೇಲೆ ಒಂದು ಆಯುಧದ ಏಟಿಲ್ಲ; ಇಲ್ಲಿ ಮತ್ತೊಬ್ಬರ ಹೆಜ್ಜೆಯ ಗುರುತಿಲ್ಲ; ಯಾವುದೋ ದೊಡ್ಡ ಭೂತವು ಇವರೆಲ್ಲರನ್ನೂ ಕೊಂದಿರಬೇಕು. ಇರಲಿ, ನೀರನ್ನು ಕುಡಿದು ಆ ಮೇಲೆ ಯೋಚಿಸುತ್ತೇನೆ. ಇದೂ ಒಂದು ದುರ್ಯೋಧನನ ಅಥವಾ ಶಕುನಿಯ ತಂತ್ರವಾಗಿದ್ದೀತೇ? ಅಥವಾ ಅವರ ಕಡೆಯ ಗೂಢಚಾರರು ಯಾರಾದರೂ ಈ ಕೆಲಸವನ್ನು ಮಾಡಿದ್ದಾರೋ? ಯಾರಾದರೂ ಈ ಸರೋವರಕ್ಕೆ ವಿಷ ಹಾಕಿದ್ದಾರಾದೀತೇ? ಇವರ ಪ್ರಸನ್ನವಾದ ಮುಖಗಳನ್ನು ನೋಡಿದರೆ ವಿಷದಿಂದ ಸತ್ತ ಹಾಗೆ ಕಾಣುವುದಿಲ್ಲ. ಯಮನಲ್ಲದೆ ಮತ್ತಾವನು ಅವರನ್ನು ಕೊಲ್ಲಬಲ್ಲನು?' ಎಂದು ಯೋಚನೆ ಮಾಡುತ್ತ ನೀರಿನೊಳಕ್ಕೆ ಇಳಿಯಲು, ಅಂತರಿಕ್ಷದಿಂದ "ನಾನು ಇಲ್ಲಿಯ ಮೀನನ್ನು ತಿಂದು ಜೀವಿಸಿಕೊಂಡಿರುವ ಒಂದು ಬಕ. ನಿನ್ನ ತಮ್ಮಂದಿರನ್ನು ಸಾಯಿಸಿದವನು ನಾನು. ನನ್ನ ಪ್ರಶ್ನೆಗಳಿಗೆ ಉತ್ತರ

ಕೊಡದೆ ಅಲಕ್ಷ್ಯ ಮಾಡಿದರೆ ಅವರ ಜೊತೆಗೆ ನೀನು ಐಪಸಿಸುವನಾಗುವಿ. ಸಾಹಸ ಮಾಡಬೇಡಪ್ಪ ! ಈ ಕೊಳ ನನ್ನದು ; ಪ್ರಶ್ನೆಗಳಿಗೆ ಉತ್ತರ ಹೇಳಿ ಆ ಮೇಲೆ ನೀರನ್ನು ಕುಡಿ, ತೆಗೆದುಕೊಂಡು ಹೋಗು " ಎಂದು ಅಶರೀರವಾಣಿ ಕೇಳಿಸಿತು. ಯುಧಿಷ್ಠಿರನು " ಅಯ್ಯಾ, ನೀನು ಯಾರು ? ಇದು ಪಕ್ಷಿ ಮಾಡುವ ಕೆಲಸವಲ್ಲ; ನೀನು ರುದ್ರರು ವಸುಗಳು ಮರುತರು ಇವರಲ್ಲಿ ಯಾವನೋ ಪ್ರಧಾನ ವಾದ ದೇವತೆಯಾಗಿರಬೇಕು. ಇಲ್ಲದಿದ್ದರೆ ಈ ಹಿಮವಂತ ಪಾರಿಯಾತ್ರ ವಿಂಧ್ಯ ಮಲಯ ಪರ್ವತಗಳನ್ನು ಉರುಳಿಸುವುದಕ್ಕೆ ಆಗುತ್ತಿರಲಿಲ್ಲ. ನೀನು ಮಾಡಿರುವ ಕೆಲಸ ದೇವ ದಾನವ ಗಂಧರ್ವ ರಾಕ್ಷಸರಿಂದಲೂ ಆಗದಂಥ ಅದ್ಭುತವಾದ ಕಾರ್ಯ. ಇದರಲ್ಲಿ ನಿನ್ನ ಉದ್ದೇಶವೇನೋ ತಿಳಿಯದು. ನನಗೆ ತುಂಬ ಕುತೂಹಲವೂ ಹೆದ ರಿಕೆಯೂ ಉಂಟಾಗಿದೆ. ಮನಸ್ಸಿಗೆ ಕಳವಳ ಉಂಟಾಗಿ ತಲೆ ಕುದಿಯುತ್ತಿದೆ. ಸ್ವಾಮೀ, ನೀನು ಯಾರು ? " ಎಂದು ಕೇಳಿದನು. ಅದಕ್ಕೆ " ನಾನು ಯಕ್ಷ ; ನೀರ ಹಕ್ಕಿಯಲ್ಲ ; ನಿನ್ನ ತಮ್ಮಂದಿರನ್ನು ಕೊಂದವನು ನಾನು ! " ಎಂದು ಉತ್ತರ ಬಂತು. ಅನಂತರ ತಾಳೆಯ ಮರದಂತೆ ಭೂತಾಕಾರವಾಗಿ, ವಿಕಾರವಾದ ಕಣ್ಣುಗಳನ್ನು ಬಿಟ್ಟುಕೊಂಡು ಸೂರ್ಯಾಗ್ನಿಗಳಂತೆ ಹೊಳೆಯುತ್ತ ಆ ಯಕ್ಷನು ಸರೋವರದ ತೀರದಲ್ಲಿ ಕಾಣಿಸಿಕೊಂಡು, " ಮಹಾರಾಜ ! ನಿನ್ನ ಈ ತಮ್ಮಂದಿರು ಹೇಳ ಹೇಳ ವೆಂದರೂ ಕೇಳದೆ ನಿರ್ಬಂಧವಾಗಿ ನೀರನ್ನು ತೆಗೆದುಕೊಳ್ಳಲು ಹೋದರು ; ನಾನು ಅವರನ್ನು ಕೊಂದೆ. ಜೀವದ ಮೇಲೆ ಆಸೆಯಿರುವವರು ಇಲ್ಲಿ ನೀರನ್ನು ಕುಡಿಯ ಕೂಡದು. ಆದ್ದರಿಂದ ಸಾಹಸ ಮಾಡಬೇಡ ; ಇದು ನನ್ನದು; ಪ್ರಶ್ನೆಗಳಿಗೆ ಉತ್ತರ ಹೇಳಿ ಆ ಮೇಲೆ ನೀರನ್ನು ಕುಡಿದು ತೆಗೆದುಕೊಂಡು ಹೋಗು " ಎಂದು ಮೇಘ ಗುಡುಗಿದಂತೆ ಗಂಭೀರವಾದ ಧ್ವನಿಯಲ್ಲಿ ಹೇಳಿದನು.

ಯುಧಿಷ್ಠಿರ— ಅಯ್ಯಾ ಯಕ್ಷ ! ನಾನು ನಿನ್ನ ಪದಾರ್ಥವನ್ನು ಬಯಸು ವದಿಲ್ಲ; ಅದು ಸಜ್ಜನರು ಮೆಚ್ಚುವ ಕೆಲಸವಲ್ಲ; ನನ್ನನ್ನು ನಾನೇ ಹೊಗಳಿಕೊಳ್ಳ ಬಾರದು; ಆದ್ದರಿಂದ ನನ್ನ ಬುದ್ಧಿಗೆ ತಿಳಿದಂತೆ ಉತ್ತರ ಹೇಳುತ್ತೇನೆ; ನಿನ್ನ ಪ್ರಶ್ನೆ ಏನು ಕೇಳು.

ಯಕ್ಷ-- ಸೂರ್ಯನು ಮೇಲಕ್ಕೆ ಉದಯಿಸಿ ಬರುವಂತೆ ಮಾಡುವವರು ಯಾರು ? ಅವನ ಸುತ್ತ ಚರಿಸುವವರು ಯಾರು ? ಅವನು ಅಸ್ತನಾಗುವಂತೆ ಮಾಡುವವರು ಯಾರು ? ಅವನ ನೆಲೆಯೆಲ್ಲಿ ?

ಯುಧಿಷ್ಠಿರ— ಬ್ರಹ್ಮನು ಸೂರ್ಯನನ್ನು ಉದಯಿಸಿ ಮೇಲೆ ಬರುವಂತೆ ಮಾಡುವನು. ಅವನ ಸುತ್ತ ಚರಿಸುವವರು ದೇವತೆಗಳು; ಧರ್ಮವು ಅವನನ್ನು ಅಸ್ತನಾಗುವಂತೆ ಮಾಡುತ್ತದೆ. ಸತ್ಯವು ಅವನ ನೆಲೆ.

ಯಕ್ಷ— ಶ್ರೋತ್ರಿಯನಾಗುವುದು ಏತರಿಂದ ? ಮಹತ್ತನ್ನು ತಿಳಿಯು ವುದು ಹೇಗೆ ? ಸಹಾಯವಾವುದು ? ಬುದ್ಧಿವಂತನಾಗುವುದು ಹೇಗೆ ?

ಯುಧಿಷ್ಠಿರ— ಶ್ರುತಿಯ ಅಧ್ಯಯನದಿಂದ ಶ್ರೋತ್ರಿಯನಾಗುತ್ತಾನೆ; ತಪಸ್ಸಿನಿಂದ ಮಹತ್ತು ತಿಳಿಯುತ್ತದೆ. ಧೈರ್ಯವೇ ಸಹಾಯ; ಹಿರಿಯರ ಸೇವೆ ಮಾಡುವುದರಿಂದ ಬುದ್ಧಿವಂತನಾಗಬಹುದು.

ಯಕ್ಷ— ಬ್ರಾಹ್ಮಣರಿಗೆ ದೇವತನ ಏತರಿಂದ? ಅವರನ್ನು ಉತ್ತಮರಾಗಿಸುವ ಧರ್ಮ ಯಾವುದು? ಮನುಷ್ಯತ್ವ ಏತರಿಂದ? ಅವರು ಕೆಟ್ಟವರಾಗುವುದು ಏತರಿಂದ?

ಯುಧಿಷ್ಠಿರ— ಬ್ರಾಹ್ಮಣರಿಗೆ ದೇವತನ ಅಧ್ಯಯನದಿಂದ; ಅವರನ್ನು ಉತ್ತಮರಾಗಿಸುವ ಧರ್ಮ, ತಪಸ್ಸು. ಮರಣದಿಂದಲೇ ಮನುಷ್ಯತ್ವ; ಕೆಟ್ಟವರಾಗುವುದು ದೂಷಣೆಯಿಂದ.

ಯಕ್ಷ—ಕ್ಷತ್ರಿಯರಿಗೆ ದೇವತನ ಏತರಿಂದ? ಅವರನ್ನು ಉತ್ತಮರಾಗಿಸುವ ಧರ್ಮ ಯಾವುದು? ಮನುಷ್ಯತ್ವ ಏತರಿಂದ? ಅವರು ಕೆಟ್ಟವರಾಗುವದು ಏತರಿಂದ?

ಯುಧಿಷ್ಠಿರ— ಕ್ಷತ್ರಿಯರಿಗೆ ದೇವತನ ಶಸ್ತ್ರಾಸ್ತ್ರಗಳಿಂದ; ಅವರನ್ನು ಉತ್ತಮರಾಗಿಸುವ ಧರ್ಮ, ಯಜ್ಞ; ಭಯದಿಂದಲೇ ಮನುಷ್ಯತ್ವ; ಅವರು ಕೆಟ್ಟವರಾಗುವುದು ಮರೆ ಹೊಕ್ಕವರನ್ನು ಕೈಬಿಡುವದರಿಂದ.

ಯಕ್ಷ— ಭೂಮಿಗಿಂತ ದೊಡ್ಡ ವಸ್ತು ಯಾವುದು? ಅಂತರಿಕ್ಷಕ್ಕಿಂತ ಎತ್ತರವಾದದ್ದು ಯಾವುದು? ಗಾಳಿಗಿಂತ ವೇಗವಾದದ್ದು ಯಾವುದು? ಮನುಷ್ಯರಿಗೆ ಬಹಳವಾಗಿರುವದು ಯಾವುದು?

ಯುಧಿಷ್ಠಿರ— ಭೂಮಿಗಿಂತ ದೊಡ್ಡ ವಸ್ತು ತಾಯಿ; ಅಂತರಿಕ್ಷಕ್ಕಿಂತ ಎತ್ತರವಾದ ವಸ್ತು ತಂದೆ; ಗಾಳಿಗಿಂತ ವೇಗವಾದದ್ದು ಮನಸ್ಸು; ಮನುಷ್ಯರಿಗೆ ಬಹಳವಾಗಿರುವುದು ಚಿಂತೆ.

ಯಕ್ಷ— ಧರ್ಮವು ಮುಖ್ಯವಾಗಿ ಇರುವದು ಎಲ್ಲಿ? ಯಶಸ್ಸು ಮುಖ್ಯವಾಗಿ ಇರುವುದು ಎಲ್ಲಿ? ಸ್ವರ್ಗ ಮುಖ್ಯವಾಗಿ ಇರುವುದು ಎಲ್ಲಿ? ಸುಖ ಮುಖ್ಯವಾಗಿ ಇರುವುದು ಎಲ್ಲಿ?

ಯುಧಿಷ್ಠಿರ— ಧರ್ಮವು ಮುಖ್ಯವಾಗಿ ಇರುವುದು ದಕ್ಷತೆಯಲ್ಲಿ; ಯಶಸ್ಸು ಮುಖ್ಯವಾಗಿ ಇರುವುದು ದಾನದಲ್ಲಿ; ಸ್ವರ್ಗ ಮುಖ್ಯವಾಗಿ ಇರುವುದು ಸತ್ಯದಲ್ಲಿ; ಸುಖವು ಮುಖ್ಯವಾಗಿ ಇರುವುದು ಶೀಲದಲ್ಲಿ.

ಯಕ್ಷ – ಧನಕ್ಕೆ ಸಾಧನವಾದವುಗಳಲ್ಲಿ ಉತ್ತಮವಾದದ್ದು ಯಾವುದು? ಧನಗಳಲ್ಲಿ ಉತ್ತಮವಾದದ್ದು ಯಾವುದು? ಲಾಭಗಳಲ್ಲಿ ಉತ್ತಮವಾದದ್ದು ಯಾವುದು? ಸುಖಗಳಲ್ಲಿ ಉತ್ತಮವಾದದ್ದು ಯಾವುದು?

ಯುಧಿಷ್ಠಿರ— ದಕ್ಷತೆಯು ಧನಸಾಧನಗಳಲ್ಲೆಲ್ಲಾ ಉತ್ತಮ; ವಿದ್ಯಾಧನವು ಧನಗಳಲ್ಲೆಲ್ಲಾ ಉತ್ತಮ; ಆರೋಗ್ಯ ಲಾಭವು ಲಾಭಗಳಲ್ಲೆಲ್ಲಾ ಉತ್ತಮ; ತೃಪ್ತಿಯು ಸುಖಗಳಲ್ಲೆಲ್ಲಾ ಉತ್ತಮ.

ಯಕ್ಷ— ಯಾವುದನ್ನು ಬಿಟ್ಟರೆ ಪ್ರಿಯನಾಗುತ್ತಾನೆ? ಯಾವುದನ್ನು ಬಿಟ್ಟರೆ ದುಃಖವಾಗುವುದಿಲ್ಲ ? ಯಾವುದನ್ನು ಬಿಟ್ಟರೆ ಧನವಂತನಾಗುತ್ತಾನೆ ? ಯಾವುದನ್ನು ಬಿಟ್ಟರೆ ಸುಖಿಯಾಗುತ್ತಾನೆ ?

ಯುಧಿಷ್ಠಿರ— ಗರ್ವವನ್ನು ಬಿಟ್ಟರೆ ಪ್ರಿಯನಾಗುತ್ತಾನೆ; ಕ್ರೋಧವನ್ನು ಬಿಟ್ಟರೆ ದುಃಖವಾಗುವದಿಲ್ಲ; ಕಾಮವನ್ನು ಬಿಟ್ಟರೆ ಧನವಂತನಾಗುತ್ತಾನೆ; ಲೋಭವನ್ನು ಬಿಟ್ಟರೆ ಸುಖಿಯಾಗುತ್ತಾನೆ.

ಯಕ್ಷ— ಸರಿ; ಈಗ ನಿನ್ನ ತಮ್ಮಂದಿರಲ್ಲಿ ಯಾರು ಬದುಕಲಿ ?

ಯುಧಿಷ್ಠಿರ— ಯಕ್ಷ ! ನಕುಲನು ಬದುಕಲಿ.

ಯಕ್ಷ— ಭೀಮಸೇನನು ನಿನಗೆ ತುಂಬ ಪ್ರೀತಿಪಾತ್ರ; ಅರ್ಜುನನು ನಿಮೆಲ್ಲರಿಗೂ ದಿಕ್ಕು; ಹೀಗಿದ್ದರೂ ನಿನ್ನ ಮಲತಾಯಿಯ ಮಗನಾದ ನಕುಲನು ಬದುಕಲಿ ಎಂದು ಏಕೆ ಕೇಳುತ್ತೀಯೋ ?

ಯುಧಿಷ್ಠಿರ— ಆನೃಶಂಸ್ಯವೇ (ದಯಾಶೀಲತೆಯೇ) ಪರಮಧರ್ಮ, ಪರಮಾರ್ಥ, ಎಂದು ನಾನು ತಿಳಿದುಕೊಂಡಿದ್ದೇನೆ. ಆ ಆನೃಶಂಸ್ಯವನ್ನು ಕಾರ್ಯದಲ್ಲಿ ಅನುಷ್ಠಿಸಲು ಇಚ್ಛಿಸುತ್ತೇನೆ. ಆದ್ದರಿಂದ ನಕುಲನು ಬದುಕಲಿ ಎಂದು ಕೇಳುತ್ತಿದ್ದೇನೆ; ನನ್ನನ್ನು ಧರ್ಮಶೀಲನಾದ ರಾಜನೆಂದು ಜನರು ತಿಳಿದುಕೊಂಡಿದ್ದಾರೆ; ನನಗೆ ನನ್ನ ಧರ್ಮದಿಂದ ಕದಲಲು ಇಷ್ಟವಿಲ್ಲ; ಆದ್ದರಿಂದ ನಕುಲನು ಬದುಕಲಿ ಎಂದು ಕೇಳುತ್ತಿದ್ದೇನೆ; ನನಗೆ ಕುಂತಿ ಹೇಗೋ ಮಾದ್ರಿಯೂ ಹಾಗೆಯೇ; ಅವರವರಿಗೆ ಭೇದವಿಲ್ಲ; ಅವರಿಬ್ಬರನ್ನೂ ಸಮನಾಗಿ ಕಾಣಬೇಕೆಂಬುದು ನನ್ನ ಇಷ್ಟ; ಆದ್ದರಿಂದ ನಕುಲನು ಬದುಕಲಿ ಎಂದು ಕೇಳುತ್ತಿದ್ದೇನೆ, ಯಕ್ಷ !

ಯಕ್ಷ— ನಿನಗೆ ಅರ್ಥಕ್ಕಿಂತಲೂ ಕಾಮಕ್ಕಿಂತಲೂ ಆನೃಶಂಸ್ಯವೇ ದೊಡ್ಡದಾಯಿತು. ಆದ್ದರಿಂದ, ಎಲೈ ಭರತಶ್ರೇಷ್ಠ ! ನಿನ್ನ ತಮ್ಮಂದಿರೆಲ್ಲರೂ ಬದುಕಿಕೊಳ್ಳಲಿ !

ಕೂಡಲೆ, ಸತ್ತು ಮಲಗಿದ್ದ ಪಾಂಡವರೆಲ್ಲರೂ ಎದ್ದರು. ಅವರ ಹಸಿವು ನೀರಡಿಕೆಗಳೆಲ್ಲಾ ಒಂದು ಕ್ಷಣದಲ್ಲಿ ಮಾಯವಾದುವು. ಯುಧಿಷ್ಠಿರನು ಆ ಸರೋವರದಲ್ಲಿ ಒಂದು ಕಾಲಿನ ಮೇಲೆ ನಿಂತಿದ್ದ ಆ ವ್ಯಕ್ತಿಯನ್ನು ನೋಡಿ, “ದೇವ ! ನೀನು ಯಕ್ಷನೆಂದು ನನಗೆ ತೋರುವುದಿಲ್ಲ ; ವಸುಗಳಲ್ಲೋ, ರುದ್ರರಲ್ಲಿಯೋ, ಮರುತ್ತರಲ್ಲಿಯೋ, ಒಬ್ಬನಾಗಿರಬೇಕು ; ಅಥವಾ ವಜ್ರಾಯುಧಧಾರಿಯಾದ ದೇವೇಂದ್ರನೇ ಆಗಿರಬೇಕು. ಇಲ್ಲದಿದ್ದರೆ ಸತ್ತು ಬಿದ್ದವರು ಹೀಗೆ ನಿದ್ರೆ ತಿಳಿದು ಎಚ್ಚತ್ತವರಂತೆ ಏಳುವುದೆಂದರೇನು !” ಎಂದು ಕೇಳಿದನು. ಯಕ್ಷನು “ಅಯ್ಯಾ ಭರತ ಶ್ರೇಷ್ಠ, ನಾನು ನಿನ್ನ ತಂದೆಯಾದ ಧರ್ಮ ; ನಿನ್ನನ್ನು ನೋಡಿಕೊಂಡು ಹೋಗೋಣವೆಂದು ಬಂದೆ. ಯಶಸ್ಸು ಸತ್ಯ ದಮ ಶೌಚ ಋಜುತ್ವ ನಾಚಿಕೆ ಚಾಪಲ್ಯವಿಲ್ಲದಿರುವಿಕೆ ದಾನ ತಪಸ್ಸು ಬ್ರಹ್ಮಚರ್ಯ

ಇವು ನನ್ನ ದೇಹ; ಅಹಿಂಸೆ ಸಮತೆ ಶಾಂತಿ ತಪಸ್ಸು ಶೌಚ ಅಸೂಯೆಯಿಲ್ಲದಿರುವುದು ಇವು ನನ್ನನ್ನು ಕಾಣುವ ಮಾರ್ಗಗಳು. ನಿನ್ನ ಆನೃಶಂಸ್ಯವನ್ನು ನೋಡಿ ನನಗೆ ಸಂತೋಷವಾಗಿದೆ. ನಿನಗೆ ಏನು ಬೇಕು ಕೇಳು" ಎಂದನು. ಯುಧಿಷ್ಠಿರನು ಅರಣಿಯ ಜೊತೆಯನ್ನು ಕೇಳಿದನು. ಧರ್ಮನು ತಾನೇ ಮೃಗವಾಗಿ ಅದನ್ನು ಎತ್ತಿಕೊಂಡು ಹೋಗಿದ್ದೆನೆಂದು ಹೇಳಿ ಅದನ್ನು ಹಿಂದಕ್ಕೆ ಕೊಟ್ಟನು. ಹನ್ನೆರಡು ವರ್ಷ ವನವಾಸ ಆಗ ತಾನೇ ಮುಗಿದಿದ್ದು ಮುಂದೆ ತಾವು ಅಜ್ಞಾತವಾಸ ಮಾಡಬೇಕಾಗಿದ್ದದ್ದರಿಂದ ಆ ಕಾಲದಲ್ಲಿ ತಮ್ಮನ್ನು ಯಾರೂ ಗುರುತಿಸದಿರಲೆಂದು ಇನ್ನೊಂದು ವರವನ್ನು ಕೇಳಿದನು. ಅವಕ್ಕೆ ಆಗಲೆಂದು ಹೇಳಿ ಧರ್ಮನು, "ನೀವು ನಿಮ್ಮ ನಿಮ್ಮ ನಿಜರೂಪದಲ್ಲಿಯೇ ಇದ್ದರೂ ಯಾರೂ ನಿಮ್ಮನ್ನು ಗುರುತಿಸುವದಿಲ್ಲ. ನಿಮಗೆ ಇಷ್ಟ ಬಂದ ವೇಷವನ್ನು ನೀವು ಧರಿಸಬಹುದು. ಇದರ ಜೊತೆಗೆ ಮೂರನೆಯದಾಗಿ ಇನ್ನೊಂದು ವರವನ್ನೂ ಕೇಳು, ಕೊಡುತ್ತೇನೆ" ಎಂದನು. ಯುಧಿಷ್ಠಿರನು "ದೇವ ದೇವ, ನಾನು ಲೋಭಮೋಹಗಳನ್ನೂ ಕ್ರೋಧವನ್ನೂ ಜಯಿಸುವಂತಾಗಲಿ! ದಾನ ತಪಸ್ಸು ಸತ್ಯ ಇವುಗಳಲ್ಲಿ ನನ್ನ ಮನಸ್ಸು ಯಾವಾಗಲೂ ನೆಲೆಸಿರಲಿ!" ಎಂದು ಕೋರಿದನು. ಧರ್ಮನು "ಯುಧಿಷ್ಠಿರ! ಸ್ವಭಾವದಿಂದಲೇ ಈ ಗುಣಗಳೆಲ್ಲವೂ ನಿನ್ನಲ್ಲಿವೆ! ನೀನು ಧರ್ಮವೇ ಆಯೆ! ನಿನ್ನ ಇಷ್ಟದಂತೆ ಆಗಲಿ!" ಎಂದು ಅಂತರ್ಧಾನವಾದನು. ಅನಂತರ ಎಲ್ಲರೂ ಆಶ್ರಮಕ್ಕೆ ಬಂದರು; ಬ್ರಾಹ್ಮಣನ ಅರಣಿ ಅವನಿಗೆ ದೊರೆತಿತು.

(ವಚನಭಾರತ)

— ಎ. ಆರ್. ಕೃಷ್ಣಶಾಸ್ತ್ರಿ

೧೦. ಮೈಸೂರು ರುಮಾಲು

ಹೊಗಸಿನ ಮನಸ್ಸನ್ನೆಳೆಯಬಹುದು; ನೀರಿನಲ್ಲಿರುವ ಮೀನಿನ ಕಾಲನ್ನು ಕಾಣಬಹುದು; ಅದೃಷ್ಟದಲ್ಲಿ ಏನು ಬರೆದಿದೆಯೆಂದು ಗುಣಿಸಬಹುದು; ಮೃತ್ಯುವಿನ ಬಸಿರನ್ನೇ ಬಗಿದು ಬದುಕಿ ಹೊರಕ್ಕೇ ಬರಬಹುದು. ಆದರೆ ರುಮಾಲನ್ನು ಕೆಡಿಸದೆ ಯಾವಾಗಲೂ ಸರಿಯಾಗಿಯೇ ಕಟ್ಟುತ್ತೇನೆನ್ನುವುದು ಒಂದು ಮಾತ್ರ ಅಸಾಧ್ಯ. ಹಾಗೆ ಕಟ್ಟುತ್ತೇನೆಂದು ಹೇಳಬಲ್ಲ ಗಂಡನ್ನು ನಾನು ಈವರೆಗೂ ನೋಡಿಲ್ಲ. ನಾನು ಎಷ್ಟೋ ಜನ ಹೊಗಸುಗಾರರನ್ನು ನೋಡಿದ್ದೇನೆ, ಕದೀಮರನ್ನು ಕಂಡಿದ್ದೇನೆ.

ಅವರ ರುಮಾಲು ಚೆನ್ನಾಗಿರುವಾಗ ಪ್ರಶಂಸೆ ಮಾಡಿದ್ದೇನೆ. ಅಳೆದು ಕಟ್ಟಿದಂತೆ, ಒಂದೇ ಸಮನಾಗಿ ರುಮಾಲು ಕಟ್ಟಬಲ್ಲ ಅವರ ಕೌಶಲವನ್ನು ಬಹುವಾಗಿ ಶ್ಲಾಘಿಸಿದ್ದೇನೆ. ಅಂಥಾ ಶಕ್ತಿಯನ್ನು ನನಗೂ ಕೊಡಬಾರದೆ, ದೇವರೇ ? ಏನು ಈ ಪಕ್ಷಪಾತ, ಎಂದು ನೊರೆಯಿಟ್ಟಿದ್ದೇನೆ. ಅಂಥವರೂ ಎಷ್ಟೋ ಬಾರಿ 'ಗಸ್ತು' ತಿನ್ನುವರಂತೆ ! ಮುಗಿವವರೆಗೂ ಅದು ಸರಿಯಾಗುತ್ತದೆಂದು ಖಂಡಿತವಾಗಿ ಹೇಳಿ ಪಂದ್ಯ ಹಾಕಿ ಗೆಲ್ಲಬಲ್ಲವನು ಈ ಹೊತ್ತಿನವರೆಗೂ ಹುಟ್ಟಿಲಿಲ್ಲ; ಇನ್ನು ಮುಂದೆಯೂ ಹುಟ್ಟಬಾರದೆಂದು ದೇವರ ಇಚ್ಛೆ. ನಮ್ಮ ರುಮಾಲಿನ ಮಹತ್ವದ ಮುಖ್ಯ ಲಕ್ಷಣ ಅದಕ್ಕೆ ಮನಸ್ಸು ಬರಬೇಕು. ಅದು ಸರಿಹೋಗಬೇಕು. ಅದನ್ನು ನಾವು ಅನುಸರಿಸಬೇಕೇ ಹೊರತು ಜೋರು ಮಾಡಿದರೆ ಏನೇನೂ ನಡೆಯುವದಿಲ್ಲ. ಪೌರುಷದ ಪ್ರಯೋಗವು ಪ್ರಯೋಜನಕಾರಿಯಾಗುವದಿಲ್ಲ.

ನಾನು ಆಡುತ್ತಿರುವುದು ಮೈಸೂರು ರುಮಾಲಿನ ಮಾತು. ಆಮೇಲೆ ಸುಳ್ಳು ಹೇಳಿದನೆಂದು ವಾದಿಸೀರಿ. ಧಾರವಾಡದ್ದಾದರೆ ಕಟ್ಟಬಹುದು. ಪಂಜಾಬಿನದಾದರೆ ಕಟ್ಟಬಹುದು. ಕೊನೆಗೆ ಗುಜರಾತಿ ಮಾರವಾಡಿ ರುಮಾಲುಗಳನ್ನಾದರೂ ಕಟ್ಟಬಹುದು. ಮದ್ರಾಸಿನವರು ಈ ಲೆಕ್ಕಕ್ಕೆ ಬರುವುದಿಲ್ಲವಲ್ಲ ! ಹುಟ್ಟಿದವರು ಹುಟ್ಟಿದ ಹಾಗೆಯೇ ಇದ್ದು ಹೋಗುವ ಮಹಾನುಭಾವರು ಅವರು. ಮೈಮುಚ್ಚುವ ಅಗತ್ಯವೇ ಇಲ್ಲದಂತೆ ದೇವರು ಅವರಿಗೆ ಅನುಕೂಲಪಡಿಸಿಕೊಟ್ಟಿದ್ದಾನೆ. ಅಂಥ ಮುಕ್ತರ ಮಾತು ನಮಗೇಕೆ ? ಮಿಕ್ಕ ಪ್ರಾಂತಗಳವರ ರುಮಾಲುಗಳು ಚೆನ್ನಾಗಿ ಕೈಗೆ ಹಬ್ಬುತ್ತವೆ. ಹೇಗೆ ಸುತ್ತಿದರೂ ಸರಿಬರುತ್ತವೆ. ಸರಿ ಬರಲೇಬೇಕು. ಅವಕ್ಕೆ ನಿಯಮವಿಲ್ಲ. ಕಟ್ಟಲು ಹೆಚ್ಚಿನ ಕಷ್ಟವಿಲ್ಲ. ವಕ್ರವಾಗಿದ್ದಷ್ಟೂ ವಿಶೇಷ. ಆದರೆ ಮೈಸೂರು ರುಮಾಲೊ ? ಎಲ್ಲಿಂದೆಲ್ಲಿಗೆ ಹೋಲಿಕೆ ? ಬದುಕಿದರೆ ಬಂತೆ ಭಾಗ್ಯ ? . . . . ಸುಮ್ಮನೆ ನಮ್ಮನ್ನು ಸೊಗಸುಗಾರರು, ಬಯಲು ಡಂಬದವರು ಎಂದು ತಿಳಿದವರು ಆಕ್ಷೇಪಣೆ ಮಾಡುತ್ತಾರೆ : ಒರಟು ಜನ, ಗುಣಾವಗುಣ ವಿವೇಚನೆ ಮಾಡತಕ್ಕ ಶಕ್ತಿಯಿಲ್ಲದವರು. ಈ ಸುಖ, ಈ ನಯ, ಈ ಸುಖದ ಈ ನಯ, ಈ ನಯದ ಈ ಸುಖ, ಇವು ಅನುಭವಿಸಿದವರಿಗೆ ಮಾತ್ರ ಗೊತ್ತು. ಇತರರಿಗೆ ಹೇಗೆ ಗೊತ್ತಾದೀತು ? ಈ ಹೊರಜಂಬವನ್ನೇ ಆಗಲಿ ಎಷ್ಟು ಜನ ಹೀಗೆ ಮನೋಹರವಾಗಿ ಮಾಡಿಯಾರು ? ಎಲ್ಲರಿಗೂ ಸಾಧ್ಯವೋ ? ಮಾಡುತ್ತಿರುವ ನಮಗೆ, ಮಾಡಲು ಪ್ರಯತ್ನ ಪಟ್ಟು, ಕೈಲಿ ಹರಿಯದೆ ಬಿಟ್ಟುಬಿಟ್ಟಿರುವವರಿಗೆ ಈ ಇಬ್ಬರಿಗೆ ಮಾತ್ರ ಅದರ ಕಷ್ಟಸುಖಗಳು ಗೊತ್ತು. ನಮ್ಮವರು ರಂಗಕ್ಕಿಳಿದರೆ ಎದುರು ನಿಲ್ಲುವ ಧೀರನು ಯಾರು ? ಮೈಸೂರು ನಯ, ನಾಜೋಕು, ವಿತರಣೆ, ಐಟಕ್ಕು—ಇವು ಸುಮ್ಮನೆ ಬಂದಾವೆ ? ದೇವರಲ್ಲಿ ವರವನ್ನು ಪಡೆದು ಇಲ್ಲಿ ಹುಟ್ಟಿ ಅವುಗಳನ್ನು ಅನುಭವಿಸಬೇಕು. ಈ ಜನ್ಮದಲ್ಲಿ ಅವು ದೊರೆಯದಿದ್ದರೆ ಮುಂದಿನ ಜನ್ಮಕ್ಕಾದರೂ ದೊರೆಯಲೆಂದು ಹಗಲೂ ರಾತ್ರಿಯೂ ತಪಸ್ಸು ಮಾಡಬೇಕು.

ಮೈಸೂರು ರುಮಾಲಿನ ವಿಶೇಷವೇನು, ಎನ್ನುವಿರೋ? ಅದು ಎಂಥವರಿಗಾದರೂ ದಾಕ್ಷಿಣ್ಯವಿಲ್ಲದೆ 'ಗಸ್ತು' ಕೊಡುವುದು. ಅದರ ವಿಷಯವಾಗಿ ಉದಾಸೀನ ತೋರಿಸಿದರೂ ಸರಿಯೆ, ಧೋರಣೆ ಮಾಡಿದರೂ ಸರಿಯೆ. ಹಾಗೆ ಮಾಡುವವರು ಖಂಡಿತ ಬೇಸ್ತು ಬೀಳುತ್ತಾರೆ. ಆದುದರಿಂದ ಅದನ್ನು ತಾತ್ಸಾರ ಮಾಡಬೇಡಿ. ನೀವು ಆಲಸ್ಯ ತೋರಿಸಿದರೆ ನೀವು ಬೇಹುಷಾರಾಗಿರುವ ಸಮಯ ಕಾದುಕೊಂಡು ಇದ್ದು ಹೆಲ್ಲಿಗೆ ಜಾರಿಬಿಟ್ಟು ನಿಮಗೆ ಕೆಲಸ ಕೊಡುತ್ತದೆ. ಅದು ಮಾಡಬಲ್ಲ ಅವಮಾನ ಸಾಧಾರಣವಾದುದಲ್ಲ. ನೀವು ಸ್ಕೂಲು ಮೇಷ್ಟರಾಗಿದ್ದರಂತೂ ನಿಮ್ಮ ಪಾಡು ನಾಯಿ ಪಾಡು. ಎಲ್ಲರ ಅನುಭವದ ಮಾತನ್ನೇ ನಾನು ಹೇಳುತ್ತಿರುವುದು. ಯಾರನ್ನು ಬೇಕಾದರೂ ಕೇಳಿಕೊಳ್ಳಿರಿ, ನಾನು ಹೇಳುವುದು ನಿಜವೋ ಸುಳ್ಳೋ ಗೊತ್ತಾಗುವುದು. ಅದರ ಅಂದವು ಇನ್ನೊಂದು ಮುಖ್ಯ ವಿಶೇಷ. ಬೇರೆ ಯಾವ ರುಮಾಲು, ತೂಕ, ಬಣ್ಣ, ಗಾತ್ರ, ನಯಗಳಲ್ಲಿ ಇದಕ್ಕೆ ಜೋಡಿಲ್ಲ. ಎಷ್ಟು ಕಮ್ಮಿಯೆಂದರೂ ೧೦–೧೨ ರೂಪಾಯಿಗಳಿಗೆ ಕಡಿಮೆಯ ಬೆಲೆಗೆ ದೊರಕದಿರುವುದು ಎರಡನೆಯ ವಿಶೇಷ. ಕೋರು ರುಮಾಲು ಬೇಕಾದರೆ ಖರ್ಚು ಮಾಡಬೇಕು. ಅದೇನು ಪೋಸ್ಟಾಫೀಸು ಹೆಂಡು ರುಮಾಲು ಕೆಟ್ಟು ಹೋಯಿತೆ? ಒಳ್ಳೆಯ ವಸ್ತುಗಳಿಗೆ ಯಾವಾಗಲೂ ಬೆಲೆ ಹೆಚ್ಚೇ. ಎಷ್ಟೇ ಚೆನ್ನಾಗಿ ಇಸ್ತ್ರಿ ಮಾಡಿದರೂ, ಮುರುಗು ಚೆನ್ನಾಗಿ ಬಾರದೆ ಹೋಗುವುದು. ಸರಿಗೆಯ ಬಣ್ಣ ಕಪ್ಪಾಗುವುದು, ಸರಿಗೆ ಮುದುರಿಕೊಳ್ಳುವುದು. ಅಗಸನಿಗೆ ಅಪಕೀರ್ತಿಯನ್ನೂ, ಯಜಮಾನನಿಗೆ ಅಸಮಾಧಾನವನ್ನೂ ತರುವುದು. ಆರ್ಚು ಆರ್ಚುಭಟ್ಟನೇ ಲೆಕ್ಕ ಹಾಕಲಿ. ಅಳತೆಯ ಸುತ್ತು ಹೆಚ್ಚುಕಡಿಮೆಯಾಗಿ ಆರು ಸಲ ಕಟ್ಟಿ, ನೂರು ಸಲ ಬಿಚ್ಚಿ, ಕಟ್ಟುತ್ತ ಬಿಚ್ಚುತ್ತ ಬೇಸರವಾಗುವುದು. ತಲೆಗೆ ಉರಿಬಂದು ಕಣ್ಣು ಮುಖವೂ ಕೆಂಪಾಗಿ ಮೈ ಬೆವರಿ, ಆವೇಶವೇರಿ, ಕೊನೆಗೆ ರುಮಾಲು ಕೆಳಗಾಗಿ ಅಂಬಾಗಿ ಕಾಲಿಂದ 'ಪ್ರೈ ಕಿಕ್' ಹೊಡೆದು ಬಿಡೋಣವೇ ಎನ್ನಿಸುವಷ್ಟು ರೋಷ ತರುವುದು—ಮೂರನೆಯ ವಿಶೇಷ. ಇವೆಲ್ಲಕ್ಕೂ ಮೀರಿ ಸಮಯ, ಸಂದರ್ಭ, ಉತ್ಸವ ಮುಂತಾದ ಕಾಲಗಳಲ್ಲೇ ಬೇಕೆಂದು ಕೆಟ್ಟು ಹೋಗುವುದು ಮಹಾ ವಿಶೇಷ. ನಾಲ್ಕು ಜನ ದೊಡ್ಡವರು ಸೇರುವ ಕಡೆ ಹೋಗಬೇಕು, ರೈಲಿಗೆ ಹೊತ್ತಾಯಿತು, ಕಛೇರಿಗೆ ಕಾಲ ಮೀರಿತು, ಸಾಹೇಬರನ್ನು ನೋಡಬೇಕು, ಫೋಟೋಗೆ ಕುಳಿತುಕೊಳ್ಳಬೇಕು, ದರ್ಬಾರಿಗೆ ದಯಮಾಡಿಸಬೇಕು, ಹಬ್ಬವೇನು – ಈ ಹೊತ್ತು ರುಮಾಲು ಬೇಗ ಕಟ್ಟಿಕೊಳ್ಳಬೇಕು, ಎಂದು ಯಾವಾಗ ಅಂದುಕೊಳ್ಳುವೆವೋ ಆಗಲೇ ಕೆಟ್ಟಿತು! ಹೀಗೆ ಅನಂತ ಗುಣ ವಿಶೇಷಗಳಿಂದ ವಿಶೇಷಿತವಾಗಿರುವ ಮಹಾ ವಸ್ತುವಿಗೆ ಇದೇ ವಿಶೇಷ, ಅದೇ ವಿಶೇಷವೆಂದು ಸುಲಭವಾಗಿ ಹೇಳಿ ಮುಗಿಸುವುದು ಹೇಗೆ? ಹಾಗಲ್ಲ ಹೀಗಲ್ಲ ಎಂದು ಶಂಕರಾಚಾರ್ಯರು ಪರಬ್ರಹ್ಮವಸ್ತುವಿಗೆ ಹೇಳಿದಂತೆ ನಮ್ಮ ರುಮಾಲಿಗೂ 'ನೇತಿ-ನೇತಿ' ಎಂದು ಹೇಳಿದರೆ ಏನಾದರು ನಿಜಕ್ಕೆ ಹತ್ತಿರ ಬರಬಹುದು. ಇದೇ ಪರಮವಿಶೇಷ.

ರುಮಾಲು ಎಂದ ಮಾತ್ರಕ್ಕೆ ಅದರೊಳಗೆ ಪೇಟಾ ಸೇರುವದಿಲ್ಲ ಎಂದುಕೊಳ್ಳಬೇಡಿ. ರುಮಾಲು, ಪೇಟಾ ಎರಡೂ ಒಂದೆ. ಏಕೆಂದರೆ, ಯಾವುದು ರುಮಾಲು, ಯಾವುದು ಪೇಟಾ ಎಂಬುದು ನನಗೆ ಗೊತ್ತಿಲ್ಲ. ಬಾಲಂಗೋಚಿಯ ಹಾಗೆ ಕತ್ತರಿಸುವುದು ಪೇಟವೊ ರುಮಾಲೊ ? ಕತ್ತರಿಸದೆ ಒಂದೇ ಕಡೆ ಜರಿಯಿರುವುದು ? ಇವೆರಡರಲ್ಲಿ ಒಂದಕ್ಕೆ ಈ ಹೆಸರು, ಒಂದಕ್ಕೆ ಆ ಹೆಸರು ಎಂದು ಮಾತ್ರ ಗೊತ್ತಿದೆ. ಎರಡರಿಂದಲೂ ಪ್ರಯೋಜನ ಒಂದೆ—ಮುದ್ದಾಗಿ ಮೈಸೂರಿನ ಜರ್ಬು ರುಮಾಲು ಕಟ್ಟಬಹುದು. ಇವು ಅವುಗಳಲ್ಲಿ ಭೇದವನ್ನೇಕೆ ಎಣಿಸಬೇಕು ? ಆದುದರಿಂದಲೇ ನಾನೂ ನಿತಾಂತವಾಗಿ ಇದು ಹೀಗೆ ಎಂದು ತಿಳಿಯ ದೃಢಪಡಿಸಿಕೊಳ್ಳಲು ಅಷ್ಟಾಗಿ ಪ್ರಯತ್ನಪಡಲಿಲ್ಲ. ಇತರರು ಒಂದೆರಡು ಸಲ ಅವುಗಳ ವ್ಯತ್ಯಾಸವನ್ನು ನನಗೆ ತಿಳಿಯ ಹೇಳಿದ್ದಾರೆ. ಆದರೇನು ? ಮುಖ್ಯವಾದ ವಿಷಯಗಳಾಗಿದ್ದರೆ ತಾನೇ ಮನಸ್ಸಿನಲ್ಲಿ ನಿಂತಾವು ? ಕ್ಷೇಮಕಾಲದಲ್ಲಿ ಇದು ರೂಪಾಯಿ, ಇದು ನೋಟು ಎಂದು ಜನರು ಹೇಗೆ ಭೇದವೆಣಿಸುವರೋ ಹಾಗೆಯೇ ತಿಳಿದವರು ಇದು ರುಮಾಲು, ಇದು ಪೇಟಾ ಎಂಬ ಭೇದವೆಣಿಸರು. ನಾನು ಎಣಿಸುವುದಿಲ್ಲ. ನೀವೂ ನನ್ನ ಹಾಗೆಯೇ ಮಾಡಿ.

ಮೈಸೂರಿನವರು ನಾವು ರಸಿಕರು. ಈ ವಿಚಾರವನ್ನು ಪ್ರಪಂಚವೇ ಬಲ್ಲುದೆಂದೂ ನಮಗೆ ಗೊತ್ತಿರುವುದು. ರಸಿಕತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಏನನ್ನು ಬೇಕಾದರೂ ಮಾಡಲು ಸಿದ್ಧರಾಗಿರುವೆವು. ಅದರಲ್ಲಿನ ಆಸಕ್ತಿಯಿಂದ ಬಡತನ ಬಂದೀತೆಂದು ಅಂಜೆವು. ಇತರರು ಹೇಳಿದಾರೆಂದು ಲೆಕ್ಕಿಸೆವು. ಕಾಯಿಲೆ ಬಿದ್ದೇವೆಂದು ಹೆದರೆವು. ಅದಕ್ಕಾಗಿ ಸರ್ವಸ್ವವನ್ನೂ ವೆಚ್ಚಮಾಡಲು ಹಿಂಜರಿಯೆವು. ಅದೂ ಒಂದು ಪುಣ್ಯ. ನಾಳಿಗೆ ಹೇಗಪ್ಪ ಎಂದು ಚಿಂತಿಸಿ ಕಂದಿ ಬೀಳೆವು. ಅಂಥವರು ಏನು ಮನುಷ್ಯರು, ಹೇಳಿ. ಇರುವಷ್ಟು ಕಾಲವೂ ಸುಖವಾಗಿ ಕಲೆಗಳ ವ್ಯವಸಾಯದಲ್ಲಿಯೋ ಸುಂದರ ವಿಷಯಗಳಲ್ಲಿ ಅನುಶಕ್ತಿಯನ್ನು ಹೆಚ್ಚಿಸುವ ಕಾರ್ಯಗಳಲ್ಲಿಯೋ ಮಗ್ನರಾಗಿರುವೆವು. ಮೈಸೂರಿನವರಲ್ಲಿ ಯಾವುದೂ ಅತಿಯಲ್ಲ. ಉಡುಗೆ-ತೊಡುಗೆ, ಊಟ-ಉಪಚಾರ, ಮಾತು-ಕಥೆ, ಧನ-ಧಾನ್ಯ, ಧೈರ್ಯ-ಸಾಹಸ ಎಲ್ಲವೂ ಮಿತ; ಸಮಧಾತು. ಅರಿಸ್ಟಾಟಲು ಹೇಳಿರುವ ಉದಾತ್ತ (High-minded man) ಸ್ವಭಾವದವರು.

ಭೋಗಸಂಪತ್ತಿಯನ್ನು ದೇವರು ಬೇಕಾದಷ್ಟು ಒದಗಿಸಿದ್ದಾನೆ. ಎಂಥವರಿಗೂ ಇಲ್ಲಿ ಸುಖಾಪೇಕ್ಷೆ ಬರುವುದು. ವಿರಾಮ ಹೆಚ್ಚಾಗಿ ದೊರಕುವುದು. ಸ್ವಲ್ಪ ಶ್ರಮಪಟ್ಟರೆ ಅತಿಯಾದ ಪ್ರಯೋಜನ ದೊರಕುವುದು. ಎಂಥ ತತ್ವಶೋಧಕರಿಗಾಗಲಿ, ಎಂಜನಿಯರುಗಳಿಗಾಗಲಿ, ಸ್ವದೇಶದವರಿಗಾಗಲಿ, ವಿದೇಶದವರಿಗಾಗಲಿ ಸ್ತೋಮವಾಗಿ ಮೈ ಬೆಳೆಯುವುದು. ಕಣ್ಣು ತುಂಬ ನಿದ್ರೆ ಬರುವುದು. ಕೆಲಸಗಳನ್ನು ತಾನೇ ಏತಕ್ಕೆ ಮಾಡಬೇಕು ? ಅವಶ್ಯಕತೆ ಏನು ? ನಮ್ಮದು ರಾಮ

ರಾಜ್ಯ, ಭೋಗರಾಜ್ಯ, ಶೃಂಗಾರರಾಜ್ಯ, ಮೈಸೂರಿನ ಚೆಲುವು-ಬೆಡಗುಗಳ ಧ್ಯಾನ ವೊಂದೇ ಸಾಲದೆ ? ಹದವಾದ ಅಲ್ಲಿನ ವಾಯುಗುಣವೊಂದೇ ಸಾಲದೆ ? ನಮ್ಮ ಶ್ರೀಗಂಧದ ಸೌಗಂಧವೊಂದೇ ಸಾಲದೆ ? ನಮ್ಮ ಮಲ್ಲಿಗೆ ಹೂ, ವೀಳೆಯದೆಲೆ, ಬದನೆಕಾಯಿಗಳ ಸವಿ ಸೌಕುಮಾರ್ಯ ಪರಿಮಳಗಳೇ ಸಾಲವೆ ? ಆದುದರಿಂದಲೇ ಇತರರು ನಮ್ಮ ಎಷ್ಟು ಅಪೇಕ್ಷಿಸಿದರೂ ನಮ್ಮಲ್ಲಿಗೆ ಬೀದಿಯ ಬಾಗಿಲಿನ ಕಡೆ ಯಿಂದಲ್ಲದಿದ್ದ ಹಿತ್ತಲ ಬಾಗಿಲಿಂದಲಾದರೂ, ಕದ್ದಾದರೂ ತಂಡ ತಂಡವಾಗಿ ಬಂದು ನೆಲಸಿ, ತಾವೂ ಮೈಸೂರಿನವರೆನಿಸಿಕೊಂಡು ನಮ್ಮ ಭೋಗ-ಭಾಗ್ಯಗಳಲ್ಲಿ ದಿನೇ ದಿನೇ ಹೆಚ್ಚು ಹೆಚ್ಚು ಭಾಗಿಗಳಾಗಲು ಹಾರೈಸುತ್ತಿರುವುದು ; ನಮಗೇ ಉಳಿಯದಂತೆ ಅವುಗಳನ್ನು ಭೋಗಿಸುತ್ತಿರುವುದು. ಇನ್ನು ನಮ್ಮ ರಾಜಧಾನಿಯೊ! ಎಲ್ಲಿ ನೋಡಿದರಲ್ಲಿ ಕಣ್ಣನ್ನು ಮೋಹಿಸಿ, ಬಗೆಯನ್ನು ಬಂದಿ ಹಿಡಿಯುವ ಉಪವನ ಗಳು, ರಾಜ-ಬೀದಿಗಳು, ಸೌಧಗಳು, ಮೇಳತಾಳಗಳು, ಸಂಗೀತ, ಶಿಲ್ಪಕಲಾ ಚಾತುರಿ, ಚಿತ್ರ, ಸೌಂದರ್ಯ ದೃಶ್ಯಗಳು. ಇವು ಯಾರಿಗೆ ಉಂಟು ಯಾರಿಗೆ ಇಲ್ಲ ? ಕೊನೆಗೆ ಅಲ್ಲಿನ ಮಡಿವಾಳಿಗಳಂತೆ ಬಟ್ಟೆ ಒಗೆಯುವವರಾರು ? ಅಲ್ಲಿನ ಅಯುಷ್ಕರ್ಮ ದವರಂತೆ ಕಲೆಗಾರರಾರು ? ಸಣ್ಣವರಿಂದ ಹಿಡಿದು ದೊಡ್ಡವರ ವರೆಗೂ ಎಲ್ಲರೂ ಕಲೆಗಾರರೇ. ಇಂಥ ಊರಿನ—ಇಂಥ ದೇಶದ ಮರ್ಯಾದೆಗೆ ತಕ್ಕ ಹಾಗಿರಬೇಕಲ್ಲವೆ ರುಮಾಲು ? ರುಮಾಲು ಶಿರಸ್ಸಿಗೆ ಭೂಷಣ. ಆದುದರಿಂದಲೇ ನಮ್ಮ ರುಮಾಲು ಅಷ್ಟು ಮನೋಹರವಾಗಿರುವುದು. ದಕ್ಷಿಣದವರ ದಿಗಂಬರತೆಯಲ್ಲಿ ? ಉತ್ತರ ದವರ ವಕ್ರ ಪರಕೀಯತೆಗಳೆಲ್ಲಿ ? ಮೈಸೂರಿನವರ ಶುದ್ಧ ಸೌಂದರ್ಯ ಸಂಪ್ರ ದಾಯವೆಲ್ಲಿ ? ಉತ್ತರದವರಲ್ಲಿ ಕೆಲವರ ರುಮಾಲು ನಮ್ಮೂರು ಕರಗದಂತೆ ಇರುತ್ತದೆ. ಇನ್ನು ಕೆಲವರದು ಸೇದುವ ಹಗ್ಗದಿಂದ ಹಣೆಗೆ ಮಂಕರಿ ಹೆಣೆದಂತಿ ರುತ್ತದೆ. ಇನ್ನು ಕೆಲವರದು ನಾಟಕದ ವೇಷಗಳಂತಿರುತ್ತದೆ. ಇನ್ನು ಕೆಲವು ನಾನಾ ರಂಗಿನವು. ನಮ್ಮದೋ ? ಬಹು ಉದ್ದವಲ್ಲ, ಬಲು ಚಿಕ್ಕದಲ್ಲ ; ಬಹು ಭಾರವಲ್ಲ, ಬಹು ಹಗುರವಲ್ಲ ; ರಂಗಿನದಲ್ಲ, ಚುಂಗಿನದಲ್ಲ ; ಬೆಳ್ಳಗೆ ಒಲ್ಲಿಯ ಪರಿಯಂತೆ ಇರುವುದು. ಸಾತ್ವಿಕ ಸ್ವಭಾವದ್ದು. ತಲೆಗೆ ಅಲಂಕಾರ, ಮುಖಕ್ಕೆ ಕಾಂತಿ. ಯಾವ ಯಾವ ಬಣ್ಣಕ್ಕಾಗಲಿ ಹೊಂದಿಕೊಂಡು ಎಲ್ಲರ ಪ್ರೀತಿಗೂ ಮರ್ಯಾದೆಗೂ ಪಾತ್ರವಾ ಗುವುದು. ಆದುದರಿಂದಲೇ ಅದಕ್ಕೂ ನಮಗೂ ಕೀರ್ತಿ. ಯಾರು ಶ್ರದ್ಧೆಯಿಂದ ಭಕ್ತಿ ಯಿಂದ ಅದಕ್ಕಾಗಿ ಶ್ರಮಪಡುವರೋ ಅಂಥವರಿಗೇ ಅದು ಒಲಿಯತಕ್ಕದ್ದು. ಯಾರು ಸಂತತವಾಗಿ ಅದನ್ನು ಉತ್ತಮಗೊಳಿಸುವ ಪ್ರಯತ್ನದಲ್ಲಿರುವರೋ ಅಂಥವರಿಗೇ ವರವನ್ನು ಕೊಡತಕ್ಕದ್ದು. ಯಾರು ಆ ಪ್ರಯತ್ನ ನಿಲ್ಲಿಸುವರೋ ಅಂಥವರು ಪುನಃ ನೆಗೆದಾಡಿದರೂ ಅದನ್ನು ಬೇರೆ ರೀತಿ ರೂಪುಗೊಳಿಸಲು ಅಸಾಧ್ಯವಾಗುವಂತೆ ಮಾಡಬಲ್ಲದ್ದು. ಅವರ ಅಭಿವೃದ್ಧಿಯನ್ನು ಅಲ್ಲಿಗೇ ನಿಲ್ಲಿಸುವಂಥಾದ್ದು. ಯಾರು ಧೋರಣೆ ಮಾಡುವರೋ ಔದ್ಧತ್ಯದಿಂದ ವರ್ತಿಸುವರೋ ಅವರ ಸೊಕ್ಕು ಮುರಿ

ಯುವದು. ನಾನು ಹೀಗೆ ಮಾಡುತ್ತೇನೆ, ಹಾಗೆ ಸುತ್ತುತ್ತೇನೆ, ನೋಡಿ ಎಂದು ಜಂಬ ಹೊಡದರೆ ಆಯಿತು, ಶಾಸ್ತಿ! ಮುದ್ದಾಗಿ ಬರೆಯಬೇಕೆಂದು ಕುಳಿತ ದಿನವೇ ಅಕ್ಷರವೂ ಬರವಣಿಗೆಯೂ ಕೆಟ್ಟು ಹಾಳಾಗುವಂತೆ! ಹೀಗೆ ನಮ್ಮ ರುಮಾಲು ನಮ್ಮ ಜನರ ಶೀಲ ಸಂಸ್ಕಾರಕ್ಕೂ ಮನಸ್ಸಿನ ಶಿಕ್ಷಣಕ್ಕೂ ಬಹು ಅಮೂಲ್ಯವಾದ ಸಹಕಾರಿಯಾಗಿದೆ.

ಮೈಸೂರು, ರುಮಾಲು, ರಸಿಕತೆ, ಇವು ಮೂರೂ ಸಮಾನಧರ್ಮ ಸೂಚಕಗಳು. ರುಮಾಲನ್ನು ಚೆನ್ನಾಗಿ ಸುತ್ತುವುದು ಸುಲಭವಲ್ಲವೆಂಬುದು ಇದುವರೆಗೇ ತಿಳಿಯಬಂದಿರಬಹುದಷ್ಟೆ? ಅದನ್ನು ಚೆನ್ನಾಗಿ ಸುತ್ತಬೇಕಾದರೆ ಅನೇಕ ರುಮಾಲಿನ ರಚನೆಗಳನ್ನು ನೋಡಿರಬೇಕು. ಕಟ್ಟುವ ರೀತಿಯನ್ನು ಗುರುವಿನ ಮೂಲಕವೋ ಹತ್ತಾರು ಕಡೆ ಧ್ಯಾನಪೂರ್ವಕವಾಗಿ ನೋಡಿಯೋ ತಿಳಿದು ಬಹು ಕಾಲದ ಅಭ್ಯಾಸದಿಂದ ಕೈ ಹತೋಟಿಗೆ ತಂದುಕೊಂಡಿರಬೇಕು. ಕಟ್ಟಿ ಕಟ್ಟಿ ಕೈ ಪಳಗಿಸಿಕೊಂಡಿರಬೇಕು. ಮೇಲಾಗಿ ವಿನಯವನ್ನಾಚರಿಸಬೇಕು. ಒಂದಂಗಡಿಯಲ್ಲಿಲ್ಲವಿದ್ದರೆ ಹತ್ತಂಗಡಿಗಳಿಗೆ ಹೋಗಿ, ಒಂದೂರಲ್ಲದಿದ್ದರೆ ಎರಡು ಊರು ತಿರುಗಿ, ಬಟ್ಟೆ ಜರತಾರಿ ಎರಡೂ ಚೆನ್ನಾಗಿರುವ ಪದಾರ್ಥವನ್ನು ಮೊದಲು ಕೊಂಡು ತರಬೇಕು. ಜರತಾರಿಯ ಪರೀಕ್ಷೆ ನಿಜವಾಗಿ ವರಪರೀಕ್ಷೆ; ಐ. ಸಿ. ಯಸ್. ಪರೀಕ್ಷೆಯಲ್ಲಾದರೂ ತೇರ್ಗಡೆ ಹೊಂದಬಹುದು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ಅವರಲ್ಲಿ ನಿಂಚಿತವಾಗಿ ಮೊದಲಿಗರಾಗಿ ಪ್ಯಾಸಾಗಬಹುದು. ಅಂಗಡಿಯಿಂದ ಮನೆಗೆ ತಂದಮೇಲೆ ಮನೆಯ ಹೆಣ್ಣುಮಗಳಂತೆ ಅದನ್ನು ನೋಡಿಕೊಳ್ಳಬೇಕು. ಆರೈಕೆ ಮಾಡಬೇಕು. ಅಷ್ಟಾದರೂ ನಿಮ್ಮ ಮರ್ಯಾದೆಯಲ್ಲ, ನಿಮ್ಮ ಸೌಖ್ಯವೆಲ್ಲ ನಿಮ್ಮ ಅಗಸನ ಕೈಲಿದೆ. ಅವನ ಮೇಲೆ ರೇಗಾಡೀರಿ. ಅವನು ಒಗೆ ಕೆಡಿಸಿದರೆ ಪುನಃ ಬ್ರಹ್ಮದೇವರೇ ಬಂದರೂ ಅವನು ಕೆಡಿಸಿದ ಕೆಲಸ ಸರಿಹೋಗುವುದಿಲ್ಲ. ಈ ಸಂಗತಿಯನ್ನು ಎಷ್ಟೇ ಒತ್ತಿ ಹೇಳಿದರೂ ಕಮ್ಮಿಯೇ. ಚೆನ್ನಾಗಿ ರುಮಾಲು ಸುತ್ತಬಲ್ಲವನು ಮೂರು ಲೋಕಗಳನ್ನು ಗೆಲ್ಲಬಲ್ಲನು. ಆರು ಲೋಕಗಳನ್ನು ಆಳಬಲ್ಲನು. ಪ್ರಪಂಚವನ್ನೇ ಒಲಿಸಬಲ್ಲನು. ಅನಂತ ವಿಶ್ರಾಂತವಾದ ಕೀರ್ತಿಯನ್ನು ಪಡೆಯಬಲ್ಲನು. ನೀವು ರಸಿಕರು ಹೌದೋ ಅಲ್ಲವೋ ಎಂದು ಯಾವಾಗಲಾದರೂ ನಿಮಗೆ ಸಂಶಯ ಬಂದರೆ ನಿಮ್ಮ ರುಮಾಲನ್ನು ನೋಡಿಕೊಳ್ಳಿ. ನಾನು ಹೇಳಿರುವ ಲಕ್ಷಣಗಳು ಅಲ್ಲಿದ್ದು ನಾನು ಮುಂದೆ ಸೂಚಿಸುವ ಅವಲಕ್ಷಣಗಳು ಇಲ್ಲದಿದ್ದರೆ ನೀವು ರಸಿಕರು ನಿಜವೆಂದು ನಂಬಿ. ಇಲ್ಲವಾದರೆ ನೀವು ರಸಿಕರಲ್ಲ. ಚೆನ್ನಾಗಿ ರುಮಾಲು ಕಟ್ಟುವುದು ಹೇಗೆ? ಯಾವುದಾದರೂ ನಿಯಮಗಳಿವೆಯೇ? ಇದ್ದರೆ ಅವು ಯಾವವು? ಎಂದು ಯಾರಾದರೂ ನಿಮ್ಮನ್ನು ಕೇಳಿದರೆ ಮೌನವಾಗಿರಿ. ಮೌನವೇ ಅದಕ್ಕೆ ಉತ್ತರ. ಬ್ರಹ್ಮ ಸ್ವರೂಪವನ್ನು ಕೇಳಿದಾಗ ಉಪನಿಷತ್ತಿನಲ್ಲಿ ಗುರುವಿನ ಉತ್ತರವೇನು? ಮೌನ. ಇಲ್ಲಿಯೂ ಹಾಗೆಯೇ, ಇದರ ಸ್ವರೂಪವೂ ಅತಿ ಗಹನವಾದುದು. ಅತಿ ಗಂಭೀರ

ವಾದುದು. ಆದರೂ ತಿಳಿದಿರಬೇಕಾದ ಅಂಶಗಳು ಮಾತ್ರ ಒಂದೆರಡಿವೆ. ಒಬ್ಬೊಬ್ಬರ ತಲೆಗೆ ಒಂದೊಂದು ಅಳತೆಯು ಬೇಕಾಗುತ್ತದೆ. ತಲೆಯೂ ರುಮಾಲೂ ಪರಸ್ಪರ ಆಧಾರಾಧೇಯಗಳು. ಅವರವರಿಗೆ ಬೇಕಾಗುವ ಪ್ರಮಾಣಗಳನ್ನು ಅವರವರೇ ನಿರ್ಧರಿಸಿಕೊಳ್ಳಬೇಕು. ದೇವರು ಕೊಟ್ಟ ಬುದ್ಧಿ ಬೇಕು. ಸೌಂದರ್ಯವನ್ನು ಕಾಣುವ ಕಣ್ಣು ಬೇಕು. ನಿಯಮಶಾಸನಗಳಿಂದ ಇದು ನಡೆಯುವ ಕೆಲಸವಲ್ಲ. ಹೀಗೆ ಬರೆದರೆಯೇ ಕಾವ್ಯವು ಸುಂದರವಾಗುವುದು ಎಂದು ಹಟಮಾಡುವುದು ಎಷ್ಟರ ಮುಠ್ಠಾಳತನವೋ, ತಲೆ ಹೇಗೇ ಇರಲಿ, ಈ ಅಳತೆ ಈ ಪ್ರಮಾಣಗಳನ್ನು ಅನುಸರಿಸಿದರೆಯೇ ರುಮಾಲು ಚೆನ್ನಾಗಬೇಕಾದರೆ ಎಂದು ವಾದಿಸುವುದೂ ಅಷ್ಟೇ ದೊಡ್ಡ ಮುಠ್ಠಾಳತನ; ಅವರ ಸಾಮಾನ್ಯ ಲಕ್ಷಣಗಳು ಮಾಟ, ಇವು, ಇಂಥವು. ನಿಮಗೂ ಕಣ್ಣಿದೆ, ನಾಲ್ಕು ಕಡೆ ನೋಡಿ ಕಂಡುಕೊಳ್ಳಿ, ತಿದ್ದಿಕೊಳ್ಳಿ; ಇನ್ನೇನೂ ಹೆಚ್ಚು ಹೇಳುವವಕಾಗುವದಿಲ್ಲ. ಕಟ್ಟಿಕೊಂಡು ನಮ್ಮ ಹತ್ತಿರ ಬನ್ನಿ. ಸರಿಯಾಗಿದೆಯೋ ಇಲ್ಲವೋ ಆಗ ಹೇಳುತ್ತೇವೆ ಎಂದು ಮುಂತಾಗಿ ಹೇಳಿಕಳುಹಿಸಿಬಿಡಿ. ಆ ಮೇಲೆ ಅವರ ತಲೆಪಾಡು. ಜಿಲೇಬಿಯ ಪಾಕಕ್ಕೆ ಹೇಗೆ ಒಂದು ಹದವಿದೆಯೋ, ಪಕ್ವಾನ್ನಕ್ಕೆ ಹೇಗೆ ಒಂದು ಪಾಕವಿದೆಯೋ, ಹಾಗೆಯೇ ಮೈಸೂರು ರುಮಾಲು ಕಟ್ಟುವುದಕ್ಕೂ ಒಂದು ಹದವಿದೆ. ಆದರೆ, ಅಟ್ಟ ಪದಾರ್ಥವನ್ನು ನೋಡಿದ ಮೇಲೆಯೇ ಸರಿಯಾದ ಹದ ಬಂದಿದೆಯೇ ಇಲ್ಲವೇ ಎಂಬುದು ಗೊತ್ತಾಗಬೇಕು.

ಸತ್ಕಾವ್ಯವು ಕೈಗೆ ಸಿಕ್ಕಿದರೆ ಭೇಷ್. ಇದು ರಸವತ್ಕಾವ್ಯ ಎಂದು ಅದರ ಸವಿಯನ್ನು ಅನುಭವಿಸಿ ಹೇಗೆ ಆನಂದಿಸುವೆವೊ, ಒಳ್ಳೆಯ ರುಮಾಲನ್ನು ಕಂಡಾಗಲೂ ಹಾಗೆಯೇ ಮೆಚ್ಚಿ ಅದಕ್ಕೆ ಕೈಮುಗಿಯುತ್ತೇವೆ. ಆದರೂ ಅನುಭವಸ್ಥರಾದ ನನ್ನಂಥವರು ಹೀಗೆ ಮಾಡಬೇಡಿ, ಹಾಗೆ ಮಾಡಬೇಡಿ ಎಂದು ಒಂದೆರಡು ವಿಶೇಷ ಸೂಚನೆಗಳನ್ನು ಮಾತ್ರ ಇಲ್ಲಿ ಕೊಡಬಹುದು. ಕಣ್ಣಿನಲ್ಲಿ ನೀರು ಸುರಿಸಿ—ನೀರು ಸುರಿಯುವ ಕಣ್ಣಿನಲ್ಲಿ ರಕ್ತ ಸುರಿಸಿ, ನೊಂದು ಬಳಲಿ ಪಡೆದುಕೊಂಡಿದ್ದರೇನೇ ಅನುಭವಕ್ಕೆ ಅನುಭವನೆಂಬ ಹೆಸರು ಸಲ್ಲಬೇಕಾದರೆ ! ಎಷ್ಟು ನೊಂದಿದ್ದರೆ ಅಷ್ಟೂ ಅಷ್ಟು ಆ ಅನುಭವಕ್ಕೆ ಗೌರವ ಹೆಚ್ಚು. ನನ್ನ ಸೂಚನೆಗಳು ಯಾವುವೆಂದರೆ–ಬಟ್ಲರುಗಳಂತೆ ರುಮಾಲು ಸುತ್ತಬೇಡಿ, ರುಮಾಲಿಗೆ ಅಂಡಾಕಾರ ಬರದಂತೆ ನೋಡಿಕೊಳ್ಳಿ. ರುಮಾಲಿನೊಳಗೆ ಸೇರಿರುವ ಕೂದಲು ಗಂಟು ಹೆಚ್ಚಾಗದೆ ಇರಲಿ. ನಿಮ್ಮ ಬೋಳು ತಲೆಯೂ ಕೂದಲೂ ಹೊರಗೆ ಕಾಣದಂತೆ ವ್ಯವಸ್ಥೆ ಮಾಡಿಕೊಳ್ಳಿ. ರುಮಾಲನ್ನು ಪೂರ್ತಿ ಪಟ್ಟಿ ಮಡಿಸಿ ಕಟ್ಟಬೇಡಿ. ತಿಗಳರ ಮುನಿಶಾಮಿಯಂತೆ ಕಾಣುವಿರಿ ; ಸೆಕ್ರೆಟೇರಿಯಟ್ ಜವಾನರಂತೆ ಕಾಣುವಿರಿ. ರುಮಾಲಿನ ಜರಿ ಅತಿ ಕಮ್ಮಿಯಾಗಿ ಆಗಲಿ, ಅತಿ ಹೆಚ್ಚಾಗಿಯಾಗಲಿ ಇರಬಾರದು. ಅತಿ ಕಮ್ಮಿಯಾಗಿ ಕಡ್ಡಿ ಅಂಚಾದರೆ ಓಹೋ ! ಇವರ್ಯಾರೋ ಗುಮಾಸ್ತರಪ್ಪ ಎಂದುಕೊಳ್ಳುತ್ತಾರೆ. ಅತಿ ದೊಡ್ಡದಾಯಿತು ಅನ್ನಿ. ಓಹೋ ಇವರು ತಿಪಟೂರು ಸಾಹುಕಾರ್ ಸಿದ್ದಯ್ಯ

ನವರಪ್ಪ ಅನ್ನುವರು. ನನ್ನನ್ನು ಕೇಳಿದರೆ ಜರಿ ಒಂದು ಹೆಬ್ಬೆರಳು ಅಥವಾ ಮುಕ್ಕಾಲಂಗುಲಕ್ಕೆ ಎಂದಿಗೂ ಮೀರಿರಕೂಡದು. ಜರೆ ಜರತಾರಿ ಇಷ್ಟ ರೆ ಅದನ್ನು ಬಾಬಯ್ಯನ ಹಬ್ಬದ ಉಪಯೋಗಕ್ಕೆ ಇರಿಸಿಬಿಡಿ. ಅದರ ಬಯಕೆಯು ಹೆಚ್ಚಾದರೆ ಒಂದು ತೆರೆದ ಒತ್ತೆಳೆಗಳ ಕಂಬಿಯಂಚು ಇರುವುದನ್ನು ಕಟ್ಟಿ ಬೇಸೆ ಇಳಿಸಿಕೊಳ್ಳಿ. ಜರಿ ಅಂತೂ ಏನೇ ಆಗಲಿ ಮಿರು ಮಿರು ಚಿನ್ನದಂತೆ ಹೊಳೆಯುತ್ತಿರಬೇಕು. ಸಾಧ್ಯವಾದರೆ ಇಷ್ಟು ಮಾಡಿ, ಸಾಕು. ಸ್ವಲ್ಪ ತಾಳಿ ; ಇನ್ನೊಂದು ಹೇಳುವುದು ಮರೆತುಬಿಟ್ಟಿದ್ದೆ. ದಾಡೀಗೂ ಮೈಸೂರು ರುಮಾಲಿಗೂ ಹೊಂದಿಕೆ ಇಲ್ಲ. ರಸಿಕರಿಗೂ ದಾಡೀಗೂ ದೂರ. ಆದುದರಿಂದಲೇ ಹದಿನಾರಾಣೆ ಮೈಸೂರಿನವರಾರೂ ದಾಡೀ ಬೆಳೆಯಿಸುವುದಿಲ್ಲ.


ರುಮಾಲಿನಿಂದ ಮಂಗಳ. ಮದುವೆಯ ಮನೆಯಲ್ಲಾಗಲಿ, ಅರಮನೆಗಳಲ್ಲಾಗಲಿ ಕೇಳಿ, ಹೇಳುತ್ತಾರೆ. ಮೇಲಿನವರಿಗೆ ನೀವು ಮರ್ಯಾದೆ ಮಾಡಬೇಕಾದರೆ ನಿಮ್ಮ ತಲೆಯ ಮೇಲೆ ರುಮಾಲು ಇರಬೇಕು. ನಿಮಗೆ ಇತರರು ಮರ್ಯಾದೆ ಮಾಡಬೇಕಾದರೆ ನಿಮ್ಮ ತಲೆಯ ಮೇಲೆ ರುಮಾಲು ಇರಬೇಕು. ಚೆನ್ನಾಗಿ ರುಮಾಲು ಕಟ್ಟಿ ಠಾಕೋಠೀಕಾಗಿರುವವರನ್ನು ಕಂಡರೆ ಎಲ್ಲರೂ ಹತ್ತಿರ ಬನ್ನಿರೆನ್ನುತ್ತಾರೆ. ಯಾವ ಅಂಗಡಿಯಲ್ಲೇ ಆಗಲಿ, ಬ್ಯಾಂಕಿನಲ್ಲಾಗಲಿ ಸಾಲ ಹುಟ್ಟುತ್ತದೆ. ಸಾಲ ತೀರಿಸದಿದ್ದರೂ ಪರವಾ ಇಲ್ಲ. ಕೋರು ರುಮಾಲು ನಂಬಿಕೆ ಉಳಿಸುತ್ತದೆ. ಬೀದಿಯಲ್ಲಿ ಪೋಲೀಸಿನವನು ನಿಮಿರಿ ನಿಂತು ಸಲಾಮು ಮಾಡುತ್ತಾನೆ. ಸಭೆಗಳಲ್ಲಿ ಮೇಲಕ್ಕೆ ಬನ್ನಿರೆಂದು ಕರೆದು ಕೂಡಿಸಿಕೊಳ್ಳುತ್ತಾರೆ. ಅರಮನೆಯಲ್ಲಿ ಖಾಸಾ ಹಾರ ಸಿಕ್ಕುತ್ತದೆ. ಕಂಡ ಕಂಡವರು ಕೈಮುಗಿದು ಮುಗುಳ್ನಗೆ ನಕ್ಕು ಸ್ವಾಗತ ಕೊಡುತ್ತಾರೆ. ಕ್ಷೇಮಸಮಾಚಾರ ವಿಚಾರಿಸುತ್ತಾರೆ. ಉತ್ಸವಗಳಲ್ಲಿ ಅಗ್ರತಾಂಬೂಲ ದೊರಕುತ್ತದೆ. ಲಂಚರುಷುವತ್ತುಗಳಿಲ್ಲದೆ ಕೆಲಸವಾಗುತ್ತದೆ. ತಾಲ್ಲೂಕು ಅಮಲ್ದಾರರು ಪಕ್ಕದಲ್ಲಿ ಕುರ್ಚಿಯ ಮೇಲೆ ಕೂಡಿಸಿಕೊಂಡು ಮಾತನಾಡುತ್ತಾರೆ. ಕೊನೆಗೆ ಟಿಕೆಟ್ ಕಲೆಕ್ಟರ್ ಕೂಡ ನಿಮ್ಮ ಗೊಡವೆಗೆ ಬಾರದೆ ನೀವು ಮೂರನೆಯ ಕ್ಲಾಸ ಟಿಕೆಟ್ ತೆಗೆದುಕೊಂಡು ಮೊದಲನೆಯ ಕ್ಲಾಸ ಗಾಡಿಯಲ್ಲಿ ಮಲಗಿ ನಿದ್ರೆಮಾಡುತ್ತ ಪ್ರಯಾಣ ಮಾಡಿದರೂ ನಿಮಗೆ ತೊಂದರೆ ಕೊಡದೆ ಹೊರಟು ಹೋಗುತ್ತಾನೆ. ಕೆಟ್ಟದ್ದಾಗಲಿ, ಒಳ್ಳೆಯದಾಗಲಿ ಏನು ಮಾಡುವುದಕ್ಕಾದರೂ ಧೈರ್ಯಬರುತ್ತದೆ. ಹೀಗೆ ಮಂಗಳಕ್ಕೆ ಮಂಗಳ, ಮರ್ಯಾದೆಗೆ ಮರ್ಯಾದೆ, ಪ್ರಯೋಜನಕ್ಕೆ ಪ್ರಯೋಜನ, ಅಲಂಕಾರಕ್ಕೆ ಅಲಂಕಾರ, ಇಂಥ ಅನುಕೂಲಗಳು ಬೇರೆ ಯಾವುದರಿಂದ ದೊರೆಯುತ್ತವೆ ?

ಇಂಥ ರುಮಾಲಿನ ವ್ಯವಸಾಯವು ಇತ್ತೀಚೆಗೆ ಕಡಿಮೆಯಾಗಿ ದೇಶದಲ್ಲಿ ಕ್ಷಾಮಡಾಮರಗಳು ಪ್ರಬಲಿಸುತ್ತಿವೆ. ದೇಶದ ಸಂಪತ್ತು, ವ್ಯಾಪಾರ, ಅಧಿಕಾರ, ಎಲ್ಲವೂ ಪರಕೀಯರ ವಶವಾಗುತ್ತಿವೆ. ಶಿಷ್ಟಸಂಪ್ರದಾಯಗಳು ಚೆನ್ನಾಗಿಲ್ಲದಿದ್ದರೆ

ಆಯಾ ಅಧಿದೇವತೆಗಳಿಗೆ ಕೋಪವಿಲ್ಲ. ಅವು ಅತ್ಯುತ್ತಮವಾಗಿರುವಾಗ ಜನರು ಅವುಗಳನ್ನು ಮೀರಿ ‘ ಪರದೇಶಿ ’ ಸಂಪ್ರದಾಯಗಳಿಗೆ ಒಳಗಾದರೆ ಅವು ಸಹಿಸಿಕೊಂಡು ಸುಮ್ಮನಿದ್ದಾವೆ ? ದೇಶದ ಅತ್ಯುನ್ನತ ಅಧಿಕಾರಿಗಳಿಂದ ಕೂಡ ಈ ದೇವತೆಗಳು ಅವಿಧೇಯತೆಯನ್ನು ಸಹಿಸವು. ಈ ವಿಷಯಕ್ಕೆ ನಾವು ತ್ವರೆಯಿಂದ ಗಮನಕೊಡದಿದ್ದರೆ ದೇಶವು ಪೂರ್ತಿಯಾಗಿ ಪರರ ಭೋಜನಭೂಮಿಯಾಗಿ ನಮ್ಮ ಕೈತಪ್ಪಿ ಹೋಗುವುದು ಖಂಡಿತ. ಪ್ಲೇಟೋ, ಮೋರ್, ವೇಲ್ಸ್ ಪ್ರಭೃತಿಗಳು ಆದರ್ಶ ರಾಜ್ಯ—ಆದರ್ಶ ಜೀವನ ರೀತಿಗಳನ್ನು ಕಲ್ಪಿಸಿ, ಅವರ ವಿಚಾರದ ಫಲಿತಾಂಶಗಳನ್ನು ಪ್ರಕಟಿಸಿದ್ದಾರೆ. ಅಂಥ ರಾಜ್ಯದಲ್ಲಿ ಜನರ ಶಿರೋಭೂಷಣವು ಹೇಗಿರಬೇಕೆಂಬ ವಿಚಾರಮಾಡಿ ಪ್ರಪಂಚದಲ್ಲಿ ಎಲ್ಲ ಕಡೆಗಳಲ್ಲಿಯೂ ಹುಡುಕಿದ್ದರೆ ಮೈಸೂರ ರುಮಾಲೇ ಅಂಥಾ ಭೂಷಣ ಎಂದು ಅವರು ತೀರ್ಮಾನಿಸುತ್ತಿದ್ದರು. ಅದರಲ್ಲಿ ಆದರ್ಶತ್ವವಿದೆ. ಕಾಲಕ್ರಮದಲ್ಲಿ ನಮಗೆ ಬಂದಿರುವ ಶುದ್ಧ ಮೈಸೂರ ಸಂಪ್ರದಾಯವನ್ನು ನೋಡಿದರೆ ಅದು —ಸತ್ಯ—ಶಿವ—ಸತ್ವದ ತಿರುಳು ಎಂದು ಗೊತ್ತಾಗುವುದು. ಅದೂ ಇದ್ದಂತೆಯೇ ಇಲ್ಲ. ಪ್ರತಿ ಕಾಲದಲ್ಲಿಯೂ, ಪ್ರತಿ ಸಂಪರ್ಕವಲ್ಲಿಯೂ ದೊರೆತ ಸೂಚನೆಗಳನ್ನು ತೆಗೆದುಕೊಂಡು ನಮ್ಮ ಉಡುಪನ್ನು ಸರ್ವಾಂಗ ಸುಂದರವಾಗಿ ಮಾಡಿದೆ. ನಮಗೆ ಗುಣ ಪ್ರಧಾನ. ಎಲ್ಲಿ ಗುಣವನ್ನು ಕಂಡರೂ ಅದನ್ನು ಆದರದಿಂದ ಸ್ವೀಕರಿಸುವೆವು. ಸ್ವೀಕರಿಸಿದುದನ್ನು ನಮ್ಮ ಸಹಜಗುಣವಾಗಿ ಮಾಡಿಕೊಂಡು ಸುಖಪಡುವೆವು. ಶತಮಾನಗಳು ಕಳೆದುಹೋದರೂ, ಅನೇಕ ರಾಜರು ನಮ್ಮ ಮೇಲೆ ದಾಳಿಬಂದು ಇಲ್ಲಿ ತಮ್ಮ ಆಳ್ವಿಕೆಯನ್ನು ಹೂಡಿದ್ದರೂ, ನಾವು ನಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡಿಲ್ಲ. ನಮ್ಮ ಉಡುಪು ಅಲಂಕಾರಗಳು ಎಷ್ಟು ಸುಂದರವಾದವು ! ಒಂದಕ್ಕೊಂದು ಹೇಗೆ ಒಪ್ಪುವವು ! ಕಾಲಿಗೆ ಕಾಶೀಯಾತ್ರೆಯ ಜೋಡು. ಸಿರಿ ತೀಡಿ ಕಚ್ಚೆತೀಡಿ ಕಾಲುತುಂಬ ಉಟ್ಟ ಬೆಳ್ಳನೆಯ ಅಂಚಿನ ಪಂಚೆ. ಬೆರಳಿಗೆ ಹರಳಿನ ಉಂಗುರ, ಒಂದು ಕೈಯಲ್ಲಿ ರೇಷ್ಮೆಯ ವಸ್ತ್ರ, ನಶ್ಯದ ಡಬ್ಬಿ ; ಇನ್ನೊಂದರಲ್ಲಿ ಬೆತ್ತ ಅಥವಾ ಛತ್ರಿ ; ತುಂಬುಕುತ್ತಿಗೆಯ ಅಂಗಿ ; ಕಂಕುಳುದೂರಿ ಭುಜಸೇರಿ ಹಿಂದೆ ಮುಂದೆ ಮರ್ಯಾದೆಯಿಂದ ಈಸಾಡುವ ಉತ್ತರೀಯ ; ಕಿವಿಯ ಕಡುಕು ; ತಿರುವು ಮೀಸೆ ; ಹಣೆಗೆ ಅಕ್ಷತೆ ; ಕೋರು ರುಮಾಲು ! ದೇವೇಂದ್ರನಿಗೇ ಕಳೆಕೊಡಬಲ್ಲವುಗಳು. ಹಾಗೆಯೇ ಯೋಚನೆ ಮಾಡಿ. ಉಳಿದವರೆಲ್ಲರೂ ಸುಮಾರು ಮುಸಲ್ಮಾನ ಪದ್ಧತಿಗೆ ಶರಣುಹೋದರು. ಮೈಸೂರಿನ ಉಡುಗೆ, ರುಮಾಲು, ರಸಿಕತೆ ಇವುಗಳು ಮಾತ್ರ ಶರಣುಬೀಳಲಿಲ್ಲ. ಇವುಗಳು ತಮ್ಮ ಸಹಜಗುಣವನ್ನೂ ಮಾನವನ್ನೂ ಈವರೆಗೂ ಕಾಪಾಡಿಕೊಂಡವು. ಎಲ್ಲ ಕಷ್ಟಗಳಿಂದಲೂ ಪಾರಾಗಿ ಉಳಿದುಕೊಳ್ಳುವ ಜೀವಶಕ್ತಿಯು ನಮ್ಮ ರುಮಾಲಿಗಿಲ್ಲದಿದ್ದರೆ ಹೀಗಾಗುತ್ತಿದ್ದಿತೆ ? ಎಂದಿಗೂ ಇಲ್ಲ. ಮೈಸೂರಿನವರೇ ಎಚ್ಚರಗೊಳ್ಳಿರಿ. ನಿಮ್ಮ ದೇಶದ ಕೀರ್ತಿ, ನಿಮ್ಮ ವ್ಯಕ್ತಿತ್ವದ ಗೌರವ, ನಿಮ್ಮ ಸಮಾಜದ

ನೆಲೆಗಟ್ಟು, ನಿಮ್ಮ ಸಹಜ ಭೂಷಣ—ಇವುಗಳು ಬಿಲವಾಗದಂತೆ ರಕ್ಷಿಸಿಕೊಳ್ಳ ಬೇಕಾದ ಕಾಲವು ಬಂದಿರುವುದು. ಇದು ನಿಮ್ಮ ಗುರುತರ ಕರ್ತವ್ಯ. ನಿಮ್ಮ ರುಮಾಲು ನಿಮ್ಮ ಸ್ವಾತಂತ್ರ್ಯದ ಚಿಹ್ನೆ. ನಿಮ್ಮ ನೈಸ್ಯದ ನಿಶಾನೆ, ನಿಮ್ಮ ಮೇಲ್ಮೆಯ ಕುರುಹು, ನಿಮ್ಮ ಬಾಳುವೆಯ ಸರ್ವಸ್ವ; ಇದನ್ನಾದರೂ ಉಳಿಸಿಕೊಳ್ಳಿ.

—ವಿ. ಸೀತಾರಾಮಯ್ಯ



೧೧. ಧರ್ಮಣ್ಣ

ಹಳೆ ಹಳೆ ಕತೆ; ಬಹಳ ಹಳೆಯ ಕತೆ. ನಾಡಿನ ಜನರಿಗೆಲ್ಲ ಆಗ ನಿಶ್ಚಿಂತೆ. ಸತ್ಯದ ಕಾಲ. ಕಾಲಕ್ಕೆ ಸರಿಯಾಗಿ ಮಳೆ; ಕೃಷಿಗೆ ಸರಿಯಾಗಿ ಬೆಳೆ. ತಂದೆಯ ವೃತ್ತಿಯೇ ಮಗನಿಗೆ; ತಾಯಿಯ ನಡತೆಯೇ ಮಗಳಿಗೆ. ಅರಸನಿಗೆ ಪ್ರಜೆಗಳೇ ದೇವರು; ಪ್ರಜೆಗಳು ಅರಸನಿಗೆ ಪೂರ್ಣ ವಿಧೇಯರು. ಹೊಟ್ಟೆ ತುಂಬುವಷ್ಟು ಹಿಟ್ಟುರೊಟ್ಟಿ; ಮಾನ ಮುಚ್ಚುವಷ್ಟು ಬಟ್ಟೆಬರೆ. ಮನೆತುಂಬ ಮಕ್ಕಳು ಮರಿ; ಕೊಟ್ಟಿಗೆ ತುಂಬ ದನಕರು. ಬಾಯಿತುಂಬ ಸವಿನುಡಿ; ಮನಸ್ಸು ತುಂಬ ಸತ್ಯ ವಿಚಾರ; ಕೈತುಂಬ ಪರೋಪಕಾರ.

ಅಂತಹ ಕಾಲ! ಆ ಕಾಲದಲ್ಲಿ ಗಂಧವ ನಾಡಿನಲ್ಲಿ ಗಂಧರ್ವಾಯನೆಂಬ ಅರಸ ನಿದ್ದನು. ಅವನಿಗೊಬ್ಬ ಮಹಾಮಂತ್ರಿ. ಅರಸು ಮಂತ್ರಿ ಬಾಲ್ಯದಿಂದಲೂ ಒಳನಾಡಿಗಳು, ಗೆಳೆಯರು, ಆಪ್ತರು. ಇಬ್ಬರೂ ಗಂಭೀರ ವಿಚಾರಶೀಲರು. ಮಂತ್ರಿಯ ಅಭಿಪ್ರಾಯವನ್ನು ಅರಸನು ಎಂದೂ ತಳ್ಳಿದವನಲ್ಲ; ಅರಸನ ಚಿತ್ತ ವನ್ನು ಮಂತ್ರಿ ಎಂದೂ ಕಲಕಿದವನಲ್ಲ. ಸರೋವರದಲ್ಲಿ ತೇಲಾಡುವ ರಾಜಹಂಸ ಗಳಂತೆ ಅವರು ರಾಜ್ಯವಾಳುತ್ತಿದ್ದರು.

ಒಂದು ದಿನ ಬೈಗಿನಲ್ಲಿ ಅರಸನೂ ಮಂತ್ರಿಯೂ ಉದ್ಯಾನದಲ್ಲಿ ಅತ್ತಿತ್ತ ತಿರು ಗಾಡುತ್ತಿದ್ದರು. ಆಗ ಅರಸನು "ಸುಖ ದೊರೆಯುವುದು ಯಾವುದರಲ್ಲಿ?" ಎಂದು ಮಂತ್ರಿಯೊಡನೆ ಪ್ರಶ್ನಿಸಿದನು.

"ಮೆಚ್ಚಿದುದರಲ್ಲಿ" ಎಂದನು ಮಂತ್ರಿ.

"ಯಾವುದು ಮೆಚ್ಚು?"

"ಮನಸ್ಸೇ ಮೆಚ್ಚು; ಅಭ್ಯಾಸವೇ ಮೆಚ್ಚು; ಸ್ವಭಾವವೇ ಮೆಚ್ಚು.

"ಇವುಗಳೊಳಗೆ ಯಾವುದು ಹೆಚ್ಚು?"

"ಸ್ವಭಾವ ಹೆಚ್ಚು ?"

ಅರಸನು ಮುಂದೆ ಮಾತಾಡಲಿಲ್ಲ. ಸಂಜೆಯ ವರೆಗೆ ಇಬ್ಬರೂ ಒಟ್ಟಿಗೆ ಅತ್ತಿತ್ತ ಸಂಚರಿಸಿದರು. ಒಬ್ಬರೂ ತುಟಿಯುಲುಗಿಸಲಿಲ್ಲ.

ಅರಸನಿಗೆ ಒಬ್ಬಳು ರಾಣಿ ಇದ್ದಳು. ಲಿಂಬೆಹಣ್ಣಿನ ಬಣ್ಣದ ಮೈ; ಚಂದ್ರ ಕಾಂತಿಯ ಮುಂಡು ಮೊಗ. ತುಂಬಿಗಣ್ಣು, ಸಂಪಗೆಮೂಗು. ಬಳ್ಳಿಗೈ, ಸೆಳೆನಡು. ಮಾತೋ? ಮಲ್ಲಿಗೆ. ಮನಸ್ಸೋ? ಮಂದಾರ. ಪ್ರೀತಿಯೋ? ಪನ್ನೀರು. ಆದರೆ. . . . . .ಆದರೇನು! ಅರಸನಿಗೆ ಅವಳಲ್ಲಿ ಎರಕವಿಲ್ಲ! ಅಂತಹ ಅರಸಿಯಲ್ಲಿ ಇಂತಹ ಅರಸನಿಗೆ ಸಲುಗೆಯಿಲ್ಲ. ಮುಂಜಾವದ ಹನಿಯೊಳಗೆ ಮುಂಬೆಳಕಿನ ಕಿರಣ ಸೇರುವದಿಲ್ಲ! ಇದೇನು? ಅರಸನು ತನ್ನೊಳಗೆ ಪರಿಭಾವಿಸಿದನು; ತನ್ನ ಹೃದಯವನ್ನು ಪರೀಕ್ಷಿಸಿದನು; ಪ್ರೀತಿಸಲು ಪ್ರಯತ್ನಿಸಿದನು ವ್ಯರ್ಥ. ಅವಳಲ್ಲಿ ದೋಷಗಳನ್ನು ಹುಡುಕತೊಡಗಿದನು; ಕಾಣಲಿಲ್ಲ. ಅವಳ ಸಮೀಪದಲ್ಲಿಯೇ ಕಾಲ ಕಳೆಯತೊಡಗಿದನು; ಎಣ್ಣೆನೀರು ಬೆರಸಿದಂತಾಯಿತು. ಸರಸವಿಲ್ಲ, ಸಮರಸವಿಲ್ಲ! ಆದರೆ, ಅರಸಿಯಲ್ಲಿ ಕೊರತೆಯಿಲ್ಲ; ಅರಸನಲ್ಲಿ ಕಪಟವಿಲ್ಲ!

ಅರಸನಿಗೆ ಅಂತರಂಗದಲ್ಲಿ ಸುಖವಿಲ್ಲ.

ಕೆಲವು ವರ್ಷಗಳು ಸಂದುವು. ಒಂದು ದಿನ ಇಳಿಹೊತ್ತಿನಲ್ಲಿ ಅರಸನೂ ಮಂತ್ರಿಯೂ ಕೋಟೆಯ ಹೊರಬಾಗಿಲ ಶಿಲಾವೇದಿಕೆಯಲ್ಲಿ ಕುಳಿತಿದ್ದರು. ಬಳಿಯ ಹೂಮರಗಳಿಂದ ಬೀಸುವ ಹೂಗಾಳಿ ಮೂಗಿಗೆ ಕಂಪನ್ನೂ ಮೈಗೆ ತಂಪನ್ನೂ ತರುತ್ತಿತ್ತು. ಅರಸನ ಮನಸ್ಸು ಸಮಭೂಮಿಯ ಹೊಳೆಯಂತೆ ಮಂದಗತಿಯಿಂದ ಎತ್ತಲೋ ಹರಿಯುತ್ತಿತು; ದಡದ ಗಿಡಬಳ್ಳಿಗಳಿಂದ ಉದುರಿದ ಹಳೆ ಹೂಗಳ ಎಸಳುಗಳಂತೆ ಯಾವುವೋ ಭಾವಗಳು ಅದರಲ್ಲಿ ತೇಲುತ್ತ ಹೋಗುತ್ತಿದ್ದುವು. ಅರಸನು ಅರೆಮುಚ್ಚಿದ ಕಣ್ಣುಗಳಿಂದ ನೆಲವನ್ನು ನೋಡುತ್ತಿದ್ದನು. ಮಂತ್ರಿ ಗಲ್ಲಕ್ಕೆ ಕೈಯಿಟ್ಟು ಆಲೋಚನಾಮಗ್ನನಾಗಿದ್ದನು. ಪಕ್ಕನೆ ಒಂದು ಕೋಮಲ ಕಂಠಧ್ವನಿ ಅವರ ಲಕ್ಷ್ಯವನ್ನು ಇದಿರಿಗೆ ಎಳೆಯಿತು. ಅರಸನ ಕಣ್ಣು ಜಲಕ್ ಎಂದಿತು. ಹೊಳೆಹೊಳೆಯುವ ಕರಿಯ ಬಣ್ಣದ ಹೊಸ ಹೆಣ್ಣು, 'ಬೆಳ್ಳಿ'ಯಂತೆ ನಗುತ್ತ ಹಾಡತೊಡಗಿದ್ದಳೆ! ಕೆಂಧೂಳಿಯಿಂದ ಕಮನೀಯವಾದ ಅವಳ ಮುಂಗುರುಳು ಗಾಳಿಗೆ ಕುಣಿಯುತ್ತಿತ್ತು. ಅವಳ ದುಂಡುದುಂಡಾದ ಅವಯವಗಳಲ್ಲಿ ಯೌವನವು ತುಳುಕುತ್ತಿತ್ತು. ಕೈ ಕಾಲಿನ ತೋರತೋರದ ಬೆಳ್ಳಿಯ ಬಳೆಗಳು ಸೌಂದರ್ಯವನ್ನು ಅಲ್ಲಿ ಬಂಧಿಸಿಟ್ಟ ಕೋಳಗಳಂತಿದ್ದುವು. ಕೈಕದಪುಗಳಲ್ಲಿ ಕೊಚ್ಚಿದ ಹಚ್ಚೆ ಅವಳ ದೇಹಕಾಂತಿಯ ನೀಲಸರೋವರದಲ್ಲಿ ತೇಲುವ ಹಾವಸೆಯೆಂಬಂತಿತ್ತು. ಅವಳ ಸ್ವರವೋ, ಕಿವಿಯಲ್ಲಿ ಮಾತ್ರವಲ್ಲ, ಎಲ್ಲ ಇಂದ್ರಿಯಗಳ ಮಾರ್ಗಗಳಲ್ಲಿಯೂ ನುಗ್ಗಿ ಎದೆಯನ್ನು ಜಕ್ಕುಲಿಸುತ್ತಿತ್ತು. ಅರಸನ ಬಾಯಿ ತೆರೆಯಿತು—"ಸುಂದರೀ! ನೀನು ಯಾವ ನಾಡಿನವಳು?"

" ಸ್ವಾಮಿ ! ಕೊಂಗುನಾಡಿನವಳು. "

" ನಿನಗೆ ಪಾತ್ರಾರರು ಯಾರಿರುವರು ? "

" ಊರಾಳುವ ಅರಸರು ! "

" ಯಾವ ಊರ ಅರಸರು ? ಕೊಂಗುನಾಡಿನ ದೊರೆಗಳೊ ? "

" ಕೊಂಗುನಾಡಲ್ಲಿ ಕೊಂಗರಸರು ; ಗಂಧದ ನಾಡಿನಲ್ಲಿ ಗಂಧರಸರು ! "

" ನಿನ್ನ ವೃತ್ತಿಯೇನು ? "

" ಹಾಡುವುದು, ಬೇಡುವುದು " ಎಂದು ಹೇಳುತ್ತಾ ಕೋಮರ ಹೆಣ್ಣು ಪುನಃ ಹಾಡತೊಡಗಿದಳು. ಅವಳ ಕಣ್ಣುಗಳಿಂದ ತಂಪು ತಂಪಾದ ಮಿಂಚು ಹೊರ ಟಿತು !

ಅರಸನ ಹೃದಯವು ದ್ರವಿಸಿತು.

" ಮಂತ್ರೀ ! ಇವಳಂತಹ ಸುಂದರಿಯನ್ನು ನೋಡಿರುವಿಯಾ ? " ಎಂದು ಅರಸು ಕೇಳಿದನು. ಮಂತ್ರಿಯ ಮುಖ ಗಂಭೀರವಾಗಿತ್ತು. ಮಂಜಿನ ಹೊಗೆ ಮುಸುಕಿದ್ದ ಪ್ರಾತಃಕಾಲದ ಹೂವಿನಂತೆ ಅರೆನಗೆಯೊಂದು ತಡವಾಗಿ ಅವನ ಮುಖದಲ್ಲಿ ಎನಳು ಜಿಟ್ಟಿತು.

ಮಂತ್ರಿಯ ನಗೆಯಲ್ಲಿ ಅರಸನು ತನ್ನ ಅಭಿಪ್ರಾಯಕ್ಕೆ ಸಮ್ಮತಿಯನ್ನು ಕಂಡನು! ' ಇಂತಹ ಹೆಣ್ಣು ಬಿಕ್ಕೆ ಬೇಡಬೇಕೆ ? ' ಎಂದುಕೊಂಡನು.

ಅರಸನು ಸುಂದರಿಯೊಡನೆ, " ನಿನಗೆ ನನ್ನ ಪರಿಚಯವಾಯಿತೆ ? " ಎಂದು ಕೇಳಿದನು.

" ಮುಖ ನೋಡಿದರೆ ತಿಳಿಯುವದಿಲ್ಲವೆ ತಾವು ದೊಡ್ಡ ಸ್ವಾಮಿ ಎಂದು ? "

ಅರಸನು ಅವಳ ಮಾತಿನಲ್ಲಿ ತೀವ್ರವಾದ ಬುದ್ಧಿಚಾತುರ್ಯವನ್ನು ಕಂಡನು ! " ನೀನು ನನ್ನ ಮನೆಗೆ ಬರುವೆಯಾ ? " ಎಂದನು.

" ತಮ್ಮ ಮನೆಗೇ ಹೊರಟವಳು ಸ್ವಾಮಿ !" ಎಂದಳು

' ಇವಳೇನು ದೈವವೇ ತನ್ನ ಬಳಿಗೆ ಕಳುಹಿದ ದೇವತೆಯೋ ? ' ಎಂದು ಅರ ಸನು ಅಚ್ಚರಿಗೊಂಡನು.

ಅರಸನು ಎದ್ದನು. ಆ ಸುಂದರಿಯನ್ನು ಬಾರೆಂದು ಕರೆದನು. ಅವಳು ಕಣ್ಣಲೆಯಿಸುತ್ತ ಮೈಯೊಲೆಯಿಸುತ್ತ ಹಿಂಬಾಲಿಸಿದಳು.

ಮಂತ್ರಿ ಕಣ್ಣರಳಿಸಿ ಆಕಾಶವನ್ನು ನೋಡಿ ನೀರವವಾಗಿ ಮೆಳ್ಳಗೆ ನಕ್ಕನು.

ಆ ಸುಂದರಿ ಅಂತಃಪುರಕ್ಕೆ ಮುಟ್ಟಿದೊಡನೆ ಅಲ್ಲಿದ್ದ ದಾಸಿಯೊಬ್ಬಳನ್ನು ಕಂಡು, "ಧರ್ಮಮ್ಮಾ!" ಎಂದಳು. ದಾಸಿ ಅವಾಕ್ಕಾದಳು ! ಬಳಿಯಲ್ಲಿದ್ದ ಅರ ಸನು ಒಂದಿಷ್ಟು ಸಂಕೋಚಪಟ್ಟನು. "ತನ್ನ ಭಾಗ್ಯದ ಅರಿವಾದಾಗ ಬಗೆ ಬೇರಾ ಗುವದು" ಎಂದು ಸಮಾಧಾನ ಮಾಡಿಕೊಂಡನು. ಸುಂದರಿಯನ್ನು ಏಕಾಂತಕ್ಕೆ ಕರೆದೊಯ್ದನು. " ರಮಣೀ ! ಇಂದಿನಿಂದ ನೀನು ನನ್ನ ಹೃದಯೇಶ್ವರಿ ! ಈ

ಅರಮನೆಯೆಲ್ಲ ನಿನ್ನದು; ಇಲ್ಲಿರುವವರೆಲ್ಲ ನಿನ್ನ ಪಾದಸೇವಕಿಯರು" ಎಂದು ತಿಳಿಸಿದನು. ಕೊರಮರ ಹೆಣ್ಣು ಮೊದಲು ನಕ್ಕಳು; ಅರಸನ ಮಾತನ್ನು ನಂಬಲಿಲ್ಲ. ಅರಸನು ಸಂಬಿಸಿದನು; ಅವಳು ಬೆದರಿದಳು; ಬೆವರಿದಳು. ಅರಸನು ಸಂತಯಿಸಿದನು; ಸಂತಸದಿಂದ ಅತ್ತಳು; ಮುಗುಳು ನಕ್ಕಳು, ನಗಾಡಿದಳು, ಹಾಡಿ ಕುಣಿದಳು !

ಅರಸನಿಗೆ ಆನಂದವಾಯಿತು. ದಾಸಿಯರನ್ನು ಕರೆದನು. ಅವಳಿಗೆ ಮಂಗಳ ಸ್ನಾನ ಮಾಡಿಸಿ, ನಲ್ಮೆಯರಸಿಯ ಪದವಿಗೊಪ್ಪುವ ವೇಷಭೂಷಣಗಳನ್ನು ತೊಡಿಸಲು ಅಪ್ಪಣೆಕೊಟ್ಟನು.

ಅಂತಃಪುರದಲ್ಲಿ ಉತ್ಸವವಾಯಿತು. ಅರಸನ ಜೀವವೃಕ್ಷ ಹೂ ಬಿಟ್ಟಿತು. ಅವನು ಆ ಸುಂದರಿಯನ್ನು ಒಂದು ಗಳಿಗೆಯೂ ಅಗಲದಿದ್ದನು. ಅವಳ ನೋಟಗಳಲ್ಲಿ ಅವನ ಕಣ್ಣು ಉಯ್ಯಾಲಾಡುತ್ತಿತ್ತು. ಅವಳ ಬಣ್ಣದುಟಿಯ ಅಲುಗಾಟದಲ್ಲಿ ಅವನೆದೆ ಅರಳೋ ಮುಗುಳೋ ಆಗುತ್ತಿತು. ಅವನ ಜೀವದ ಗಿಳಿ ಅರಸುತ್ತಿದ್ದ ಸೇರಿಲಹಣ್ಣು ಕೊನೆಗೆ ಹೇಗೂ ದೊರಕಿತು.

ಅರಮನೆಯಲ್ಲಿ ಆರೂಢಳಾದಂದಿನಿಂದ ಆ ನವ್ಯಸುಂದರಿ ದಿನದಿನಕ್ಕೆ ಬಣ್ಣವೇರುತ್ತಿದ್ದಳು ; ಅರಸನ ಸಂತೋಷಸೇವಂತಿಗೆ ದಿನದಿನಕ್ಕೆ ದಳವೇರುತ್ತಿತ್ತು.

ಕೆಲವು ತಿಂಗಳು ಸಂದುವು. ಕಿರಿಯರಸಿಗೆ ಆಗಾಗ ಆಕಳಿಕೆ : ಮುಖ ಕ್ಕೊಂದು ಮೋಡ. ನೋಟ ಮಂದ ಮಂದ ; ಮಾತು ಬಿಂದು ಬಿಂದು. ಪ್ರಯತ್ನದ ನಗೆ ; ಕಾರಣವಿಲ್ಲದ ಕೋಪ. ಆಹಾರದಲ್ಲಿ ಅರುಚಿ, ವಿಹಾರದಲ್ಲಿ ಬೇಸರ; ಸಿಂಗರದಲ್ಲಿ ತಾತ್ಸಾರ. ಮಲಗಿದಲ್ಲಿ ಕಣ್ಣೀರು, ಕುಳಿತಲ್ಲಿ ನಿಟ್ಟುಸಿರು. ಇದೇನಿದೇನು ? ಅರಸು ಕೇಳಿದರೆ ಅಳುವಳು , ದಾಸಿಯರು ಕೇಳಿದರೆ ಸಿಡಿಯುವಳು ; ಹಿರಿಯರಸಿ ನೋಡಲು ಬಂದರೆ ಅಡಗುವಳು. ದೇಹ ಕೃಶವಾಯಿತು ; ಮೈ ಬಣ್ಣಗೆಟ್ಟಿತು.

ರಾಜವೈದ್ಯರು ಬಂದರು, ಪರೀಕ್ಷಿಸಿದರು ; ಯಾವ 'ರೋಗ'ವೂ ಇಲ್ಲವೆಂದರು. ರಾಜಮಾಂತ್ರಿಕರು ಬಂದರು, ಮಂತ್ರಿಸಿದರು ; ಯಾವ 'ಬಾಧೆ'ಯೂ ಇಲ್ಲವೆಂದರು. ನಲ್ಮೆಯರಸಿ ದಿನದಿನಕ್ಕೆ ಕಂದಿ ಕುಂದಿದಳು. ಅರಸನ ಹೃದಯ, ರಜನಿಗೆ ಅನಂತವಾದ ಅಮಾವಾಸ್ಯೆ ಸಮೀಪಿಸುವಂತೆ ಕಂಡಿತು.

ಮಂತ್ರೀಶನು ಬಂದನು ; ಅಂತಃಪುರದ ಏಕಾಂತಮಂದಿರವನ್ನು ಹೊಕ್ಕನು. ಅರಸನ ಕಪಪಿಗೊತ್ತಿದ ಕೈಯಿಂದ ನೀರು ಮೊಳಕೈಯಲ್ಲಿ ಇಳಿಯುತ್ತಿತ್ತು ; ಮುಖ ವಿವರ್ಣವಾಗಿತ್ತು.

"ಮಂತ್ರೀ ! ನನ್ನ ಅರಗಿಳಿಯನ್ನುಳಿಸಲಾರೆಯಾ ?"

"ಪ್ರಭೋ ! ಉಳಿಸಬಲ್ಲೆ. ಆದರೆ. . . . . ."

"ಆದರೇನು ? ಅಳುಕಬೇಡ ! ಯಾವ ತ್ಯಾಗಕ್ಕೂ ಸಿದ್ಧನಾಗಿರುವೆನು."

" ಒಂದು ತಿಂಗಳು ಒಡೆಯರು ಆಕೆಯನ್ನು ಅಗಲಿರಬೇಕಾಗುವುದು."

" ಅದೇಕೆ ? "

" ಪ್ರಭುಗಳು ಪ್ರಶ್ನಿಸಬಾರದು."

ಅರಸು ಒಪ್ಪಿದನು.

ಅರಮನೆಗೆ ಅರ್ಧ ಹರದಾರಿ ದೂರದಲ್ಲಿ ಒಂದು ಚಿಕಿತ್ಸಾಲಯ ಸಿದ್ಧವಾಯಿತು. ಅದರ ಸಮೀಪದಲ್ಲಿ ಒಬ್ಬಿಬ್ಬರು ಆಪ್ತಸೇವಕರ ಮನೆಗಳೂ ನಿರ್ಮಿತವಾದುವು. ಸುತ್ತಲೂ ಎತ್ತರವಾದ ಪ್ರಾಕಾರವೇರಿತು. ನಲ್ಮೆಯರಸಿಯನ್ನು ಅಲ್ಲಿಗೆ ಕರೆದೊಯ್ಯಲಾಯಿತು. ಆ ಚಿಕಿತ್ಸಾಲಯ ಅವಳ ವಾಸಗೃಹವಾಯಿತು.

ಮಂತ್ರಿಯೊಬ್ಬನಲ್ಲದೆ ಬೇರಾರಿಗೂ ಪ್ರಾಕಾರದೊಳಗೆ ಪ್ರವೇಶವಿರಲಿಲ್ಲ.

ಅರಸನಿಗೆ ಮೂವತ್ತು ದಿನವೆಂಬುದು ಮುನ್ನೂರಾಗಿ ಕಂಡಿತು. ಅಷ್ಟು ದಿನ ಅವನು ಕಿರಿಯರಸಿಯ ಅಂತಃಪುರದಿಂದ ಹೊರಬರಲಿಲ್ಲ.

ತಿಂಗಳು ಕಳೆಯಿತು. ಪ್ರಾತಃಕಾಲ ಮಂತ್ರಿ ಬಂದು ಅರಸನನ್ನು ಕಂಡನು. ಉತ್ಕಂಠನಾದ ಅರಸನು " ಹೇಗಿರುವಳು ? " ಎಂದನು.

ಮಂತ್ರಿ ಮುಗುಳುನಗುತ್ತ " ಕೊಬ್ಬಿದ ಕೃಷ್ಣಮೃಗಿಯಂತೆ ! " ಎಂದನು.

ಅರಸನ ರೋಮರಂಧ್ರಗಳಲ್ಲೆಲ್ಲ ಹರ್ಷ ಸಂಚಾರವಾಯಿತು; ಮಂತ್ರಿಯನ್ನು ಬಿಗಿಯಾಗಿ ಅಪ್ಪಿದನು. " ಅವಳನ್ನಿಲ್ಲಿಗೆ ಕರೆಯಿಸು " ಎಂದನು.

" ನಾವೇ ಅಲ್ಲಿಗೆ ಹೋಗಿ, ' ರಾಣಿ ' ಯನ್ನು ಕರೆತರುವುದು ಉಚಿತ " ಎಂದನು ಮಂತ್ರಿ.

ಅರಸನ ಮನಸ್ಸಿಗೆ ಗರಿ ಮೂಡಿತು. ಇಬ್ಬರೂ ಕೈಕೈ ಹಿಡಿದು ನಡೆದರು. ಅರಸನ ಮುಖದಲ್ಲಿ ಮಾತಿನ ಹೂಮಳೆ. ಮಂತ್ರಿಯ ಮುಖದಲ್ಲಿ ನಿಕ್ಷಿಪ್ತವಾದ ನೋಟ.

ಚಿಕಿತ್ಸಾಲಯದ ಪ್ರಾಕಾರವನ್ನು ದಾಟಿದರು. ರಾಣಿಯ ಚಿಕಿತ್ಸಾಲಯದ ಸುತ್ತಲೂ ಉದ್ಯಾನವಿಲ್ಲ; ಲತಾಮಂಟಪಗಳಿಲ್ಲ; ಸಾಕಷ್ಟು ಸ್ವಚ್ಛತೆಯೂ ಇಲ್ಲ;— ಅರಸನ ಮನಸ್ಸಿನಲ್ಲಿ ಈ ಮಾತುಗಳು ಹಾದುಹೋದವು.

ಚಿಕಿತ್ಸಾಲಯದ ಮೆಟ್ಟಲನ್ನೇರಿದರು. ಒಳಗಿನಿಂದ ದಿವ್ಯವಾದ ಕಂಠಧ್ವನಿ ! ಹಾಡು ಕೇಳುತ್ತಿದೆ ! ಅರಸನ ಎದೆ ಕುಣಿಯಿತು ; " ಸುಂದರೀ "—ಎಂದು ಬಾಯಿ ತೆರೆಯುವಷ್ಟರಲ್ಲಿ ಮಂತ್ರಿ ಸನ್ನೆಮಾಡಿದನು.

ಇಬ್ಬರೂ ಜಗಲಿಯಲ್ಲಿ ನಿಂತು ಕಿಟಕಿಯಲ್ಲಿ ಕಣ್ಣಿಕ್ಕಿದರು.

ಅರಸನು ನೋಡಿದನು ; ನೋಡಿ ಕೇಳಿದನು. ಕೇಳುತ್ತ ನೋಡುತ್ತ ರೆಪ್ಪೆಯಲುಗದೆ, ಉಸಿರೆಳೆಯದೆ ನಿಂತನು !

ಅದರೊಳಗೆ ಏನಿತ್ತು ? ಹೇಗಿತ್ತು ?

ಅದೊಂದು ದೊಡ್ಡ ಚಿತ್ರಶಾಲೆ. ಗೋಡೆ ತುಂಬ ಚಿತ್ರಗಳು ; ತರತರದ

ಹೆಂಗಸರು, ಗಂಡಸರು, ಮಕ್ಕಳು. ಬೀದಿಯ ದೃಶ್ಯಗಳು ; ಮನೆಬಾಗಿಲಲ್ಲಿ ನಿಂತ ಮುತ್ತೈದೆಯರು. ಎಡೆಯಡೆಯಲ್ಲಿ, ಗೋಡೆಯಲ್ಲಿ ಕೊರೆದ ಗೂಡುಗಳು. ಗೂಡುಗಳಲ್ಲಿ—ಒಂದರಲ್ಲಿ ಅನ್ನ, ಇನ್ನೊಂದರಲ್ಲಿ ರೊಟ್ಟಿ, ಮತ್ತೊಂದರಲ್ಲಿ ಪಲ್ಯ ; ಮಗುಳೊಂದರಲ್ಲಿ ಕಡಲೆ, ಬೇರೊಂದರಲ್ಲಿ ಹುರಿಯಕ್ಕಿ. ಹೀಗೆ ಒಂದೊಂದರಲ್ಲಿ ಒಂದೊಂದು ವಸ್ತು. 'ರಾಣಿ' ಯಾವುದಾದರೊಂದು ಗೂಡಿನ ಬಳಿಗೆ, "ಧರ್ಮವ್ಮಾ!" ಎಂದು ಹೇಳುತ್ತ ಮೈಯೊಲೆದೊಲೆದು ನಗುನಗುತ್ತ ಬರುವಳು ; ಹಾಡುವಳು. ಹುಬ್ಬು ಕುಣಿಸಿ, ಕೊರಳು ಕೊಂಕಿಸಿ, ಕಣ್ಣಲೆಯಿಸಿ ಇನ್ನೊಮ್ಮೆ, "ಧರ್ಮವ್ಮಾ!" ಎಂದು ಕೂಗುವಳು. ಮೈಬಾಗಿ ಗೂಡಿನೊಳಗಿಂದ ಒಂದಿಷ್ಟು ತಿಂಡಿ ಎತ್ತಿಕೊಳ್ಳುವಳು, ಒಮ್ಮೊಮ್ಮೆ ಹಾಗೆಯೇ ತಿನ್ನುವಳು ; ಒಮ್ಮೊಮ್ಮೆ ಸೆರಗಿನಲ್ಲಿ ಹಾಕಿಕೊಳ್ಳುವಳು. ಹೀಗೆ ಎಲ್ಲಾ ಗೂಡುಗಳ ಮುಂದೆ ನಡೆದ ಬಳಿಕ ಬೀದಿಯ ಚಿತ್ರದ ಬಳಿಯಲ್ಲಿ ಕುಳಿತುಕೊಂಡು, ಸೆರಗಿನೊಳಗಿಂದ ತೆಗೆದು ತಿನ್ನುತ್ತಾ ಹೊತ್ತು ಕಳೆಯುವಳು. ಒಮ್ಮೆ ಯಾರೊಡನೆಯೋ ಮಾತಾಡುವಂತೆ, ಇನ್ನೊಮ್ಮೆ ಜಗಳಾಡುವಂತೆ, ಏನ್ನೋ ಹೇಳುವಳು. ಅಲ್ಲೇ ಸ್ವಲ್ಪ ಹೊತ್ತು ಮಲಗುವಳು. ಎದ್ದು ತಿರುಗಿ ಅದೇ ಹಾಡು !

ಅರಸನು ಇದನ್ನು ನೋಡುತ್ತ ಎರಡು ಗಳಿಗೆ ನಿಂತನು. ಅವನ ಮುಖದಲ್ಲಿ ನಗೆಯಿರಲಿಲ್ಲ ; ವ್ಯಸನವೂ ಕಂಡುಬರಲಿಲ್ಲ.

"ಮಂತ್ರೀ ! ಇವಳೇ ಕಿರಿಯ ರಾಣಿಯೋ ?"

"ಹೌದು ಮಹಾಪ್ರಭೋ !"

"ಅಲ್ಲ ! ಇವಳೀಗ ರಾಣಿಯಲ್ಲ ; ಕೊರಮರ ಹೆಣ್ಣು."

"ಪ್ರಭುಗಳ ಚಿತ್ತ !" ಎಂದು ಮಂತ್ರಿ ಎದೆಯ ಭಾರವನ್ನು ಉಸಿರಿನಲ್ಲಿ ಇಳಿಸಿದನು.

ಚಿತ್ರಶಾಲೆಯ ಬಾಗಿಲನ್ನು ಸೇವಕನು ತೆರೆದನು. ಕೊಂಗುನಾಡಿನ ಕೊರಮರ ಹೆಣ್ಣು ಬಾಗಿಲ ಬಳಿಗೆ ಬಂದಳು. ಅರಸನನ್ನು ಕಂಡು ಬೆಚ್ಚಿದಳು !

"ಸ್ವಾಮಿ !" ಎಂದು ನಡನಡುಗಿ ಕೈಮುಗಿದಳು.

ಅವಳ ಕಣ್ಣಲ್ಲಿ ನೀರುಂಡ ದೃಷ್ಟಿಧಾರೆ ಅವನ ಎದೆಯನ್ನು ಸೀಳಿತು !

"ಮಂತ್ರೀ ! ಈ ಕೊರಮರ ಹೆಣ್ಣು ರಾಣಿಯಾಗಬಲ್ಲಳೆ ?"

"ಪ್ರಭುಗಳ ಚಿತ್ತ !"

"ಹಾಗಾದರೆ ಇವಳು ರಾಣಿಯಾಗಲಿ !"

"ಪ್ರಭುಚಿತ್ತ !"

ಮಂತ್ರಿ ಮತ್ತೊಂದು ನಿಟ್ಟುಸಿರೆಳೆದುಕೊಂಡನು.

ಕೊಪ್ಪಿದ ಕಿರಿಯರಸಿ ಹೊಳೆಹೊಳೆಯುತ್ತ ಅರಮನೆಗೆ ಬಂದಳು. ಬಂದವಳೇ ಸಿಂಗರಿಸಿಕೊಂಡಿದ್ದ ದಾಸಿಯರನ್ನು ಕಂಡು, "ಧರ್ಮವ್ಮಾ!" ಎಂದಳು. ಅವರೊ-

ಳಗೆ ನವಯುವತಿಯೊಬ್ಬಳು ಕಿಲಕಿಲನೆ ನಕ್ಕಳು; ಓಡಿಹೋಗಿ ಹಿರಿಯರಸಿಯೊಡನೆ, "ಧರ್ಮಮ್ಮರಸಿ ಬಿಜಯಂಗೈದಿರುವರು !" ಎಂದು ಹೇಳಿ ಮತ್ತೆ ಮತ್ತೆ ನಕ್ಕಳು. ಮಹಾರಾಣಿ ಅವಳನ್ನು ಕೆರಳಿ ನೋಡಿದಳು! ಯುವತಿ ತಲೆತಗ್ಗಿಸಿದಳು. ಸ್ವಲ್ಪ ತಡೆದು ಮಹಾರಾಣಿಯೂ ತಲೆಬಾಗಿ ಕಣ್ಣೀರು ಸುರಿಸಿದಳು.

ಕಿರಿಯರಸಿಗೆ ಒಂದೆರಡು ದಿನಗಳಲ್ಲೇ ಅರುಚಿ ತಲೆದೋರಿತು; ಆಕಳಿಕೆ ಹುಟ್ಟಿತು; ಆಯಾಸವುಂಟಾಯಿತು. ಅರಸನು ಒಬ್ಬನೇ ಕುಳಿತು ಚಿಂತಿಸಿದನು.

ಅರಸನು ಮಂತ್ರಿಯನ್ನು ಬಳಿಗೆ ಕರೆದನು. ತನ್ನ ನಿರ್ಧಾರವನ್ನು ತಿಳಿಸಿದನು!

"ಪ್ರಭುಗಳ ಚಿತ್ತ!" ಎಂದು ಗಂಭೀರವಾಗಿ ಮಂತ್ರಿ ನುಡಿದನು.

ಮರುದಿನ ಮುಂಜಾವದಲ್ಲಿ ದಾಸಿಯರು ಸೇವೆಗೆ ಬಂದಾಗ, ಸಜ್ಜೆಮನೆಯಲ್ಲಿ ಬರಿಯ ಹಾಸಿಗೆ! ಬರಿಯ ಉಡಿಗೆ ತೊಡಿಗೆ! ಅರಸನಿಲ್ಲ! ಅವನ ನಲ್ಮೆಯ ಅರಸಿಯೂ ಇಲ್ಲ !

ಮಂತ್ರಿ ಹಿರಿಯರಸಿಯನ್ನು ಕಂಡು ನಮಿಸಿ ರಾಜಮುದ್ರಿಕೆಯನ್ನು ಸಮರ್ಪಿಸಿದನು. ಆಕೆ ಎದ್ದು ನಿಂತು ಆ ಉಂಗುರವನ್ನು ಸ್ವೀಕರಿಸಿ ಸೀಮಂತ ಪ್ರದೇಶದಲ್ಲಿಟ್ಟು, ಕಣ್ಣಿಗೊತ್ತಿಕೊಂಡು, 'ರಾಜಾಜ್ಞೆ!' ಎಂದು ನುಡಿದು ತನ್ನ ಬಲಗೈಯಲ್ಲಿ ಧರಿಸಿಕೊಂಡಳು.

ಅರಸನು ಕಿರಿಯರಸಿಯೊಡನೆ ರಾಜ್ಯತ್ಯಾಗ ಮಾಡಿದುದನ್ನು ಕೇಳಿ ರಾಜಮಾತೆ ನಿಟ್ಟುಸಿರು ಬಿಟ್ಟಳು. ಆಕೆಯ ದಾಸಿ 'ಅಯ್ಯೋ' ಎಂದು ಅತ್ತಳು.

ಅಂತಃಪುರಚಾರಿಣಿಯಾದ ನವಯುವತಿಯೊಬ್ಬಳು ಒಂದು ನಿರ್ಜನ ಪ್ರದೇಶಕ್ಕೆ ಓಡಿ, "ಧರ್ಮಮ್ಮ ಅರಸನನ್ನು ಕಟ್ಟಿಕೊಂಡು ಓಡಿಹೋದಳು!" ಎಂದು ಹೇಳಿಕೊಂಡು ಕಿಲಕಿಲನೆ ನಕ್ಕಳು !

ಕೊಂಗುನಾಡಿನ ಕೊರಮರ ಹೆಣ್ಣು ಅರಸನನ್ನು ಹಾರಿಸಿಕೊಂಡು ಹೋದಳಂತೆ—ಎಂದು ಊರೆಲ್ಲ ಗಜಬಜಿಸಿತು.

ಕೊರಮಸುಂದರಿಗಾಗಿ ಅರಸನು ಕೊರಮನಂತೆಯೇ ಮೈಮಾಟಗಳಲ್ಲಿ ಕಾಣಿಸಿಕೊಂಡನು. ಅವಳ ಒಲ್ಮೆ ಇಮ್ಮಡಿಸಿತು. ಇದರಿಂದ ಅರಸುಕೊರಮನ ಸುಖ ಕೊನರೇರಿತು. ಅವರು ಹಗಲೆಲ್ಲ ಜಕ್ಕವಕ್ಕಿಗಳಂತೆ ಸಹಜರಮಣೀಯವಾದ ವನ ನದೀತೀರಪ್ರದೇಶಗಳಲ್ಲಿ ಸಂಚರಿಸಿದರು; ಇರುಳೆಲ್ಲ ಚಕೋರಗಳಂತೆ ಬೆಳದಿಂಗಳಲ್ಲಿ ವಿಹರಿಸಿದರು. ಕಾಡುಮೇಡುಗಳಲ್ಲಿ ನವಿಲುಗಳಂತೆ ಕುಣಿದರು. ಪಾರಿವಾಳಗಳಂತೆ ಊರಿಂದೂರಿಗೆ ಹಾರಾಡಿದರು. ಕಿರುಮಕ್ಕಳಂತೆ ಬೀದಿಯ ಬದಿಯ ಧೂಳಿನಲ್ಲಿಯೂ ಹೊರಳಾಡಿದರು; ಮಳೆನೀರಲ್ಲಿ ನಡೆದಾಡಿದರು. ಮಣ್ಣೊಂದಿಗೆ ಮಣ್ಣಾಗಿ, ನೀರೊಂದಿಗೆ ನೀರಾಗಿ, ಗಾಳಿಯೊಂದಿಗೆ ಗಾಳಿಯಾಗಿ ಸುಖಿಸಿದರು.

ಆರು ವರ್ಷಗಳು ಹೀಗೆ ಸಂದುವು. ಅವರು ಹಲವು ದೇಶಗಳಲ್ಲಿ ಸುತ್ತಾಡಿ ಕೊಂಗುನಾಡಿಗೆ ಬಂದರು. ಒಂದೂರ ಬಳಿಯ ಆಲದ ಮರದಡಿಯಲ್ಲಿ ಬಿಸಿಲಿಗೆ

ವಿಶ್ರಮಿಸಿದರು. ದಾರಿಗನೊಬ್ಬನನ್ನು ಕೊರಮರಸಿ ದೂರದಲ್ಲಿ ಕಂಡಳು. ತನ್ನರಸನೊಡನೆ "ನಾವು ಬೇಗನೆ ಇಲ್ಲಿಂದ ಮರೆಯಾಗುವ!" ಎಂದಳು.

"ಅದೇಕೆ?" ಎಂದನು ಅರಸು.

ಕೊರಮರಸಿಯ ಕಣ್ಣು ಅತಿತರಲವಾಗಿ ಅತ್ತಿತ್ತ ಓಡಿತು. ಅವಳ ಕೆಂದುಟಿ ಆಗ ಬಿಳುಪೇರಿತು.

"ಏಕೆ ಹೆದರುವೆ ?" ಎಂದನು ಅರಸು.

ಅವಳ ದನಿ ನಡುಗಿತು. "ನಾನು ಈವೂರವಳು" ಎಂದಳವಳು.

"ಅದರಿಂದೇನು ಭಯ ?"

ಕೊರಮರಸಿ ತಲೆಬಾಗಿಸಿ, ಕಣ್ಣೀರು ಹನಿಸಿ, "ನಾನು ಮೊದಲೊಬ್ಬ ಕೊರಮನನ್ನು ಕೈಹಿಡಿದಿದ್ದೆ" ಎಂದಳು. ಅರಸು ನಕ್ಕನು. "ನಾನೂ ಮೊದಲೊಬ್ಬಳು ರಾಜಪುತ್ರಿಯನ್ನು ಮದುವೆಯಾಗಿದ್ದೆ!" ಎಂದನು. ಕೊರಮರಸಿಯ ಭಯ ತೊಲಗಲಿಲ್ಲ.

ದಾರಿಗನು ಸಮೀಪಿಸಿದನು. ಅವಳು ತಲ್ಲಣಿಸಿದಳು ! ಅರಸನ ಕಿವಿಯಲ್ಲಿ "ಇವನೇ ನನ್ನ ಕೈಹಿಡಿದವನು !" ಎಂದಳು.

ಅರಸನು ಸುಮ್ಮನಿದ್ದನು.

ಆ ದನಿಗನು ಇದಿರಲ್ಲಿ ಬಂದು ನಿಂತನು, ನೋಡಿದನು, ದಿಟ್ಟಿಸಿದನು; ಹುಬ್ಬೆತ್ತಿ ದಟ್ಟಿಸಿದನು–"ಓಹೋ! ನೀನು ಇದ್ದೀಯಾ ? ಆ ಗೌಡನ ಜತೆಯಲ್ಲಿ ಓಡಿಹೋದವಳು, ಅವನನ್ನು ಬಿಟ್ಟು ಇವನನ್ನು ಹಿಡಿದಿದ್ದೀಯಾ ? ಬಾ ಹೆಣ್ಣೆ! ಬಾರೇ! ಇಲ್ಲಿ ಬಾರೇ !" ಎಂದು ಒದರುತ್ತ ಕೊರಮರಸಿಯ ಬಳಿಗೆ ಬಂದನು.

ಅರಸನು ಸಹಿಸದೆ,–"ದೂರ ಸರಿ! ಸರಿದು ನಿಲ್ಲು!" ಎಂದನು. ಕೆಂಗಣ್ಣಿನ ದನಿಗನು "ಹಹಾ ! ನನ್ನ ಹೆಂಡತಿಯ ಬಳಿಗೆ ನಾ ಬರುವಾಗ, ನೀನೇನೋ ತಡೆಯುವವನು ? ಇವಳನ್ನು ಹಾರಿಸಿಕೊಂಡು ಬಂದು ನಾಚಿಗೆಗೆಟ್ಟು ಮಾತಾಡುತ್ತಾನೆ, ಕಳ್ಳ!" ಎಂದು ಹೇಳಿದವನೇ, ಚಿಗರಿಯಂತೆ ಬಿಚ್ಚಲೆಯಾಗಿದ್ದ ಕೊರಮರಸಿಯ ಮುಡಿಯನ್ನು ಹಿಡಿದನು.

ಅರಸನಿಗೆ ತಡೆಯಲಾಗಲಿಲ್ಲ. ಥಟ್ಟನೆ ಮುಂದೆ ಹಾರಿ, ದನಿಗನನ್ನು ದೂಡಿ ಅರಸಿಯ ಕೈಯನ್ನು ಹಿಡಿದುಕೊಂಡನು. ದನಿಗನು ಹಲ್ಲು ಕಚ್ಚಿ, ಅರಸನನ್ನು ಕುತ್ತಿಗೆ ಹಿಡಿದು ದೂರ ದಬ್ಬಿದನು, ಕೊರಮರಸಿಯ ತುರುಬು ಹಿಡಿದು ಎಳೆದನು.

"ಅಯ್ಯೋ! ಬಿಡು! ನಿನ್ನೊಟ್ಟಿಗೆ ಬರುತ್ತೇನಪ್ಪಾ ಬರುತ್ತೇನೆ ! ಇನ್ನು ಓಡಿ ಹೋಗುವದಿಲ್ಲ. ದಮ್ಮಯ್ಯ! ಬಿಡು! ಕೊಲ್ಲಬೇಡ!" ಎಂದವಳು ಬೊಬ್ಬಿಡುತ್ತಿರುವಾಗಲೇ ಅವಳ ಬೆನ್ನಿಗೊಂದು ಗುದ್ದಿದನು.

ಅಷ್ಟರಲ್ಲಿ ಅರಸನು ಎದ್ದು ಬಂದು ಮುಷ್ಟಿ ಬಿಗಿದು ಕೋಪದಿಂದ "ನಾನು ಯಾರೆಂದು ತಿಳಿದೆ?" ಎಂದು ಗರ್ಜಿಸಿದನು. ದನಿಗನು ಗರ್ವದಿಂದ ನಕ್ಕು "ಎಲ್ಲಿ

ಬಲ್ಲೆ! ಮುಚ್ಚು ಬಾಯಿ! ಹೆಣ್ಣುಗಳ್ಳ!" ಎಂದು ಹೇಳುತ್ತಾ ಅರಸಿಯನ್ನು ಎಳೆದು ಕೊಂಡು ಹೋಗಿಯೇ ಬಿಟ್ಟನು !

ಕೊರಮರಸಿ ಹಿಂತಿರುಗಿ ಕೂಡ ನೋಡಲಿಲ್ಲ !

ಅರಸನು ಅಲ್ಲೇ ಸ್ತಂಭಿತನಾದನು !

ಒಂದು ದಿನ ಸಂಜೆ ಮಹಾಮಂತ್ರಿ ಕೋಟೆಯ ಹೊರಗಿನ ಶಿಲಾವೇದಿಕೆಯಲ್ಲಿ ಕುಳಿತಿದ್ದನು. ಬಳಿಯ ಸುರಗಿಯ ಮರದಿಂದ ವೇದಿಕೆಯ ಮೇಲೆ ಹೂಗಳು ಉದುರುತ್ತಿದ್ದುವು. ತುಂಬಿಗಳು ಮರದಲ್ಲೆಲ್ಲ ಗುಂಜಿಸುತ್ತಿದ್ದುವು. ದೂರದಿಂದೊಂದು ಕಲಕಂಠವು "ಕುಹೂ" ಎಂದಿತು.

ಪಾಂಥನೊಬ್ಬನು ಕೋಟೆಯ ಬಾಗಿಲ ಕಡೆಗೆ ಬರುತ್ತಿದ್ದನು. ಹುಲಿನ ವಸ್ತ್ರ, ಮಾಸಿದ ಮೈ, ಕ್ಷೀಣ ದೇಹ; ಹೊದರು ಗಡ್ಡ, ತಿದ್ದಿದ ಮೀಸೆ, ಬಾಡಿದ ಮೋರೆ; ಆದರೂ ಕಣ್ಣಲ್ಲೊಂದು ಕಾಂತಿ, ಹಣೆಯಲ್ಲೊಂದು ಹಿರಿಮೆ.

ಪಾಂಥನು ವೇದಿಕೆಯನ್ನು ಸಮೀಪಿಸಿದನು.

ಮಂತ್ರಿಯ ಕಣ್ಣರಳಿತು; ಮೊಗವುಬ್ಬಿತು. ಅವನು ವೇದಿಕೆಯಿಂದ ಕೆಳಗಿಳಿದನು. ಪಾಂಥನಿಗಿದಿರಾಗಿ ಎರಡು ಹೆಜ್ಜೆ ನಡೆದನು.

ಪಾಂಥನು ತಲೆಬಾಗಿ ನಿಂತನು.

ಮಂತ್ರಿಯ ಕಣ್ಣಿನಿಂದ ತಟಕ್ಕನೆ ಹನಿಯುದುರಿತು; "ಪ್ರಭೋ! ಬಂದೆಯಾ!" ಎಂದು ಆಲಿಂಗನಕ್ಕಾಗಿ ತನ್ನ ದೀರ್ಘ ಬಾಹುಗಳನ್ನು ನೀಡಿದನು.

ಪಾಂಥನು ಕೊಸರಿಕೊಂಡು ಹಿಂದೆ ಸರಿದನು. "ನಾನು ಪ್ರಭುವಲ್ಲ; ಕೊರಮನು!" ಎಂದನು. ಅವನ ಕಣ್ಣುಗಳು ನೀರಿಳಿಯುವ ನಕ್ಷತ್ರಗಳಾಗಿದ್ದವು.

ಮಂತ್ರಿ ಕ್ಷಣಮಾತ್ರ ನಿಂತನು. ಪಕ್ಕನೆ ಕೈಚಾಚಿ "ಗೆಳೆಯಾ!" ಎಂದು ಬಿಗಿಯಾಗಿ ಅಪ್ಪಿಕೊಂಡನು. ಅರಸನೂ ಗಾಢವಾಗಿ ಆಲಿಂಗಿಸಿದನು. ಅವನ ಕಣ್ಣುಗಳಿಂದಿಳಿದ ಬಿಸಿಲುಮಳೆಯಲ್ಲಿ ನೆಲ ನಾಂದಿತು.

ಮರುದಿನ ಅರಮನೆಯಲ್ಲಿ ಮಹೋತ್ಸವವಾಯಿತು. ಮಹಾರಾಣಿ ಮಂತ್ರಿಯ ಸಂಮುಖದಲ್ಲಿ ಅರಸನಿಗೆ ಮುದ್ರೆಯುಂಗುರವನ್ನು ತೊಡಿಸಿ ನಮಿಸಿದಳು.

ಅರಸನು ತನ್ನ ಹೃದಯಪೀಠದಲ್ಲಿ ಮಹಾರಾಣಿಗೆ ಮಹಾಭಿಷೇಕ ಮಾಡಿದನು.

ಒಂದುದಿನ ಅಪರಾಹ್ನ ಸೂರ್ಯನು ಸುಖಕರನಾಗಿದ್ದ ಕಾಲದಲ್ಲಿ, ಅರಸನೂ ಮಂತ್ರಿಯೂ ಉದ್ಯಾನವೀಥಿಯಲ್ಲಿ ಸಂಚರಿಸುತ್ತಿದ್ದರು. ಇಬ್ಬರೂ ಮಾತಾಡದಿದ್ದರು.

ಅರಸನು ತಲೆಯೆತ್ತಿದನು. "ಮಂತ್ರೀ, ನೀನಂದು ಹೇಳಿದುದು ಅರ್ಧ ಸತ್ಯ!" ಎಂದನು.

"ಅಲ್ಲ, ಪ್ರಭೋ! ಪೂರ್ಣ ಸತ್ಯ."

ಅರಸನು ಪುನರ್ವಿಚಾರಮಗ್ನನಾದನು. ಮಂತ್ರಿ ಸ್ವಸ್ಥನಾಗಿದ್ದನು.

" ಮಂತ್ರೀ ! ಸಮಾಧಾನವಾಗಲಿಲ್ಲ " ಎಂದನು ಅರಸು.

" ಪ್ರಭೋ ! ಸತ್ಯದ ವಿವರ ಕರ್ಕಶವಾಗಿದೆ ! " ಎಂದನು ಮಂತ್ರಿ.

ಅರಸನು ನಕ್ಕನು. " ಸತ್ಯವು ಎಂತಿದ್ದರೂ ಸೇವ್ಯ ! " ಎಂದನು.

ಮಂತ್ರಿ ಒಂದಿಷ್ಟು ತಡೆದನು. " ಅಂತಾದರೆ ಪ್ರಭುಗಳು ಪ್ರಶ್ನಿಸಬೇಕು " ಎಂದನು.

" ಮಂತ್ರೀ ! ನೀನು ' ಮನಸ್ಸೇ ಮೆಚ್ಚು ' ಎಂದೆ. "

" ಹೌದು, ಪ್ರಭೋ ! "

" ಕೊರಮರ ಹೆಣ್ಣಿಗೆ ನನ್ನ ಮನಸ್ಸು ಮಾರುವೋದುದರಲ್ಲಿ ಆ ಸತ್ಯ ಸ್ಫುಟವಾಯಿತು. "

" ಸ್ಫುಟವಾಯಿತು, ಪ್ರಭೋ ! "

" ನೀನು ' ಅಭ್ಯಾಸವೇ ಮೆಚ್ಚು ' ಎಂದೆ. "

" ನಿಜ, ಪ್ರಭೋ ! "

ಕೊರಮರ ಹೆಣ್ಣಿಗೆ ಅರಮನೆ ಅಸಹ್ಯವಾಯಿತು. ಇದರಿಂದ ಮಾತಿನ ಸತ್ಯ ನೆಗೆದು ನಿಂತಿತು.

" ಸರಿ, ಮಹಾಪ್ರಭೋ ! "

" ನೀನು ' ಸ್ವಭಾವವೇ ಮೆಚ್ಚು ' ಎಂದು ಹೇಳಿದೆ. "

" ಹೇಳಿದೆ ಪ್ರಭೋ ! "

" ಅದಕ್ಕೆ ನಿದರ್ಶನವೆಲ್ಲಿ ? "

" ಕೊರಮತನಕ್ಕೆ ಹೇಸಿ ನನ್ನ ಪ್ರಭು ಹಿಂತಿರುಗಿದುದರಲ್ಲಿ. "

" ಮಂತ್ರೀ ! ನೀನು ' ಸ್ವಭಾವವೇ ಹೆಚ್ಚು ' ಎಂದೆಯಲ್ಲವೇ ? "

" ಸತ್ಯ, ಪ್ರಭೋ ! "

"ಸ್ವಭಾವಕ್ಕೆ ಪ್ರಧಾನ ಕಾರಣವಾವುದು ? "

"ಹುಟ್ಟು, ಮಹಾಪ್ರಭೋ!"

ಅರಸನು ಸ್ವಲ್ಪ ಹೊತ್ತು ಮೌನಿಯಾಗಿದ್ದನು.

"ಮಂತ್ರೀಶ್ವರ ! ರಾಜಪುತ್ರನಾದ ನಾನು ಅಷ್ಟು ದಿನ ಕೊರಮತನದಲ್ಲಿ ರಮಿಸಿದೆ! "

"ಯಥಾರ್ಥ ಪ್ರಭೋ ! "

"ಸ್ವಭಾವದ ಹೆಚ್ಚುಗಾರಿಕೆ ಪ್ರಕಟವಾಗಲಿಲ್ಲ! "

ಮಂತ್ರಿ ಗಂಭೀರವಾದ ಮೌನವನ್ನು ತಾಳಿದನು. ಇಬ್ಬರೂ ಸ್ವಲ್ಪ ಹೊತ್ತು ಅತ್ತಿತ್ತ ನಡೆದರು.

"ಪ್ರಭುಗಳು ಅರಮನೆಗೆ ದಯೆಮಾಡಿಸಬೇಕು" ಎಂದನು ಮಂತ್ರಿ.

ಮಹಾಮಂತ್ರಿ ಅರಸನನ್ನು ವೃದ್ಧೆಯಾದ ರಾಜಮಾತೆಯ ಅಂತಃಪುರಕ್ಕೆ ಕರೆದೊಯ್ದನು. ಅರಸನು ಮಾತೃಶ್ರೀಯ ಪಾದಗಳಿಗೆ ಅಭಿವಂದಿಸಿದನು. ರಾಜಮಾತೆ ತನ್ನ ನಿಡುದೋಳುಗಳಿಂದ ಹಿಡಿದೆತ್ತಿ ಹರಸಿದಳು. ಅರಸನು ಆಕೆಯ ಬಳಿ ಮಂಚದಲ್ಲಿ ಆಸೀನನಾದನು. ಮಂತ್ರಿ ಕೈಮುಗಿದು ನಿಂತನು.

"ಮಹಾತಾಯಿ! ಇಂದು ಸತ್ಯವು ಪ್ರಕಟವಾಗಬೇಕಾಗಿದೆ" ಎಂದನು ಮಂತ್ರಿ.

ರಾಜಮಾತೆ ಗಳಗಳನೆ ಕಣ್ಣೀರು ಸುರಿಸಿದಳು.

"ಅಮ್ಮಾ! ಅದೆಷ್ಟು ನಿಷ್ಠುರವಾದರೂ ಸಹಿಸಬಲ್ಲೆ!" ಎಂದನು ಅರಸು.

ರಾಜಮಾತೆ ಹೇಳಿದಳು—ಆಕೆ ವಂಧ್ಯೆ; ಆದರೆ ಆಕೆಯನ್ನು ಆರಾಧಿಸುತ್ತಿದ್ದ 'ಮಹಾಸ್ವಾಮಿ' ಸವತಿಯನ್ನು ತಂದು ರಾಜಮಾತೆಯ ಪದವಿಯನ್ನು ಆಕೆಗೆ ತಪ್ಪಿಸಲೊಲ್ಲನು; ಆದುದರಿಂದ ರಾಜ್ಯನಿರ್ವಹಣಕ್ಕಾಗಿ ಆಪ್ತ ಸಖಿಯ ಪುತ್ರರತ್ನವನ್ನು ಹುಟ್ಟಿನಿಂದಲೇ ತನ್ನ ಮಗನೆಂದು ಆಕೆ ಸ್ವೀಕರಿಸಿದಳು.

ಅರಸನ ಮುಖದಲ್ಲಿ ಯಾವ ವಿಕಾರವೂ ಉಂಟಾಗಲಿಲ್ಲ. ಅವನು ರಾಜಮಾತೆಗೆ ನಮಿಸಿದನು. "ಮಂತ್ರೀ! ನನ್ನ ನಿಜಜನನಿ ಎಲ್ಲಿ?" ಎಂದನು.

ರಾಜಮಾತೆಯ ಬಳಿಯಲ್ಲಿ ದೃಢಕಾಯಳಾದ ಕೃಷ್ಣವರ್ಣದ ವೃದ್ಧ ದಾಸಿಯೊಬ್ಬಳು ತಲೆಬಾಗಿ ನಿಂತಿದ್ದಳು.

ಮಂತ್ರೀಶನು ಅರಸನಿಗೆ ಅವಳನ್ನು ತೋರಿಸಿದನು.

ಅರಸನು ಎದ್ದುನಿಂತು ಅವಳ ಪಾದವನ್ನು ಮುಟ್ಟಿ ನಮಸ್ಕರಿದನು. ಆಕೆ ಮಗನನ್ನು ಹಿಡಿದೆತ್ತಿ ಬಿಗಿಯಾಗಿ ಅಪ್ಪಿಕೊಂಡು ಗೊಳ್ಳನೆ ಅತ್ತಳು! ಹೊಳೆ ಹೊಳೆಯುವ ಅವಳ ವರ್ತುಲವಾದ ಕೈ ಮೈಗಳಲ್ಲಿ, ತನ್ನ ಅವಯವರಚನೆಯ ಮಾತೃಕೆಯನ್ನು ಅರಸನು ಕಂಡುಕೊಂಡನು. ಹರಿಯುತ್ತಿದ್ದ ಕಣ್ಣೀರು ಆರುವ ವರೆಗೆ ಅರಸನು ತಾಯಿಯ ತಕ್ಕೆಯನ್ನು ಬಿಡಲಿಲ್ಲ.

ಅರಸನೂ ಮಂತ್ರಿಯೂ ರಾಜಮಾತೆಯ ಮಂದಿರದಿಂದ ಹೊರಟರು.

ಅಂತಃಪುರದ ಸಾಲುಗಂಬದ ಹೊರಜಗಲಿಯಲ್ಲಿ ಅರಸು ಮಂತ್ರಿ ಮೆಲ್ಲಮೆಲ್ಲನೆ ಹೆಜ್ಜೆ ಹಾಕುತ್ತಿದ್ದರು.

"ಮಂತ್ರೀ! ಸಂಪೂರ್ಣ ಸಮಾಧಾನವಿನ್ನೂ ದೊರಕಲಿಲ್ಲ!"

"ಪ್ರಭುಗಳು ಪ್ರಶ್ನಿಸಬೇಕು."

"ಸಹಜ ಸ್ವಭಾವದ ಪ್ರಬಲತೆಯ ಸತ್ಯವು ಒಂದೆಡೆಯಲ್ಲಿ ಪ್ರಕಾಶಿತವಾದಾಗ ಇನ್ನೊಂದೆಡೆಯಲ್ಲಿ ಮರೆಯಾದಂತಿದೆ!"

"ಪ್ರಭುಗಳು ಆಜ್ಞಾಪಿಸಬೇಕು!"

"ಹುಟ್ಟು ಕೊರಮನು ಕೊರಮೆಯಲ್ಲಿ ಸಹಜಸುಖವನ್ನು ಕಂಡು ಕೊನೆಗೆ ಹೇಸಿ ಬಂದುದರಲ್ಲಿ ಸಹಜಭಾವದ ಪ್ರಾಬಲ್ಯ ಕಾಣಲಿಲ್ಲ!"

ಮಂತ್ರಿ ಉತ್ತರ ಕೊಡಲಿಲ್ಲ.

ಅಂತಃಪುರದ ಅದೊಂದು ಜನಶೂನ್ಯ ಪ್ರದೇಶಕ್ಕೆ ಅರಸನನ್ನು ಮಂತ್ರಿ ಕರೆದೊಯ್ದನು. ಅಲ್ಲೊಂದು ಕೋಣೆಯ ಬಾಗಿಲು ಭದ್ರವಾಗಿ ಮುದ್ರಿತವಾಗಿತ್ತು. ಮಂತ್ರಿ ಸ್ವಹಸ್ತದಿಂದಲೇ ಅದರ ಬೀಗಮುದ್ರೆಯನ್ನು ತೆಗೆದು, ಕದವನ್ನು ದೂಡಿದನು. ಬೆಳಕು ಕೋಣೆಗೆ ನುಗ್ಗಿತು; ಪ್ರಭೋ! ಪರಾಂಬರಿಸಬೇಕು!" ಎಂದನು.

ಒಳಗೋಡೆಯಲ್ಲಿ ಅಪೂರ್ವವಾದ ಚಿತ್ರ!

ದೀರ್ಘದೇಹದ ಗೌರವರ್ಣದ ವಿಶಾಲಾಕ್ಷಿಯಾದ ಮಹಾರಾಣಿ, ಹಚ್ಚೆ ಕೊಚ್ಚಿದ ಕದಪಿನ ಕೃಷ್ಣಕಾಂತಿಯ ಸುಂದರ ಯುವತಿಯ ಕೈಯ ಕೆಂದಳವನ್ನು, ಶುಭ್ರ ಶರೀರನೂ ವಿಶಾಲಭಾಲನೂ ಆದ ಆಳ್ದ ಮಹಾರಾಜನ ಕೈಗೆ ಸಮರ್ಪಿಸುವ ರಹಸ್ಯಭೇದಕವಾದ ಉಜ್ವಲ ಚಿತ್ರ!

ರಾಜೇಂದ್ರನು ತಲೆದೂಗಿದನು. "ಮಹಾಮಂತ್ರಿ! ತೃಪ್ತನಾದೆ!" ಎಂದನು.

"ಪ್ರಭುವಿನ ಚರಿತ್ರ!" ಎಂದನು ಮಂತ್ರಿ.

"ಜನ್ಮವೀಗ ನೂತನವಾಯಿತು."

"ಚಿರನೂತನ ಮಹಾಪ್ರಭೋ!"

ಅರಸನು ಮಂತ್ರಿಯೊಡನೆ ಅರಸಿಯ ಅಂತಃಪುರಕ್ಕೆ ನಡೆದನು.

ಅರಸಿ ಬಾಗಿಲಲ್ಲಿ ಕಾದು ನಿಂತಿದ್ದಳು.

ಅರಸನು ಗಂಭೀರ ಭಾವಪೂರ್ಣವಾಗಿ ಮುಗುಳು ನಕ್ಕನು !

ಅರಸಿಯ ನೋಟದಲ್ಲಿ ಧನ್ಯತೆ ಹೊಮ್ಮಿತು !

ಆ ರಾಜದಂಪತಿಗಳ ನೇತ್ರದ್ವಂದ್ವಗಳು ರಸಮಯವಾಗಿ ಏಕೀಭವಿಸಿದವು !

ಮಂತ್ರಿಯ ಮುಖಮಂಡಲವು ಪ್ರಫುಲ್ಲಿತವಾಯಿತು ! ಅವನು ಹಾಗೆಯೇ ಮುಖವನ್ನೊಮ್ಮೆ ಮೇಲೆತ್ತಿ, ಅರ್ಧನಿಮೀಲಿತನಯನನಾಗಿ ಮೆಲ್ಲನೆ ತಲೆಬಾಗಿದನು.

(ಪಳಮೆಗಳು)

—ಸೇಡಿಯಾಪು ಕೃಷ್ಣಭಟ್ಟ

೧೨. ಕನ್ನಡ ಗರತಿ

ಕನ್ನಡನಾಡಿನ ಮಹಿಳೆಯರ ಜೀವನವನ್ನು, ಅವರ ಬಾಳಸಿರಿಯನ್ನು ಅರಿಯಬೇಕಾದರೆ ಗರತಿಯರ ಬಗೆಗೆ ರಚಿತವಾದ ಕನ್ನಡ ಜಾನಪದ ಗೀತಗಳನ್ನು ಪರಿಶೀಲಿಸಬೇಕು. ಪಾಶ್ಚಾತ್ಯರ ಸಾಮಾಜಿಕ, ಶೈಕ್ಷಣಿಕ ಪ್ರಭಾವದಿಂದಾಗಿ ಈಗ ನಿಜವಾದ ಕರ್ನಾಟಕ ಸಂಸ್ಕೃತಿಯನ್ನೇ ನಾವಿಂದು ಮರೆತಂತಿದೆ. ನಮ್ಮ

ಬಾಳಿನಲ್ಲಿ ಹಳೆಯ ಆಚಾರ-ವಿಚಾರಗಳು ದೂರವಾಗಿವೆ; ಹೊಸ ವಿಚಾರಗಳು ಇನ್ನೂ ಹೊಂದಿಕೆಯಾಗಿಲ್ಲ. ಹಳೆ-ಹೊಸ ವಿಚಾರಗಳ, ಸಂಪ್ರದಾಯಗಳ ಮಧ್ಯಂತರದಲ್ಲಿ ನಾವಿಂದು ಬಾಳುತ್ತಿದ್ದೇವೆ. ನಮ್ಮ ಪೂರ್ವದ ಸಂಪ್ರದಾಯವನ್ನು, ಬಾಳಿನ ಆದರ್ಶವನ್ನು ನಾವು ಕಡೆಗಣಿಸಲಾಗದು. ಹಿಂದಿನ ಬಾಳಿನ ಆದರ್ಶಗಳನ್ನು ಇಂದಿನ ವಾತಾವರಣಕ್ಕೆ ಹೊಂದಿಸಿಕೊಂಡು ಬಾಳುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಕರ್ತವ್ಯವನ್ನು ಅರಿತುಕೊಳ್ಳಲು ನಮ್ಮ ನಾಡಿನ ಗರತಿಯರ ಬಾಳು ಆದರ್ಶಪ್ರಾಯವಾಗಿದೆ. ತ್ಯಾಗ ಭಕ್ತಿ ಶ್ರದ್ಧೆ ಮಮತೆಗಳ ಮೂರ್ತಿಯಾಗಿದ್ದಾಳೆ ಕನ್ನಡ ಗರತಿ. ಯೋಗ್ಯಳಾದ ಮಗಳು, ಮಮತೆಯ ಮಡದಿ, ಪ್ರೀತಿಯ ಸೊಸೆ, ವಾತ್ಸಲ್ಯದ ತಾಯಿಯಾದ ಹೆಣ್ಣಿನ ವಿವಿಧ ರೂಪಗಳನ್ನು ಗರತಿಯ ಹಾಡುಗಳಲ್ಲಿ ನಾವು ಕಾಣುತ್ತೇವೆ. ಈ ಹಾಡುಗಳು ರಾಜಾಶ್ರಯವುಳ್ಳ ಪಂಡಿತರಿಂದ ನಿರ್ಮಾಣವಾದವಲ್ಲ. ಕನ್ನಡ ಸಂಸ್ಕೃತ ಪಾಂಡಿತ್ಯದಿಂದ ಕಾವ್ಯಲಕ್ಷಣಗಳನ್ನು ಅರಿತವರ ಬರೆದಂಥ ಬಗೆಯ ವರ್ಣನೆಗಳು ಇವರಲ್ಲಿ ದೊರೆಯಲಿಕ್ಕಿಲ್ಲ. ಆದರೆ ತನ್ನ ನಿತ್ಯಜೀವನದಲ್ಲಿ ಉಂಡು ಅನುಭವಿಸಿದ ಸಂಗತಿಗಳನ್ನು ಗರತಿಯು ಸರಸ ಸಾಹಿತ್ಯರೂಪದಲ್ಲಿ ಹೊರಹೊಮ್ಮಿಸಿದ್ದಾಳೆ. ದೇವರಲ್ಲಿಯ ಭಕ್ತಿ, ಗಂಡನಿಗಾಗಿ ಪ್ರೀತಿ, ಮಕ್ಕಳ ಬಗೆಗೆ ವಾತ್ಸಲ್ಯ, ತವರುಮನೆಯ ಅಕ್ಕರೆ, ಅತ್ತೆಯ ಮನೆಯ ಬಿರಸ ಇತ್ಯಾದಿ ಅನುಭವಗಳಲ್ಲಿ ಹೃದಯಾಂತರಾಳದಿಂದ ಹೊರಹೊಮ್ಮಿವೆ.

ಗರತಿ ತನ್ನ ದಿನಗೆಲಸವನ್ನು ಬೆಳ್ಳಿಚುಕ್ಕಿ ಮೂಡಿದಾಗ ಪ್ರಾರಂಭಿಸುತ್ತಿದ್ದಳು. ಉದಯಕಾಲದ ಪ್ರಶಾಂತ ವಾತಾವರಣದಲ್ಲಿ, ಮಕ್ಕಳನ್ನು ಸಕ್ಕರೆಯ ನಿದ್ರೆಯಲ್ಲಿದ್ದಾಗ, ದನ ಕರುಗಳೆಲ್ಲ ಕೊಟ್ಟಿಗೆಯಲ್ಲಿ ಅಂಬಾ ಎನ್ನುತ್ತಿರುವಾಗ, ಬೀಸುವ ಕಲ್ಲಿನ ಗರ-ಗರ ಸಪ್ಪಳ ಕನ್ನಡ ಗರತಿಗೆ ಸ್ಫೂರ್ತಿಯನ್ನೀಯುತ್ತಿತ್ತು. ಬೀಸುವ ಕಲ್ಲಿನ ಸಪ್ಪಳವೇ ಅವಳ ಸಂಗೀತಕ್ಕೆ ಹಿಂಬದಿಯ ವಾದ್ಯ. ಸಂಸಾರದ ನೂರೆಂಟು ತಾಪತ್ರಯಗಳನ್ನು ಮರೆತು ಭಕ್ತಿಗೀತಗಳಿಂದ ಗರತಿಯು ದಿನಚರಿಯನ್ನು ಆರಂಭಿಸುತ್ತಾಳೆ :

ಶಿವಶಿವ ಎಂದರ ಸಿಡಿಲೆಲ್ಲ ಬಯಲಾಗಿ ।
ಕಲ್ಲು ಬಂದೆರಗಿ ಕಡೆಗಾಗಿ । ಎಲೆ ಮನವೆ,
ಶಿವನೆಂಬ ಶಬುದ ಬಿಡಬ್ಯಾಡ ॥

ಎಂಬ ಏಕನಿಷ್ಠೆಯಿಂದ ಭಕ್ತಿಯಿಂದ ದೇವರನ್ನು ನಂಬಿ ಸ್ತುತಿಸುತ್ತಾಳೆ. ಸ್ವಾರ್ಥಮಯವಾದ ಈ ಜಗತ್ತಿನಲ್ಲಿ ಎರಡನೆಯವರನ್ನು ತನ್ನ ಸಹಾಯಕ್ಕಾಗಿ ನಂಬಿ ನಿರಾಶಳಾದ ಗರತಿಯು :

ಮಂದಿಮಂದೀಯೆಂದು ಮಂದಿ ನಂಬಲಿ ಹೋದ ।
ಮಂದಿ ಬಿಟ್ಟಾರ ನಡುನೀರ । ಮಲ್ಲಯ್ಯ
ತಂದಿ ನನ ಕೈಯ ಬಿಡಬ್ಯಾಡ ॥

ಎಂಬ ಆಪತ್ ಹಂಬಲ ಸಾರ್ಥಕವಾಗುವದು. ಸಂಜೆಯ ಗರತಿಯನ್ನು ಕಾಯಲು ಪರಶಿವನ ಕರುಣೆ ಸದಾ ಸಿದ್ಧವಾಗುತ್ತಿದೆ.

ಮುಂದೇನ ಕೊಟ್ಟೇತ ಮನವೇನು ದಣದೀತ !
ಮುಂಜಾನದಾನ ಗಿರಿಮಲ್ಲ । ಕೊಟ್ಟರ
ಮನಿತುಂಬಿ ನನ್ನ ಮನ ತುಂಬಿ ॥

ದೇವನೊಲಿದರೆ ಮನೆ-ಮನಗಳು ತುಂಬಿ ತುಳುಕಾಡುವವು. ಇಂತಹ ಶ್ರದ್ಧೆಗೆ ಭಕ್ತಪ್ರಿಯ ಶಿವನು ಒಲಿಯದೆ ಇರಬಲ್ಲದೇ ? ಗರತಿಯು ಅಂತಹ ಶ್ರದ್ಧೆಯಿಂದ ದೊರೆಯುವ ಅಲೌಕಿಕವಾದ ಆನಂದವನ್ನು ಅನುಭವಿಸುತ್ತಾಳೆ. ಏಕಾಗ್ರಚಿತ್ತದಿಂದ ಬೀಸುವ ಗರತಿ ಧ್ಯಾನದಲ್ಲಿ ಲೀನಳಾಗುತ್ತಾಳೆ, ಭಕ್ತಿಪರವಶಳಾಗುತ್ತಾಳೆ. ದೈವೀ ಅನುಗ್ರಹದಿಂದ ಮನೆ-ಮನಗಳನ್ನು ತುಂಬಿಕೊಂಡ ಕನ್ನಡ ಗರತಿ ಪಾವನೆಯಾಗಿದ್ದಾಳೆ.

ಶರಣರ ನೆನೆದರ ಸರಗೀಯ ಇಟ್ಟಂಗ ।
ಅರಳ ಮಲ್ಲಿಗಿ ಮುಡಿದಂಗ । ಕಲ್ಯಾಣ
ಶರಣ ನೆನೆಯೋ ನನ ಮನವೆ ॥

ಎಂದು ಮನಸ್ಸಿಗೆ ಎಚ್ಚರಿಕೆ ಕೊಡುತ್ತಾಳೆ. ಸುತ್ತಲೂ ಹರಿದಾಡುವ ಮನಸ್ಸು ಯಾವಾಗಲೂ ಶರಣರನ್ನು ನೆನೆಯುತ್ತಿರಲಿ ಎಂದು ಆಶೆ ಪಡುತ್ತಾಳೆ. ಹೆಣ್ಣಿಗೆ ಆಭರಣ, ಹೂ ಎಂದರೆ ಬಲು ಪ್ರೀತಿ. ತನ್ನ ಪ್ರೀತಿಯ ಆಭರಣವಾದ ಸರಿಗೆಯನ್ನಿಟ್ಟುಕೊಳ್ಳುವಾಗ ಕನ್ನಡ ಗರತಿಗೆ ಶರಣರನ್ನು ನೆನೆಯುವಾಗಿನ ಆನಂದದ ಅನುಭವವಾಗಿದೆ. ಹೂವಿನಲ್ಲಿ ದೈವೀ ಅಂಶವಿರುತ್ತದೆ. ಆಸ್ತಿಕರೇ ಆಗಲಿ, ನಾಸ್ತಿಕರೇ ಆಗಲಿ, ಹೂವನ್ನು ಕಂಡು ಉತ್ಸಾಹಗೊಳ್ಳದವರಿಲ್ಲ; ಅದರಲ್ಲೂ ಹೆಣ್ಣಿಗೆ ಹೂವಿನ ಮೇಲೆ ಬಹಳ ಆಶೆ. ಮಲ್ಲಿಗೆಯನ್ನು ಮುಡಿದುಕೊಂಡು ಆ ಮಲ್ಲಿಗೆಯ ಪರಿಮಳದಿಂದ ಉಲ್ಲಸಿತವಾಗಿರುವಲ್ಲಿ—ಹೂವನ್ನು ಮುಡಿದುಕೊಂಡಾಗ ಗರತಿ ಶರಣರನ್ನು ನೆನೆಯುವಾಗಿನ ಸುಖವನ್ನು ಪಡೆಯುತ್ತಾಳೆ. ಶರಣರನ್ನು ನೆನೆಯುವದೊಂದೇ ಅವಳ ಬಾಳ ಗುರಿ. "ಕಷ್ಟ ಬಂದರೆ ಕಾಯೋ, ಮರಣ ಬಂದರೆ ಒಯ್ಯೋ! ಕರುಣಿ ಕಲ್ಯಾಣ ಬಸವಣ್ಣಾ" ಎನ್ನುವ ಗರತಿ ಸ್ಥಿತಪ್ರಜ್ಞಳೆಂದೂ ಹೇಳಬಹುದು.

ಬೆಳಗ್ಗೆ ಎದ್ದೊಡನೆ ಬೀಸುವ ಕೆಲಸ ಮುಗಿಸಿದ ಕನ್ನಡ ಗರತಿ ಎತ್ತಿನ ಕೊಟ್ಟಿಗೆಯನ್ನು ಹಸನಾಗಿಡುವ ಕಾರ್ಯದಲ್ಲಿ ಮಗ್ನಳಾಗುತ್ತಾಳೆ. ಮನಸ್ಸು ಶುದ್ಧವಾಗಿ ದೇವರ ಧ್ಯಾನದಲ್ಲಿದ್ದ ಗರತಿಗೆ, ಕಸ-ಸೆಗಣಿ ಹೊಲಸು ಎನ್ನಿಸುವದಿಲ್ಲ. ಎಲ್ಲವೂ ಪವಿತ್ರವೇ ಅವಳಿಗೆ :

ಕಸವ್ವ ಹೊಡೆದ ಕೈಯು ಕಸ್ತೂರಿ ನಾತಾವ ।
ಬಸವಣ್ಣ ನಿನ್ನ ಸೆಗಣೀಯು । ಬಳಿದ ಕೈ
ಎಸಳ ಯಾಲಕ್ಕಿ ಗೊನಿ ನಾತ ॥

ಎನ್ನುವ ಮಾತಿನಲ್ಲಿ 'ದೃಷ್ಟಿಯಂತೆ ಸೃಷ್ಟಿ' ಎಂದೆನಿಸದೆ ಇರಲಾರದು. ಒಳಗೆ ಭಾವ ಶುದ್ಧವಾದಲ್ಲಿ, ಮನ ಪವಿತ್ರವಾದಲ್ಲಿ ಯಾವ ಕಾರ್ಯ ಮಾಡಿದರೂ ಪವಿತ್ರ ಭಾವನೆ ಬರುವದು ; ಕಸ ಸೆಗಣಿಗಳಲ್ಲೂ, ಕಸ್ತೂರಿ ಯಾಲಕ್ಕಿಗಳ ಕಂಪಿನ ವಾಸನೆ ಕಾಣುವ ಗರತಿಯ ದೃಷ್ಟಿ ಉದಾತ್ತವಾದುದು.

ಆಸರಕಿ ಅಳದಿಟ್ವ ಬ್ಯಾಸರಕಿ ಬಳದಿಟ್ವ।
ಚಿಂತೀಯ ಕಾಲಾಗ ತುಳಿದಿಟ್ವ। ಈ ದೇಹ
ಶೀಲ ಮಾಡಿಟ್ವ ಜನದಾಗ॥

ಧೀರ ಗರತಿ ಆಸರಿಕೆ ಬೇಸರಿಕೆಗಳನ್ನರಿಯದವಳು. ದೇಹವನ್ನು ಮನೆಯ ಜನರ ಸುಖಕ್ಕಾಗಿ ಸುಣ್ಣದ ಹರಳಿನಂತೆ ಸುಡುವವಳು, ಕರ್ಮಯೋಗಿನಿಯಾಗಿ ಮರ್ತ್ಯ ವನ್ನು ಗೆಲೆಯುವವಳು ಕನ್ನಡದ ಗರತಿ.

ಕನ್ನಡ ಗರತಿಯ ಸಂಸಾರ ದೊಡ್ಡದು. ಆದರೆ ಬಡತನವು. ಪತಿ ಬಡವ ನೆಂದು ಕೊರಗುವದಿಲ್ಲ ಆಕೆ.

ಕೂಲಿ ಮಾಡಿದರೇನ ಕೋರಿ ಹೊತ್ತರೇನ।
ನಮಗ ನಮ ರಾಯ ಬಡವೇನ। ಬಂಗಾರ
ಮಾಲ ಇದ್ದಾಂಗ ಮನಿಯಾಗ॥

ಗರತಿಯ ಇಂಥ ಭಾವನೆ ಹಿರಿದಾದುದು. ಬಡತನವಿದ್ದರೇನು ಪತಿಯೇ ಬಂಗಾರ ಅವಳಿಗೆ. ಪ್ರೇಮವೇ ದೇವತೆಯವಳಿಗೆ. ಪತಿಯಲ್ಲಿ ಸರ್ವ ಸೌಭಾಗ್ಯವನ್ನು ಕಾಣು ವದೇ ಹೆಣ್ಣಿನ ಹಿರಿಮೆ. 'ನಮಗ ನಮ ರಾಯ ಬಡವೇನ' ಎಂಬ ಮಾತಿನಲ್ಲಿ ಪತಿಯ ಬಗೆಗೆ ಗರತಿಗಿದ್ದ ಆದರ ಅಭಿಮಾನಗಳು ಎದ್ದು ಕಾಣುತ್ತವೆ.

ಬಾಣಂತಿತನಕ್ಕೆ ತೌರಿಗೆ ಹೋದ ಗರತಿಗೆ ಹೆಣ್ಣು ಮಗು ಹುಟ್ಟಿದರೂ ಆಗ ಅವ ಳಿಗೆ ಬೇಸರವಿಲ್ಲ. ತನ್ನ ರಕ್ತಮಾಂಸಗಳಿಂದ ನಿರ್ಮಿತವಾದ ಆ ಸುಂದರ ಮೂರ್ತಿ ಯನ್ನು ಕಂಡು ಸಂತಸಪಡುವಳು. ತನಗೆ ಹೆಣ್ಣು, ಗಂಡು ಎಲ್ಲವೂ ಅಷ್ಟೇ— ಎಂದು ತಿಳಿಯುವಳು. ಹೆಣ್ಣೆಂದರೆ ಪತಿಗೆಲ್ಲಿ ಅಸಮಾಧಾನವೋ ಎಂದು ಹೆದರಿ,

ಹೆಣ್ಣು ಹುಟ್ಯಾದಂತ ಹೇಳಿ ಕಳುವಲಿ ಬ್ಯಾಡ।
ಹೆಣ್ಣೆಂದರವರು ಹೆದರ್ಯಾರ। ಕಂದವ್ವ
ಹೆಣ್ಣಲ್ಲ ನಮಗ ರವಿಚಿನ್ನ

ಎಂದುಕೊಳ್ಳುತ್ತಾಳೆ. ತಾಯಿಗೆ ಮಗುವಿನಿಂದಲೇ ಸ್ವರ್ಗಸೌಖ್ಯ. ಆ ಸೌಖ್ಯ ದೆದುರು ಸ್ವರ್ಗವೂ ಅವಳಿಗೆ ಬೇಡ. ಕೂಸು ನಕ್ಕರೆ ಸಂತೋಷದಿಂದ ಹೃದಯ ತುಂಬಿ ಬರುವದು. ಅತ್ತರೆ ಮನದಲ್ಲಿ ಕಸವಿಸಿ ಪಡುವಳು.

ಕೂಸು ನೀ ಅಳಬ್ಯಾಡ, ಕುಸುಮಲ್ಲಿಗಳ ಬ್ಯಾಡ ।
ರಾಸಿ ಬಂಗಾರ ಅಳಬ್ಯಾಡ । ನನ ಬಾಳ
ಭಂಗಾರ ಬಾರ ಬಗಲಾಗ ॥

ಅಳುವ ಕಂದನನ್ನು ತೊಟ್ಟಿಲಲ್ಲಿ ಮಲಗಿಸುತ್ತಾಳೆ. ಗರತಿಯ ಅಕ್ಕರೆಯ ಜೋಗುಳ ಕೇಳಿ ಅಳುವ ಮಗು ಸಮಾಧಾನಪಡುತ್ತದೆ.

ನನ್ನ ಕಂದಾ ಮುದ್ದು ಹೊನ್ನ ತಾವರಿ ಮುದ್ದು ।
ಹಣ್ಣುಳ್ಳ ಗಿಡಕೆ ಗಿಣಿ ಮುದ್ದು । ಕಂದವ್ವ
ನೀ ಮುದ್ದು ನನ್ನ ಬಳಗಕ ॥

ತಾವರೆಯ ಸೊಬಗು ಶ್ರೇಷ್ಠವಾದುದು. ಅದರಲ್ಲೂ ಹೊನ್ನತಾವರೆ ಮುದ್ದಾಗಿಯೇ ಇರಬೇಕಲ್ಲವೇ? ಗರತಿಗೆ, ಗರತಿಯ ಬಳಗಕ್ಕೆ ಆ ಮಗುವೂ ತಾವರೆಯಷ್ಟು ಮುದ್ದಾಗಿ ಕಂಡರಬೇಕು. ಅವಳ ವಾತ್ಸಲ್ಯವೇ ಅದಕ್ಕೆ ಕಾರಣ.

ಗರತಿಯು ತವರುಮನೆಯಿಂದ ತೊಟ್ಟಿಲ ಬಟ್ಟಲಗಳೊಂದಿಗೆ ಹೊಸ ಸೀರೆಯನ್ನುಟ್ಟು ಕಂದನನ್ನೆತ್ತಿಕೊಂಡು ಅತ್ತೆಯ ಮನೆಗೆ ಹೊರಡುತ್ತಾಳೆ. ಆಗ ಅವಳಿಗೆನ್ನಿಸುವದು : ನನಗಾಗಿ ಇಷ್ಟೊಂದು ಮಾಡಿದ ತವರಿನವರಿಗೆ ನಾನೇನು ಕೊಡಬಲ್ಲೆ ? ತವರುಮನೆಯಿಂದ ಆಭರಣ, ಸೀರೆಗಳನ್ನೊಯ್ಯುವದು ಮಾತ್ರ ಹೆಣ್ಣಿಗೆ ರೂಢಿಯಾಗಿದೆ. ಅದಕ್ಕೆ ಪ್ರತಿಯಾಗಿ ತಾನು ಹೃದಯಾಂತರಾಳದಿಂದ ಹರಕೆ ಕೊಡುವುದೊಂದೇ ದಾರಿಯೆಂದು ಬಗೆಯುತ್ತಾಳೆ.

ಹಾಲುಂಡ ತವರೀಗಿ ಏನೆಂದು ಹಾಡಲೆ ।
ಹೊಳೆದಂಡಿಲಿರುವ ಕರಕೀಯ । ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ ॥

ಎಂಬ ಪ್ರಾರ್ಥನೆಯೊಂದಿಗೆ ಅತ್ತೆಯ ಮನೆಗೆ ಹೊರಡುತ್ತಾಳೆ. ಅಲ್ಲಿ ತನ್ನ ಅತ್ತೆ, ನಾದಿನಿ, ನೆಗೆಣ್ಣಿ, ಭಾವ ಮೊದಲಾದವರ ಮುಂದೆ ಮಗುವಿನ ಚೆಲುವಿಕೆಯ ವರ್ಣನೆ ಮಾಡುವಳು,

ತವರೂರಿಗ್ಹೋದಾಗ ನವಿಲ ಬಣ್ಣದ ಪಕ್ಷಿ ।
ತಲಿಬ್ಯಾನಿಯೆದ್ದು ಅಳತಿತ್ತ । ಕಂದನ
ಛಲುವೀಕಿ ನೋಡಿ ನಗತಿತ್ತ ॥

ಅಳುತ್ತಿರುವ ಪಕ್ಷಿಯೂ ಕೂಡ ಮಗುವಿನ ಸೌಂದರ್ಯಕ್ಕೆ ತಲೆದೂಗಿ ನಗುತ್ತಿತ್ತಂತೆ. ಮಗುವಿನ ಬಗೆಗೆ ಅವಳಿಗಿರುವ ಮಮತೆಯೇ ಆ ರೀತಿ ಅವಳಿಂದ ಮಾತನಾಡಿಸುತ್ತದೆ. ತನ್ನ ಮಗು ಅತ್ತರೆ ಮುತ್ತು ಉದುರುವವೆಂದೂ, ಭಾವ ಎತ್ತಿಕೊಳ್ಳಿರೆಂದೂ ಹೇಳುತ್ತಾಳೆ. ಎಲ್ಲರ ಕೈಯಲ್ಲಿ ಅರಗಿಳಿಯಂತೆ ಆಡುತ್ತ ಬೆಳೆಯುತ್ತಿರುವ ಮಗು ಕೂಡುವದನ್ನು ಕಲಿತಾಗ ತಾಯಿಗೆ ಹೆಚ್ಚಿನ ಆಸೆ ಚಿಗುರೊಡೆಯುತ್ತಿದೆ.

ಕುಂತಾಡು ಮಗಳೀಗಿ ಕೊಡಲ ಬಿಟ್ಟೇನ ।
ನಗರದ ಚಾರಿ ತರಸೇನ । ಮನಿಯಾನ
ತಮ್ಮಾಗ ಧಾರಿ ಎರದೇನ ॥

ಎಂಬ ಹಂಬಲ ಆಕೆಗೆ ತಲೆದೋರುತ್ತದೆ.. ಮಗಳು ದೊಡ್ಡವಳಾದೊಡನೆ ತಮ್ಮನಿಗೆ ಮಗಳನ್ನು ಕೊಡಬೇಕು. ಅಂದರೆ ತವರುಮನೆ ತನ್ನದಾಗುವದೆಂಬ ಆಶೆ ಗರತಿಗೆ. ತಮ್ಮನಿಗೆ ಹೊರಗಿನ ಹೆಣ್ಣು ತಂದರೆ ತವರುಮನೆ ತನಗೆ ಎರವಾಗುವದೇನೋ ಎಂಬ ಅಂಜಿಕೆಯಿದೆ ಆಕೆಗೆ. ಗುರುತು ಪರಿಚಯವಿಲ್ಲದ ಮನೆಗೆ ಮಗಳು ಹೋಗಿ ಬಾಳುವೆ ಮಾಡಬೇಕಲ್ಲ ಎನ್ನುವ ಚಿಂತೆಯೂ ಇದೆ.

ಅಲ್ಲಿ ಅತ್ತೆಯ ಮನೆಯವರು ಮಗಳಿಗೆ ತೊಂದರೆ ಕೊಟ್ಟರೆ ಹೇಗೆ? ಇಲ್ಲಿ ತವರುಮನೆಯಲ್ಲಾದರೆ, ತನ್ನ ತಾಯಿ ಇರುತ್ತಾಳೆ; ಯಾವ ತೊಂದರೆಯೂ ಆಗದಂತೆ ಮಗಳನ್ನು ನೋಡಿಕೊಳ್ಳುತ್ತಾಳೆ ಎಂಬ ಯೋಚನೆಯೂ ಬರುತ್ತದೆ. ಆದರೆ ಎಲ್ಲವೂ ದೈವಾಧೀನ.

ಮಗಳು ದಿನಗಳೆದಂತೆ ಬೆಳೆದು ದೊಡ್ಡವಳಾಗುತ್ತಾಳೆ. ಅರಿಸಿಣಚ್ಚಿದ ಮಾರಿ, ಸರಪಳ್ಳಚ್ಚಿದ ವಾಲಿಗಳನ್ನಿಟ್ಟ ಯುವತಿ.

ಕಟ್ಟಾಣಿ ಕಟ್ಯಾಳ ಕಟ್ಟಿಮ್ಯಾಲೆ ನಿಂತಾಳ ।
ಬಟ್ಟಲಗಣ್ಣು ತಿರುವ್ಯಾಳ, ಕಂದವ್ಮ
ದಿಟ್ಟಿ ಸೋಂಕ್ಯಾವ ಒಳಗ್ಹೋಗ ॥

ಎಂದೂ ಮಗಳಿಗೆ ಹೇಳುತ್ತಾಳೆ. ಮಗಳ ಸೌಂದರ್ಯವನ್ನು ಕಂಡು ನೆರೆಹೊರೆಯವರು ದೃಷ್ಟಿಬಿಟ್ಟಾರು, ದೃಷ್ಟಿತಾಗಿದರೆ ಮಗಳ ಮುಖ ಬಾಡೀತೆಂಬ ಭಯವಿದೆ.

ತಮ್ಮನಿಗೆ ಮಗಳನ್ನು ಕೊಡಲಾಗದೆ ಬೇರೆ ವರನಿಗೆ ಕೊಟ್ಟು ಲಗ್ನ ನಡೆಯುತ್ತಿದೆ. ಒಂಭತ್ತು ತಿಂಗಳು ಹೊತ್ತು, ಹೆತ್ತ ಕರುಳನ್ನು ಪರರ ಮನೆಗೆ ಕಳಿಸಬೇಕಾದಾಗ ಅವಳ ಮನ ದುಃಖದಿಂದ ತುಂಬುತ್ತದೆ.

ಹತ್ತು ತಿಂಗಳು ನಿನ್ನ ಹೊತ್ತುಕೊಂಡು ತಿರುಗೇನs ।
ಮುತ್ತು ಸುರುವಿದರ ಬರಿ ಉಡಿಯs
ಮುತ್ತು ಸುರಿವಿದರ ಬರಿ ಉಡಿಯs । ನನ ಮಗಳ
ಅತ್ತೀರಿಗೊಪ್ಪಿಸಿ ಕೊಡಲ್ಹ್ಯಾಂಗ ॥

ಎಂಬ ಕೊರಗೂ ಇದೆ. ಮಗಳು ಬಟ್ಟಲ ಬೆಳಗುವದನ್ನೂ ಅರಿಯಳು. ಬೆಳಿಗ್ಗೆ ಎದ್ದು ಹಾಲನ್ನವನ್ನುಂಡು ಸಂತೋಷದಿಂದ ಮಂಚದಲ್ಲಿ ಕೂತು ಕಥೆ ಕಟ್ಟಿ ಹೇಳುತ್ತ, ಮನಸ್ಸಿಗೆ ಆನಂದವನ್ನುಂಟುಮಾಡುತ್ತಿದ್ದಳು. ಇಂತಹ ಮಗಳನ್ನು ಕಳಿಸಿ ಬಾಳುವೆನೆಂತು? ಕಪ್ಪುರದ ಗುಡ್ಡಕ್ಕೇ ಉರಿ ಹತ್ತಿದಂತೆ ಆಯಿತು ತಾಯಿಗೆ. ಮಗಳನ್ನು ಒಪ್ಪಿಸಿ ಕೊಡಬೇಕಲ್ಲ ಎಂಬ ತಳಮಳ ಅವಳಿಗೂ ಉಂಟು. ಗಂಡುಸಾನಾದರೇನು ಕರುಳಿನ ಕೊರಗು ಬಿಟ್ಟೀತೇ? ಸಣ್ಣ ತಮ್ಮನಾಗಿದ್ದರೆ ಸರಿಪಾಲು

ತಕ್ಕೊಂಡು ನನ್ನ ಮನೆಯಲ್ಲೇ ಇರುತ್ತಿದ್ದೆಯಲ್ಲ ಎಂದು ಅಣ್ಣನೂ ದುಃಖಿಸುತ್ತಾನೆ. ಅವನ ಹೃದಯದಲ್ಲಿನ ಸುಣ್ಣದ ಭಟ್ಟಿಗೆ ತಣ್ಣೀರು ಹೊಯ್ದಂತಾಗುವದು. ಇಡಿಯ ಬಳಗ ಹೀಗೆಲ್ಲ ಕಣ್ಣೀರು ಕರೆಯುವದು, ಎಷ್ಟು ದುಃಖಪಟ್ಟರೇನು ? ಕೊಟ್ಟ ಹೆಣ್ಣು ಕುಲಕ್ಕೆ ಹೊರಗಲ್ಲವೆ ? ಮಗಳನ್ನು ಗಂಡನ ಮನೆಗೆ ಕಳುಹಿಸಲೇಬೇಕಷ್ಟೆ ? ಅದಕ್ಕಾಗಿ ಮಗಳ ಅತ್ತೆಯನ್ನು ಕರೆದು, ಇವಳಿನ್ನು ನಮ್ಮ ಮಗಳಲ್ಲ ನಿಮ್ಮ ಮಗಳು ಎಂದು [illegible] ದೈವದ ಸಾಕ್ಷಿಯಾಗಿ ಮಗಳನ್ನು ಒಪ್ಪಿಸುವರು.

ಮಗಳು ಭಾಗ್ಯದ ಲಕ್ಷ್ಮಿಯಾಗಿ ಸೊಸೆ ಮನೆ ತುಂಬುವಳೆಂದು ಅತ್ತೆಯ ಮನೆಯವರ [illegible]. ಗಂಡನಿಗೋ ತನ್ನ ಮನದನ್ನೆ, ಜೀವದ ಜೊತೆಗಾತಿ, [illegible] ಸಂತಸ.

ಹೆಣ್ಣಿಗೋ, [illegible] ಸಂಮಿಶ್ರಣ. ಪತಿಯ ಮನೆಗೆ ಹೋಗುವ ಎಲ್ಲ ಗರತಿಯರಂತೆ ತಾನೂ ತನ್ನ ಮನೆಯಲ್ಲಿ ಬಾಳುವ ಸಂತೋಷ ಒಂದೆಡೆಯಾದರೆ, ಹುಟ್ಟಿದಂದಿನಿಂದ ಬೆಳೆದ ಮನೆಯನ್ನೂ, ವಾತ್ಸಲ್ಯದ ತಂದೆ ತಾಯಿಗಳನ್ನೂ, ಅಣ್ಣ ತಮ್ಮಂದಿರನ್ನೂ ಬಿಟ್ಟು ಪರಿಚಯವಿಲ್ಲದ ಹೊಸ ಮನೆಗೆ ಹೋಗಬೇಕಲ್ಲ ಎಂಬ ವ್ಯಥೆ :

ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾದಿ |
ನಾ ಹುಟ್ಟಿ ಮನೆಗೆ ಎರವಾದೆ | ಹಡೆದವ್ವ
ನೀ ಕೊಟ್ಟ ಮನೆಗೆ ಹೆಸರಾದೆ ||

ಅಂತೂ ಮಗಳು ಅತ್ತೆಯ ಮನೆಗೆ ಹೋಗುತ್ತಾಳೆ. ಅಲ್ಲಿಯ ವಾತಾವರಣವೇ ಹೊಸದು ಆಕೆಗೆ. ತಾನು ಬೆಳೆದ ಮನೆಯಲ್ಲಿ ತಂದೆತಾಯರ ಕಣ್ಗೊಂಬೆಯಾಗಿ ಬೆಳೆದಾಕೆ. ಅತ್ತೆಯ ಮನೆಯಲ್ಲಿ, ಕೂಡಲಿ ಏನನ್ನುವರೋ, ನಿಂತರೆ ಏನನ್ನುವರೋ ಎಂದು [illegible] ಅಂತಃಕರಣದ [illegible]. ಪತಿಯು ಪ್ರೇಮದ [illegible] ಅಪರಿಚಿತ ವ್ಯಕ್ತಿಯಾಗಿದ್ದಾನೆ. ಅವನ [illegible] ಅತ್ತೆ-ಮಾವಂದಿರಿಗಂತೂ ಬಾಗಬೇಕು. ತನ್ನಿಚ್ಛೆಯಂತೆ ನಡೆಯುವಂತಿಲ್ಲ. ಗಳಿಗೆಗಳಿಗೆ ತಾಯ್ತಂದೆಯರ ನೆನಪಾಗುತ್ತದೆ. ತವರುಮನೆಯ ಸ್ವಾತಂತ್ರ್ಯ [illegible] ನೆನಪು ಬರುತ್ತದೆ.

ಬಂಗಾರದ ಬಳೆಯವರು ತಿಂಗಳ ಹಾದೆವರು |
ನನ್ನ ಹೆತ್ಯಾಕ ಮರೆವಾರ | ಮಾವೀನ
ಹಣ್ಣು ಉಣುವಾಗ ನೆನೆಸ್ಯಾರ ||

ಎಂಬ ಭಾವ[illegible] ಹೊಮ್ಮುತ್ತದೆ. ದಿನಗಳೆದಂತೆ ಬಂದ ಮನೆಗೆ ಹೊಂದಿಕೊಳ್ಳುತ್ತಾಳೆ. ಪತಿಯ ಪ್ರೇಮದ ರಾಣಿಯಾಗುತ್ತಾಳೆ. ಅವನ ಪ್ರೇಮಸಾಗರದಲ್ಲಿ ಮಿಂದು ತಂದೆತಾಯಿಗಳ ನೆನಪನ್ನು ಕೆಲಮಟ್ಟಿಗೆ ಮರೆಯುತ್ತಾಳೆ. ಇನ್ನು ಈ ಮನೆಯೇ ತನ್ನದು, ತವರುಮನೆ ಕೇವಲ ನಾಲ್ಕು ದಿನದ ಬಿಡುವಿನ ವೇಳೆಯದೆಂಬ

ಭಾವ ಬೆಳೆಯುತ್ತದೆ. ಆದರೂ ತಾಯಿಯ ವಾತ್ಸಲ್ಯ ಅವಳ ಮನಸನ್ನು ಕೆಣಕುತ್ತದೆ. ತಾಯಿ ತನ್ನ ಮೇಲೆ ಬಲು ಪ್ರೀತಿ; ಅವಳನ್ನೊಮ್ಮೆ ಕಾಣಬೇಕೆಂಬ ಅಪೇಕ್ಷೆ ಯಾಗುತ್ತದೆ. ಕಾಶಿಗೆ ಹೋಗಿ ವಿಶ್ವೇಶ್ವರನ ದರ್ಶನ ಪಡೆದರೆ ಜನ್ಮ ಸಾರ್ಥಕವೆಂಬ ಭಾವನೆ ಭಾರತೀಯರಲ್ಲಿ ಬೆಳೆದು ಬಂದಿದೆ. ಆದರೆ ಕನ್ನಡ ಗರತಿ ತನ್ನ ತಾಯಿಯ ಹತ್ತಿರವೇ ಕಾಶಿಯನ್ನು ಕಾಣಬಲ್ಲಳು. ಕುವೆಂಪು, ವನದ ಮಧ್ಯದಲ್ಲಿಯ ಪಕ್ಷಿಗಳ ಲ್ಲಿಯೇ ಕಾಶಿಯನ್ನು ಕಲ್ಪಿಸುವಂತೆ :

ಕಾಸೀಗಿ ಹೋಗಲಕ ಏಸೊಂದು ದಿನ ಬೇಕ ।
ತಾಸ್ಹೊತ್ತಿನ್ಹಾದಿ ತವರೂರ । ಮನಿಯಾಗ
ಕಾಸಿ ಕುಂತಾಳ ಹಡೆದವ್ವ ॥

ಒಮ್ಮೆ ತಾಯಿಯನ್ನು ಕಂಡರೆ ಸಾಕು, ತನ್ನ ಜನ್ಮ ಸಾರ್ಥಕವೆಂದು ಭಾವಿಸು ತ್ತಾಳೆ. ತಾಯಿಗೂ ಮಗಳನ್ನು ನೋಡುವ ಹಂಬಲ. ತಾನೇ ಹೋಗಿ ಮಗಳನ್ನು ಕರೆದುಕೊಂಡು ಬರಬೇಕೆಂದು ಮಗಳ ಮನೆಗೆ ಬರುತ್ತಾಳೆ. ಮಗಳು ಆ ಹೊತ್ತಿಗೆ ಗಂಡನ ಮನೆಯ ವಾತಾವರಣಕ್ಕೆ ಹೊಂದಿಕೊಂಡಿರುತ್ತಾಳೆ.

ಸರದಾರ ನಿಮ್ಮಿಂದ ಸರುವೆಲ್ಲ ಮರತೇನ ।
ಸರದಾರ ಇರುವ ಗುಳದಾಳಿ । ನಿಮ್ಮಿಂದ
ಸರುವ ಬಳಗೆಲ್ಲ ಮರತೇನ ॥

ತಾಯಿಯನ್ನು ಕಂಡು ಮಗಳಿಗೆ ಆನಂದವಾಗುತ್ತದೆ. ಎಳೆತನದ ಆಟಪಾಟಗಳೆಲ್ಲ ನೆನಪಾಗುತ್ತವೆ. ತಂದೆಯನ್ನು, ಸೋದರ-ಸೋದರಿಯರನ್ನು ಕಾಣಲು ತವಕ. ತವರುಮನೆಗೆ ಹೋಗಲು ಪತಿಯ ಆಜ್ಞೆಯನ್ನು ಕೇಳುತ್ತಾಳೆ. ಹೊಸದಾಗಿ ಮನೆಗೆ ಬಂದ ಮಡದಿ ತನ್ನ ಮನೆಯನ್ನೂ, ಮನವನ್ನೂ ತುಂಬಿದಾಗ ಅವಳನ್ನು ಬಿಟ್ಟಿರಲು ಅವನೊಪ್ಪಲಾರ.

ಕಮಳದ ಹೂ ನಿನ್ನ ಕಾಣದೆ ಇರಲಾರೆ ।
ಮಲ್ಲೀಗೆ ಮಾಯ ಬಿಡಲಾರೆ । ಕೇದಿಗೆ
ಗರಿ ನಿನ್ನನಗಲಿ ಇರಲಾರೆ ॥

ಎಂದು ಗಂಡ ಹೇಳುತ್ತಾನೆ, ಮಗಳು ತಾಯಿಗೆ ತಿಳಿಸುತ್ತಾಳೆ :

ಹಚ್ಚಡದ ಪದರಾಗ ಅಚ್ಚಮಲ್ಲಿಗಿ ಹೂವ,
ಬಿಚ್ಚಿ ನನ ಮ್ಯಾಲ ಒಗೆವಂಥ । ರಾಯರನ
ಬಿಟ್ಹ್ಯಾಂಗ ಬರಲಿ ಹಡೆದವ್ವ ॥

ಹೀಗೆ ಹೇಳಿದರೂ ತವರು ಮನೆಗೆ ಹೋಗಬೇಕೆಂಬ ಇಚ್ಛೆ ಅಂತರಂಗದಲ್ಲಿ ಇದ್ದೇ ಇದೆ. ಪಂಚಮಿಗೆ ತವರುಮನೆಗೆ ಹೋಗಿ ಗೆಳತಿಯರೊಂದಿಗೆ ಓಡಾಡಬೇಕೆ ನ್ನುತ್ತಾಳೆ. ತಾಯಿಮಕ್ಕಳಿಬ್ಬರೂ ಅತ್ತೆಮನೆಯವರ ಮನವೊಲಿಸಿ ತವರೂರಿಗೆ ಹೊರಡುತ್ತಾರೆ.

ನಾಗರ ಪಂಚಮಿ ನಾಡ ಹೆಣ್ಣಿಗೆ ಹಬ್ಬ ।
ನಾಗಪ್ಪಗ್ಹಾಲ ಎರಿಯೋಣ । ನನ ಗೆಳತಿ,
ನಾಗರ ಹೆಡಿಯ್ಹಾಂಗ ಆಡೋಣ ॥

ಚಿಕ್ಕಂದಿನ ಗೆಳತಿಯರಿಬ್ಬರೂ ಬಹಳ ದಿನಗಳ ಸಂತಸ ಕೂಡುತ್ತಾರೆ. ಚಂದ್ರ ಕಾಳಿಯ ಸೀರೆಯನ್ನುಟ್ಟು, ಚಂದ್ರಕಾಪ್ಪನ ತೊಟ್ಟು, ಆನಂದದಿಂದ ಗೆಳತಿಯರು ಜೋಕಾಲಿ ಆಡುತ್ತಾರೆ. ಗರತಿ ಗೆಳತಿಯ ಮುಂದೆ ಗಂಡನ ಮನೆಯ ಬಾಳುವೆ ಯನ್ನು ಕುರಿತು ಹೇಳುತ್ತಾಳೆ. ತಾಯಿಯ ಮನೆಯ ಸುಖದ ಬಗೆಗೆ ಹಾಡುತ್ತಾಳೆ:

ತಾಯಿಯ ಮನಿಗ್ಹೋಗಿ ಬಾಯಿ ಬೇಡಿದ್ದುಂಡೆ ।
ಸ್ವಾಮೀಗಿ ಉಂಡೆ ಸೈದಾನ । ಹಡೆದವ್ವ
ಮಾರಿ ನೋಡಿ ಉಂಡೆ ಮೊಲೆಹಾಲ ॥

ತವರುಮನೆಯಲ್ಲಿ ಹಬ್ಬ-ಹುಣ್ಣಿವೆ ಮಾಡಿ, ಮನ ಬಯಸಿದ್ದನ್ನುಂಡು, ಗೆಳತಿಯರ ಕೂಡ ಆಡಿ ಹಾಡಿ, ಜನಗಡನೊಂದಿಗೆ ಸರಸದಿಂದ ದಿನಗಳೆದು ಹೊಸ ಉತ್ಸಾಹ ದಿಂದ ಗರತಿ ಗಂಡನ ಮನೆಗೆ ಬರುವಳು. ತನ್ನನ್ನಗಲಿ ಬಹಳ ದಿನ ಹೆಂಡತಿ ತವರೂರಿಗೆ ಹೋಗಿದ್ದಳೆಂದು ಗಂಡ ಸಿಟ್ಟಾಗಿದ್ದಾನೆ.

ಕಟ್ಟಾಣಿ ಗುಂಡೀಗಿ ಸಿಟ್ಟು ಮಾಡಲಿ ಬ್ಯಾಡ ।
ಬಿಟ್ಟು ಬಂದೀದ ಬಳಗೆಲ್ಲ । ಪತಿಪುರುಷ,
ಕಟ್ಟ್ಯಾರ ತಮ್ಮ ಪದರಾಗ ॥

ಪತ್ನಿಯ ಈ ಕರುಣೆಯ ನುಡಿಗೇ, ಅಗಲಿದ ಅವಳ ಮುಗುಳ್ನಗೆಯನ್ನು ನೋಡಿ ಸಿಟ್ಟನ್ನೆಲ್ಲ ಗಂಡ ಮರೆಯುತ್ತಾನೆ. ಹೆಣ್ಣಿನ ವಾಣಿಯಲ್ಲಿಯ ಶಕ್ತಿಯೇ ಅಂಥದು.

ಗಂಡ ಹೆಂಡರ ಜಗಳಾ ಗಂಧ ತೀಡಿದ್ಹಾಂಗ ।
ಲಿಂಗಕ ನೀರ ಎರೆದಾಂಗ । ಹಿರಿಹೊಳೆಯ
ಗಂಗವ್ವ ಸಾಗಿ ಹರಿದಂಗ ॥

ಗರತಿಯು ಮತ್ತೆ ತನ್ನ ದಿನದ ಕೆಲಸದಲ್ಲಿ, ಪತಿಯ ಸೇವೆಯಲ್ಲಿ ನಿರತಳಾಗುತ್ತಾಳೆ. ಪತಿಗೆ ಬಹಳ ದಿನ ತವರಿಗೆ ಹೋಗಿ ಬಂದ ಪತ್ನಿಯೊಡನೆ ಸರಸವಾಡಬೇಕೆನಿಸು ತ್ತದೆ. ಪತ್ನಿಗೆ ಲಜ್ಜೆ, ಮನೆಯ ಜನರ ಭಯ.

ಹಣಚಿ ಬಟ್ಟಿನಕ್ಕೆಯ ಒತ್ತಿ ಹಿಡಿಯಲಿ ಬ್ಯಾಡ ।
ನೆತ್ತರಿಳಿದಾವ್ರು ಬೆರಳೀಗಿ । ನನ ರಾಯ,
ಅತ್ತಿ ಬೈದಾಳು ಕೈಬಿಡೋ ॥

ಎಂದು ಹೇಳುತ್ತ ಕೆಲಸಕ್ಕೆ ಹೊರಡುತ್ತಾಳೆ. ದಾಂಪತ್ಯದ ನೌಕೆ ಶಾಂತವಾಗಿ ಸಾಗಿದ್ದರೂ ಒಟ್ಟು ಕುಟುಂಬದಲ್ಲಿದ್ದ ಗರತಿಗೆ ಸುತ್ತಲಿನ ಜನರಿಂದ ತೊಂದರೆ ತಪ್ಪಿದ್ದಲ್ಲ; ಮಾರಾಯರು ಬಯ್ದರೆ ಕಣ್ಣೀರು ಬಾರವು; ಮಾರಾಯರ ತಮ್ಮ ಮೈದುನ ಬಯ್ದರೆ ದುಃಖಪಡುವಳು. ಹಣ್ಣು ಮೆಣಸಿನಕಾಯಿ ನೋಡಲು ಕೆಂಪ

ಗಿದ್ದರೇನು, ಅದನ್ನು ತಿನ್ನಬಹುದೇ? ಅದೇ ರೀತಿ ನೆನೆಸ್ತಿ ಸ್ತ್ರೀಯಳೇ. ಅನುಭಾವದ ಕೊಂಕು ಮಾತುಗಳು ಗರತಿಗೆ ಜಿನ್ನಿಯಲ್ಲಿ ಮುಳ್ಳು ಮುರಿದ್ಹಾಂಗ ಕಾಣುತ್ತವೆ. 'ಅತ್ತೀಯ ಮನಿಯಾಗ ಅದವತ್ತು ಗಂಗಾಸ್ನಾನವಲ್ಲ ಬೇಗಬತ್ತೀನಿ. ಅತ್ತೆವ್ವಾ ಬೈಬ್ಯಾಡ. ತವರುಮನೆಯಲ್ಲಿ ನಡುಮುತ್ತು ಮಾಡಿ ನಲಿಯುವವರು, ಹೀಗೆಂದು ಹೇಳುವ ಸೊಸೆಯ ನುಡಿಯನ್ನು ಕೇಳುವ ಅತ್ತೆಗೆ ತನ್ನ ಹೆಣ್ಣು ಮಕ್ಕಳ ನೆನಪಾಗುತ್ತದೆ. ಅವರೂ ಇವಳಂತೆ ಎರವಲಿಯವರು ಮನೆಗೆ ಹೋಗಿದ್ದಾರೆ, ಎಂದುಕೊಂಡು ಸಾಮ್ಯತೆಯಿಂದ ಬಾಳುತ್ತಾಳೆ.

ಅರಳು ತೂಕದ ನೆಲ್ಲ ಗಳಿಸುವ ಮೈದೂನ ।
ನಡಿಸಿಕೊಳುವತ್ತಿ ಸಿರಿನಂಗಿ । ಮನಿಯಾಗ
ಬದುಕು ಮಾಡುದು ಅರಿದೇನ ॥

ಅತ್ತೆಯ ಮನೆಯಲ್ಲಿ ತನ್ನ ದೇಹವನ್ನು ಮರೆತು ಸವೆಸುತ್ತ ಗರತಿಯು ಸುಗ್ಗದ್ದುರಳಿನಂತೆ ನುಡಿಯುತ್ತಾಳೆ. ಯಾವಾಗಲೂ ಕೆಲಸ ಮಾಡುತ್ತ ನಿಸ್ವಾರ್ಥತ್ಯಾಗಿಯಾದ ಆಕೆಯನ್ನು ಎಲ್ಲರೂ ಪ್ರೀತಿಸುತ್ತಾರೆ.

ಮುಂದಿ ಮಕ್ಕಳೊಳಗ ಲಂದಾಗ್ಲೊಂದಿ ಬೇಕ ।
ನಂದೀಯ ಶಿವನ ದಯದಿಂದ । ಹೋಗಾಗ
ಮಂದಿ ಬಾಯಾಗ ಇರಬೇಕ ॥

ಇದೇ ಇವಳ ಬಾಳ ಗುರಿ. ಒಳ್ಳೆಯ ಮಗಳಾಗಿ ತಂದೆತಾಯಿಗಳಲ್ಲಿ ಸಂತಸ ಪಡಿಸಿದಳು. ಪ್ರೀತಿಯ ಪತ್ನಿಯಾಗಿ ಪತಿಯ ಬಾಳನ್ನು ಬೆಳಗಿದಳು. [illegible]ದ ತಾಯಾಗಿ ಲಾಲಿಯನು ಹಾಡುತ್ತ ಮಗುವನ್ನು ಬಂಗಾರದ ಹಾಗೆ ಸಲಹಿದಳು. ಅತ್ತೆಯಾಗಿ,

ತನ್ನಂಗ ನೋಡಿದರ ಭಿನ್ನಿಲ್ಲ ಭೇದಿಲ್ಲ ।
ತನ್ನಂಗ ತನ್ನ ಮಗಳಂಗ । ನೋಡಿದರ
ಕಣ್ಣ ಮುಂದಾದ ಕೈಲಾಸ ॥

ಎಂಬ ಭಾವವನ್ನಿಟ್ಟುಕೊಂಡಳು. ಇವರೆಲ್ಲರ ಸುಖಾಗಿದವನ್ನು ಗರತಿ ಕಾಯುತ್ತಾಳೆ. ಆಕೆಯ ಬಾಳು ಆದರ್ಶಮಯವಾಗಿದೆ, ಆನಂದಮಯವಾಗಿದೆ. ಆಕೆ ಅನುಭವ ನಡೆ ನುಡಿ ಚೆನ್ನವಾಗಿದೆ. ಶಿವನ ದಯೆಯನ್ನು ಅವಳು ಬಾಳ ಬಲ್ಲಳು. ತನ್ನಂತೆ ಎಲ್ಲರನ್ನು ಕಾಣುವುದೇ ಅವಳ ಧರ್ಮ. ಕೇವಲ ಶಬ್ದದ ಪಾಂಡಿತ್ಯ ಅವಳದಲ್ಲ. ಅನುಭಾವವೇ ಅವಳ ಸಾರಸರ್ವಸ್ವ. ಬೆಳ್ಳಿಚುಕ್ಕಿ ಮೂಡುವಾಗ ಎದ್ದು ಮನೆಗೆಲಸ ಪ್ರಾರಂಭಿಸಿದ ಗರತಿಯ ದಿನಚರಿ ರಾತ್ರಿ ಹತ್ತು ಗಂಟೆಯಾದರೂ ಮುಗಿಯುವದಿಲ್ಲ. ಬಿಡುವಿಲ್ಲದೆ ಕಾರ್ಯ ಮಾಡುವ ಕರ್ಮಯೋಗಿನಿಗೆ ದೇವರ ಧ್ಯಾನ ಮಾಡಲೂ ಪ್ರತ್ಯೇಕ ವೇಳೆ ದೊರೆಯದು. ಅದಕ್ಕಾಗಿ ಅವಳು ಬೆಳಗ್ಗೆ ಬೀಸಲು ಕೂತರೆ ಕಲ್ಲನ್ನು ಕೊಟ್ಟವಳ ಹೆಸರಿನಿಂದ ಹಾಡನ್ನು ಪ್ರಾರಂಭಿಸುತ್ತಾಳೆ:

ಕಲ್ಲ ಕೊಟ್ಟವ್ವಗ ಎಲ್ಲ ಬಾಗ್ಯೇವಿರಲಿ।
ಮಲ್ಲಿಗಿ ಮುಡಿವ ಮಗನಿರಲಿ। ಹೇಪ್ರಡ್ಡಿ
ಮಲ್ಲವ್ವನಂಥ ಸೊಸಿ ಇರಲಿ ॥

ಎಂಬ ಮಧುರ ಹಾಡಿನೊಂದಿಗೆ ಕಲ್ಲಿಗೆ ಮುಕ್ಕು ಹಾಕುತ್ತ ಬೀಸಹತ್ತಿದಳೆಂದರೆ ತನ್ನನ್ನು ತಾನೇ ಮರೆಯುತ್ತಾಳೆ.

ನಾರಾಯಣಾ ನಿನ್ನ ನಾಮದ ಬೀಜವ
ನಾನೆಲ್ಲಿ ಬಿತ್ತಿ ಬೆಳೆಯಲಿ। ನಿನ ನಾಮ
ನಾಲಿಗಿ ಮೇಲೆ ಬೆಳದೇನೋ॥

ನಾಲಿಗೆ ಮೇಲೆ ದೇವರ ನಾಮವನ್ನೂ ಹೃದಯದಲ್ಲಿ ಭಕ್ತಿಯನ್ನೂ ಮನದಲ್ಲಿ ನಿಷ್ಠೆಯನ್ನೂ ಗರತಿ ಬೆಳೆಸಿಕೊಂಡಿದ್ದಾಳೆ.

ಎಲ್ಲಿ ವಿಷ್ಣುನ ಗಾಳಿ ಸಿಲ್ಲನಲೆ ಬೀಸ್ಯಾವ
ಕಲ್ಯಾಣ ಗಾಳಿ ಬಲು ಬೀಸಿ। ನಾದಾಗ
ಎಣ್ಣಾರೊಕ್ಕ್ಯಾರ ಶಿವ ನುಡಿಯ

ಕಲ್ಯಾಣದ ಕ್ರಾಂತಿಯಿಂದ ಬೆಳೆದ ಶಿವಭಕ್ತಿಯ ಕಥೆಯೆಲ್ಲ ಅವಳ ಬಾಯಿಂದ ಹೊರಟು ನಾಡನ್ನು ತುಂಬಿಕೊಂಡಿದೆ. ಜಾತಿಭೇದವಿಲ್ಲದೆ ಕೃಷ್ಣ, ರಾಮ, ಹನುಮ ಶಿವಭಕ್ತರು, ಬಸವ, ಮಹಾನುಭಾವರನ್ನೆಲ್ಲ ನೆನೆಯುವಳು. ಅವಳ ಧರ್ಮ ಸರ್ವ ಧರ್ಮ ಸಮನ್ವಯವಾದದ್ದು. ಬೀಸುವಾಗ ಮಕ್ಕಳೆದ್ದು ಅಳಹತ್ತಿದರೆ ಮಕ್ಕಳ ಮೇಲೆ ಹಾಡಹತ್ತುತ್ತಾಳೆ. ಆಡಿ ಬಂದ ಮಗನ ಅಂಗಾಲನ್ನು ತೆಂಗಿನ ಕಾಯ ತಿಳಿ ನೀರಿನಿಂದ ತೊಳೆಯುತ್ತಾಳೆ. ಆ ಕಂದನ ತುಟಿ ಅವಳಿಗೆ ಹವಳದ ಕುಡಿಯಂತೆ ತೋರುವದು. ಕಣ್ಣಲ್ಲಿ ಕುಂದಣವಾಗಿ ಕಾಣುವದು. ತವರುಮನೆಯ ನೆನಪಾದರಂತೂ ಸರಿ. ಎಲ್ಲ ಬಳಗವನ್ನು ವಿವಿಧ ರೀತಿಯಿಂದ ಹೊಗಳುವಳು. ಅತ್ತೆಯ ಮನೆಯಲ್ಲಿನ ಬವಣೆ ಬೇಸರವೆನಿಸಿದ್ದರೆ ಅವನ್ನೂ ಬೀಸುವ ಕಲ್ಲಿನ ಸ್ವರದೊಂದಿಗೆ [illegible] ಹಾಡಾಗುವದು. ಗರತಿಯ ವರ್ಣನೆ, ದೇವರ ನುಡಿ, [illegible] ಗರತಿಯ ಬಾಯಲ್ಲಿ ಬೀಸುವ ಕಲ್ಲಿನಿಂದ [illegible]. ಗರತಿಯು [illegible] ಯುಗಗಳಲ್ಲಿ ಇತಿಹಾಸವನ್ನು ಓದಿರಲಿಲ್ಲ. [illegible] ಕುರಿತು ಅಭ್ಯಾಸ ಮಾಡಿರಲಿಲ್ಲ. ಎಲ್ಲವನ್ನೂ ತನ್ನ ಹಿರಿಯರ ಬಾಯಿಂದ ಕೇಳಿದ್ದಳು. ಚಿಕ್ಕವಳಿದ್ದಾಗ ಅಜ್ಜಿ ಹೇಳಿದ ಕಥೆಗಳು, ಸಂತರ [illegible], ತಾನು ಅನುಭವಿಸಿದ ಸುಖದುಃಖಗಳು ಗರತಿಯ ಹಾಡಿನ ರೂಪದಲ್ಲಿ ಹೊರಹೊಮ್ಮಿವೆ. ಕನ್ನಡ ಗರತಿಯ ಕರುಣೆ, ವಾತ್ಸಲ್ಯ, ಮೋಹ, ಆಸೆ, ಆಕಾಂಕ್ಷೆಗಳೆಲ್ಲ ಚಿಗಿತು ಹೂ ಬಿಟ್ಟಿವೆ. ಬೀಸುವ ಕಾಲಕ್ಕೆ ಬೆಳಗಿನ ಶಾಂತ ವಾತಾವರಣ ಅವಳಲ್ಲಿ ಸ್ಫೂರ್ತಿಯನ್ನು ಹೊರಹೊಮ್ಮಿಸುತ್ತದೆ. ಬೀಸುವ ಕಾಲ ಮುಗಿದರೂ ಹಾಡು ಮುಗಿಯದಂಥ ಹಾಡಿನ ಸಂಗ್ರಹ ಅವಳಲ್ಲಿದೆ.

ಆದಾವ ನಮು ಜೋಳ ಉಳಿದಾವ ನಮು ಹಾಡ ।
ಈಗ ಸಾಕವ್ವ ನಿನ ಕಲ್ಲ । ಕೈಯಾನ
ಹಾಕಿದುಂಗುರ ಸವಿದಾವ ॥

ಆಗೂವ ಮುಕ್ತೀಗೆ ನಾ ಯಾರ ನೆನೆಯಲೆ ।
ರಾಜೀವ ಸಲುವ ಬಸವಣ್ಣನ । ಹೇಣಾತಿ ।
ನೀಲವನ ಹಾಡಿ ನಿಲಸೇನ ॥

ಅವಳು ಬೀಸುವದನ್ನು ಮುಗಿಸುವ ಹೊತ್ತಿಗೆ ಕೇಳುಗರಿಗೆ ವಿಶಾಲ ಪ್ರಪಂಚದ ಪರಿಚಯವೇ ಆಗಬಲ್ಲದು.

ಕನ್ನಡ ನಾಡಿನ ಗರತಿಯರ ಬಾಳು ಪವಿತ್ರವಾಗಿದೆ. ಅವರೆಲ್ಲ ಮನೆಗಾಗಿ, ಮಕ್ಕಳಿಗಾಗಿ ದೇಹ ಸವೆಸಿದ ಸ್ವಾರ್ಥತ್ಯಾಗಿಗಳು; ಎಡೆಬಿಡದೆ ಕಾರ್ಯಗೈದ ಕರ್ಮಯೋಗಿನಿಯರು; ಭಕ್ತಿ ಶ್ರದ್ಧೆಗಳ ಸಾಕಾರ ಮೂರ್ತಿಗಳು. ಸುಶಿಕ್ಷಿತರಲ್ಲವಾದರೂ ಅವರದು ಸುಸಂಸ್ಕೃತ ಜೀವನ. ಕನ್ನಡ ಗರತಿಯರ ಆಚಾರ ವಿಚಾರ ಉದಾತ್ತವಾಗಿದ್ದವು. ಅವರ ಬಾಳು ಕಾವ್ಯಮಯವಾಗಿತ್ತು.

ಗರತಿಯ ಹಾಡುಗಳಲ್ಲಿಯ ಬಾಳು ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಅದು ಇಂದಿನ ಕನ್ನಡಿತಿಯರ ಬಾಳಿಗೆ ಬೆಳಕಾಗಬಲ್ಲದು.

(ಕನ್ನಡ ತಾಯಿ)
—ಶಾಂತಾದೇವಿ ಮಾಳವಾಡ

೧೩. ತಿರುಕನ ಹಾಡು

ನಾನೊಬ್ಬ ತಿಳಿತಿಳುವಿನ ತಿರುಕ, ತಿರುಳುಗನ್ನಡ ತಿರುಕ. ಕಾಡಿ ಬೇಡುವವನಲ್ಲ, ಬೇಡಿ ಬಾಳಿದವನಲ್ಲ. ನೋಡಿ ಬಿಟ್ಟವನಲ್ಲ. ಮಹಾಕವಿಗಳು ಒಗೆದು ಬಿಟ್ಟಿದ್ದ ಎಂಜಲವನ್ನು ಪ್ರಸಾದವೆಂದೆತ್ತಿ ತಂದು, ಕನ್ನಡಕ್ಕಾಗಿ ಹಸಿದ ಮಕ್ಕಳೆಲ್ಲರನ್ನು ಕರೆದುಕೊಂಡ ತಿರುಕ. ಇದಕ್ಕಾಗಿ ತಲೆತಿರುಕನೊಬ್ಬನನ್ನು ತಳಕು ಹಾಕಿಕೊಂಡ ತಿರುಕ. ಹೊರಗನ್ನು ನೋಡಿ, ಒಳಗನ್ನರಿಯುವವರ ಒಳಗನ್ನರಿಯಬೇಕೆಂದು ತಿರುಗಾಡಿದ ತಿರುಕ. ಈ ಹಂಚಿನ ಮೈಬಣ್ಣದ ತಿರುಕನನ್ನು ಮಿಂಚಿನ ಬಳ್ಳಿಯ ನನ್ನ ಮಿತ್ರರು, ಮಿಂಚಿದ ಸಾಹಿತಿಗಳ ಸಾಲಿನಲ್ಲಿ ನಿಲ್ಲಿಸಲು ಏಕೆ ಕರೆದರೋ ತಿಳಿಯದು. ಕರೆದರು 'ಓ' ಎಂದೆ. ಹೂವಿನಿಂದ ನಾರು ಸ್ವರ್ಗಕ್ಕೆಂದರು. ಹೂ' ಎಂದೆ. ನಾನು ಕವಿಯಲ್ಲ, ಕವನಗಾರನಲ್ಲ, ಕತೆಗಾರನಲ್ಲ. ಆದರೂ

ನಾನೊಂದ ಹಾಡುಹಾಡುವೆ. ಪ್ರಾಸವಿಲ್ಲದ ಹಾಡು. ಮೌನದ ಹಾಡು. ಅದನ್ನು ನೆನೆದಾಗೆಲ್ಲ ಉದುರುವ ಕಂಬನಿಗಳೇ ಅದರ ನುಡಿಗಳು. ನನ್ನ ಹಾಡನ್ನು ಬರೆದುಳಿಸಬೇಕೆಂಬ ಹಂಬಲ ನನ್ನಲ್ಲಿರಲಿಲ್ಲ. ಆದರೂ ಬರೆವೆ. ಮುಂದಣ ಪೀಳಿಗೆಯ ಏಳಿಗೆಗಾಗಿ, ಸುಖಜೀವಿಗಳಾದ ಸಾಹಿತಿಗಳಿಗಾಗಿ ಅಲ್ಲ; ಕಷ್ಟ ಜೀವನದ ಕನ್ನಡ ಸಾಹಿತಿಗಳಿಗಾಗಿ, ಲಕ್ಷ್ಮಿಯು ಬಿಟ್ಟುಹೋದ ಮನೆಯಲ್ಲಿ ಹುಟ್ಟಿದ ಸರಸ್ವತಿಯ ಪುತ್ರರಿಗಾಗಿ, ಬಡತನದ ಗೋಳಿನಲ್ಲಿ ಬಾಳುವವರಿಗಾಗಿ, ಸಾಹಿತ್ಯಸೇವೆಯಲ್ಲಿ ಕರುಣಾಂತರಗಳಿಂದ ಕಂಗೆಟ್ಟ ಕನ್ನಡಿಗರಿಗಾಗಿ.

ಕ್ರಾಂತಿಕಾರಿಯಾದ ನನ್ನ ಸಾಹಿತ್ಯದ ಹಾಡಾದರೂ ಇತರ ಶ್ಲೋಕಗಳಂತೆ ಶೋಕಮಯವಾಗಿದೆ. ನನ್ನ ಮನೋಧರ್ಮವನ್ನರಿಯದೆ ಈ ಹಾಡನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲದರಿಂದ ಆ ಬಗೆಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳುತ್ತೇನೆ. ನಾನು ಹದಿನೆಂಟು ವಯಸ್ಸಿನವನಾದಾಗ ನನ್ನಲ್ಲಿ ಅಪೂರ್ವವಾದ ಒಂದು ಜಾಗೃತಿಯುಂಟಾಯಿತೆಂದು ಹಿಂದೆ ಹೇಳಿದ್ದೇನೆ. ಭಗವದ್ಗೀತೆ (ಅಧ್ಯಾಯ ೨-೬೯) ಯಲ್ಲಿ ಹೇಳಿದಂತೆ ಜಗತ್ತಿನ ರಾತ್ರಿಯು ಮುನಿಗೆ ಹಗಲೂ, ಹಗಲು ಮುನಿಗೆ ರಾತ್ರಿಯೂ ಆಗಿ ತೋರುವದೆಂಬ ಮಾತು ನನ್ನ ವಿಷಯದಲ್ಲಿ ಅಕ್ಷರಶಃ ಸತ್ಯವಾಗಿದೆ ಎಂದು ಹೇಳಿದರೆ ಅತ್ಯುಕ್ತಿಯುಕ್ತಿಯಾಗದು. ಮುನಿಯ ರಾತ್ರಿ ಎಂದರೆ ನನ್ನ ಜಾಗ್ರತಾವಸ್ಥೆ. ಈ ಸ್ಥಿತಿಯಲ್ಲಿ ಹೊಸ ವಿಚಾರಗಳು ಹುಟ್ಟುವದು ಕಡಿಮೆ. ಮುನಿಯ ಹಗಲೆಂದರೆ ನನ್ನ ಸ್ವಪ್ನಾವಸ್ಥೆ. ಈ ಸ್ಥಿತಿಯಲ್ಲಿ ಹೊಸವಿಚಾರ ತರಂಗಗಳೆದ್ದು ಮಿಂಚಿನ ಕುದುರೆಯಂತೆ ಬಹುವೇಗದಿಂದ ಸಾಗಹತ್ತುವವು. ಇವುಗಳನ್ನು ಹಿಡಿಯುವದಕ್ಕೆ ರೇಡಿಯೊ ಯಂತ್ರದಂತಹ ಯಾವದೊಂದು ಸಾಧನೆ ಇಲ್ಲವೆ ಅತ್ಯಂತ ತೀಕ್ಷ್ಣವಾದ ಜ್ಞಾಪಕಶಕ್ತಿ ನನ್ನಲ್ಲಿರುತ್ತಿದ್ದರೆ ವಿಲಕ್ಷಣವಾದ ಒಂದು ಗ್ರಂಥಭಾಂಡಾರವೇ ನನ್ನಿಂದ ಪ್ರಕಾಶಕ್ಕೆ ಬರುತ್ತಿತ್ತೆಂದು ಕಂಠೋಕ್ತವಾಗಿ ಹೇಳುತ್ತೇನೆ. ಬೆಳಗಾದೊಡನೆ ಈ ಎಲ್ಲ ಯೋಚನೆಗಳು ಹರಿದುಹೋಗಿ ಮನಸ್ಸು ಶುಭ್ರವಾದ ಆಕಾಶದಂತಾಗುವದು. ನನ್ನ ಸ್ವಪ್ನಾವಸ್ಥೆಯಲ್ಲಿ ಹೊಳೆದ ಎಷ್ಟೋ ಬೆಲೆಯುಳ್ಳ ವಿಚಾರಗಳು ಒಮ್ಮೆ ಮರೆತು ಹೋದರೆ ತಿರುಗಿಬಾರವು. ಇಂತಹ ಸಂಕಟ ಸ್ಥಿತಿಯನ್ನು ಅನುಭವ ಮಾಡಿದ ಒಬ್ಬ ಫ್ರೆಂಚ ಪತ್ರಿಕಾಕರ್ತನು ತಿರುಗಿಬಾರದ ಅಪೂರ್ವವಾದ ಒಂದು ಯೋಜನೆಗಾಗಿ ಆತ್ಮಹತ್ಯಮಾಡಿಕೊಂಡ ಉದಾಹರಣೆಯು ಇತಿಹಾಸದಲ್ಲಿದೆ.

ನನ್ನ ಪ್ರೇಮದ ವಿಷಯವೆಂದರೆ ತತ್ವಶಾಸ್ತ್ರ. ನಾನು ೨೫ ವರ್ಷ ಪ್ರಾಚ್ಯ ಪಾಶ್ಚಿ ತತ್ವದರ್ಶನಗಳ ವ್ಯಾಸಂಗ ಮಾಡಿರುವೆ. ತತ್ವಶಾಸ್ತ್ರವು ಕೊನೆಗೆ ಗಣಿತ ಶಾಸ್ತ್ರಜ್ಞದಲ್ಲಿ ಪರ್ಯವಸಾನ ಹೊಂದುವದೆಂದು ನನ್ನ ಮತ. ಹೀಗಾಗಿ ಒಂದು ವೇಳೆ ಒದಗಿದ್ದರೆ 'Mathematics of Philosophy' ಎಂಬ ಗ್ರಂಥವೊಂದನ್ನು ಬರೆಯಬೇಕಾಗಿತ್ತು. ಆದರೆ ದರ್ಶನಗಳೆಲ್ಲ ಏಕದೇಶೀಯವಾಗಿದ್ದು ಪ್ರತಿ ಒಂದು ತತ್ವವು ಕೊನೆಗೆ ನಿಲುಕಡೆ ಇಲ್ಲದೆ ಹೋಗುವದೆಂದು ತಿಳಿದುಬಂದುದರಿಂದ ಆ

ವಿಷಯವಾಗಿ ನನ್ನಲ್ಲಿ ಅತ್ಯಂತ ಜಿಗುಪ್ಸೆ ಉಂಟಾಯಿತು. ನನಗೆ ಇಷ್ಟವಿದ್ದ ತತ್ತ್ವ ಶಾಸ್ತ್ರದ ಹಾಡೇ ಹೀಗಾದ ಬಳಿಕ ಇಷ್ಟವಲ್ಲದ ಭಾಷಾಶಾಸ್ತ್ರವಂತೂ ಬಹು ದೂರ ಉಳಿಯಿತು. ಸಾಹಿತ್ಯಕ್ಕೂ ನನಗೂ ಇರುವ ಸ್ನೇಹ, ಹಾವಿಗೂ ಹದ್ದಿಗೂ ಇದ್ದಂತೆ. ಹೀಗೆ ವಿಷಯವೂ ವಿಷಯಸಾಧನವೂ ನನ್ನ ಪಾಲಿಗೆ ಶೂನ್ಯವಾಗಿ ಹೋದುದರಿಂದ ಗ್ರಂಥರಚನೆಯನ್ನು ಬಿಟ್ಟು ಆತ್ಮಜ್ಞಾನ ಮಾಡಿಕೊಂಡು ಸದ್ದಿಲ್ಲದೆ ಒಂದು ದಿನ ಈ ಲೋಕವನ್ನು ಬಿಟ್ಟು ಹೋದರಾಯಿತು ಎಂದು ನನ್ನೊಳಗೆ ನಿಷ್ಕರ್ಷೆ ಮಾಡಿಕೊಂಡೆ. ಹೀಗೆ ಭಗ್ನಾಶನಾಗಿ ಸಾಗುತ್ತಿದ್ದ ನನ್ನ ಜೀವನದ ಹಾದಿಯಲ್ಲಿ ಸರ್ವಜ್ಞನೆಂಬ ತಿರುಕನ ಸಂದರ್ಶನವಾಯಿತು. ಉಭಯತರ ಹಾದಿಗಳು ಒಂದೇ ತರದವುಗಳೆಂದು ಗೊತ್ತಾಯಿತು. ಆಗ ನನ್ನನ್ನು ಅವನಲ್ಲಿ ಕಂಡೆ. ಇಬ್ಬರಿಗೂ ಮೇಳವಾಯಿತು. 'ಕರಿಗೆ ಕರಿ ಕೂಡಿ' ದಂತಾಗಿ ಪರಸ್ಪರರಲ್ಲಿ 'ಹಿರಿದು ಸ್ನೇಹ' ಗಳುಂಟಾದವು. ಪ್ರಿಯನು ಪ್ರೇಯಸಿಯ ಭಾಷೆಯನ್ನು ಕಲಿಯುವಂತೆ ನಾನು ಸರ್ವಜ್ಞನಿಂದ ಸರ್ವಜ್ಞನಿಗಾಗಿ ಕನ್ನಡವನ್ನು ಕಲಿತೆ. ಕನ್ನಡ ವ್ಯಾಕರಣ, ಛಂದಸ್ಸು, ಕಾವ್ಯ, ಅಲಂಕಾರ ಮುಂತಾದ ಶಾಸ್ತ್ರಗ್ರಂಥಗಳನ್ನು ಓದಿದ್ದು ಸರ್ವಜ್ಞನ ಕಾರ್ಯವನ್ನು ಕೈಕೊಂಡ ನಂತರ. ನಾನು ವೀರಶೈವ ಧರ್ಮವನ್ನರಿಯಕೊಳ್ಳಲೆತ್ನಿಸಿದ್ದು ಸರ್ವಜ್ಞನಿಗಾಗಿಯೇ. ಇದೇ ಸಮಯಕ್ಕೆ 'ಜ್ಞಾನವೆಂದರೆ ಕ್ರಿಯೆ, ಕ್ರಿಯೆ ಎಂದರೆ ಜ್ಞಾನ' ವೆಂದು ನನಗೆ ಮನವರಿಕೆಯಾದುದರಿಂದ ಕ್ರಿಯಾರಹಿತವಾದ ತತ್ತ್ವವಿಚಾರಕ್ಕೆ ವಿಮುಖನಾಗಿ ಕ್ರಿಯಾಸಹಿತವಾದ ಅನುಭವಕ್ಕೆ ಅಭಿಮುಖಿಯಾದೆ. ಮುತ್ತು ಕಳೆದುಕೊಂಡವನಿಗೆ ಮಾಣಿಕವು ದೊರೆತಂತಾಯಿತು. ನನ್ನಿಂದ ಶೋಧಿಸಲ್ಪಟ್ಟ 'ಅನುಭವ ಮಂಟಪವು' ನನಗೆ ನೆರೆಮನೆಯಾಯಿತು. 'ಅನುಭವಿಯ ವೇದವೇ ವೇದ' ವೆಂಬ ಸರ್ವಜ್ಞನ ಅನುಭವ-ಸೂತ್ರವು ನನಗೆ ಮಂಗಲಸೂತ್ರವಾಯಿತು. ಅನುಭವದ ಆಗರಗಳಾದ ಉಪ-ನಿಷತ್ತು, ಭಗವದ್ಗೀತೆ, ವಚನಶಾಸ್ತ್ರ ಮುಂತಾದ ಉದ್ಗ್ರಂಥಗಳು ನನ್ನ ಪ್ರೀತಿಗೆ ಪಾತ್ರವಾದವು. ಪ್ಲೇಟೋ, ಕ್ಯಾಂಟ್, ಬ್ರಾಡ್ಲೆ ಮುಂತಾದವರ ಮೇಲಿದ್ದ ಪ್ರೇಮವು ವಿಲ್ಯಮ್ ಜೇಮ್ಸ್, ಬರ್ಗಸನ್, ಬೋಹಿಮೆ ಮುಂತಾದ ಅನುಭಾವಿಗಳತ್ತ ಹೊರಳಿತು. ಸರ್ವಜ್ಞನ ಗ್ರಂಥವು ನನ್ನ ಓಂ ಪ್ರಥಮ ಸಾಹಿತ್ಯವಾಯಿತು.

ಇತ್ತ ಸರ್ವಜ್ಞನಿಗಾಗಿ ನಾನು ಕನ್ನಡಭಾಷಾ ಅಭ್ಯಾಸವನ್ನು ಪ್ರಾರಂಭಿಸಿದಾಗ ಅತ್ತ ಸ್ವಾತಂತ್ರ್ಯದ ಯುದ್ಧವೂ ಬಹುಭರದಿಂದ ನಡೆಯುತ್ತಿತ್ತು. ಆ ಸಮಯದಲ್ಲಿ ಒಂದು ಕೈಯಲ್ಲಿ ಲೇಖನಿ ಮತ್ತೊಂದು ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಈ ಸಾಹಿತ್ಯ ಸೇವೆಯನ್ನು ಸಾಧಿಸಬೇಕಾಯಿತು. ಸರ್ವಜ್ಞನ ಗ್ರಂಥಾಭ್ಯಾಸವು ೧೯೧೫ ರಲ್ಲಿಯೆ ಪ್ರಾರಂಭವಾಗಿದ್ದರೂ ಮೊತ್ತಮೊದಲು ನನ್ನಿಂದ ಹೊರಟ ಗ್ರಂಥವೆಂದರೆ "ಬನಾರಸಕ್ಕೆ ಬೆತ್ತಲೆ ಹೇಮಿನ ವಿನಂತಿ" ಎಂಬದು. ಇದು ಮಿತ್ರರಿಗೂ ನನಗೂ ಉಂಟಾದ ತಿಕ್ಕಾಟದ ಸಮಯದಲ್ಲಿ ಹೊರಟದ್ದು. ಈ ಸಂದರ್ಭವನ್ನು ಕುರಿತು

ಹಿಂದೆ ಸೂಚಿಸಿರುವೆ. ಮಿಶನ್ನಿನವರು ಇದನ್ನು ಮುದ್ರಿಸದೆ ಹೋದುದರಿಂದ ನಾನು ಸ್ವಂತ ಹಣ ವೆಚ್ಚಮಾಡಿ ಅಚ್ಚು ಮಾಡಿಸಬೇಕಾಯಿತು. ಇದು ೧೯೨೧ ರಲ್ಲಿ ಧಾರವಾಡದ ಕರ್ನಾಟಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಣವಾಗಿದೆ. ಇದೇ ಸಮಯಕ್ಕೆ ಹೊರಟ ಇನ್ನೊಂದು ಗ್ರಂಥವೆಂದರೆ "ಹಿಂದೂ ಸಮಾಜ ಹಿತ ಚಿಂತಕ" ಎಂಬುದು. ಸ್ವರಾಜ್ಯ ಸಂಘಟನೆಗೆ ವಿಘ್ನವಾಗಿರುವ ಜಾತಿಯ ದುರಭಿಮಾನವನ್ನು ಹೋಗಲಾಡಿಸುವದಕ್ಕಾಗಿ ಇದು ಬರೆಯಲ್ಪಟ್ಟಿದೆ. ಇದನ್ನು ಅನೇಕ ಶಾಸ್ತ್ರಾಧಾರಗಳಿಂದಲೂ ಶಿಲಾಶಾಸನಗಳ ಆಧಾರಗಳಿಂದಲೂ ಸಮರ್ಥಿಸಲು ಯತ್ನಿಸಿದ್ದೇನೆ. ಇದನ್ನು ಸಹ ಮಿಶನ್ನಿನವರು ಮುದ್ರಿಸಲೊಲ್ಲದೆ ಹೋದುದರಿಂದ ಸುಮಾರು ೫೦೦ ರೂಪಾಯಿ ಸಾಲಮಾಡಿ ಅಚ್ಚು ಮಾಡಿಸಬೇಕಾಯಿತು. ಇದು ೧೯೨೧ ರಲ್ಲಿ ರೋಮನ್ ಕೆಥೋಲಿಕ್ ಕೋಡಿಯಾಲ್ ಬೈಲ್ ಮುದ್ರಣಾಲಯದಲ್ಲಿ ಅಚ್ಚಾಗಿದೆ. ಮುಂದೆ ೧೯೨೪ ರಲ್ಲಿ ಧರ್ಮಸಂಘದ ಜಾತಿ ಸಂಘವನ್ನು ರಾಷ್ಟ್ರದ ಪ್ರಯೋಜನಕ್ಕಾಗಿ ಸಿದ್ಧ ಮಾಡುವದು ಹೇಗೆಂಬ "[illegible]" ಹೊರಟಿದೆ. ಇದು ಬೆಂಗಳೂರಿನಲ್ಲಿ ಅಚ್ಚಾಯಿತು. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಸಮಯದಲ್ಲಿ ಕ್ರೈಸ್ತರು ಸಹ ದೇಶಾಭಿಮಾನಿಗಳೂ ರಾಷ್ಟ್ರಭಕ್ತರೂ ಆಗಿರಬೇಕೆಂಬುದನ್ನು ತೋರಿಸುವದಕ್ಕಾಗಿ ಮತಾಂತರ ಮಾಡಿದರೂ ದೇಶಾಭಿಮಾನದಿಂದ ತುಂಬಿ ತುಳುಕುತ್ತಿದ್ದ ಮಹಾರಾಷ್ಟ್ರದ ಪ್ರಸಿದ್ಧ ಕವಿಗಳಾದ ನಾರಾಯಣ ಟಿಳಕ ಇವರ ಜೀವನ ಚರಿತ್ರೆಯನ್ನು ಪ್ರಕಾಶಕ್ಕೆ ತಂದಿರುವೆ. ಇದು ಕನ್ನಡ ಮಿಶನ್ನಿನವರಿಂದ ೧೯೨೭ ರಲ್ಲಿ ಮುದ್ರಣವಾಗಿದೆ. ಮುಂದೆ ೧೯೩೦ ರಲ್ಲಿ "ಅನುಭವ ಮಂಟಪ"ವು ಇಂಗ್ಲಿಷಿನಲ್ಲಿ ಹೊರಟಿದ್ದು ಶ್ರೀ ಆಲೂರ ವೆಂಕಟರಾಯರಿಂದ ಕನ್ನಡಿಸಲ್ಪಟ್ಟಿದೆ. ಹಿಂದೂ ಸಮಾಜ ಸುಧಾರಣೆಗಾಗಿ ಬರೆಯಲ್ಪಟ್ಟ ಇನ್ನೊಂದು ಗ್ರಂಥವೆಂದರೆ "ಬಸವೇಶ್ವರನೂ ಅಸ್ಪೃಶ್ಯರ ಉದ್ಧಾರವೂ" ಎಂಬುದು. ಇದಕ್ಕೆ ಆಗ ಮುಂಬಯಿ ಮಂತ್ರಿಮಂಡಲದಲ್ಲಿ ಉಪಮಂತ್ರಿಗಳಾಗಿದ್ದ ಶ್ರೀ ಕೆ. ಎಫ್. ಪಾಟೀಲರೆಂಬವರು ಒಂದು ಮುನ್ನುಡಿಯನ್ನು ಬರೆದಿರುವರು. ಇದು ಮಹಾತ್ಮಾ ಗಾಂಧಿಯವರಿಗೆ ಅರ್ಪಿಸಲ್ಪಟ್ಟಿದ್ದು ೧೯೩೩ ರಲ್ಲಿ ಮುಲ್ಕಿ ವಾಗ್ವಿಲಾಸ ಪ್ರೆಸ್ಸಿನಲ್ಲಿ ಮುದ್ರಣವಾಗಿದೆ. ಹಿಂದೂ ದೇಶದಲ್ಲಿ ಕ್ರೈಸ್ತ ಉಪದೇಶಕ್ಕಿಂತ ಕ್ರೈಸ್ತ ಜೀವನವೇ ಹೆಚ್ಚು ಅವಶ್ಯವೆಂದು ನನಗೆ ತೋರಿಬಂದ ಕಾಲದಲ್ಲಿ ಒಂದು ಗ್ರಂಥವನ್ನು ಬರೆದಿರುವೆ. ಇದು ಸಾಧು ಸುಂದರಸಿಂಗರ ದೃಷ್ಟಾಂತಗಳನ್ನೊಳಗೊಂಡಿದ್ದು ಇದಕ್ಕೆ "ದೃಷ್ಟಾಂತ ದರ್ಪಣ"ವೆಂದು ನಾಮಕರಣ ಮಾಡಲ್ಪಟ್ಟಿದೆ. ಇದು ೧೯೩೭ ರಲ್ಲಿ ಬಾಸೆಲ್ ಮಿಶನ್ನಿನವರಿಂದ ಮಂಗಳೂರಿನಲ್ಲಿ ಅಚ್ಚಾದದ್ದು. ಇನ್ನು ಸದ್ಯಕ್ಕೆ ಸಾಹಿತ್ಯದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿ ಈ ವಿಷಯವನ್ನು ಸಮಾಪ್ತಿಗೊಳಿಸುತ್ತೇನೆ.

ಕ್ರಾಂತಿಕಾರನಾದ ನನ್ನಿಂದ ಹೊರಟ ಎಲ್ಲ ಗ್ರಂಥಗಳು ಸ್ವಲ್ಪ ಹೆಚ್ಚುಕಡಿಮೆ

ಕ್ರಾಂತಿಕಾರಕಗಳಾಗಿವೆ. ಸರ್ವಜ್ಞನ ಸಾಹಿತ್ಯಗ್ರಂಥವೂ ಅದೇ ವರ್ಗಕ್ಕೆ ಸೇರು ವುದು. ಯಾಕೆಂದರೆ ಸರ್ವಜ್ಞನೂ ಒಬ್ಬ ಕ್ರಾಂತಿಕಾರ ಪುರುಷ. ನನಗೆ ಇವನ ಪರಿಚಯುವಾದುದು ಒಬ್ಬ ವಿದೇಶಿಯ ಮಿಶನರಿಯಿಂದ. ನಾನು ಅವರಿಗೆ ಕನ್ನಡ ವನ್ನು ಹೇಳಿಕೊಡುತ್ತಿದ್ದ ಕಾಲದಲ್ಲಿ ಸರ್ವಜ್ಞನ ಬಗೆಗೆ ಅವರು ಮಾಡಿದ ಪ್ರಶ್ನೆಗಳು ವಿಚಾರಾರ್ಹವಾಗಿದ್ದವು. ಮಾತ್ರವಲ್ಲದೆ ಅವನ ಉದಾತ್ತ ವಿಚಾರ, ಜಾತಿ, ಮೂರ್ತಿಪೂಜೆಯ ಖಂಡನೆ ಮುಂತಾದುವುಗಳನ್ನು ನೋಡಿ ಕ್ರೈಸ್ತ ಧರ್ಮದ ಪರಿಣಾಮ ಇವನ ಮೇಲೆ ಆಗಿರಬಹುದೆಂದು ಅವರು ಅಭಿಪ್ರಾಯಪಟ್ಟರು. ಅನುಭಾವಿಗಳೆ ಲ್ಲರು ಒಂದಿಲ್ಲೊಂದು ರೀತಿಯಿಂದ ಮಿಶನರಿಗಳಾಗಿರುವುದರಿಂದಲೂ ವಚನಶಾಸ್ತ್ರ ದಲ್ಲಿ ಈ ತರದ ವಿಚಾರಗಳು ಧಾರಾಳವಾಗಿ ದೊರೆಯುವವರಿಂದಲೂ ಕ್ರೈಸ್ತ ಧರ್ಮದ ಪರಿಣಾಮ ಆಗುವ ಅಗತ್ಯತೆ ಇಲ್ಲವೆಂದು ಹಿಂದಿನಿಂದ ನನಗೆ ತಿಳಿದು ಬಂತು. ಏನೇ ಇರಲಿ ಸಾವಿರಾರು ಮೈಲು ದೂರದಿಂದ ಬಂದ ಮಿಶನರಿಯವರು ತಮ್ಮ ದೇಶದ ಕವಿಯಲ್ಲದ ಸರ್ವಜ್ಞನ ವಿಷಯಕ್ಕೆ ಇಷ್ಟು ಕುತೂಹಲವುಳ್ಳವರಾಗಿರಲು ಕನ್ನಡಿಗನೂ ಸರ್ವಜ್ಞನೂ ಜನಿಸಿದ ಜಿಲ್ಲೆಯಲ್ಲಿ ಜನಿಸಿದವನೂ ಆಗಿರುವ ನಾನು ಈ ವಿಷಯದಲ್ಲಿ ನಿಶ್ಚಿಂತನಾಗಿ ಕೈಮುಚ್ಚಿ ಕೂತುಕೊಳ್ಳುವುದು ಕೇವಲ ಲಾಂಛನವೆಂದು ತಿಳಿದು ಸರ್ವಜ್ಞನ ಸೇವೆಗೆ ಕಂಕಣಬದ್ಧನಾದೆ. ಇವನ ಕಾರ್ಯಕ್ಕೆ ಕೈಹಚ್ಚಿದಾಗ ಇಂಗ್ಲಿಷಿನಲ್ಲಿ ಅವನ ವಚನಗಳನ್ನು ಭಾಷಾಂತರಿಸಿ ಪ್ರಸಿದ್ಧಿಸಬೇಕೆಂಬ ಯೋಚನೆ ನನ್ನಲ್ಲಿತ್ತಲ್ಲದೆ ಅವನ ಬಗೆಗೆ ಕನ್ನಡದಲ್ಲಿ ನಾನು ಒಂದು ಗ್ರಂಥವನ್ನು ಬರೆಯಬಹು ದೆಂದು ಕನಸು ಮನಸ್ಸಿನಲ್ಲಿಯೂ ನೆನೆಸಿದ್ದಿಲ್ಲ. ತರಜುಮೆಗಾಗಿ ಅವನ ಪದ್ಯ ಗಳನ್ನು ಅಭ್ಯಸಿಸುತ್ತಿರುವಲ್ಲಿ ಪದ್ಯಗಳು ಬಹುಮಟ್ಟಿಗೆ ಕೆಟ್ಟುಹೋಗಿರುವವೆಂದು ತಿಳಿದು ಬಂದುದರಿಂದ ಸಹಜವಾಗಿ ಭಾಷಾಂತರದ ಕೆಲಸವನ್ನು ನಿಲ್ಲಿಸಿ ಗ್ರಂಥಸಂಸ್ಕ ರಣ ಕಾರ್ಯಕ್ಕೆ ಕೈಹಚ್ಚಿದೆ. ಇಂತಹ ವಿಷಯಗಳಲ್ಲಿ ನಾನು ಅನನುಭವಿಯಾದು ದರಿಂದ ‘ ದಯವಿಟ್ಟು ಕೆಲವು ಸಲಹೆಗಳನ್ನು ಕೊಟ್ಟು ಸಹಾಯಮಾಡಬೇಕೆ ’ಂದು ಪರಿಷತ್ತಿನ ಅಧಿಕಾರಿಗಳಿಗೆ ಕಾಗದ ಬರೆದೆ. ಇಷ್ಟರೊಳಗಾಗಿ ಉತ್ತಮವಾದ ಒಂದು ಗ್ರಂಥವು ತಮ್ಮಿಂದ ಹೊರಬಿದ್ದಿರುವುದರಿಂದ ‘ ನೀವು ಕೈಕೊಂಡ ಕಾರ್ಯವು ಬಹುಶಃ ಸಫಲವಾಗದು ’ ಎಂದು ಸಲಹೆ ಕೊಟ್ಟರು. ಇದನ್ನು ತರಿಸಿನೋಡಲಾಗಿ ಅದರಲ್ಲಿ ತುಂಬಾ ದೋಷಗಳಿರುವುದಾಗಿ ಕಂಡುಬಂದುದರಿಂದ ಕೆಲವು ಟೀಕಾತ್ಮಕ ಲೇಖಗಳನ್ನು ‘ ವಾಗ್ಭೂಷಣ ’ವೆಂಬ ಮಾಸಪತ್ರಿಕೆಯಲ್ಲಿ ಪ್ರಸಿದ್ಧಿಸಿದೆ. ಪರಿಷತ್ತಿನವರು ಅದಕ್ಕೆ ಉತ್ತರ ಬರೆಯದೆ ಹೋದುದರಿಂದ ಪರಿಷ ತ್ತಿಗೂ ನನಗೂ ಇದ್ದ ಸ್ನೇಹವು ಅಷ್ಟಕ್ಕೆ ನಿಂತಿತು. ಈ ಕಾರ್ಯ ದಲ್ಲಿ ಪಂಡಿತರಿಗಿಂತ ಮೂಲ ಪ್ರತಿಗಳ ಸಹಾಯವೇ ಮುಖ್ಯವಾದು ದೆಂದು ತಿಳಿದು ಬಂದ ಕೂಡಲೆ ಓಲೆಗಳ ಕುಬೇರರಾದ ಶ್ರೀಮಾನ್ ಆರ್. ನರಸಿಂಹಾಚಾರ್ಯರರಿಗೆ ಕಾಗದ ಬರೆದೆ. ಆದರೆ ಅವರಿಂದಲೂ ವಿಶೇಷ ಸಹಾಯ

ವಾಗಲಿಲ್ಲ. ಈ ಪ್ರಕಾರ ನಿರಾಶೆಗೊಳಗಾದ ಕಾಲದಲ್ಲಿ ಬೇರೆ ಬೇರೆ ಕಡೆಯಿಂದ ಸುಮಾರು ಇಪ್ಪತ್ತು ಪ್ರತಿಗಳು ಹಸ್ತಗತವಾದವು. ಇವುಗಳನ್ನು ಓದಿ ನೋಡುತ್ತಿರಲಾಗಿ ಗ್ರಂಥವನ್ನು ಹೊಸದಾಗಿಯೇ ಬರೆಯುವ ಪ್ರಸಂಗವು ಬಂತು. ಇದೇ ಸಮಯಕ್ಕೆ ಅದನ್ನು ಆದಷ್ಟು ಸಂಪೂರ್ಣ ಸ್ಥಿತಿಗೆ ಒಯ್ಯಬೇಕೆಂಬ ಆಶೆಯೂ ಉಂಟಾಯಿತು. ಹೀಗಾಗಿ ವಚನಗಳ ವಿಷಯ ವರ್ಗೀಕರಣಕ್ಕೆ ಕೈಹಚ್ಚಲು ನಮಾಜು ಮಾಡಲು ಹೋಗಿ ಮಸೀದೆಯೇ ಕೊರಳಿಗೆ ಬಿದ್ದಂತಾಯಿತು. ಇಪ್ಪತ್ತು ಪ್ರತಿಗಳಲ್ಲಿಯ ಸುಮಾರು ಎರಡು ಸಾವಿರ ವಚನಗಳನ್ನು ವರ್ಗೀಕರಿಸಬೇಕಾದರೆ ಅವುಗಳನ್ನು ನಾಲ್ವತ್ತುಸಾವಿರ ಸಾರೆ ಓದುವ ಪ್ರಸಂಗ ಬಿತ್ತು. ಇದರಿಂದ ನನ್ನ ಜ್ಞಾನತಂತುಗಳು ಬಲಹೀನವಾಗಿ ಜನರ ಮುಖದ ಗುರುತು ಸಿಗದಷ್ಟು ಕಣ್ಣಿನ ದೃಷ್ಟಿಯು ಮಂದವಾಯಿತು. ಇದೇ ಕಾಲಕ್ಕೆ ಹೃತ್ಕ್ರಿಯೆಯು ನಿಂತುಹೋಗಿ ನನ್ನ ತಂದೆಯವರು ತೀರಿಕೊಂಡರು. ಇದು ಸಿಡಿಲು ಬಡಿದಂತಾಗಿ ನಾನು ಕಠಿಣ ಅಸ್ವಸ್ಥಕ್ಕೊಳಗಾದೆ. ಆರು ತಿಂಗಳ ಚಿಕಿತ್ಸೆ ಹೊಂದಿದರೂ ಗುಣಮುಖ ತೋರಲಿಲ್ಲ. ನಾನು ಮರಣಕ್ಕೆ ತುತ್ತಾಗುವದು ನಿಶ್ಚಯವೆಂದು ತಿಳಿದ ಕಾಲದಲ್ಲಿ ನನ್ನೊಳಗೆ ಎಷ್ಟು ಸಂಕಟವಿರಬಹುದೆಂದು ಸಹೃದಯರು ತಿಳಿಯಬಹುದು. ನಾನು ಹಾಸಿಗೆಯ ಮೇಲೆ ಹೊರಳುತ್ತಿರುವಾಗೆಲ್ಲ ಸಾಯುವೆನಲ್ಲ ಎಂಬುದು ಎಷ್ಟು ಮಾತ್ರವೂ ನನ್ನನ್ನು ಕಾಡದೆ ಕೈಕೊಂಡ ಕೆಲಸವು ವ್ಯರ್ಥವಾಯಿತಲ್ಲಾ ಎಂಬ ಚಿಂತೆಯೊಂದೇ ನನ್ನನ್ನು ಕೊರೆಯುತ್ತಿತ್ತು. ಆ ಸಮಯದಲ್ಲಿ ನಾನು ಈಶ್ವರನನ್ನು ಕುರಿತು ಪ್ರಾರ್ಥಿಸಿದ್ದೇನೆಂದರೆ :— 'ಸರ್ವಜ್ಞನೇ, ಸರ್ವರ ಹೃದಯದಂತರಂಗವನ್ನರಿತವನೇ, ನಾನು ಈ ಕಾರ್ಯವನ್ನು ಸ್ವಲಾಭಮಾನಕ್ಕೋಸ್ಕರ ಕೈಕೊಂಡಿರುವದಾದರೆ, ಅದನ್ನು ಇಲ್ಲಿಗೆ ನಿಲ್ಲಿಸಿಬಿಡು. ಸಜ್ಜನ ಸೇವೆಯು ದೇಶಸೇವೆ ಮತ್ತು ನಿನ್ನ ಉಪಾಸನೆ ಆಗಿದ್ದರೆ, ಅಲ್ಪನಾದ ನನ್ನಿಂದ ಈ ಸೇವೆಯನ್ನು ಮಾಡಿಸಿಕೊಳ್ಳಲು ನೀನು ಇಷ್ಟಪಟ್ಟರೆ ನನ್ನನ್ನು ಇನ್ನೂ ಕೆಲವು ದಿವಸ ಉಳಿಸು' ಎಂದು ಬೇಡಿಕೊಂಡೆ. ಹೀಗಾಗಿ ಕೆಲವು ದಿನಗಳ ಮೇಲೆ ಗುಣಾಂಶವು ತೋರಿತು. ನಾನು ಸಂಪೂರ್ಣ ಕ್ಷೇಮ ಹೊಂದಿ ಸುಮಾರು ಆರು ವರ್ಷ ಕೆಲಸ ಮಾಡಿದ ಬಳಿಕ ಕೈಬರಹದ ಗ್ರಂಥವು ಅಚ್ಚಿಗೆ ಸಿದ್ಧವಾಯಿತು. ಇದರ ಪ್ರಕಟನೆಗಾಗಿ ಮೂರು ವರ್ಷಗಳ ವರೆಗೆ ಅನೇಕ ಮಹನೀಯರ ಮನೆಗೆ ಎಡತಾಕಿ ಬೇಸತ್ತೆ. ತಿರುಕನ ಈ ಕಾರ್ಯಕ್ಕೆ ಮಹತ್ವ ಕೊಡುವವರಾರೂ ಇದ್ದಿಲ್ಲ. ಆ ಕಾಲದಲ್ಲಿ ಕರ್ನಾಟಕ ಪ್ರಿಂಟಿಂಗ್ ವರ್ಕ್ಸದ ಒಡೆಯರಾದ ಶ್ರೀಮಾನ್ ಯಶವಂತರಾವ ಜಠಾರ ಇವರು ಇದರ ಮುದ್ರಣಕ್ಕಾಗಿ ಅಭಯಕೊಟ್ಟರು. ಇವರು ಆ ಕಾಲದಲ್ಲಿ ಸಹಾಯ ಮಾಡದೆ ಹೋಗಿದ್ದರೆ ಅದು ಇದು ವರೆಗೆ ಪ್ರಕಾಶಕ್ಕೆ ಬರುತ್ತಿತ್ತೋ ಇಲ್ಲವೋ ಹೇಳುವುದು ಕಷ್ಟ. ವಚನಗಳು ಅಚ್ಚಾದರೂ ಅವುಗಳಿಗೆ ಪ್ರಸ್ತಾವನೆ ಇಲ್ಲದ ಕಾಲದಲ್ಲಿ ಗ್ರಂಥವು ಮೂಲೆಯನ್ನು ಹಿಡಿದು ಕೂತುದರಿಂದ ಅಚ್ಚು ಹಾಕಿಸಿದವರಿಗೂ ವ್ಯಸನವಾಯಿತು. ಆದರೆ ಅದು

ದೀರ್ಘವಾದ ಪ್ರಸ್ತಾವನೆಯೊಂದಿಗೆ ಕನ್ನಡಿಗರ ಕೈಗೆ ಬಂದೊಡನೆ ವಿಶೇಷವಾದ ಮನ್ನಣೆಯನ್ನು ಹೊಂದಿತು. ನನಗೆ ಕ್ಷೇಮವಾಗುತ್ತ ಬಂದಂತೆ ನನ್ನ ಧರ್ಮಪತ್ನಿಗೆ ಕಾಯಿಲೆ ಪ್ರಾರಂಭವಾಯಿತು. ಅಂದಿನಿಂದ ಇಪ್ಪತ್ತೆರಡು ವರ್ಷಗಳಾದರೂ ಆಕೆ ಹಾಸಿಗೆ ಬಿಟ್ಟು ಏಳಲು ಶಕ್ತಳಾಗಲಿಲ್ಲ. ಸರ್ವಜ್ಞಗ್ರಂಥವು ಹೊರ ಬಿದ್ದ ಕಾಲದಲ್ಲಿಯೇ ಸ್ವಾತಂತ್ರ್ಯದ ಯುದ್ಧವೂ ಕಠೋರವಾಗಿ ನಡೆದಿತ್ತು. ನಾನು ದೊಡ್ಡ ಊರಲ್ಲಿದ್ದರೆ ಚಳವಳಿಯು ಹೆಚ್ಚಾಗುವದೆಂದು ಸರಕಾರದವರು ನನ್ನನ್ನು ಸಣ್ಣ ಊರಿಗೆ ಅಂದರೆ ಹಾವೇರಿಗೆ ವರ್ಗಾಯಿಸಿದರು. ಆ ಕಾಲಕ್ಕೆ ಸಾಹಿತ್ಯಕಾರ್ಯಕ್ಕಾಗಿ ಸುಮಾರು ೫೦೦ ರೂ. ಸಾಲವಾಗಿತ್ತು. ಅದನ್ನು ತೀರಿಸದೆ ನಾನು ಮರ್ಯಾದೆಯಿಂದ ಧಾರವಾಡವನ್ನು ಬಿಡುವಂತಿದ್ದಿಲ್ಲ. ಹೆಂಡತಿಯು ಬೆಟ್ಟಗೇರಿಯ ಆಸ್ಪತ್ರೆಯಲ್ಲಿದ್ದಳು. ಹೀಗೆ ಉಭಯ ಸಂಕಟಕ್ಕೀಡಾದ ಸಮಯದಲ್ಲಿ ನನ್ನ ಮಿತ್ರರಾದ ಶ್ರೀಮಾನ್ ಬೇಂದ್ರೆಯವರು ಸರ್ವಜ್ಞನ ಒಂದು ಪ್ರತಿಯನ್ನು ಆ ವರ್ಷದ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿ ನೇಮಕವಾಗಿದ್ದ ಶ್ರೀಮಾನ್ ಬೆನಗಲ್ ರಾಮರಾಯರಿಗೆ ಕಳುಹಿಸಿಕೊಟ್ಟು ನಾನೂ ಬೆಳಗಾವಿಯ ಸಮ್ಮೇಲನಕ್ಕೆ ಬರಬೇಕೆಂದು ಆಪ್ತಾಲೋಚನೆ ಕೊಟ್ಟರು. ನಾನು ಅವರ ಹೇಳಿಕೆಯಂತೆ ಕಾರ್ಯವನ್ನು ಮಾಡಿ ಸಾಹಿತ್ಯ ಸಮ್ಮೇಲನಕ್ಕೂ ಹೋದೆ. ಇಂತಹ ಸಮ್ಮೇಲನದಲ್ಲಿ ಕಾಲಿಟ್ಟುದು ಇದೇ ಮೊದಲನೆಯ ಸಾರಿ. ಅಲ್ಲಿ ಶ್ರೀಮಾನ್ ನಾಮುವಾರ ವಳವಿಯವರಿಂದ ಒಂದು ನೂರು ರೂಪಾಯಿ, ಶ್ರೀಮಾನ್ ಗರುಡರವರಿಂದ ಸುಮಾರು ಮುನ್ನೂರು, ರೂಪಾಯಿ ಶ್ರೀಮಾನ್ ನರಸಿಂಹಾಚಾರ್ಯರಿಂದ ಐವತ್ತು, ವಿದ್ಯಾವರ್ಧಕ ಸಂಘದಿಂದ ಐವತ್ತು, ಅಂತೂ ೫೦೦ ರೂಪಾಯಿಗಳು ಸಂಗ್ರಹವಾಗಿ ನಾನು ಹಾವೇರಿಗೆ ಹೋಗುವದಕ್ಕೆ ಎಂಟು ದಿವಸ ಮುಂಚಿತವಾಗಿಯೇ ನನ್ನ ಕೈಸೇರಿದ್ದರಿಂದ ನಾನು ಮರ್ಯಾದೆಯಿಂದ ಧಾರವಾಡವನ್ನು ಬಿಡುವಂತಾಯಿತು. ಇಂತಹ ಪ್ರಸಂಗಗಳು ನನ್ನ ಜೀವನದಲ್ಲಿ ಅನೇಕ ಸಾರೆ ಬಂದಿದ್ದು ಈಶ್ವರನ ಕೃಪಾಹಸ್ತದಿಂದ ನಡೆಸಲ್ಪಟ್ಟು ನಾನು ಇಲ್ಲಿಯ ವರೆಗೆ ಬಂದಿರುವೆ. ಸರ್ವಜ್ಞನ ಗ್ರಂಥವನ್ನು ಅಚ್ಚಿಗೆ ಸಿದ್ಧಪಡಿಸುವ ಕಾರ್ಯದಲ್ಲಿ ಅನೇಕ ಶಿಕ್ಷಕಿಯರು ನನ್ನ ಸಹಭಾಗಿನಿಗೆ ನೆರವಾದುದು ಕನ್ನಡಮಾತೆಗೊಂದು ಭೂಷಣ.

ಸರ್ವಜ್ಞಗ್ರಂಥವು ಹೊರಬಿದ್ದು ಇಂದಿಗೆ ಇಪ್ಪತ್ತು ವರ್ಷಗಳಾದವು. (೧೯೩೪–೫೪) ನಾಲ್ಕು ತರದ ಆವೃತ್ತಿಗಳು ಹೊರಟವು. ಇಂದಿಗೆ ಸುಮಾರು ಹತ್ತುಸಾವಿರ ಪ್ರತಿಗಳು ಕನ್ನಡಿಗರ ಕೈಸೇರಿದವು. ಆದುದರಿಂದ ಅವನ ಬಗೆಗೆ ವಿದ್ಯಾರ್ಥಿಗಳಲ್ಲಿಯೂ ಮಧ್ಯಮತರದ ಜನರಲ್ಲಿಯೂ ವಿದ್ಯಾವಂತರಲ್ಲಿಯೂ ವಿಶೇಷ ಜಾಗ್ರತೆಯುಂಟಾಗಿದೆ ಎಂದು ಕೈಎತ್ತಿ ಹೇಳಬಹುದು. ಸರ್ವಜ್ಞನ ತುತ್ತು ಸ್ವಾಭಾವಿಕವಾಗಿ ಸವಿ. ತಿರುಳುಗನ್ನಡ ತಿರುಕನು ಈ ಜೇನವನ್ನಿಟ್ಟಿದ್ದರಿಂದ ಸವಿಯು ಇಮ್ಮಡಿಯಾಯಿತು ’ ಎಂದು ಹೇಳಿದನೊಬ್ಬ. ‘ಈ ಸವಿಯೂಟವನ್ನು ಕನ್ನಡಿಗರಿಗೆ

ಬಡಿಸದೆ ಕಾಲವಾಗುವನೇನೋ ಎಂದು ಹಾಸಿಗೆಯಲ್ಲಿ ನರಳಿ ಈಶ್ವರನನ್ನು ಪ್ರಾರ್ಥಿಸಿದೆನು. ಈಶ್ವರನ ಪ್ರಸಾದದಿಂದಲೋ ತಿರುಕನ ಮನೋಬಲದಿಂದಲೋ ಸರ್ವಜ್ಞನ ಸುಕೃತದಿಂದಲೋ ಕನ್ನಡಿಗರ ಪುಣ್ಯಬಲದಿಂದಲೋ ತಿರುಕನು ಹಾಸಿಗೆಯಿಂದ ಎದ್ದನು. ಸರ್ವಜ್ಞನು ಹೊರಬಿದ್ದನು ' ಎಂದು ಹರಸಿದನು ಇನ್ನೊಬ್ಬ. 'ಚೆನ್ನಪ್ಪನವರು ವಿಮರ್ಶಕರು, ಕನ್ನಡ ಸಾಹಿತ್ಯ ವಿಮರ್ಶೆಗೆ ತಳಹದಿಯನ್ನು ಹಾಕಿದವರು, ವಿಮರ್ಶೆ ಶಬ್ದದ ತಿರುಳು ಅವರ ಕೃತಿಯಲ್ಲಿ ಒಡೆದು ಕಾಣುತ್ತದೆ ' ಎಂದು ಹೇಳಿದನು ವಿಮರ್ಶಕನೊಬ್ಬ. ' ಹಸಿದವನಿಗೆ ಹಣ್ಣನಿತ್ತಂತೆ ಕ್ರೈಸ್ತರ ಶಿಸ್ತು ಕಾಣಯ್ಯ ' ಎಂದು ಹಾಡಿದನು ಕಾವ್ಯಾನಂದನೊಬ್ಬ. ' ಚಿನ್ನನಾದರೂ ಚಿನ್ನವಂತಹ ಚೆನ್ನನೆಂದು ಕೀರ್ತಿಸಿದನು ' ಕೀರ್ತನ ಕೇಸರಿಯೊಬ್ಬ. ' ಹೆಸರು ಚೆನ್ನನಾಗಿ ಏನು ? ಕೃತಿಯು ಚೆನ್ನಾಗಿರಬೇಕೆ ? ' ಎಂದು ಕೇಳಿದನು ಕವೀಂದ್ರನೊಬ್ಬ. ಇದನ್ನು ನೋಡಿದರೆ ಸರ್ವಜ್ಞನು ನನ್ನಿಂದ ಪ್ರಸಿದ್ಧಿಗೆ ಬಂದನೋ ಇಲ್ಲವೆ ನಾನು ಸರ್ವಜ್ಞನಿಂದ ಪ್ರಸಿದ್ಧಿಗೆ ಬಂದೆನೋ ಹೇಳುವುದು ಕಠಿಣ. ಸಿದ್ದವನಹಳ್ಳಿಯ ಕೃಷ್ಣಶರ್ಮರು ಸರ್ವಜ್ಞನನ್ನು ನೋಡಿ ಕುಣಿದರು. ಪಟ್ಟಿಗೇರಿಯ ಕೃಷ್ಣಶರ್ಮರು ಅವನನ್ನು ಕುಣಿಸಿದರು. ತ. ತಾ. ಶರ್ಮರು ಅವನಿಗೆ ಮಣಿದರು. ಅ. ನ. ಕೃಷ್ಣರಾಯರು ಅವನ ಧ್ವಜವನ್ನೆತ್ತಿ ನೆಡಿಸಿದರು. ತಿಪಟೂರಿನ ಮಹಾಶಯರು ಅವನ ದಿನಾಚರಣೆಯನ್ನು ಮಾಡಿ ತಣಿದರು. ಪಂಜೆ ಮಂಗೇಶರಾಯರು ಇವನ ಶಿಕ್ಷಣಪದ್ಧತಿಯನ್ನರಿಯಲು ದಣಿದರು. ಪ್ರೊಫೆಸರ ಗೋಕಾಕರವರು ಅವನ ವಚನಗಳನ್ನು ಆಂಗ್ಲದಲ್ಲಿ ಹೆಣೆದರು. ಅಧ್ಯಾಪಕ ಚಿತ್ರಕೋಶನು ಎಲ್ಲ ಕಡೆಗೆ ಹಾಡಿಹೋಗಿ ಅವನ ಸಂದೇಶವನ್ನು ಸಂಭ್ರಮದಿಂದ ಸಾರಿದನು. ಇನ್ನೆಷ್ಟೋ ಕನ್ನಡಿಗರು ಎಷ್ಟೋ ಪರಿಯಿಂದ ಅವನನ್ನು ಹೊಗಳಿದ್ದಾರೆ. ಹೀಗೆ ಕನ್ನಡನಾಡು ಸರ್ವಜ್ಞನಿಗೆ ಚಿರಋಣಿಯಾಗಿದೆ ಎಂಬ ಸಂಗತಿಯು ಸರ್ವರ ಕೈಯೊಳಗಿನ ಕನ್ನಡಿಯಂತಿದೆ.

ಕನ್ನಡವು ಸಮೃದ್ಧಿಯ ಭಾಷೆಯಾಗಿ ಮೆರೆಯುವ ಕಾಲವು ಸಮೀಪಿಸುತ್ತಿರುವುದರಿಂದ ಪ್ರತಿಯೊಬ್ಬ ಕನ್ನಡ ವಿದ್ಯಾರ್ಥಿಯು ಸುಮಾರು ೧೦೦ ವಚನಗಳನ್ನು ಕಂಠಪಾಠ ಮಾಡಬೇಕೆಂದು ಅನೇಕ ಶಿಕ್ಷಕರ ಅಭಿಪ್ರಾಯವಿದೆ. ಇದಕ್ಕಾಗಿ ವಿದ್ಯಾರ್ಥಿಯೋಗ್ಯ ಪ್ರತಿಯೊಂದನ್ನು ಸಿದ್ಧಪಡಿಸಬೇಕಾಗಿದೆ. ಸರ್ವಜ್ಞ ವಚನಗಳು ಸುಲಭವಾಗಿದ್ದರೂ ಕೆಲವೆಡೆಗಳಲ್ಲಿ ಬಹು ಮಾರ್ಮಿಕವಾಗಿರುವುದರಿಂದ ಇದಕ್ಕೂ ಒಂದು ಟೀಕೆಯು ಅವಶ್ಯವೆಂದು ಶ್ರೀಮಾನ್ ಜೋಶಿಯವರ ಹೇಳಿಕೆ. ಈ ಕಾರ್ಯಕ್ಕಾಗಿ ಅನೇಕ ಸಂಗತಿಗಳನ್ನು ಇಷ್ಟ ದಿನಗಳಾಗಿ ಸವರಿಸಿಕೊಂಡಿದ್ದೇನೆ. ಭಗವದ್ಗೀತೆಯ ವಿಷಯದಲ್ಲಿ ನಾಲ್ಕು ಸಂಪುಟಗಳು ಇಂಗ್ಲಿಷಿನಲ್ಲಿ ಬರೆಯಲ್ಪಟ್ಟಿದ್ದು ಬಹುಮಟ್ಟಿಗೆ ಅಚ್ಚಿಗೆ ಸಿದ್ಧವಾಗಿದೆ. ವೃತ್ತಾಂತ ದರ್ಪಣದ ಉಳಿದ ಭಾಗಗಳು ಸಿದ್ಧವಾಗಿದ್ದು ಅಚ್ಚಿಗಾಗಿ ಕಾಯುತ್ತಿವೆ. ಭಾರತೀಯರಿಗಾಗಿ ಯೇಸುವಿನ ಜೀವನಚರಿತೆಯೊಂದನ್ನು ಬರೆಯಬೇಕೆಂಬ ಆಶೆಯು ಅನೇಕ ವರ್ಷಗಳಿಂದ ನನ್ನಲ್ಲಿ ಮನೆ ಮಾಡಿ

ಕೊಂಡಿದೆ. ಕನ್ನಡಕ್ಕೂ ಒಂದು ಸ್ವತಂತ್ರವಾದ ಸಂಸ್ಕೃತಿ ಇದೆ ಎಂಬ ವಿಷಯ ವಾಗಿಯೂ ಉಪನಿಷತ್ತು, ವಚನಶಾಸ್ತ್ರಗಳ ತುಲನಾತ್ಮಕ ತತ್ವವಿಷಯವಾಗಿಯೂ ಸ್ವತಂತ್ರವಾದ ಲೇಖನಗಳನ್ನು ಬರೆಯಬೇಕೆಂದು ನನ್ನ ಹಬ್ಬಯಕೆ. ಕನ್ನಡ ಗಾದೆ ಗಳು, ಕನ್ನಡ ನುಡಿಗಟ್ಟುಗಳು, ಕನ್ನಡ ಶಬ್ದಗಳು ಇವುಗಳಲ್ಲಿರುವ ಕನ್ನಡತನವನ್ನು ಬಯಲಿಗೆಳೆದು ಅದನ್ನು ಕನ್ನಡಿಗರ ಮುಂದೆ ಇಡಬೇಕೆಂಬುದೊಂದು ಮಹತ್ವಾ- ಕಾಂಕ್ಷೆ. ಆದರೆ ಇವೆಲ್ಲ ಇಳಿವಯಸ್ಸಿನ ಬಯಕೆಗಳು. ಇವುಗಳಲ್ಲಿ ಹೆಚ್ಚಿನವು ಗಳನ್ನು ಭಾವೀ ಕನ್ನಡ ಸಾಹಿತಿಗಳು ಪೂರೈಸುವರೆಂದು ತುಂಬಾ ನಂಬಿದ್ದೇನೆ. ಕನ್ನಡನಾಡು ಇಂತಹ ಅನೇಕ ಸಾಹಿತ್ಯಸಿದ್ಧರನ್ನು ಕಾಣಬೇಕೆಂದು ನನ್ನ ಹಂಬಲ. ನನ್ನ ೬೦ ನೆಯ ವರ್ಷದ ಹಬ್ಬದ ಕಾಲಕ್ಕೆ ಸರ್ವಜ್ಞನಿಗಾಗಿ ನಾನು ರಚಿಸಿದ ಹಾಡಿನ ಕಡೆಯ ಶ್ಲೋಕದಿಂದ ಮಂಗಲಮಾಡಿ ಈ ನನ್ನ ಹಾಡನ್ನು ಮುಗಿಸುತ್ತೇನೆ.

ಮಂಗಲ

ತಿರುಳುಗನ್ನಡ ತಿರುಕ ಮರುಳನಾದನು ಅವಗೆ
ಅರಳಿಹೋಯಿತು ಅವನ ಸರಳಭಾವಕೆ ಮನವು
ನಿರುತ ಕೊರತೆಯಲಿದ್ದು ಇರುಳು ಸೇವೆಯಗೈದು
ವರುಷ ಇಪ್ಪತ್ತಾಯ್ತು ಇರವು ಅರವತ್ತಾಯ್ತು
ತರುಣರೆಲ್ಲರೆ ಕೇಳಿ ನಿರುತ ಸೇವೆಗೆ ಏಳಿ
ಭರತಮಾತೆಯ ಪುತ್ರನಿರುವ ಕನ್ನಡ ಮಿತ್ರ.

(ಸಾಹಿತ್ಯಕ್ಷೇತ್ರದ ಆತ್ಮಕಥೆ)
— ಉತ್ತಂಗಿ ಚನ್ನಪ್ಪ

೧೪. ಸಹಸ್ರಶೀರ್ಷನಾದ ಸಮಾಜಪುರುಷ

ಒಂದೆರಡು ದಿನಗಳಲ್ಲಿಯೇ ಅಂಬಾದಾಸ ಪಟೇಲನೆಂಬ ರಾಜಕೀಯ ಕೈದಿ ಯನ್ನೂ ವಿಜಾಪುರಕ್ಕೆ ವರ್ಗಾಯಿಸಲಾಯಿತು. ನರಹರಿಯ ಕೋಣೆಯ ಬದಿಗೇ ಪಟೇಲನ ಕೋಣೆಯಿತ್ತು. ಅವರಿಬ್ಬರೂ ಅಸಹಕಾರದ ಯುದ್ಧದಲ್ಲಿ ಸೆರೆಸಿಕ್ಕ ಸೆರೆಯಾಳುಗಳು. ಒಬ್ಬರ ಕೋಣೆಯನ್ನೊಬ್ಬರೂ ಪ್ರವೇಶಿಸಲು ಬಾರದಿದ್ದರೂ ಮುಂಜಾನೆ ಸಂಜೆ ಹೊರಗೆ ತಿರುಗಾಡುವಾಗಾಗಲೀ ಇಂತಹ ಇನ್ನು ಕೆಲವು

ಸಂದರ್ಭಗಳಲ್ಲಿ [illegible] ಜನರು [illegible] ಕಾಣಬಹುದಾಗಿತ್ತು; ಆಗೀಗ ಕೆಲವು [illegible] ಈಗ ಜನರ [illegible] ಮೇಲ್ವಿಚಾರಕ ಹಿರಿ ಬಂದಿದ್ದ. [illegible] ಆಗಾಗ ತೋರಿಸುತ್ತಿದ್ದ. ಅವನ ಸಹಾಯದಿಂದ ಕೆಲವು [illegible] ಜನರು ಗೋಷ್ಠಿಯಲ್ಲಿ ಕೂಡಿ ಕಳೆಯ ಬಹುದಾಗಿತ್ತು.

ಅಂಬಾದಾಸನ [illegible] ಅವನ ಕ್ರಿಯಾಶೀಲತೆಯು ಅದ್ಭುತವಾಗಿತ್ತು. [illegible] ಆದರೆ ಅದರಲ್ಲೊಂದು [illegible] ಬೇರುಗಳಂತೆ ಅವನ ವ್ಯಕ್ತಿತ್ವದ [illegible] ಸುಮುಳಿ ಜೀವನವನ್ನು ಪಡೆದಿರಲಿಲ್ಲ; [illegible] ನೆಲವನ್ನು ಭೇದಿ ಸಿತ್ತು. [illegible] ಅವನ ಬುದ್ಧಿಯು ಬೆಳವಣಿಗೆ [illegible] ಅಂಬಾದಾಸನು ಅದ್ಭುತ [illegible] ತತ್ವಗಳನ್ನು ಆಚರಣೆಯಲ್ಲಿ ತಂದು [illegible] ಅಂಬಾದಾಸನು ಸಿದ್ಧನಿದ್ದ. [illegible] ತಾಳಿದ ಅಪೂರ್ವ [illegible] ಅದನ್ನು ಒಡನೆ [illegible] — ಈ ಗುಣ ಗಳಿಂದಲೇ [illegible] ಯೋಗೇಶ್ವರನ ಕೈಯಲ್ಲಿ ರುವ [illegible] ಕೊಡಲಿಯು ಅಲಗಿ ನಂತೆ [illegible] ಭಾರತದ ಸ್ವಾತಂತ್ರ್ಯ, ಅದಕ್ಕಾಗಿ ಅಸಹಕಾರ [illegible] — ಈ ತತ್ವಗಳೆರಡೂ ಅಂಬಾ ದಾಸನ [illegible] ಅವನು ಅಸಹಕಾರದ ಆಂದೋ ಲನದಲ್ಲಿ [illegible] ಅಂಬಾದಾಸ ಶ್ರೀಮಂತರ ಮಗ. [illegible] ಮೇಲೆ ಮಲಗಿ [illegible] ಅವನಿಗೆ ಸುಲಭಿತ್ತು. ಅದು [illegible] ಅಂಬಾದಾಸನು ಒಂದೂ ಮಾತಾಡಲಿಲ್ಲ.

ಈಗ [illegible] ಪಾತನಾತ [illegible] ರುಚಿ [illegible] ದಾರಿಯ ಮೇಲೆ [illegible] ಆತನಿಗೆ ದೊರೆತ ಅದ್ಭುತವಾದ ಪ್ರೇರಕಶಕ್ತಿ. [illegible] ಅಂಬಾದಾಸನು ತನ್ನದೇ ಆದ ಒಂದು ಸ್ಥಾನವನ್ನು [illegible] ಬುದ್ಧಿವಂತಿಕೆಗಳಿದ್ದ ಶೀನೂನಲ್ಲಿ

ಒಂದು ಆದರ್ಶದ ಪ್ರೇರಕ ಇಲ್ಲವೆ ನಿರ್ಮಾಣಶಕ್ತಿಯಿರಲಿಲ್ಲ. ಕವಿಯೂ ಕಾರ್ಯೋತ್ಸಾಹಿಯೂ ಆದ ವಿಷ್ಣು ಕಾವ್ಯ ಕಾರ್ಯೋತ್ಸಾಹಗಳ ನಡುವೆ ಹೊಯ್ದಾಡುತ್ತಿದ್ದ. ಕಾವ್ಯದಲ್ಲಿಯೇ ಹೆಚ್ಚಿನ ಆಳವನ್ನು ನರಹರಿಯಂತೆ ಇಲ್ಲವೆ ಕಾರ್ಯದಲ್ಲಿಯೇ ಹೆಚ್ಚಿನ ಪ್ರಗತಿಯನ್ನು ಅಂಬಾದಾಸನಂತೆ ಪಡೆದುಕೊಂಡಿರಲಿಲ್ಲ. ಕಾವ್ಯದ ಅಗಾಧ ಆಳವನ್ನೂ ಕಾರ್ಯಕ್ಷಮತೆಯ ಅಪೂರ್ವ ವಿಸ್ತಾರವನ್ನೂ ಕೂಡಿಯೇ ಸಾಧಿಸಲು ನರಹರಿಯು ಹವಣಿಸುತ್ತಿದ್ದ. ಅಂತೇ ಅಂಬಾದಾಸನ ಕಾರ್ಯಶಕ್ತಿ ಅವನ ಚಿತ್ತವನ್ನು ಸೆಳೆಯಿತು. ಇದರ ಬೀಜವನ್ನು ಅವನು ಪಾಂಡುರಂಗನಲ್ಲಿ ಕಂಡಿದ್ದ. ಆದರೆ ಬರಿ ಸಾತ್ವಿಕತೆ ಹಾಗೂ ಆದರ್ಶಪ್ರಿಯತೆಗಾಗಿ ಮಾತ್ರ ನಿಂತು ಆ ಬೀಜ ಮುಂದೆ ಮೊಳೆತಿರಲಿಲ್ಲ. ಅವನಿಗೆ ಗೊತ್ತಿರದ ತ್ರಿವೇದಿ-ಕಾಮತರಲ್ಲಿಯೂ ಇದರ ಅಂಶವಿತ್ತು. ತ್ರಿವೇದಿಯಲ್ಲಿ ಅದು ವೈಯಕ್ತಿಕ ಜೀವನ ಕ್ಷೇತ್ರದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿತ್ತು. ಕಾಮತನಲ್ಲಿ ಶ್ಲಾಘ್ಯ ಮೌಲ್ಯಗಳು ಅನುದಾತ್ತ ಸಾಧನೆಗಳೊಡನೆ ಬೆರೆತಿದ್ದವು. ಇವರೊಡನೆ ಹೋಲಿಸಿ ನೋಡಿದರೆ ಅಂಬಾದಾಸನ ಆದರ್ಶವಾದವು ಓರ್ವ ತೇಜಸ್ವಿ ತಪಸ್ವಿಯ ತಪಸ್ಸಿನಂತೆ ಕಣ್ಣು ಕುಕ್ಕಿಸುತ್ತಿತ್ತು.

ಅಂಬಾದಾಸನೊಡನೆ ಮಾತನಾಡಿದಾಗಲೆ ಈ ಪ್ರತೀತಿಯು ನರಹರಿಗೆ ಬರುತ್ತಿತ್ತು. ಇತ್ತ ಅಂಬಾದಾಸನೂ ನರಹರಿಯ ವ್ಯಕ್ತಿತ್ವದ ಅನೇಕ ಮುಖತೆಗೆ ಮರುಳಾಗಿದ್ದ. ಹೀಗಾಗಿ ಕೆಲವು ದಿನಗಳಲ್ಲಿಯೇ ಅವರ ನಡುವೆ ಗಾಢ ಸ್ನೇಹವು ಬೆಳೆಯಿತು.

ಅಂಬಾದಾಸನೊಡನೆ ಆಡಿದ ಮಾತುಗಳಿಂದ ನರಹರಿಯ ಮನಸ್ಸಿನಲ್ಲಿದ್ದ ಇನ್ನೊಂದು ಸಮಸ್ಯೆಗೆ ಉತ್ಕಟ ಸ್ವರೂಪವು ಬಂತು. ಗುಜರಾಥದಲ್ಲಿಯ ಚಳವಳಿಯ ಮುಖಂಡರಲ್ಲಿಯೂ ಇದ್ದ ವಿರಸವನ್ನೂ ಭೇದಭಾವಗಳನ್ನೂ ಅಂಬಾದಾಸನು ಆಗೀಗ ಉಲ್ಲೇಖಿಸುತ್ತಿದ್ದ. ಇಂತಹ ಮಾತುಗಳು 'ಅಂದರ ಟ್ರಾಯಲ್' ಎಂದು ಧಾರವಾಡದ ಜೇಲಿನಲ್ಲಿದ್ದಾಗ ನರಹರಿಯ ದೃಷ್ಟಿಗೂ ಬಿದ್ದಿದ್ದವು. ಅಲ್ಲಿರುವ 'ಖಿಲಾಫತ್-ಕಾಂಗ್ರೆಸ್' ಪಂಗಡಗಳು, ಅಲ್ಲಿಯ ಹಿಂದು-ಮುಸ್ಲಿಂ ಊಟ— ಸ್ವಾತಂತ್ರ್ಯ ಯುದ್ಧದ ಸೈನಿಕರಲ್ಲಿಯೂ ಹೀಗೆ ಎರಡು ಗುಂಪುಗಳಾಗಿದ್ದವು. ಇದಲ್ಲದೆ ವ್ಯಕ್ತಿಗತವಾದ ಭಿನ್ನಾಭಿಪ್ರಾಯ, ಕೀರ್ತಿಲಾಲಸೆ, ಮಾತ್ಸರ್ಯ — ಈ ಕಾರಣಗಳಿಂದ ಕಾರ್ಯಕರ್ತರ ನಡುವೆಯೇ ಒಮ್ಮೊಮ್ಮೆ ವೈಮನಸ್ಯಕ್ಕೆ ಕಾರಣವಾಗುತ್ತಿತ್ತು. ಒಂದೇ ಧ್ವಜಕ್ಕೆ ಎಲ್ಲರೂ ಮಣಿದರೂ ಅದಕ್ಕೆ ಬಾಗುವ ಒಂದೊಂದು ತಲೆಯಲ್ಲಿಯೂ ಒಂದೊಂದು ಅಭಿಪ್ರಾಯವಿರುವಂತೆ ಕಂಡಿತು. ಈ ಅಭಿಪ್ರಾಯಗಳು ಒಂದುಗೂಡುವದೆಂದು ? ಇದಲ್ಲದೆ ಸಾಂಪ್ರದಾಯಿಕವಾಗಿ ನಡೆದು ಬಂದ ಜಾತಿ ಮತಗಳ ಪ್ರಜ್ಞೆಯು ಸೂಕ್ಷ್ಮವಾಗಿ ಸಮಾಜವನ್ನು ತುಂಡಾಗಿಸಿತ್ತು. ಕೂದಲೆಳೆಯಿಂದ ಸಮಾಜಪುರುಷನ ಕುತ್ತಿಗೆಯನ್ನು ಕೊಯ್ದಿತ್ತು. ಮುಂದುವರಿದವರು, ಹಿಂದುಳಿದವರು, ಸಿಂಪಿಗರು, ಬಡಿಗರು, ದ್ವೈತಿಗಳು, ವಿಶಿಷ್ಟಾದ್ವೈತಿಗಳು, ಅಲ್ಪಸಂಖ್ಯಾಕರು, ಬಹುಸಂಖ್ಯಾಕರು—ಒಂದಲ್ಲ ಎರಡಲ್ಲ ನೂರು ಭೇದ-

ಗಳು ಸಮಾಜವನ್ನು ನಿರ್ವೀರ್ಯಗೊಳಿಸಿದ್ದವು. ಮಾಡುವ ಉದ್ಯೋಗ, ಆಡುವ ಮಾತು ಗ್ರಾಹ್ಯವೆಂದು ತಿಳಿದ ತತ್ತ್ವ, ಎಲ್ಲವೂ ಕೂಡಿ ಸಮಾಜವನ್ನು ತುಂಡರಿಸಿ ಒಗೆದಿದ್ದವು. ಅಲ್ಪಸಂಖ್ಯಾಕರು ತಮ್ಮ ವ್ಯಕ್ತಿತ್ವವನ್ನು ಮರೆತು ಅಲ್ಪಸಂಖ್ಯಾಕರೆಂದೇ ಹಿಂಜರಿಯುತ್ತಿದ್ದರು. ಬಹುಸಂಖ್ಯಾಕರು ವ್ಯಕ್ತಿತ್ವದ ವಿಕಾಸವೇ ಬಾಳಿನ ಗುರಿಯೆಂಬುದನ್ನು ಮರೆತು ಬಹುಸಂಖ್ಯಾ ತತ್ತ್ವದಿಂದಲೇ ಮೈಮರೆಯುತ್ತಿದ್ದರು. ಪ್ರಜಾಪ್ರಭುತ್ವವು ತರಬಲ್ಲ ಸಮತೆಯು ರಾಷ್ಟ್ರವು ಸಹ ಹೀಗೆ ಒಳಭೇದಗಳಿಂದ ಜರ್ಜರಿತವಾಗಬಹುದಾಗಿತ್ತು. ಒಂದು ಮತದಲ್ಲಿ ಬೆಳೆದವನು ಅಕಸ್ಮಾತ್ತಾಗಿ ತಾನು ಒಂದು ಮತದ ಮನೆತನದಲ್ಲಿ ಹುಟ್ಟಿದುದನ್ನು ಮರೆತು ತಾನು ಹುಟ್ಟಿದ ಮನೆಯ ತತ್ತ್ವವೇ ಶ್ರೇಷ್ಠವೆಂದು ಕಾದಾಡುವುದಕ್ಕೆಂದೇ ಮುಂದುವರಿಯುತ್ತಿದ್ದ. ಉಳಿದ ಮತಸ್ಥರೂ ಹೀಗೆಯೇ ಮಾಡುತ್ತಿದ್ದರು. ಈ ಬಗೆಯ ಕೋಲಾಹಲದಲ್ಲಿ ಐಕಮತ್ಯವು ಹೇಗೆ ಸಾಧ್ಯ? ಭಾರತೀಯತೆಯು ಹೇಗೆ ಬೆಳೆದು ಬಂದೀತು? ಮನುಕುಲವೇ ಒಂದಾಗಿ ನಡೆಯಬೇಕೆಂಬ ಈ ಕಾಲದಲ್ಲಿ ಇದೆಂತಹ ಭೀಕರ ರೋಗವು ಸಮಾಜಕ್ಕೆ ಬಡಿದುಕೊಂಡಿತು! ಒಂದು ಉದ್ಯೋಗವನ್ನು ಅವಲಂಬಿಸಿದವ ಇನ್ನೊಂದು ಉದ್ಯೋಗವನ್ನು ಸ್ವೀಕರಿಸಿ ನಿಂತವನೊಡನೆ ಊಟ ಮಾಡುವ ಹಾಗಿಲ್ಲ. ಒಂದು ತತ್ತ್ವಕ್ಕೆ ಶರಣೆಂದವ ಇನ್ನೊಂದು ತತ್ತ್ವವನ್ನು ನಂಬಿದವನ ಮನೆಯಲ್ಲಿ ನೀರು ಕುಡಿಯುವ ಹಾಗಿಲ್ಲ! ವಿಷಮತೆಯು ಅತಿರೇಕಕ್ಕೆ ಹೋಗಿತ್ತು. ಆಧ್ಯಾತ್ಮಿಕತೆಯಲ್ಲಿ ಎತ್ತಿದ ಕೈಯಾದ ಭಾರತ ಅಜ್ಞಾನ ಪಿಶಾಚದ ಅಂಕಿತದಲ್ಲಿ ಸೇರಿಕೊಂಡಿತ್ತು!

ಏಕತೆಯನ್ನು ಸಾಧಿಸಲು ಉಗಮಿಸಿದ ಚಳವಳಿಗಳು ಸಮಾಜವನ್ನು ಇನ್ನಷ್ಟು ಛಿದ್ರಿಸಿದ್ದವು. ಹಿಂದು, ಮುಸ್ಲಿಂ ಐಕ್ಯಕ್ಕಾಗಿ ಹುಟ್ಟಿದ ಸಿಖ ಮತವು ಸಿಖ ಸಮಾಜವಾಯಿತು; ಇನ್ನೊಂದು ಜಾತಿಯು ಭಾರತದ ಜಾತಿ-ಮತಗಳ ಅಂಕಿ-ಸಂಖ್ಯೆಗಳಲ್ಲಿ ಕೂಡಿಕೊಂಡಿತು. ಕ್ರೈಸ್ತಧರ್ಮವು ತನ್ನ ಒಳಭೇದಗಳನ್ನು ಭಾರತದ ಮೇಲೆ ಹೇರಿದ್ದಲ್ಲದೆ ಇಲ್ಲಿಯ ವರ್ಣಭೇದಗಳನ್ನೂ ಇದ್ದಕ್ಕಿದ್ದಂತೆ ಎತ್ತಿಕೊಂಡಿತು. ಇತ್ತೀಚಿಗೆ ಅಂತರ್ ಜಾತೀಯ ವಿವಾಹಗಳೂ ನಿದರ್ಶನಕ್ಕೆ ಬಂದಿದ್ದವು. ಇಂತಹ ವಿವಾಹಗಳಿಂದ ಹುಟ್ಟಿ ಬಂದ ಪ್ರಜೆಗೆ ಇನ್ನೊಂದು ಜಾತಿಯಾಗುವದಲ್ಲಿತ್ತು. ಸಮಾಜವು ವ್ಯಕ್ತಿಗಳ ಸಾಮೂಹಿಕ ಸಾಮರಸ್ಯದಿಂದ ವ್ಯವಸ್ಥೆಯಾಗುವದರ ಬದಲು ಒಬ್ಬೊಬ್ಬ ವ್ಯಕ್ತಿಯೂ ಒಂದೊಂದು ಸಮಾಜವಾಗುವ ಕಾಲ ಬಂದಿತ್ತು. ಒಂದೊಂದು ಮನೆಯೂ ಒಂದೊಂದು ಮಠವಾಗಿತ್ತು. ಇದಕ್ಕೂ ದಾರುಣವಾದ ಅವನತಿ ಯಾವುದು? ಬರಿ ಜೀವಾತ್ಮನ ಉಪಾಸನೆಯನ್ನು ನೆನೆಸಿ ಭಾರತವು ವಿಶ್ವಾತ್ಮವನ್ನು ಮರೆತುಬಿಟ್ಟಂತೆ ತೋರಿತು. ಜೀವಾತ್ಮನ ವ್ಯಕ್ತಿಭೇದವನ್ನೊಂದನ್ನು ಮಾತ್ರ ನೆನೆದು ಅಲ್ಲಿ ಅನುಭವಕ್ಕೆ ಬರುವ ವಿಶ್ವದ ಐಕ್ಯವನ್ನೇ ಮರೆತಂತೆ ಕಂಡಿತು. ಇದರ ಕಾರಣವೆಂದರೆ ಜೀವಾತ್ಮನ ಹೆಸರಿನಲ್ಲಿ ಗೊತ್ತಿಲ್ಲದೆ ಭಾರತವು ಅಹಂಭಾವವನ್ನು ಪೋಷಿಸತೊಡಗಿತ್ತು. ಧರ್ಮದ ಒಳತಿರುಳೆಲ್ಲ ಮಾಯವಾಗಿ ಬರಿ ಡಂಭಾಚಾರ

ಬೆಳೆದು ಸ್ವಾರ್ಥವೇ ಭಾರತದ ಧರ್ಮವಾಗಿತ್ತು! ಇಲ್ಲದಿದ್ದರೆ ಇಂತಹ ಅಧಃಪಾತವಾಗುತ್ತಿತ್ತೇ?

ಅಂಬಾದಾಸನು ಹೇಳಿದ ಒಂದು ಮಾತು ಮೇಲಿಂದ ಮೇಲೆ ನರಹರಿಯ ಹೃದಯವನ್ನು ಇರಿಯುತ್ತಿತ್ತು. ಅಂಬಾದಾಸನ ತಂದೆ ವ್ಯಾಪಾರಕ್ಕಾಗಿ ಬಂದು ಮುಂಬಯಿಯ ಒಂದು ಉಪವಿಸ್ತರಣದಲ್ಲಿ ನೆಲೆಸಿದ್ದ. ಅವರ ಸಂಸಾರದ ಜೊತೆಗೆ ಅಂಬಾದಾಸನ ಮುದುಕಿ ಅಜ್ಜಿಯೂ ಬಂದಿದ್ದರು. ಈ ಅಜ್ಜಿಯ ಮಡಿವಂತಿಕೆ ವಿಪರೀತಕ್ಕಿಟ್ಟಿತ್ತು. ಮುಂಬಯಿಯಲ್ಲಿ ಶುದ್ಧಗೊಳಿಸಿ ನಳಗಳಿಂದ ಹಾಯ್ದು ಬರುವ ನೀರನ್ನು ಮೈಲಿಗೆಯೆಂದು ಆ ಮುದುಕಿ ಮುಟ್ಟುತ್ತಿರಲಿಲ್ಲ. ಅದನ್ನು ಕುಡಿಯುವದಂತೂ ದೂರದ ಮಾತು. ಅವಳಿಗಾಗಿ ಒಂದು ಬಾವಿಯನ್ನು ತೋಡಿಸಲು ಅಂಬಾದಾಸನ ತಂದೆಯು ಮನೆಯ ಮಾಲಿಕನಿಗೆ ಕೇಳಿಕೊಂಡ. ಆ ಯಜಮಾನ ಒಂದು ಬಾವಿಯನ್ನು ತೋಡಿಸಿಕೊಟ್ಟು ತಿಂಗಳಿಗೆ ಇಷ್ಟರಂತೆ ಮನೆಯ ಬಾಡಿಗೆಯನ್ನು ಹೆಚ್ಚಿಸಿದ್ದ. ಆ ಬಾವಿಯಿಂದ ಜಗ್ಗಿದ ನೀರಿನಿಂದ ನಿತ್ಯ ಮುದುಕಿ ಮೈ ತೊಳೆಯುತ್ತಿದ್ದಳು. ಆ ನೀರನ್ನು ಮಾತ್ರ ಕುಡಿಯುತ್ತಿದ್ದಳು!

ಏರಿಸಿದ ಈ ಬಾಡಿಗೆ ನರಹರಿಯ ದೃಷ್ಟಿಯಲ್ಲಿ ಸಾಂಕೇತಿಕವಾಗಿ ಕಂಡಿತು. "ಸಹನಾವವತು ಸಹನೌ ಭುನಕ್ತು" ಎಂಬ ಉಪನಿಷತ್ತಿನ ಸೂತ್ರಕ್ಕೆ ಈ ಆಚರಣೆ ಎಷ್ಟು ವಿರುದ್ಧವಾಗಿತ್ತು! ನೆರೆಹೊರೆಯ ಲಕ್ಷಾವಧಿ ಜನರೆಲ್ಲ ಕುಡಿಯುವ ನೀರು ನಮಗೆ ತ್ಯಾಜ್ಯ. ನಮಗಾಗಿ ಒಂದೊಂದು ಬಾವಿಯನ್ನು ತೋಡಿಸಿಕೊಂಡು ಅದಕ್ಕಾಗಿ ತಪ್ಪು ದಂಡವನ್ನು ತೆತ್ತುತ್ತೇವೆ. ಈ ತಪ್ಪು ದಂಡವೇ ಧರ್ಮವೆಂದು ತಿಳಿದು ಅದರ ಬಗ್ಗೆ ಅಭಿಮಾನಪಡುತ್ತೇವೆ! ಒಬ್ಬೊಬ್ಬ ವ್ಯಕ್ತಿಗೆ ಒಂದೊಂದು ಬಾವಿ. ಎಲ್ಲರಿಗೂ ಹೊಂದಿಕೆಯಾಗುವ ಒಂದು ಬಾವಿಯಿಲ್ಲ. ಒಂದು ಊಟದ ಮನೆಯಿಲ್ಲ, ಒಂದು ನಡುಮನೆಯಿಲ್ಲ, ಅವರವರ ಬಾವಿಯನ್ನು ಅವರಿಗಾಗಿ ತೋಡಿ ಬೇತಾಳದಂತೆ ದೇಶದಲ್ಲಿ ತಿರುಗಾಡುವ ವ್ಯಕ್ತಿಗಳನ್ನು ಆ ಬಾವಿಗಳಲ್ಲಿ ಹುಗಿದಾಗ ಭಾರತದ ಉದ್ಧಾರವಾದೀತೆಂದು ನರಹರಿಯು ತ್ವೇಷಗೊಂಡ.

ಹಿಂದೆ ಶೋಧಿಸಿದ ಉಪಾಯಗಳೆಲ್ಲ ನಿರುಪಯೋಗವಾದುವೇಕೆ? ಅವು ಕೃತ್ರಿಮವಾಗಿದ್ದವು. ಐಕ್ಯದ ಮೀಮಾಂಸೆಯನ್ನರಿಯದ ಜನರ ಮೇಲೆ ಐಕ್ಯದ ವಿಧಾನಗಳನ್ನೆಲ್ಲ ಹೇರಿದಾಗ, ಅದರಿಂದ ಅನೈಕ್ಯ ಇನ್ನಷ್ಟು ಹೆಚ್ಚುತ್ತದೆ! ಒಪ್ಪಿಗೆಯಾದ ಒಂದೊಂದು ಹೆಜ್ಜೆಯನ್ನು ಜನ ತುಳಿಯುತ್ತ ಹೋಗಬೇಕು. ಮೊದಲು ಮೊದಲು ಐಕ್ಯದ ಪ್ರತಿಷ್ಠಾಪನೆ ಆತ್ಮದಲ್ಲಿ ಆಗುವದು ಅವಶ್ಯ. ಹೃದಯದಲ್ಲಿ ಆ ಐಕ್ಯ ಸ್ಥಿರವಾಗಿ ನಿಲ್ಲಬೇಕು. ಮುಂದೆ ಅದು ಮನದಲ್ಲಿ ಹೊಳೆದೀತು, ಕೃತಿಯಲ್ಲಿ ಕಂಡೀತು, ಜೀವನದಲ್ಲಿ ನೆಲೆನೆಲೆಯಾಗಿ ನಿಂತೀತು. ಹೀಗೆ ಅದು ಬರಿ ಕೆಲವು ವ್ಯಕ್ತಿಗಳ ಹೃದಯದಲ್ಲಿ ಮಾತ್ರ ಪ್ರತಿಷ್ಠಾಪಿತವಾಗಿರಬಾರದು. ಇಡಿ ಜನತೆಯ ಹೃದಯವೇ ಅದರ ತವರಾಗಬೇಕು. ಆಗ ಅಂತರ್ಜಾತೀಯ ವಿವಾಹಗಳು ಮುನಿ

ಮಾತಾಪಾವು. ಆಗ ದೇಶವೆಲ್ಲವೂ ಒಂದು ರಕ್ತಸಂಬಂಧವಾದೀತು. ಅಂದಮೇಲೆ ಸಮಷ್ಟಿಯ ಹೃದಯದಲ್ಲಿ ಐಕ್ಯದ ಪ್ರತಿಷ್ಠಾಪನೆಯನ್ನು ಮಾಡುವದು ಹೇಗೆ ?

ಆಗ ನರಹರಿಯು ಸಮಾಜದ ಮೂಲವನ್ನೇ ಕುರಿತು ಆಳವಾಗಿ ಚಿಂತಿಸಿದ. ಮೆಲ್ಲಮೆಲ್ಲನೆ ಸೃಷ್ಟಿಯ ವಿಕಾಸವಾಗಿತ್ತು. ಚತುಷ್ಪಾದ ಪಶುಗಳ ಉತ್ಕ್ರಾಂತಿಯಾಗಿ ಮುಂದೆ ದ್ವಿಪಾದ ಪಶುವಾದ ಮಾನವನು ಜನಿಸಿದ್ದ. ಆದರೆ ಜಗತ್ತಿನಲ್ಲಿದ್ದ ವೈವಿಧ್ಯವೆಲ್ಲ ಮನುಕುಲದಲ್ಲಿ ಕಂಡುಬರುತ್ತಿತ್ತು. ಆನೆಯಂತಹ ಜನ, ಕರಡಿಯಂತಹ ಜನ, ವ್ಯಾಘ್ರಗಳಂತೆ ಕ್ರೂರರಾದ ಜನ, ನರಿಯಂತೆ ಮೋಸಗೊಳಿಸುವ ಜನ ; ಪಂಚತಂತ್ರದ ಹಿಂಡೆಲ್ಲ ನೆರೆದು ಮನುಕುಲವಾಗಿತ್ತು. ಪಾತರಗಿತ್ತಿಯಂತೆ ಮನಸ್ಸು ಹರಿದಾಡುವ ಜನರು ; ಕಪ್ಪೆಯಂತೆ ಒಂದೇ ಒಂದು ಅಪಸ್ವರಕ್ಕೆ ದಾಸರಾದ ಜನರು ; ಕತ್ತೆಯಂತೆ ಮೌನರಾಗಿ ದುಡಿಯುವ ಜನರು ; ಪಶು-ಪಕ್ಷಿ ಸಂಕುಲದಲ್ಲಿ ಕಂಡುಬರುವ ಭೇದಗಳೆಲ್ಲ ದ್ವಿಪಾದಪಶುವಾದ ಮಾನವನ ಕುಲದಲ್ಲಿ ಕಂಡುಬರುತ್ತಿದ್ದವು. ಅದೊಂದು ಸ್ವಭಾವಗಳ ಸಂತೆಯೇ ನೆರೆದಂತಿತ್ತು.

ಆದರೆ ದ್ವಿಪಾದ ಪಶುಗಳಾಗಿ ಜನಿಸಿದರೂ ಬುದ್ಧ-ಕ್ರಿಸ್ತನಂತಹ ಕೆಲವು ಮಾನವರು ದೇವತ್ವದ ಶಿಖರವನ್ನು ಮುಟ್ಟಿದ್ದರು. ದ್ವಿಪಾದಪಶುವಿನ ರೂಪದಲ್ಲಿಯೇ ದೇವತ್ವವು ಕಾಣಿಸಿಕೊಂಡಿತ್ತು. ಓರ್ವ ಮಾನವನಿಗೆ ಸಾಧ್ಯವಾದುದು ಇನ್ನೊಬ್ಬನಿಗೂ ಸಾಧ್ಯ. ಸಮಾಜದಲ್ಲಿಯ ಪ್ರತಿಯೊಬ್ಬ ವ್ಯಕ್ತಿಗೆ ಈ ದೇವತ್ವದ ಪಟ್ಟಗಟ್ಟಬೇಕು. ದ್ವಿಪಾದ ಪಶುವಿನ ರಚನೆಯಲ್ಲಿಯೇ ದೇವತ್ವವನ್ನು ಅರಳಿಸುವ ಕಲೆಯನ್ನು ಮನೆಮನೆಗೆ ಹೇರಿ ಓಣಿಗೊಬ್ಬ ಸೂಲಗಿತ್ತಿಯಂತೆ ಮನೆಗೊಬ್ಬ ಇಂತಹ ಕಲಾವಿದರಾಗಬೇಕು. ಎಳೆಯರಿಗೆ ಕಲಿಸಿದರೆ ಇಂತಹ ಕಲೆಯನ್ನು ಕಲಿಸಬೇಕು. ಅಂದಿಗೆ ಪಾಶವೀ ಸಮಾಜ ಆದರ್ಶ ಸಮಾಜವಾದೀತು. ಭೂಮಿಯೇ ಸ್ವರ್ಗಲೋಕವಾದೀತು. ಅನೇಕ ಪ್ರವಾದಿಗಳು ಸ್ವರ್ಣಯುಗದ ಈ ಸ್ವರ್ಣಸ್ವಪ್ನವನ್ನು ಕಂಡಿದ್ದರು. ಇಂದಿಲ್ಲ ನಾಳೆ ಅದು ಸತ್ಯಸೃಷ್ಟಿಗಿಳಿಯುವದು ನಿಜ. ಅದರ ಬರವಿಗಾಗಿ ನಾವು ಕಣ್ಣೆತ್ತಬೇಕು, ಬದುಕಬೇಕು.....

ದೇವತ್ವವರಳಿದ ಮಾನವರು ಬರಿ ಮನುಕುಲದೊಡನೆ ಒಂದಾಗಿದ್ದಿಲ್ಲ. ವಿಶ್ವದೊಡನೆ ಒಂದಾಗಿದ್ದರು. ಕಲ್ಲನ್ನೂ ಹುಲ್ಲನ್ನೂ ಪಕ್ಷಿಯನ್ನೂ ಪಶುವನ್ನೂ ವಿಶ್ವಬಾಂಧವ್ಯದ ಸಮರಸ ದೃಷ್ಟಿಯಿಂದ ನೋಡಿದ್ದರು. ಆಕಾಶದಲ್ಲಿಯ ನಕ್ಷತ್ರ-ದಕ್ಷೋಹಿಣಿಯಂತೆ ಸೃಷ್ಟಿಯಲ್ಲಿಯೂ ಅಸಂಖ್ಯಾತ ಜೀವತಾರೆಗಳು ಲಕಲಕನೆ ಹೊಳೆಯುತ್ತಿದ್ದವು.....

ಅಂತೂ ಮನುಕುಲದ ಉದಯವಾಗಿ ಅಲ್ಲಲ್ಲಿ ಗುಂಪುಗಟ್ಟಿಕೊಂಡು ಜನಜಂಗುಳಿ ಬೆಳೆದಿತ್ತು. ಹಸಿವೆ, ನೀರಡಿಕೆ, ತಲೆಯಿಡಲೊಂದು ನೆಲಗಟ್ಟು—ಹೀಗೆ ಸಕಲರಿಗೂ ಸಾಮಾನ್ಯವಾದ ಕೆಲವೊಂದು ಕೊರತೆಗಳನ್ನು ಹೋಗಲಾಡಿಸಲು ಜನಜಂಗುಳಿಯು ಗುಂಪುಗಟ್ಟುತ್ತಿತ್ತು. ಆದರೆ ಹೀಗೆ ಒಂದುಗೂಡಿಸುವ ಭೌತಿಕ

ಕಾರಣಗಳೇ ಬೇರ್ಪಡಿಸಲು ಸಹ ಅಣಿಯಾಗುತ್ತಿದ್ದವು. ಒಂದು ಗುಂಪಿನಲ್ಲಿ ಸೇರಿದ ಕಾರಣ ಇನ್ನೊಂದು ಗುಂಪಿನ ಭಯ; ಒಂದು ಗುಂಪಿಗೆ ದೊರೆತ ಅನ್ನ ಸಮೃದ್ಧಿಯ ಬಗ್ಗೆ ಇನ್ನೊಂದು ಗುಂಪಿನ ಆಸೆ; ಶ್ವೇತವರ್ಣದವರಿಗೆ ಶ್ಯಾಮವರ್ಣದವರನ್ನು ಕಂಡರೆ ತಾತ್ಸಾರ; ಹೀಗೆ ವರ್ಣ, ವಿತ್ತ, ಫಲವತ್ತಾದ ನೆಲ—ಎಲ್ಲವೂ ದ್ವೇಷಕ್ಕೆ, ಕಲಹಕ್ಕೆ ಕಾರಣವಾಗುತ್ತಿದ್ದವು. ಇಂದಿನ ಜಗತ್ತಿನಲ್ಲಿ ಈ ಕೊಳ್ಳಿದೆವ್ವಗಳೇ ಬ್ರಹ್ಮರಾಕ್ಷಸಗಳಾಗಿದ್ದವು; ಒಂದೊಂದು "ಇಜಂ" ಸಿಕ್ಕಿಸಿಕೊಂಡು ಧೂಮಕೇತುವಿನಂತೆ ಮಾನವನ ಭಾವವ್ಯೋಮದಲ್ಲಿ ಅಲೆದಾಡುತ್ತಿದ್ದವು.

ಕಾಮ, ಕೀರ್ತಿಲಾಲಸೆ, ಮಹತ್ವಾಕಾಂಕ್ಷೆ—ಈ ಪ್ರಾಣಮಯದ ವಾಸನೆಗಳೇ ಮನೆಯನ್ನು ಕಟ್ಟಿದ್ದವು; ಬಣಗಳನ್ನು ಸ್ಥಾಪಿಸಿದ್ದವು; ಅದೇ ಈ ವಾಸನೆಗಳೇ ಗುಂಪುಗಳ, ಬಣಗಳ ನಾಶಕ್ಕೆ ಕಾರಣವಾಗಿದ್ದವು. ಓರ್ವ ಹೆಲನ್ನಳಿಗಾಗಿ ಟ್ರಾಯ್‌ದಹನ, ಓರ್ವ ಸೀತೆಗಾಗಿ ಲಂಕಾದಹನ, ಅಲೆಕ್ಸಾಂಡರ, ತೈಮೂರಲಿಂಗ, ನೆಪೋಲಿಯನ್; ಮಾನವನ ಆಕಾಂಕ್ಷೆಗೆ ಮಿತಿ ಇರಲಿಲ್ಲ.

ಬುದ್ಧಿಯೂ ದ್ರೋಹ ಬಗೆಯುವ ಸಾಧನವಾಗಿತ್ತು. ಅನಾಗರಿಕನನ್ನು ನಾಗರಿಕನನ್ನಾಗಿಸುವ ಬುದ್ಧಿ ನಾಗರಿಕತೆಯನ್ನೇ ಸಮೂಲವಾಗಿ ನಾಶಗೊಳಿಸುವ ಸಂಹಾರಸಾಧನೆಗಳನ್ನು ಶೋಧಿಸಿತ್ತು. ಕಾಡನ್ನು ನಾಡಾಗಿ ಮಾರ್ಪಡಿಸಲು ಸಹಾಯಕವಾದ ಬುದ್ಧಿ ವ್ಯಕ್ತಿ-ವ್ಯಕ್ತಿಯನ್ನೂ ಸಂಗಡ-ಸಂಗಡವನ್ನೂ ವಿಭಾಗಿಸಿತ್ತು. ಐಕ್ಯವಿದ್ದಲ್ಲಿ ಅನೈಕ್ಯವನ್ನು ತರಲು ಮಾತ್ರ ಅದರ ಬಳಕೆಯಾಗಿತ್ತು.....

ಆತ್ಮದ ಧ್ವಜವನ್ನು ಹಿಡಿದುಕೊಂಡು ಮುಂದುವರಿದ ಧರ್ಮಗಳು ಎಷ್ಟೊಂದು ಅನಾಹುತಗಳನ್ನು ತಂದಿರಲಿಲ್ಲ! ಧಾರಣಕ್ಕಾಗಿ ಜನಿಸಿ ಬಂದ ಧರ್ಮಗಳು ಜಗತ್ತಿನಲ್ಲಿ ಪ್ರಳಯಕ್ಕೆ ಕಾರಣವಾಗಿದ್ದವು. ಧರ್ಮದ ಹೆಸರಿನಲ್ಲಾದ ರಕ್ತಪಾತ ಜಗತ್ತಿನಲ್ಲಿಯ ಮೂಲೆ-ಮೂಲೆಯಲ್ಲಿಯ ನೆಲವನ್ನೂ ಹಸಿಯಾಗಿಸಿತ್ತು. ದೇವನೇ ದೆವ್ವವಾಗಿ ಧರ್ಮವೇ ಅಧರ್ಮಕ್ಕಿಟ್ಟಾಗ ಮಾನವನು ರಾಕ್ಷಸನಾಗಿದ್ದಲ್ಲಿ ಏನಾಶ್ಚರ್ಯ?

ಹೀಗೆ ಅದೊಂದು ವಿಚಿತ್ರ ದ್ವಂದ್ವಮಾಲಿಕೆಯ ಮೇಲೆ ಮಾನವ-ಸಮಾಜವು ನಿಂತಿತ್ತು. ಅದನ್ನು ನಿರ್ಮಿಸಲು ನೆರವಾದ ಬಲವುಗಳೇ ಅದರ ಸಂಹಾರಕ್ಕೆ ಅಣಿಗೊಂಡಿದ್ದವು. ಹೊಂದಿಸಿದ ಶಕ್ತಿಗಳೇ ಬಿಡಿಸಲು ಹವಣಿಸುತ್ತಿದ್ದವು. ಇದರ ಭವಿತವ್ಯತೆಯೇನು? ಯಾವ ವಿಶ್ವಕಲ್ಪನೆಯು ಸಮಾಜದೇಹದಲ್ಲಿ ಅವತರಿಸಲು ಹವಣಿಸುತ್ತಿತ್ತು?

ಸಹಸ್ರಶೀರ್ಷನಾದ ಪುರುಷನೆಂದು ಸಮಾಜವನ್ನು ವರ್ಣಿಸಬಹುದು. ಆದರೆ ಓರ್ವ ಪುರುಷನ ತಲೆಯೊಡೆದು ಸಾವಿರ ಹೋಳುಗಳಾಗಿರಲಿಲ್ಲ. ಈ ಎಲ್ಲ ತಲೆಗಳ ಗವಿಯನ್ನು ಒಂದೇ ಬೆಳಕು ತುಂಬಿತ್ತು. ಎಲ್ಲ ವ್ಯಕ್ತಿಗಳ ಹೃದಯದಲ್ಲಿ ಒಂದೇ ಒಂದಾದ ದಿವ್ಯ ಚೇತನವು ಮನೆಮಾಡಿಕೊಂಡಿತ್ತು. ಈ ಚೇತನೆಯನು ಜಾಗ್ರತಗೊಳಿಸಿದರೆ ಮಾತ್ರ ಅನೇಕ ಮುಖವಾದ ಸಮಾಜದಲ್ಲಿ ಏಕಮೇವತೆ

ಯನ್ನು ತರಬಹುದಾಗಿತ್ತು. ಈ ಚೇತನೆಯೊಂದೇ ದ್ವಂದ್ವಗಳನ್ನು ಮೀರಿ ನಿಂತಿತ್ತು. ಈ ನೆಲಗಟ್ಟಿನ ಮೇಲೆ ಕಟ್ಟಿದ ಕಟ್ಟಡ ಕೊನೆವರೆಗೆ ಬಾಳಬಹುದಾಗಿತ್ತು. ಉಳಿದುದೆಲ್ಲ ಗುಬ್ಬಿಯ ಮನೆಯ ಸಂಸಾರ, ಸಮುದ್ರದ ಮಳಲಿನ ಮೇಲೆ ಕಟ್ಟಿದ ಉಸುಬಿನ ಗೂಡು !

ಹೀಗೆ ಸಮಷ್ಟಿಯಾಗಿ ಅರಳುವವರಲ್ಲಿಯೇ ಸಮಾಜದ ಸಾರ್ಥಕತೆಯಿತ್ತು : ಇದೇ ಅದರ ಉಜ್ವಲ ಭವಿತವ್ಯವಾಗಿತ್ತು. ಇದಕ್ಕಾಗಿಯೇ ಸಮಾಜವು ಹುಟ್ಟಿ ಬಂದಿತ್ತು. ಓರ್ವ ಹಿಟ್ಲರನ ಕೈಯಲ್ಲಿ ಸಮಾಜವು ಕೈಗೊಂಬೆಯಾಗಿ ತನ್ನ ಚೇತನವನ್ನು ಕಳೆದುಕೊಳ್ಳುತ್ತಿತ್ತು. ನಿರಂಕುಶ ಸ್ವಾತಂತ್ರ್ಯದಲ್ಲಿ ಮದ್ಯಪಾನ ಮಾಡಿದ ವ್ಯಕ್ತಿಯಂತೆ ಸಮಾಜದ ಅಸಂಭಾವನ್ನು ಕೊಬ್ಬುತ್ತಿತ್ತು. ಆದರೆ ಆಂತರಿಕ ಚೇತನೆಯೂ ಜಾಗ್ರತಗೊಂಡ ಸಮಾಜದಲ್ಲಿ ಸಾಮರಸ್ಯವೂ ಸಮತೆಯೂ ನೆಲೆಗೊಂಡು ಸದ್ಭಾವದಿಂ, ಸಹಕಾರತ್ರಾಗಿ ಸಮಾಜವು ಧನ್ಯಶಾಂತವಾಗುತ್ತಿತ್ತು. . .

ಹಾಗಾದರೆ ಈ ಭವಿತವ್ಯವು ಫಲಪ್ರದವಾಗುವಂತೆ ಮಾಡುವ ಬಗೆ ಹೇಗೆ ? ಈಶ್ವರೀ ಸಂಕೇತ ಪ್ರಸಾದಗಳೇ ಅದನ್ನು ಸಾಧಿಸಬಹುದು. ಮಾನವನ ಸಾಹಸವು ಇಲ್ಲಿ ಕುಂಠಿತವಾಗುತ್ತಿತ್ತು. ಅನೇಕ ಮಹಾಯುದ್ಧಗಳೊಳಗಿಂದ ಜಗತ್ತನ್ನು ಹಾಯಿಸಿದ ದೈವವೇ ಸಮಾಜವನ್ನು ಈ ಪೂರ್ಣವಿಕಾಸದ ದಾರಿಗೊಯ್ಯಬಹುದು. ಅಲ್ಲಿಯ ವರೆಗೆ ಮಾನವನು ಮಾಡಬೇಕಾದುದೆಂದರೆ ಹಿಂದೆ ಶ್ರೀಕೃಷ್ಣನೂ ಪಾರ್ಥನೂ ಕೂಡಿ ಸಾಧಿಸಿದ ಸಮ್ಯಯೋಗ.

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।

ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥

ನರಹರಿಯು ತಾನು ಯೋಗೇಶ್ವರನೆಂದು ಎಂದಿಗೂ ತಿಳಿದುಕೊಂಡಿರಲಿಲ್ಲ. ಯೋಗದ ಹಾದಿಯ ಹಿಡಿದಿದ್ದ ಓರ್ವ ಎಳೆಯನಾಗಿ ನರಹರಿಯು ಬಾಳುತ್ತಿದ್ದ. ಅಂಬಾದಾಸನೂ ಪಾರ್ಥನಾಗಿರಲಿಲ್ಲ. ಆದರೆ ಅವನು ಪಾರ್ಥನ ಪಡಿಯಚ್ಚಿನಲ್ಲಿಯೇ ಬೆಳೆಯುವ ವ್ಯಕ್ತಿಯಾಗಿದ್ದ. ಇಂತಹ ಸಮ್ಯಯೋಗದ ಯುಗಲಗಳು ಹಾಕಿದ ಹೊಸ ಹೊಂಬಿಸಿಲಿಂದ ಸಮಾಜದ ಕತ್ತಲೆಯು ಚಲಿಸಬಹುದಾಗಿತ್ತು.

ಭಾರತವು ಮೊದಲಿನಿಂದ ವಿಶ್ವಚೇತನೆಯ ತವರಾಗಿತ್ತು. ಈ ಚೇತನದ ಸಂಚಯವನ್ನು ಆಗಮೀಕರಿಸಿದ್ದುದು ಮೊದಲು ಭಾರತದಲ್ಲಿ. ಅಲ್ಲಿಂದ ಅದರ ಜ್ಯೋತಿ ಎಲ್ಲ ಖಂಡಗಳನ್ನು ಸ್ಪರ್ಶಿಸಬಹುದು. ಆದರೆ ಭಾರತದಲ್ಲಿಯ ಸಮಾಜಪುರುಷ ಕ್ಷಯರೋಗದಿಂದ ಬಳಲುತ್ತಿದ್ದ. ಅವನಿಗೆ ತನ್ನರಿವೇ ಇರಲಿಲ್ಲ. ಮೊದಲು ಈ ಸಮಾಜಪುರುಷನ ದೇಹದಲ್ಲಿಯೂ ಮನದಲ್ಲಿಯೂ ಆರೋಗ್ಯವನ್ನು ತಂದರೆ ಅವನು ಜಗತ್ತಿಗೆ ಅಮೃತಕಲಶವನ್ನು ನೀಡುವ ಧನ್ವಂತರಿಯಾಗುತ್ತಿದ್ದ. ಅದೇ ಇಂದಿನ

ಮುಖ್ಯ ಕಾರ್ಯವಾಗಿತ್ತು. ಸ್ವಾತಂತ್ರ್ಯಯುದ್ಧವು ಅದರ ಬರಿ ಒಂದು ಭಾಗವಾಗಿತ್ತು.

ಇದನ್ನು ಸಾಧಿಸುವದು ಹೇಗೆ? ಅಂಬಾದಾಸನೊಡನೆ ಇತ್ತೀಚೆಗೆ ನರಹರಿಯು ನಡೆಯಿಸಿದ ಚರ್ಚೆಗಳೆಲ್ಲೆಲ್ಲ ಇದೇ ಮುಖ್ಯ ವಿಷಯವಾಗಿರುತ್ತಿತ್ತು. ಭಾಗವತನು ದೇವಸೇವಕನು— ಭಾರತದಲ್ಲಿ ಮಾಡಬೇಕಾದ ಕಾರ್ಯವೇನು? ಬರಿ ದೇಶಸೇವಕನಾದಲ್ಲಿ ಪ್ರಯೋಜನವಿರಲಿಲ್ಲ. ದೇವಸೇವಕನಾಗಿ ದೇಶಸೇವೆಯನ್ನು ತನ್ನ ಕಾರ್ಯದಲ್ಲಿಯ ಒಂದು ಭಾಗವೆಂದು ಪ್ರತಿಯೊಬ್ಬನು ಸ್ವೀಕರಿಸಬೇಕಾಗಿತ್ತು. ಯಾವ ನವೀನ ಸಂಸ್ಕೃತಿಯನ್ನು ಭಾರತದಲ್ಲಿ ನಿರ್ಮಿಸಬೇಕು? ಅದರ ನಿಯಮಗಳೇನು? ಭಾರತದ ಉಚ್ಚ ಪರಂಪರೆಯನ್ನು ಆಧುನಿಕ ಜಗತ್ತಿಗೆ ಹೊಂದಿಸಿ ಎರಡನ್ನೂ ದಿವ್ಯ ಜೀವನದೆಡೆಗೆ ಒಯ್ಯುವ ಮಾರ್ಗ ಯಾವುದು? ಇದರ ಬಗ್ಗೆ ಸುದೀರ್ಘ ಚರ್ಚೆಯಾಯಿತು. ಚರ್ಚೆಯೊಂದರಿಂದ ಅಂಬಾದಾಸನ ಮನ ಮಾಡಿಕೊಂಡು ನರಹರಿಯು ಹರಿಬಿಟ್ಟ ತನ್ನ ವಿಚಾರಪ್ರಣಾಲಿಯ ಅರ್ಥ. ನರಹರಿಯ ವಿಚಾರಗಳಿಗೆ ಅಂಬಾದಾಸನು ಒರೆಗಲ್ಲಾಗಿದ್ದ. ಚಿನ್ನದ ಗಣಿಯಾಗಿದ್ದ ನರಹರಿ, ಚಿನ್ನದ ಒರೆಗಲ್ಲಾಗಿದ್ದ ಅಂಬಾದಾಸ. ಕೊನೆಗೆ ಒಂದು ರಾತ್ರಿ ಕುಳಿತು ತನ್ನ ವಿಚಾರಗಳ ಸಾರವನ್ನು ನರಹರಿಯು ಒಂಬತ್ತು ಸೂತ್ರಗಳಲ್ಲಿ ಸಂಗ್ರಹಿಸಿದ.

(೧) ಹೃದ್ದೇಶದಲ್ಲಿ ನೆಲೆಸಿದ ಜ್ಯೋತಿಯಲ್ಲಿ ಎಲ್ಲ ವ್ಯಕ್ತಿಗಳೂ ಒಂದಾಗುತ್ತಾರೆ. ಇನ್ನೊಬ್ಬರ ಬಗ್ಗೆ ವಿಚಾರಮಾಡುವಾಗ ಈ ಹೃದಯಪ್ರಾಂತದಲ್ಲಿ ನಿಂತು ವಿಚಾರ ಮಾಡು. ಜಾಗತಿಕ ಐಕ್ಯದ ರಹಸ್ಯವೇ ಇಲ್ಲಿದೆ.

(೨) ವ್ಯಕ್ತಿತ್ವವೆಂದರೆ ಸಂಘರ್ಷಣದ ಸಾಧನೆಯಲ್ಲ, ಸಾಮರಸ್ಯದ ಸಂಗಮವದು. ಏಕಮೇವದ ಸಮೃದ್ಧಿಯನ್ನು ನಿದರ್ಶಿಸಲೆಂದು, 'ಅನೇಕ'ದ ಏಕಸೂತ್ರತೆಯನ್ನು ಉದಾಹರಿಸಲೆಂದು ಅದರ ರಚನೆಯಾಗಿದೆ.

(೩) ವ್ಯಕ್ತಿಯ ವ್ಯಕ್ತಿತ್ವದಂತೆ ರಾಷ್ಟ್ರದ ವ್ಯಕ್ತಿತ್ವವೂ ಇದೆ. ಅಂತೇ ಪ್ರತಿಯೊಂದು ರಾಷ್ಟ್ರವು ಸ್ವತಂತ್ರವಾಗದೆ ಜಗತ್ತು ಸಮೃದ್ಧವಾಗದು.

(೪) ಎಲ್ಲ ಭಾಷೆಗಳಿಗೂ ಮತಗಳಿಗೂ ಜಾತಿಗಳಿಗೂ ಧರ್ಮಗಳಿಗೂ ಸ್ಥಾನವಿದೆ. ಆದರೆ ಯಾವ ಭಾಷಾತಿರೇಕಕ್ಕೂ ಜಾತೀಯತೆಗೂ ಧರ್ಮಾಂಧತೆಗೂ ಸ್ಥಾನವಿಲ್ಲ.

(೫) ನಿಜವಾದ ಪುರುಷಾರ್ಥಗಳ ಅರಿವು ಯಾವ ನಿಬಂಧನೆಯಲ್ಲಿಯೂ ಇಲ್ಲ. ಔಚಿತ್ಯವನ್ನರಿತ ಮನೋಧರ್ಮದಲ್ಲಿದೆ. ಕಿರಿಯ ಆದರ್ಶವನ್ನು ಹಿರಿಯ ಆದರ್ಶವು ಕೊಲ್ಲಲಾರದು, ತನ್ನ ತನ್ನ ಸ್ಥಾನದಲ್ಲಿ ಆಯಾ ಆದರ್ಶವೇ ಚೆನ್ನು.

(೬) ಮನುಕುಲ ಒಂದೇ ಕುಲ. ನಿನಗೆ ಒಗ್ಗುವ ಆಹಾರವನ್ನು ಯಾವ ಕೈಯಿಂದಾದರೂ ಉಣ್ಣು. ಮರಗಳಿತ್ತ ಆಹಾರವನ್ನು ಸ್ವೀಕರಿಸುವಿ.

ಮಾನವ ನಿರ್ಮಿಸುವುದೇಕೆ ತ್ಯಾಜ್ಯ? ದೇವನ ದೇಗುಲವಾದ ಜಗತ್ತಿನಲ್ಲಿ ಮಡಿ-ಮೈಲಿಗೆಗಳಿಲ್ಲ.

(೭) ನಿನ್ನ ಸಂಪತ್ತಿಯ ಅರ್ಧಪಾಲನ್ನು ಸಮಾಜಪುರುಷನಿಗೆ ಕೊಡು. ಇಲ್ಲದಿದ್ದರೆ ನಿನ್ನ ವ್ಯಕ್ತಿತ್ವವು ಪೂರ್ಣವಾಗಲಾರದು. ಸ್ವಾವಲಂಬಿಯಾಗಿ ಸಮಾಜವನ್ನು ಪೋಷಿಸು. ಅದರ ಸಂವರ್ಧನೆಗಾಗಿ ನಿನ್ನನ್ನು ನಿಯೋಜಿಸಿಕೊಳ್ಳು.

(೮) ದೇಶಕ್ಕೆ ತ್ಯಾಗಸ್ವಾಭಿಮಾನಿಯಾದ ಇತಿಹಾಸವನ್ನು ನೆನಪಿಡು; ಸಂಸ್ಕೃತಿಯನ್ನು ಕಾಯ್ದುಕೊಳ್ಳು. ಮಾದಕವಾದುದನ್ನು ಸಮುದ್ರದಲ್ಲಿ ಮುಳುಗಿಸಿಬಿಡು.

(೯) ಸಮಾಜ ಸೇವೆಗಾಗಿ ಜನ್ಮಶಕ್ತಿಯ ಎಲ್ಲ ಆಂದೋಲನಗಳನ್ನು ಬಲಪಡಿಸು. ಬಡವರ ದುಃಖಗಳನ್ನು ಕಿತ್ತೊಗೆ. ದಯೆಯು ಹೃದಯದ ಧರ್ಮ. ಸಹಿಷ್ಣುತೆ ಬುದ್ಧಿಯ ಧರ್ಮ. ಈ ಚಂದ್ರ-ಸೂರ್ಯರ ಬೆಳಕಿನಲ್ಲಿ ದಾರಿ ತೋರಿಸುವ ಪಥಿಕನಾಗು.

ನರಹರಿಯು ಸಮೀಪದ ಅಂಬಾದಾಸನಿಗೆ ಈ ಸೂತ್ರಗಳನ್ನು ಹೇಳಿದಾಗ ಸಾಗರದ ಮಂಥನದ ನವನೀತ ವಿಚಾರಗಳೆಂದು ಅಂಬಾದಾಸನು ಅವುಗಳನ್ನು ಕೊಂಡಾಡಿದ. ಮರುದಿನ ಬೆಳಿಗ್ಗೆ ಕಂಡವರು ಸಿಕ್ಕಾಗ ಅವನು ಮಾತಾಡಿದ್ದು ಈ ಒಂಬತ್ತು ಸೂತ್ರಗಳನ್ನು ಕುರಿತು. ಪ್ರತಿಯೊಂದು ಸಾರ್ವಜನಿಕ ಸಭಾಮಂದಿರದಲ್ಲಿ ಈ ಸೂತ್ರಗಳ ಪಟವನ್ನು ತೂಗು ಹಾಕಬೇಕು. ಪ್ರತಿಯೊಂದು ಶಾಲೆಯ ಸಭಾಭವನದಲ್ಲಿ ಅವನ್ನು ಬರೆಯಿಸಿ ಪ್ರದರ್ಶಿಸಬೇಕು. ಓಣಿಯಲ್ಲಿ ಅವುಗಳ ಡಂಗುರ ಸಾರಬೇಕು. ಅಂಬಾದಾಸನ ಉತ್ಸಾಹಕ್ಕೆ ಮಿತಿಯೇ ಇರಲಿಲ್ಲ.

“ಅದು ಸರಿ. ಆದರೆ ಮುಖ್ಯವಾಗಿ ಬೇಕಾಗಿದ್ದು ಪ್ರತಿಯೊಬ್ಬ ವ್ಯಕ್ತಿ ಈ ಸೂತ್ರಗಳನ್ನು ಆಚರಣೆಯಲ್ಲಿ ತರುವುದು” ಎಂದು ನರಹರಿಯು ನಕ್ಕ.

“ಹೌದು, ಸರಿಯಷ್ಟೇ. ಆದರೆ ಪ್ರತಿನಿತ್ಯ ಈ ಶಬ್ದಗಳ ಹಿಂದಿರುವ ಪ್ರಜ್ಞೆಯು ಸಜೀವವಾಗುವಂತೆ, ಸ್ಫೂರ್ತಿಯುಕ್ತವಾಗುವಂತೆ ಅದರ ಉಪಾಸನೆಗೆಯ್ಯಬೇಕು. ಆ ಶಬ್ದಗಳನ್ನು ಉಚ್ಚರಿಸಬೇಕು. ಇಲ್ಲದಿದ್ದರೆ ಸ್ವಿಚ್ ಮಾಡದೆ ಇದ್ದ ಬಲ್ಬುಗಳಂತೆ ವಿದ್ಯುತ್ತಿನ ಸಂಪರ್ಕವಿಲ್ಲದೆ ಈ ಶಬ್ದಗಳು ಬರಿ ಕಾಜುಗೋಳವಿಗಳಾದಾವು” ಎಂದು ಅಂಬಾದಾಸನು ನುಡಿದ.

ಅಂದು ರಾತ್ರಿ ಈ ಸೂತ್ರಗಳನ್ನೇ ನೆನೆಯುತ್ತ ನರಹರಿಯು ಮಲಗಿಕೊಂಡ. ಆಗ ಅವನಿಗೆ ವಿಚಿತ್ರ ಕನಸೊಂದು ಬಿತ್ತು. ಸಾವಿತ್ರಿ ಅರುಂಧತಿಯರಂತಹ ತಪಸ್ವಿನಿಯೊಬ್ಬಳು ಮಂದಸ್ಮಿತೆಯಾಗಿ ಬಂದು ನರಹರಿಯನ್ನು ಮಾತನಾಡಿಸಿದಳು. ಅವಳು ತನ್ನ ಕೈಯಲ್ಲಿ ಮಸಿಮಲಿನ ಕಾಂಡಪಟದ ಮೇಲೆ ಬಣ್ಣ ಬಣ್ಣದ ರೇಖೆಯಿಂದ ಚಾತುರ್ಯದಿಂದ ತೆಗೆದಿದ್ದ ನವಸೂತ್ರಗಳ ಚಿತ್ರಮಾಲಿಕೆಯೊಂದನ್ನು ಹಿಡಿದು

ಕೊಂಡು ನಿಂತಿದ್ದ. ತಪಸ್ವಿನಿಯು ಅವನನ್ನು ನೋಡುತ್ತ: "ಇದೇನು ಕೈಯಲ್ಲಿ?" ಎಂದು ವಾತ್ಸಲ್ಯದಿಂದ ಕೇಳಿದಳು.

"ಇದು ನಾನು ತಯಾರಿಸಿದ ನವರತ್ನ ಮಾಲಿಕೆ. ನವೀನ ಸಮಾಜದ ನಿರ್ಮಾಣಕ್ಕೆ ಇದು ನಾಂದಿಯಂತಿದೆ" ಎಂದು ನರಹರಿಯು ಅಭಿಮಾನದಿಂದ ಹೇಳಿದ.

"ಹೀಗೇನು?" ಎಂದು ಕುತೂಹಲದಿಂದ ತಪಸ್ವಿನಿಯು ಅದನ್ನು ಇಸಿದುಕೊಂಡು ತೆರೆದು ನೋಡಿದಳು. "ಚೆನ್ನಾಗಿದೆ" ಎಂದು ಪ್ರೋತ್ಸಾಹಿಸಿದಳು. ಆಗ ಸದಭಿಮಾನದಿಂದ ನರಹರಿಯು ಕಂಠ ಬಿಗಿದುಬಂತು.

ಆದರೆ ಮರುಕ್ಷಣದಲ್ಲಿಯೇ ತಪಸ್ವಿನಿಯು ಬೆಳೆಯತೊಡಗಿದ್ದಳು. ಅವಳ ಆಕೃತಿಯು ನೀಳ್ದು ಮುಗಿಲೆತ್ತರವಾಗಿ ನಿಂತಿತು. ಆಕೆಯ ತಲೆಯ ಮೇಲಿದ್ದ ರೀತಿ ಮೆಯ ವಸ್ತ್ರವೇ ಕಾಣುತ್ತಿರಲಿಲ್ಲ. ಒಂದೆಡೆಗೆ ಚಂದ್ರನನ್ನು ಇನ್ನೊಂದೆಡೆಗೆ ಸೂರ್ಯನನ್ನೂ ಬರೆದು ಕೊರೆದು ನಿಲ್ಲಿಸಿದ ಶಿಲಾಶಾಸನದಂತೆ ಆ ಆಕೃತಿಯು ಕಂಡಿತು. ಅವಳ ಮಸ್ತಕದ ಹತ್ತಿರ ಎಡಬಲಕ್ಕೆ ಸೂರ್ಯ-ಚಂದ್ರರು ಸೇರಿದರು. [illegible] ಒಂದು ಕೋಲ್ಮಿಂಚು ಹೊಳೆದು ನಕ್ಷತ್ರಗಳನ್ನಷ್ಟೇ ಅಕ್ಷರವಾಗಿಸಿಕೊಂಡ [illegible] ಪಟವೊಂದು ಆ ತಪಸ್ವಿನಿಯ ಕೈಯಿಂದ ಮೆಲ್ಲನೆ ಹಾರಿ ಬಂತು. ನರಹರಿಯು ನೋಡಿದ; ಅವರಲ್ಲಿ ನವೀನ ಸಮಾಜದ ನವ್ಯೋನವ ಸೂತ್ರಗಳಿದ್ದುವು! ಅತ್ಯಂತ ಉತ್ಸುಕನಾಗಿ ನರಹರಿ ಅವುಗಳನ್ನು ಓದಿದ.

ಮಗು!

ನಿನ್ನ ಅಂತಃಕರಣ ಉಕ್ಕುತ್ತಿರಲಿ
ಸತ್ಯದ ಗೆಲುವಿನಲ್ಲಿ ಅಚಲ ಶ್ರದ್ಧೆಯಿರಲಿ
ಪಡೆದ ಸಂಕಲ್ಪ ಸದಾ ಜಾಗೃತವಿರಲು
ಸಂತತ ಪ್ರಗತಿ ದಿನದ ಬದುಕಾಗಲಿ!

ಇಳೆಯ ನ್ಯಾಯಾಸ್ಥಾನದಲ್ಲಿ
ಅನ್ಯಾಯ ಸುಳಿವುದೆಂದೆನಿಸಿದಾಗ
ಮುನಿಸು ಚಿತ್ತವನ್ನು ಮುತ್ತದಿರಲಿ!

ನಿನ್ನ ಗೆಯ್ಮೆಯೆಲ್ಲ ಚೊಕ್ಕಾಗಿರಲಿ
ಅದರೊಳಗೆ ನಿನ್ನಾತ್ಮವೇ ಪಡಿಮೂಡಲಿ
ನಿನಗೆ ಸೋಲು ಸಿದ್ಧವೆಂದು
ಸಾಲಾಗಿ ನಿಂತು ಜನ ತಮ್ಮಟೆ ಬಡಿದರೂ
ಕರ್ಮಯೋಗಕ್ಕೆ ಚ್ಯುತಿ ಬಾರದಿರಲಿ!

ಪರಿಣಾಮವೇನೇ ಇರಲಿ
ಸತ್ಯಸಂಧನಾಗು
ಬಿತ್ತಿದ ಬೀಜ ಮೊಳೆಯಲು
ಯುಗ-ಯುಗಗಳು ಸಂದರೂ
ಶಾಂತನಾಗಿ ದಾರಿ ಕಾಯು.
ಸತ್ಯಕ್ಕೆ ಸಾವಿಲ್ಲ. ಮರೆಯದಿರು !

ನೂರು ಅಗ್ನಿದಿವ್ಯದೊಳಗಿಂದ ಹಾಯ್ದರೂ
ಒಂದು ಕಹಿನುಡಿಗೂ ಎಡೆ ದೊರೆಯದಿರಲಿ.
ನೂರು ಸೋಲುಗಳನ್ನು ಸೋತರೂ
ಅಂತಿಮ ವಿಜಯಕ್ಕಾಗಿ ಸನ್ನಿಹಿತನಾಗು !
ಅಜೇಯವಾಗಿರಲಿ ನಿನ್ನ ಧೈರ್ಯ !

ಬಿಸಿಲಿನಲ್ಲಿ ತಂಪಿನಲ್ಲಿ
ಸುಖದಲ್ಲಿ ದುಃಖದಲ್ಲಿ
ಆತ್ಮವಿನೋದಿಯಾಗು !
ಮಂದಾರದಂತಹ ಮಂದಹಾಸ
ತುಟಿಗಳನ್ನು ಸಿಂಗರಿಸಿರಲಿ !

ಗೆಲುವು ಬಂದು ಮಾಲೆ ಹಾಕಿದಾಗ
ಮದ ಬಂದು ಗೆಲ್ಲದಿರಲಿ ನಿನ್ನ !
ಅನ್ಯರಿಗಿಂತ ಮಿಗಿಲೆಂಬ ಭಾವ
ನಿನ್ನೆದೆಯ ಮಲಿನಗೊಳಿಸದಿರಲಿ !

ಗುಣಗ್ರಾಹಿಯಾಗು.
ಇನ್ನೊಬ್ಬರ ವಿಜಯಕ್ಕಾಗಿ
ಇಷ್ಟ ಶಕ್ತಿಯನ್ನು ವಿನಿಯೋಗಿಸು !
ನ್ಯಾಯಬುದ್ಧಿಯಿಂದ ಬಾಳು
ನಿಯಮಕ್ಕೆ ತಲೆಬಾಗು
ಇದರ ನೆನಪು ನಿನ್ನ ರಕ್ಷಾಕವಚವಾಗಲಿ
ಓ ನನ್ನ ಮಗುವೆ !

ತಪಸ್ವಿನಿಯು ಮತ್ತೆ ಮಾನವೀಯ ಆಕಾರವನ್ನು ಧರಿಸಿ ನರಹರಿಯ ಸ್ವಪ್ನಡವಿ ಮಾಯವಾಗಿದ್ದಳು. ಆ ಅಮೃತಸ್ಪರ್ಶಕ್ಕೆ ಎಚ್ಚತ್ತಂತೆ ನರಹರಿಗೆ ಎಚ್ಚರಿಕೆಯಾಯಿತು. ಎದ್ದೊಡನೆ ಕಾಗದ-ಪೆನ್ಸಿಲ್ಲಿಗಾಗಿ ಅವನು ಧಾವಿಸಿದ. ಆದರೆ ಆ ನೆರೆಮನೆಯಲ್ಲಿ ಕಾಗದವೆಲ್ಲಿಂದ ಬರಬೇಕು ? ಆಗ ನರಹರಿಗೆ ತಾನು ಕಾಪಿಟ್ಟು ಇದ್ದಲಿಯ ತುಂಡಿನ ನೆನಪಾಯಿತು. ಆ ತುಂಡನ್ನೇ ಲೆಕ್ಕಣಿಕೆಯಾಗಿಸಿ ತನಗೆ ನೆನಪುಳಿದ ಹಾಗೆ ಆ ತಪಸ್ವಿನಿಯು ಮೂಡಿಸಿದ ಮಂತ್ರಗಳನ್ನು ನರಹರಿಯು ಗೋಡೆಯ ಮೇಲೆ ಬರೆದಿಟ್ಟ. ಈ ಅದ್ಭುತ ಅನುಭವವನ್ನು ನೆನೆದು ಅವನ ಮೈಯೆಲ್ಲ ರೋಮಾಂಚವೆದ್ದಿತು. ಮರುದಿನ ಬೆಳಿಗ್ಗೆ ಭೆಟ್ಟಿಯಾದಾಗ ಅಂಬಾದಾಸನಿಗೆ ನಡೆದುದನ್ನೆಲ್ಲ ನರಹರಿಯು ಹೇಳಿದ. ತಪಸ್ವಿನಿಯ ಸಂದೇಶವನ್ನು ಇಂಗ್ಲಿಷಿನಲ್ಲಿ ಸ್ಪಷ್ಟವಿದ್ದಂತೆ ತಿಳಿಸಿದ. ಆಗ ಅಂಬಾದಾಸನಿಗೂ ಅತಿಶಯಿಸಿದ ಆನಂದವಾಯಿತು. ಸಂದೇಶವು ಉಜ್ವಲವಾಗಿತ್ತು. ನರಹರಿಯ ನವಸೂತ್ರಗಳಲ್ಲಿ ಬುದ್ಧಿಗ್ರಾಹ್ಯವಾದ ನೀತಿ-ಜಾಣ್ಮೆಗಳ ಅಂಶವೇ ಹೆಚ್ಚಾಗಿದ್ದಿತು. ಆದರೆ ಈ ಸಂದೇಶದಲ್ಲಿ ದೇಶಸೇವಕನಾಗಬೇಕಾದ ವ್ಯಕ್ತಿಯ ವ್ಯಕ್ತಿತ್ವದ ಒಳಹೊರಗನ್ನೇ ಸಂಪೂರ್ಣವಾಗಿ ರೂಪಿಸಲಾಗಿತ್ತು. ಮೇಲಾಗಿ ಒಂದು ಅದ್ಭುತರೀತಿಯಲ್ಲಿ ಅದು ನರಹರಿಗೆ ಪ್ರಕಟವಾಗಿತ್ತು. ಇದೊಂದು ಹೊಸತಾದ ರಾಷ್ಟ್ರಸಂಸ್ಕಾರದ ಅರುಣೋದಯವೆಂದು ತಿಳಿದು ಗೆಳೆಯರಿಬ್ಬರೂ ಪುಲಕಿತರಾದರು.

('ಸಮರಸವೇ ಜೀವನ' ಕಾದಂಬರಿ)

—ವಿ. ಕೃ. ಗೋಕಾಕ

೧೫. ವಿಷ್ಣುವರ್ಧನನ ಓಲಗ

ಏಳನೆಯ ಪ್ರವೇಶ

(ಸ್ಥಾನ : ದ್ವಾರಾವತಿಯಲ್ಲಿ ವಿಷ್ಣುವರ್ಧನನ ಒಡ್ಡೋಲಗ)

[[illegible] ಆದ ವೇದಿಕೆಯ ಮೇಲೆ ಹೊಯಿಸಳ ಕುಲದ ರತ್ನಖಚಿತವಾದ ಸಿಂಹಾಸನ [illegible] ಕಾಣುತ್ತಿದೆ. ಅದರ ಮೇಲೆ ತೆರೆದಿದ್ದ ಬೆಳುಗೊಡೆ, ಅದರಿಂದ [illegible] ಮುತ್ತಿನ ಪಚ್ಚದ ಪಚ್ಚೆಯ ಕೆಂಪಿನ ಗೊಂಡೆಗಳು [illegible] ಸಿಂಹಗಳು ವಿರಾಜಿಸುತ್ತಿವೆ. ಎಲ್ಲಕ್ಕೂ ಎತ್ತರವಾಗಿ ಬಿಟ್ಟಿರುವ [illegible] ಹೊಯ್ಸಳ [illegible] ಮತ್ತು ಪಟ್ಟವಣೆಯ ಮೇಲಣ ಹೊನ್ನ [illegible] ನಗುನಗುತ್ತ ಹೊಳೆಯುತ್ತಿದ್ದು ಹೊಯಿಸಳರ ವೈಭವವನ್ನು ಎತ್ತಿ ಮೆರೆಯಿಸುತ್ತಿರುವುದೆ. [illegible] ಅನತಿ ದೂರದಲ್ಲಿ ಎರಡೂ ಕಡೆಗಳಲ್ಲಿ ಮಹಾರಾಜ ವೈಭವಕ್ಕೆ ತಕ್ಕಂತೆ [illegible] ಬೆಳ್ಳಿಯ ಆಸನಗಳು ಇವೆ. ವೇದಿಕೆಯ ಎದುರು ಕೆಳಭಾಗದಲ್ಲಿ ಎರಡೂ ಕಡೆ ಉಚಿತವಾಗಿ ಮಂತ್ರಿಪ್ರಧಾನರು, ದಂಡನಾಯಕರು, ಪಡವಳರು. ಗುರುಜನಗಳು, ಹಿರಿಯರು, ಪುರೋಹಿತರು, ಕವಿಗಮಕಿಗಳು, ನಾಡಿಗರು ಮುಂತಾದವರು ಕ್ರಮವಾಗಿ ಕುಳಿತಿರುವರು. [illegible] ದಣ್ಣಾಯಕ ಆದವಳ್ಳಾನನೂ ಅವನ ಅನುಯಾಯಿಗಳೂ ಉಚಿತವಾಗಿ ಕುಳಿತಿರುವರು. ನಡುವಣ ಗುಂಡನೆಯ ಹಾಸುಗಲ್ಲಿನ ಸುತ್ತ [illegible] ವಾದ್ಯಗಳು [illegible] ಸಜ್ಜಾಗಿರುವುವು. ಊಳಿಗದವರು ತಮ್ಮ ತಮ್ಮ ಸ್ಥಾನಗಳಲ್ಲಿ ನಿಂತಿರುವರು]

ಹೊರಗೆ— (ಮಹಾರಾಜರ ಮಂಗಲ ವಾದ್ಯಗಳು ಮೊಳಗುವವು)

ಒಳಗೆ – (ಸಭಿಕರ ಮಾತಿನದನಿ ಕೋಲಾಹಲವಡಗಿ ನಿಲ್ಲುವುದು)

ವಾದ್ಯಗಳು – (ನಿಲ್ಲುವುವು)

ವನ್ದಿಗಳು— (ಹೊರಗಿನಿಂದಲೇ) ಹೋ! ಅವಧಾನ! ಅವಧಾನ! ಮಹಾ [illegible]!

ಸಭಿಕರು – (ಎದ್ದು ಕರಗಳನ್ನು ಮುಗಿದಿರುವರು)


ವನ್ದಿಗಳು – (ಪ್ರವೇಶಿಸಿ) ಸ್ವಸ್ತಿ ಸಮಸ್ತ [illegible] ಮಹಾಮಂಡ [illegible]!

ವಿಷ್ಣುವರ್ಧನ – (ಪ್ರವೇಶಿಸಿ, ಪಟ್ಟವಣೆಯುತ್ತ ಹಾಸಿದ ನಡೆಮುಡಿಯ ಮೇಲೆ ನಡೆದುಬರುವನು)

ಎಲ್ಲರೂ – (ಜಯ, ಭಕ್ತಿಯಿಂದ ನಮಿಸುತ್ತಿರುವರು)

ಉದಯಾದಿತ್ಯ— (ಮಹಾರಾಜನ ಹಿಂದಿರುವನು)
ಎರೆಯಂಗ— (ಉದಯಾದಿತ್ಯನ ಪಕ್ಕದಲ್ಲಿರುವನು)
ಪರಿವಾರ— (ಹಿಂದಿರುವುದು)
ವನ್ದಿಗಳು— (ಮುಂದೆ ಮುಂದೆ ನಡೆದು)

ಯದುಕುಳ ಕಳಶಕಳಿತ ಸ್ವಧರ್ಮ ಹರ್ಮ್ಯ ಮೂಲಸ್ತಂಭ
ಅಪ್ರತಿಹತಪ್ರತಾಪ ವಿದಿತ ವಿಜಯಾರಂಭ !
ವಾಸನ್ತಿಕಾ ದೇವೀಲಬ್ಧವರ ಪ್ರಸಾದ !
ಶ್ರೀಮನ್ಮುಕುಂದ ಪಾದಾರವಿಂದ ವನ್ದನ ವಿನೋದ !
ಸಂಗೀತ ಪ್ರಸಂಗ ಭಂಗೀಸಂಗತ ಚತುರಭರತ !
ತರ್ಕವಿದ್ಯಾ ವಿಶಾರದ ವಿಚಾರನಿರತ !
ಶಬ್ದವಿದ್ಯಾ ಸಮಗ್ರ ಲಕ್ಷಣ ಸುಶಿಕ್ಷ !
ವೇದವಿದ್ಯಾ ಪರೀಕ್ಷಾದಕ್ಷ !
ಗಜರಾಜ ಗಂಡ ವಿಜಯ ಡಿಂಡಿಮಾಯ ಮಾನೋನ್ಮತ್ತ ಮಂ ಮಧುಕರ ಪಟಲ
ಘಟಿತ ಪಿಂಛಾತಪತ್ರ !
ಪರವಧೂ ಪುತ್ರ !
ಕರಾಳ ಕರವಾಳ ಶಾರ್ದ್ದೂಳ ನಿರ್ಘೂರ್ಣಿತ ಮಂಡಲಿಕ ಮೃಗಯೂಥ !
ಗಂಡಗಿರಿನಾಥ !
ಪಾಂಡ್ಯ ಗಂಡ ಶೈಳ ನಿರ್ಭೇದನಾ ಕಾಳದಂಭೋಳಿ !
ತುಳುನೃಪಾಳ ಹೃದಯ ವಿದಳನ ಪ್ರಕಟ ಟಂಕೋಲ !
ಜಗದ್ದೇವ ಬಳವಿಳಯ ಭೈರವ !
ಸೋಮೇಶ್ವರ ಪ್ರಚಂಡವೇದಂಡ ಕಬಳನಪ್ರಬಲ ಕಂಠೀರವ !
ಚಕ್ರಕೂಟ ಪೀಠ ಮಾಣಿಕ್ಯದೇವೀ ಸಮಕ್ಷಲಕ್ಷ ಸಮಾರಾಧನೋದ !
ನಿಪುಣ ಚಾಪ !
ಚೆಂಗಿರಿ ಭುಜಂಗ ಭಂಗ ಕರಸಿದ್ಧ ಖಗರಾಜ !
ಮಲೆರಾಜ ರಾಜ !
ಇರುಂಗೋಳು ಕುಂತಳ ಕದಳೀ ವನ ವಿದಳನ ಕರಾಳ ಕುಂಜರ !
ಬಳಪದೋದ್ಧೂತ ಧೂಳೀ ಧೂಸರಿತ ದಿಕ್ತಟ !
ನೊಳಂಬವಾಡಿಗೊಂಡ !
ಮಲೆಪರೊಳ್ ಗಂಡ !
ನರಸಿಂಹ ಬ್ರಹ್ಮಭೂಜ ಭಂಜನ ಪ್ರಭಂಜನ !
ಶಾರ್ದ್ದೂಳ ಲಾಂಛನ !
ಸ್ಥಿರೀಕೃತ ಯಾದವ ಸಮುದ್ರ ವಿಷ್ಣು ಸಮುದ್ರೋತ್ತುಂಗ ತರಂಗಪ್ರ



ಶ್ರೀ ಕದನತರಂಗಾರಾಜಾ ಏಕ ವಿಕ್ರಮಕುಂಜರ !
ಶರಣಾಗತ ವಜ್ರಪಂಜರ !
ತ್ರಿಸಮುದ್ರಾಧೀಶ ಮಲ್ಲ ಭುಜಬಳ ವೀರಗಂಗ ವಿಷ್ಣುವರ್ಧನ
ಹೊಯ್ಸಳ ಮಹಾರಾಜ ! (ಕರವೆತ್ತಿ)
ಜಯ ಜಯಾ ! ಜಯ ಜಯಾ ! ಜಯ ಜಯಾ !

ಸಭಿಕರೆಲ್ಲ — (ದಕ್ಷಿಣ ಹಸ್ತಗಳನ್ನೆತ್ತಿಯೆತ್ತಿ ವಸ್ತ್ರಗಳ ಧ್ವನಿಯೊಂದಿಗೆ)
ಜಯ ಜಯಾ ! ಜಯ ಜಯಾ ! ಜಯ ಜಯಾ !

ಪುರೋಹಿತರು — (ಮಹಾರಾಜಾಶೀರ್ವಾದವನ್ನು ಉದ್ಘೋಷಿಸಿ, ಫಲಮಂತ್ರಾಕ್ಷತೆಗಳನ್ನು ಸಮರ್ಪಿಸುವರು)

ಹೊರಗೆ— (ಮಹಾರಾಜ ಮಂಗಳವಾದ್ಯಗಳು ಮೊಳಗುವವು)

ವಿಷ್ಣುವರ್ಧನ— (ಪಟ್ಟರಾಣಿಯನ್ನು ನೋಡಿ ಸೂಕ್ ಬಲವರುವನು)

ಉದಯಾದಿತ್ಯ
ಎರೆಯಂಗ } (ಮಹಾರಾಜನನ್ನನುಸರಿಸಿರುವರು)

ನಾಗಯ್ಯ — (ಮಹಾರಾಜನಿಗೆ ಹಸ್ತಲಾಘವವನ್ನಿತ್ತು ಸಿಂಹಾಸನಾರೋಹಣ ಮಾಡಿಸುವನು)

ವಿಷ್ಣುವರ್ಧನ — (ಸಿಂಹಾಸನಾರೋಹಣ ಮಾಡಿ ಸಭೆಗೆ ಕರವೆತ್ತಿ ಮುಗಿವನು)

ಸಭಿಕರು— (ನಮಸ್ಕರಿಸುವರು)

ಉದಯಾದಿತ್ಯ
ಎರೆಯಂಗ } — (ಸಿಂಹಾಸನದೆದುರು ಒರೆಗಳಿಂದಲಗುಗಳನ್ನು ಉರ್ಚಿ, ಎರಡು ನಿಟ್ಟಿನ ವಂದನವನ್ನು ಮಾಡಿ, ಎದ್ದು, ಕೋಶಗಳಿಗೆ ಕರವಾಳಗಳನ್ನಳವಡಿಸುವರು)

ನಾಗಯ್ಯ — (ಉದಯಾದಿತ್ಯನ ಬಳಿಗೆ ಬಂದು ಅವನನ್ನು ಮಹಾರಾಜನ ದಕ್ಷಿಣ ಪಾರ್ಶ್ವದ ಪೀಠಕ್ಕೊಯ್ಯುವನು)

ಗಂಗರಾಜ — (ಕುಮಾರ ಎರೆಯಂಗನನ್ನು ವಾಮಭಾಗದ ಆಸನಕ್ಕೇರಿಸುವನು)

ನಾಗಯ್ಯ —(ಪಟ್ಟದರಸಿಯ ಬಂದಣದಲ್ಲಿ ಹಿಂದಕ್ಕೆ ನಿಂತು ಸನ್ನೆಗೈವನು)

ಸಭಿಕರು — (ಕುಳಿತುಕೊಳ್ಳುವರು)

ವಾದ್ಯಗೋಷ್ಠಿಯವರು— (ಮಹಾಮಣಿ ಮಂಟಪದ ಸುತ್ತ ಕುಳಿತು, ತಮ್ಮ ತಮ್ಮ ವಾದ್ಯಗಳಿಂದ ಸನ್ನೆಗೈದು, ನರ್ತಕಿಯನ್ನು ಕರೆವರು)

ನಚ್ಚಣಿ— (ಹಾಡಿದ ಬನದಲ್ಲಿಯೇ ಕೇಳುತ್ತ ಬಂದು, ಮೊದಲು ಮಂಗಳವನ್ನು ಮಾಡಿ, ಅನಂತರ ವಿವಿಧ ಭಾವ ರಸಗಳ ಅಲೆಗಳನ್ನೆಬ್ಬಿಸಿ ಬಂದಂತೆಯೇ ಅರಳಿ ಮರೆಯಾಗುವಳು)

ಉಳಿದ ಕಲಾವಿದರು— (ಒಬ್ಬೊಬ್ಬರಾಗಿ ಸಂಕ್ಷೇಪವಾಗಿ ತಂತಮ್ಮ ಪ್ರೌಢಿಮೆಯನ್ನು ತೋರಿಸುವರು)

ಆಡವಳ್ಳಾನ್— (ರಾಯಗೆಂಪಿನ ಹೊನ್ನ ಜರಿಯ ಚೀನಾಂಬರದಲ್ಲಿ ಮಡಿಕೆಗೊಂಡಿದ್ದ ರಾಯಸವನ್ನು ಹೊನ್ನ ಹರಿಯಾಣದಲ್ಲಿರಿಸಿಕೊಂಡು, ರಾಯಬಿತ್ತರಿಗೆಯತ್ತ ನಡೆದು ಹೋಗಿ, ಚೀರಮಂಡಿಯಲ್ಲಿ ಕುಳಿತು ಒಪ್ಪಿಸುವನು)

ವಿಷ್ಣುವರ್ಧನ— (ಕೈಗೆತ್ತಿಕೊಂಡು) ಸಂತೋಷ. (ಅದನ್ನು ತಿರುಗಿಸಿ ನೋಡಿ, ರಾಜಮುದ್ರಾದಿಗಳನ್ನು ಪರಿಕಿಸುತ್ತಿರುವನು)

ಕರಣಿಕ— (ಜೊಗಸೆಗೈಗಳಿಂದ ಸಿದ್ಧನಾಗಿರುವನು)

ವಿಷ್ಣುವರ್ಧನ— (ಕರಣಿಕನ ಕೈಗೆ ಹಾಯ್ಕಿ) ಓದು.

ಕರಣಿಕ— (ರಾಜಮುದ್ರೆಯನ್ನೊಡೆದು, ಸುತ್ತಿದ್ದ ಗವಸನ್ನು ಸುಲಿದು, ವಾಚಿಸುವನು)
" ಚಾಲುಕ್ಯರ ಮಾಂಡಲಿಕರೆಂದೆನ್ನಿಸಿಕೊಂಡ ಶ್ರೀಮದು ವಿಷ್ಣುವರ್ಧನ— "

ವಿಷ್ಣುವರ್ಧನ— (ವಾಮ ಹಸ್ತವನ್ನೆತ್ತಿ ಕರಣಿಕನನ್ನು ಸಿವಾರಿಸಿ, ನಾಗಯ್ಯನನ್ನು ನೋಡುವನು)

ಕರಣಿಕ— (ಓದುವದನ್ನು ನಿಲ್ಲಿಸಿ, ಅಂಜುತ್ತ, ಅಡಗಿ ನಿಲ್ಲುವನು)

ನಾಗಯ್ಯ— ಶಾಸ್ತ್ರಿಗಳೆ, ರಾಯಸವನ್ನು ಆದಿಯಿಂದಾರಂಭಿಸಿರುವಿರೇನು ?

ಕರಣಿಕ— (ಬಿತ್ತರಿಗೆಗೆ) ಅಹುದು ಮಹಾಸ್ವಾಮಿ (ರಾಯಸವನ್ನು ಮತ್ತೆ ಕಣ್ಣಿಗೆತ್ತಿಕೊಳ್ಳುವನು)

ವಿಷ್ಣುವರ್ಧನ— (ಮತ್ತೆ ಕೈ ಎತ್ತಿ) ತಡೆ, ನಿಲ್ಲಿಸು ! (ನಾಗಯ್ಯನತ್ತ ಅಭೀಕ್ಷಿಸುವನು)

ನಾಗಯ್ಯ— ಚೋಳದಣಾಯಕ ಮಹಾಶಯ, ನೀನು ಹೊತ್ತು ತಂದಿರುವುದದೇನು, ನೆರೆ ರಾಯರಾಸ್ಥಾನದವಗಾಹನೆಗೆಂದು ತಂದ ವಿಜ್ಞಾಪನಾ ಪತ್ರಿಕೆಯೋ, ಇಲ್ಲವೆ, ಗೌಡನಿಗೋ ಹೆಗ್ಗಡೆಗೋ ಹೊರಡಿಸಿರುವವ್ರೋ ?

ಆಡವಳ್ಳಾನ್— (ವಿಲಕ್ಷಣವಾದ ನಗುವಿನಿಂದ ರಾಯಸದತ್ತ ಕೈ ಚೀಸಿ) ಅ ಅದೇ ಸುವ್ಯಕ್ತ ಮತ್ತು ಸುಸ್ಪಷ್ಟ.

ಗಂಗರಾಜ— (ಗಂಭೀರವಾಣಿಯಿಂದ) ಎಂಥದೇ ಸಂದರ್ಭದಲ್ಲಿಯಾದರೂ ಆಸ್ಥಾನದ ಔಚಿತ್ಯವನ್ನು ಮೀರದಿರು ದಣಾಯಕವರ್ಯ. ದಣಾಯಕನು ಎಂದೆನ್ನಿಸಿಕೊಂಡ ನಿನಗೆ ವಿಜಯಲಾಲಸೆ ಉಂಟಲ್ಲ ? ನಿನ್ನ ಮನಸ್ಸನ್ನೇ ಗೆಲಲಾರದ ನೀನು ಲಕ್ಷ ಲಕ್ಷ ಸೇನೆಯನ್ನು ಹೇಗೆ ಗೆಲಬಲ್ಲೆ ? ಯುದ್ಧವೀರನು ಬರಿಯ ಮೈಯನ್ನಲ್ಲ, ಮನಸ್ಸನ್ನೂ ಬಳೆಯಿಸಿ ಪೋಷಿಸಿಕೊಳ್ಳಬೇಕು. ಅದು ನಿನಗೆ ಇಡೀ ನೆಲವನ್ನೇ ಗೆದ್ದು ಕೊಟ್ಟೀತು.

ನಾಗಯ್ಯ— ಈ ಆಸ್ಥಾನಕ್ಕೆ ತಗುವ ಮರ್ಯಾದೆಯ ಒಕ್ಕಣೆಯೋದನ್ನು ನಿಮ್ಮಲ್ಲಿ ತಿಳಿಯದವರಿಲ್ಲದಿದ್ದರೆ ತಿಳಿದವರಿಂದ ಅದನ್ನು ಅರಿವುಗೊಳ್ಳಬೇಡವೇ ?

ಆಡವಳ್ಳಾನ್— ಗಂಗೈಕೊಂಡ ಸೋಳಪುರದಿಂದ ಭರತವರ್ಷದ ತೆಂಕಣವದೆಲ್ಲವನ್ನೂ, ಕೊನೆಗೆ ಕಡಲನ್ನೂ ಕೂಡಿ ಆಳ್ವ ಸೋಳ ಚಕ್ರೇಶ್ವರರಿಗದು

[illegible]

ನಾಗಯ್ಯ — [illegible] ಈ ಅವರ ಉದ್ದೇಶ ?

ಆಡವಳ್ಳಾನ್ — ಈ [illegible] ಒಪ್ಪಿಕೊಳ್ಳುವಂತಿಲ್ಲ.

ದಣಾಯಕರು— (ಸಿಟ್ಟಿನಿಂದ, ಗಜಬಜಿಸುವ [illegible])

ಗಂಗರಾಜ — ([illegible] ನೋಡಿ) ಸದ್ದು !

ದಣಾಯಕರು — (ಸುಮ್ಮನಾಗುವರು)

ವಿಷ್ಣುವರ್ಧನ — ([illegible])

ಕರಣಿಕ — ([illegible] ಆಡವಳ್ಳಾನನ ಬಳಿಗೈದಿ ಮುನ್ನೀ- ಡುವನು).

ನಾಗಯ್ಯ — [illegible] ಈ ಇಂತಹ ಹುರುಳಿಲ್ಲದ ಕಗ್ಗ- [illegible] ಹೇಳಿ ಕೊಡಲಾರರು. ತಿಳಿ- [illegible] ?

ಆದವಳ್ಳಾನ್ — [illegible] ?

ನಾಗಯ್ಯ — [illegible]

ಆಡವಳ್ಳಾನ್ — [illegible] ನಷ್ಟ ಮಾನಹಾನಿ ವಿಪತ್ತು- [illegible] ಕೊಡುತ್ತಿರುವ ಅಪಕ್ವಮತಿಗಳ ಸಭೆ [illegible] ?

ವಿಷ್ಣುವರ್ಧನ — ([illegible] ತನ್ನ [illegible] ಕೋಳ್ಗಳೆರಡನ್ನೂ ಪಾರ್ಶ್ವಗಳ [illegible]) [illegible] !

ಗಂಗರಾಜ — ([illegible] ದಣಾಯಕರ ಮುಯ್ಯಿನ ಮೇಲೆ ತನ್ನ ವಾಮ [illegible]) ದಣಾಯಕವರ್ಯ, ದೂತ ಕಾರ್ಯಕ್ಕೆಂದು [illegible] ಕೇಳು, ಸಲ್ಲಬೇಕಾದ ಗೌರವ, [illegible] ಬಂದವರೂ ಸಾಕು, ಅದನ್ನು ಮಹಾ [illegible] ಆಸ್ಥಾನದ ಗಾಂಭೀರ್ಯಕ್ಕೆ ತಕ್ಕು [illegible] ಪರಿಶೀಲಿಸುವನು.

ಆವವಳ್ಳಾನ್ — ([illegible]) ಹಾಗಿದ್ದರೆ ಸೋಳ ಚಕ್ರೇಶ್ವರರ ಹೆಸರಿನ [illegible] ಎಸಗುತ್ತಿರುವ ಈ ಅವಮಾನ !

ಗಂಗರಾಜ — ([illegible] ಗಂಭೀರನಾಗಿ) ಬೊಗಳದಿರು !

ಆಡವಳ್ಳಾನ್— (ಕೆಂಡಗಣ್ಣ[illegible]ರಳಿಸಿ, ಒರೆಗೆ ಕೈ ದುಡುಕುವನು)

ಅವನ ಅನುಚರರು— (ಅವನನ್ನು ಬಳಸಿ ನಿಲ್ಲುವರು.)

ಗಂಗರಾಜ — ([illegible]) ಸಂಚು ಇದು ಮೊದಲೇ ಹಂಚಿಕೆಯಾಗಿದ್ದಿ ಕ್ಕೇನು ?

ಆಡವಳ್ಳಾನ್— (ಲಘುಹಾಸ್ಯದಿಂದ) ಓ, ಇಷ್ಟಕ್ಕೆ ಸಂಶಯವೇಕೆ ? ಅವಾವ ಪ್ರಬಲತರ ಶಕ್ತಿ ಎಂದು ?

ವಿಷ್ಣುವರ್ಧನ— ಗಂಗರಾಜ, ಆ ಅವರ ಮನೋಭಿಪ್ರಾಯವೇನು ಎಂಬುವನ್ನರಿವುಗೊಂಡಾಯಿತು. ಮರು ಮಾತಿಗೆಡೆಗುಡದಿರಿ.

ಗಂಗರಾಜ— ಕೇಳಿಸಿತೇ ?

ಆಡವಳ್ಳಾನ್— ಹಾಗಿದ್ದರೆ ಸೋಳ ಚಿತ್ತರಿಗೆಗೆ ಅಪರಾಧವನ್ನೆಸಗಿ ನಿಮ್ಮಲ್ಲಿ ತಲೆಗರೆದುಕೊಂಡಿರುವ ತಪ್ಪಿತಸ್ಥರಾ ಸತಿಪತಿಗಳನ್ನು ದಂಡಾರ್ಹರ ನ್ನು ಮುಂದೆ ವಿಚಾರಣೆಗೊಳಪಡಿಸಲು ನೀವು ಬಿಟ್ಟುಕೊಡುವುದಿಲ್ಲವೇನು ?

ಗಂಗರಾಜ— ನಿಮ್ಮ ಬರವಣಿಗೆಯ ಸಾರಾಂಶವದೇ ಏನು ?

ಆಡವಳ್ಳಾನ್— ಅಹುದು. ಸೋಳ ಸಾಮಂತ ದಾಮೋದರರು ಸ್ವಹಸ್ತದಿಂದ ಬರೆದುದು.

ಗಂಗರಾಜ— " ಶರಣಾಗತ ವಜ್ರಪಂಜರ " ನೆಂಬ ಮಹಾರಾಜರ ಬಿರುದನ್ನು ವನ್ದಿಗಳು ಕರವೆತ್ತಿ ಹೊಗಳಿ ಹಾಡಿಪುದು ಬರಿಯ ನಾಮಮಾತ್ರವಲ್ಲ. ತಿಳಿಯಿತೇ ?

ಆಡವಳ್ಳಾನ್— ಉಳಿದ ಬಿರುದಾವಳಿಗಳವೆಲ್ಲವುಗಳಂತೆ ಇದೂ ಒಂದು ... ಜಳಕುತ್ತಿರುವ—

ಗಂಗರಾಜ— (ಘರ್ಜಿಸುತ್ತ) ಸಾಕು !

ಆಡವಳ್ಳಾನ್— (ಮಾತನ್ನು ತಟ್ಟನೆ ನಿಲ್ಲಿಸಿ ಬಿಡುವನು)

ಗಂಗರಾಜ— ಆ ಬಿರುದಾವಳಿಗಳವೆಲ್ಲವನ್ನೂ ಪ್ರಭುಗಳು ತಮ್ಮ ತೋಳ ಬಲದಿಂದ ಯಿಂದ ಹೇಗೆ ಹಂತ ಹಂತಗಳಲ್ಲಿ ಸಂಪಾದಿಸಿಕೊಂಡರು ಎಂಬುವನ್ನು ದೇವರು ಬಲ್ಲನು ; ನೆಲದ ಹಿರಿಯರು ಬಲ್ಲರು. ಇನ್ನು ನಿಮ್ಮ ನಾಲಗೆ ಪ್ರತಿಭೆಯ ಪಾಂಡಿತ್ಯಪ್ರದರ್ಶನಕ್ಕಿಲ್ಲಿ ಎಡೆಗುಡದೆ ಈ ಗಳಿಗೆಯಲ್ಲಿ ಇಲ್ಲಿಂದ ಹೊರಡಬೇಕು.

ಆಡವಳ್ಳಾನ್— ಆ ಅವರನ್ನು ಒಪ್ಪಿಸಿಕೊಡುವುದಿಲ್ಲ ತಾನೆ ?

ಗಂಗರಾಜ— (ಕಟು ಕಂಠದಿಂದ) ಇಲ್ಲ !

ವಿಷ್ಣುವರ್ಧನ— (ಗಂಭೀರನಾಗಿ) ಚೋಳದಣ್ಣಾಯಕವರ್ಯ. ನಿಮ್ಮ ಕಾರ್ಯ ಕುಶಲತೆಯೆನ್ನು ನಾವು ಮನಸಾ ಮೆಚ್ಚುವೆವಹುದಾದರೂ, ನಡತೆಯ ಅತಿರೇಕವಿದು ತಲೆನೋವನ್ನು ತರುವಂತಹುದು. ಅಯ್ಯ, ವೀರನಿಗೆ ವಿನಯವೆ ಒಂದು ದೊಡ್ಡ ಗುಣ. ಅದರಿಂದ ಅವನ ವರ್ಚಸ್ಸು ವೃದ್ಧಿ ಹೊಂದುವುದೇ ಹೊರತು ಕಡಮೆಯಾಗದು. ಅಂತಹ ಚೆಲುವನ್ನು ತಳೆದ ಆ ಸಂಪತ್ತು ಸುತ್ತಣ ಹತ್ತೂ ದಿಕ್ಕುಗಳಿಗೆ ತನ್ನ ಕಂಪನ್ನು ಬೀರುತ್ತಿರುತ್ತದೆ. ಯಾವೊಂದು ನಾಡಿಗಾಗಲಿ ಅಥವಾ ಮಾನವೀಯತೆಯನ್ನುಳಿಸಿಕೊಂಡು

ಬಾಳಲೆಳಸುವ ಸುಸಂಸ್ಕೃತನಾದ ಅದಾವ ನೆಲಕ್ಕೇ ಆಗಲಿ, ಈ ನಿನ್ನ ನಡತೆ ಗೌರವವನ್ನು ತರುವಂತಹುದಲ್ಲ. ನಿಮ್ಮ ನಾಡಿನ ಬಹುಮಂದಿ ಹಿರಿಯರನ್ನು ನಾವು ಬಲ್ಲೆವು. ಅವರಿಂದ ನಾಡಿಗಾದ ಒಳಿತನ್ನೂ ನಾವು ಬಲ್ಲೆವು. ನಿನ್ನಂತಹವರು, ನಿಮ್ಮ ಮಂಡಲೇಶ್ವರ ದಾಮೋದರನಂತಹವರು, ಪರಹಿಂಸೆಯಲ್ಲಿ ನಲಿದಾರು. ನಮ್ಮ ನೆರೆಯವರಾಗಿರುವ ನೀವು ಇಲ್ಲಸಲ್ಲದುದನ್ನು ನಿಮ್ಮ ಹಿರಿಯ ರಾಜಧಾನಿ ಗಂಗೈಕೊಂಡ ಚೋಳಪುರಕ್ಕೆ ತಲಪಿಸಿ, ಮಹಾರಾಜಾ ಕುಲೋತ್ತುಂಗರ ಮನಸ್ಸಿಗೆ ವಿಷವನ್ನೆರೆದಿರುವಿರಿ. ಹೋಗು, ಆ ಅವರಿಗೆಲ್ಲ ಹೇಳು, ದೇವರ ಇಚ್ಛೆ ಇದ್ದಂತಾಗಲಿ ಎಂದು.

ಆಡವಳ್ಳಾನ್— ಆಗಲಿ.

ಕೆಲವರು — (ಅವನ ಅನಿನಯಕ್ಕೆ ಹೇಸಿ, ಒಸುಮಾತಿನಲ್ಲಿ) ಎಲಾ ಮರುಳಾ !

ವಿಷ್ಣುವರ್ಧನ—(ಊಳಿಗದತ್ತ ನೋಡುವನು)

ಊಳಿಗದವರು — (ಸಭಾಮರ್ಯಾದೆಯ ತಂಬಾಳಗಳನ್ನು ತಂದು ನಿಲ್ಲುವರು)

ವಿಷ್ಣುವರ್ಧನ —(ಒಂದನ್ನೆತ್ತಿಹಿಡಿದು ನೀಡುತ್ತ, ವಿಶ್ವಾಸದಿಂದ) ಬರಬೇಕು ದಣಾಯಕನಯ್ಯ, ಬಂದುದನ್ನು ಒಪ್ಪಿಕೊಂಡು ನಮ್ಮನ್ನು ಸಂತೋಷಗೊಳಿಸಬೇಕು. ನೀನು ಈ ಮಹತ್‌ಸಭೆಯಲ್ಲಿ ಅವಮಾನಿತನಾಗಿ ಹೋಗುವುದು ಯಾರ ಇಷ್ಟವೂ ಅಲ್ಲ.

ಆಡವಳ್ಳಾನ್— (ಸಿಂಕೇ ಇರುವನು)

ನಾಗಯ್ಯ— ರಾಜಮರ್ಯಾದೆಯನ್ನು ತಿರಸ್ಕರಿಸಬಾರದು. ತೆಗೆದುಕೋ ದಣಾಯಕಯ್ಯ.

ಆಡವಳ್ಳಾನ್— (ಸಿಂಹಾಸನದತ್ತ ನಡೆವನು)

ಕರಣಿಕ— (ಓಲೆಯನ್ನು ಮಹಾರಾಜನ ತಟ್ಟೆಗಿಡುವನು)

ವಿಷ್ಣುವರ್ಧನ— ತೆಗೆದುಕೋ, ಹೊಯ್ಸಳನಾಡ ಜನತೆ ಎಂದೆಂದಿಗೂ ತನ್ನ ಸ್ನೇಹ ಹಸ್ತವನ್ನು ಚಾಚಿ ನಿಂತಿದೆ—ಎಂಬುದನ್ನು ನಿಮ್ಮ ಅರಸರಲ್ಲಿ ನಿವೇದಿಸಿಕೋ.

ಆಡವಳ್ಳಾನ್— ಅಪ್ಪಣೆ. (ತೆಗೆದುಕೊಳ್ಳುವನು)

ವಿಷ್ಣುವರ್ಧನ— ಬಂದಷ್ಟೇ ಸೊಗವಾಗಿ ಹಿಂದಿರುಗಿ ನಿಮ್ಮ ನಾಡನ್ನು ಸೇರಿಕೊಳ್ಳಿರಿ.

ಆಡವಳ್ಳಾನ್— (ಹೋಗುವನು)

ಅವನವರು— (ತಟ್ಟೆಯನ್ನು ಹೊತ್ತು ಅವನ ಹಿಂದೆಯೇ ನಡೆವರು)

ನಾಗಯ್ಯ—(ನಕ್ಕು) ಇನ್ನೂ ತರಳತನದ ಹುಡುಗಾಟಿಕೆ !

ವಿಷ್ಣುವರ್ಧನ— ಗಂಗರಾಜ, ಅವಗಡವಿದನ್ನು ಅರಿತುಕೊಂಡ ನಾಡಿಗರೋ, ಪಡೆಯವರೋ, ಅವಮಾನವೆಂದೆಣಿಸಿ ಅತಿಥಿಗಳಿವರನ್ನು ಅವಹೇಳನಕ್ಕೆ

ಗುರಿ ಮಾಡಿಯಾರು.

ಗಂಗರಾಜ—ಅಪ್ಪಣೆ ?

ವಿಷ್ಣುವರ್ಧನ—ಬಿಟ್ಟಿಯಣ್ಣನ ಬೆಂಗಾವಲ ಕಟ್ಟಾಳ್ಕೆಯಲ್ಲಿ ಅವರು ತಮ್ಮ ಗಡಿಯನ್ನು ಸೇರಿಕೊಳ್ಳಬೇಕು.

ಗಂಗರಾಜ—ಅಪ್ಪಣೆ. (ಬಿಟ್ಟಿಯಣ್ಣನನ್ನು ನೋಡುವನು)

ಬಿಟ್ಟಿಯಣ್ಣ—(ಎದ್ದು ಬಂದು, ಸಿಂಹಾಸನದ ವೇದಿಕೆಯ ಒಂದು ಭಾಗದಲ್ಲಿ ವೀರವಂದನವನ್ನು ಮಾಡಿ ನಿಲ್ಲುವನು)

ವಿಷ್ಣುವರ್ಧನ—ದಾರಿಯುದ್ದಕ್ಕೂ (ಮುಷ್ಟಿ ಕಟ್ಟಿದ ಎಡಗೈಯ ಬೆರಳನ್ನು ಬಿಡಿಸಿ, ಅದರಿಂದ ಆಡವಳ್ಳಾನನು ಹೋದಂತೆ ತೋರುತ್ತ) ಈ ನಮ್ಮ ನೇಹಿಗ ರಾಜಪ್ರತಿನಿಧಿಗಳಿಗೆ ಸಲ್ಲಬೇಕಾದ ಗೌರವ ಮರ್ಯಾದೆಗಳ ಪ್ರಗಟಾಪ್ರದರ್ಶನಕ್ಕೆ ಎಳ್ಳಸಿತೂ ಲೋಪ ಬಾರದಿರಲಿ.

ಬಿಟ್ಟಿಯಣ್ಣ—ಅಪ್ಪಣೆ.

ವಿಷ್ಣುವರ್ಧನ— ತೆಂಕಣ ಮೇರೆವಳಸಿನ ನಮ್ಮ ಗಡಿಯಲ್ಲಿ, ಭರತ ಕಿರಿಯ ಮರಿಯಾನೆ ಬಪ್ಪಣರನ್ನು ಕೂಡಿಕೊಂಡು, ನಿನ್ನ ಪಡೆಯೊಡನೆ ಅಲ್ಲಿಯೇ ಇದ್ದುಕೊಂಡು, ಕಟ್ಟೆಚ್ಚರಿನ ಕಾವಲುಗೊಡುತ್ತಿರು.

ಬಿಟ್ಟಿಯಣ್ಣ— ಅಪ್ಪಣೆ.

ವಿಷ್ಣುವರ್ಧನ—ನಿನ್ನ ಪಡೆಯದು ಈ ಕೂಡಲೇ ನಿನ್ನೊಡನೆ ಹೊರಡಲಿ. ಎರಡು ದಿನಗಳ ತಡವಾಗಿ ಹೊರಟು ಆ ಮೇಲೆ ನಿನ್ನನ್ನು ಕೂಡಿಕೊಳ್ಳಲಿ.

ಬಿಟ್ಟಿಯಣ್ಣ— ಅಪ್ಪಣೆ.

ವಿಷ್ಣುವರ್ಧನ— ಹಾಗೆಂದು ಈ ಇವರೊಡನೆ ಒಂಟಿಯಾಗಿಯೂ ನಡೆಯದೆ ತಕ್ಕಷ್ಟು ಕಾಪಿನಾಳನ್ನು ಒಡಗೊಂಡು ಅವರೊಡನೆ ನಡೆವನವನು.

ಬಿಟ್ಟಿಯಣ್ಣ— ಅಪ್ಪಣೆ.

ವಿಷ್ಣುವರ್ಧನ— ನಡೆ.

ಬಿಟ್ಟಿಯಣ್ಣ— (ಮತ್ತೆ ವೀರವಂದನವನ್ನು ಮಾಡಿ ಹೋಗುವನು)

ವಿಷ್ಣುವರ್ಧನ— (ಹಿಂದಕ್ಕೆ ಮಲಂಗನ್ನೊರಗಿ) ಮುಂದಿನ ಯೋಚನೆ ?

ಗಂಗರಾಜ— ಪ್ರಭು, ಅಂಗೈಯ ಹುಣ್ಣಿಗೆ ಕನ್ನಡಿಯನ್ನು ಎತ್ತಿ ಹಿಡಿದು ಅದರಲ್ಲಿ ಗಾತ್ರವನ್ನು ಅಳೆವಂತಾಗುತ್ತದೆ, ನಾವಿನ್ನು ಮತ್ತೆಯೂ ಆ ಎಡದ ನೀತಿಯನ್ನು ತಡೆದು ನೋಡಬೇಕೆನ್ನುವುದು. ತಲಕಾಡಿನ ಮುಂತಲವ ಕಕ್ಷೇಷ ಮಹಾಜನರೂ ಅನುದಿನವೂ,ದಾಮನ ಕ್ರೂರವಾಪಾಳ್ಕೆಯಿಂದ ಬಿಗಿದಪ್ಪಿಸಿ ಜನಜೀವನದ ನಿತ್ಯ ವ್ಯವಹಾರವನ್ನು ಕುದುರಿಸಿಕೊಡಬೇಕು, ಎಂದೆಂಬ ಅಭ್ಯರ್ಥನೆಯನ್ನು ಸನ್ನಿಧಾನಕ್ಕೆ ತರುತ್ತಿರುವರು. ಸೇಡು ತೀರಿಸಿಕೊಳ್ಳುವ ಸಲುವಾಗಿ ಆ ಅತ್ತಣ ಸೀಮೆಯಿಂದ ನಮ್ಮ ಪಡೆಗೆ ಬಂದು ಕೂಡುತ್ತಿ

ರುವ ಹುಡುಗರಿಗಂತೂ ಹೇಳ ಲೆಕ್ಕವಿಲ್ಲ. ಯುದ್ಧವನ್ನು ಘೋಷಿಸಿ, ಮಹಾಪ್ರಭುಗಳು ಎಲ್ಲರ ಮನಸ್ಸನ್ನೂ ಸಂತೋಷಪಡಿಸಬೇಕು ಎಂದು ನನ್ನ ಪ್ರಾರ್ಥನೆ.

ವಿಷ್ಣುವರ್ಧನ— ನೀನೆಂದುದು ನಮಗೇನೋ ಒಪ್ಪಿಗೆಯೇ ಗಂಗರಾಜ. ಆದರೆ ಮಹಾರಾಜಾ ಕುಲೋತ್ತುಂಗರು ಕಾರಣಾಂತರದಿಂದ ತಲಕಾಡಿನಲ್ಲಿ ಬೀಡಾರ ಮಾಡಿರುವ ಸುದ್ದಿ ಬಂದಿದೆ. ಜನರ ಆಕ್ರೋಶವನ್ನು ತಿಳಿಸುವ ಓಲೆ ಯೊಂದನ್ನು ಮೊದಲು ಬರೆಯಿಸೋಣ. ಆಮೇಲೆ ಅನಿವಾರ್ಯವಾದರೆ ನಡೆಯನ್ನೆತ್ತಿ ಹೊರಡೋಣ. ಏನು ಹೇಳುವಿರಿ ನಾಗಯ್ಯ?

ಗಂಗರಾಜ— ಅಪ್ಪಣೆ. (ಕುಳಿತುಕೊಳ್ಳುವನು)

ನಾಗಯ್ಯ— (ಎದ್ದು ನಿಂತು) ಸಂತೋಷ ಪ್ರಭು. (ಕುಳಿತುಕೊಳ್ಳುವನು)

ವಿಷ್ಣುವರ್ಧನ— ನಮ್ಮ ಉಳಿದ ದಣಾಯಕರು, ಹಿರಿಯರು, ಹೆಗ್ಗಡೆಗಳು ಮುಂತಾದವರ ಅಭಿಪ್ರಾಯವನ್ನು ತಿಳಿಯಬೇಕಲ್ಲ?

ಎಲ್ಲರೂ— (ಒಕ್ಕೊರಲಲ್ಲಿ) ಆಗಬಹುದು ಮಹಾಸ್ವಾಮಿ.

ವಿಷ್ಣುವರ್ಧನ— ಸರಿ. ರಾಯಸವನ್ನು ಬರೆಯಿಸುವ ಕೆಲಸ ಈಗಲೇ ನಡೆದು ಹೋಗಲಿ.

ಕರಣಿಕ— (ಓಲೆ ಕಂಠಗಳನ್ನು ಹಿಡಿದು ಅನುವಾಗುವನು)

ವಿಷ್ಣುವರ್ಧನ— ಬರೆ.

ಕರಣಿಕ— ಅಪ್ಪಣೆ.

ವಿಷ್ಣುವರ್ಧನ— "ಸ್ವಸ್ತಿ ಶ್ರೀಮತ್ಸಕಲ ಭುವನಾಶ್ರಯ, ಮೇದಿನೀವಲ್ಲಭ, ಕರಿಕಾಲ ಚೋಳ, ವಿರುವರಾಜ ಭಯಂಕರ, ಉದ್ಯೆಯೂರ್, ತ್ರಿಭುವನ ಚಕ್ರವರ್ತಿ, ಸುಂಗವಾವಿರ್ತ ಮುಂತಪ್ಪ ಬಿರುದಾಂಕಿತರಾದ ಇಮ್ಮಡಿ ರಾಜೇಂದ್ರ ಚೋಳರೆನಿಪ್ಪ ಕುಲೋತ್ತುಂಗ ಚೋಳರಾಜ ಕೇಸರಿವರ್ಮ ಮಹಾರಾಜಾಧಿ ರಾಜರ ಸನ್ನಿಧಿಯಲ್ಲಿ ದೋರಸಮುದ್ರದ—" ನಮ್ಮ ಒಕ್ಕಣೆಯನ್ನು ಸಂಕ್ಷೇಪವಾಗಿ ಕಾಣಿಸು.

ಕರಣಿಕ— ಅಪ್ಪಣೆ ಮಹಾಸ್ವಾಮಿ (ಗಟ್ಟಿಯಾಗಿ ಹೇಳುತ್ತ ಬರೆವನು) "ಯಾದವ ಕುಲಾಂಬರ ದ್ಯುಮಣಿ, ಸಂಯುಕ್ತ ಚೂಡಾಮಣಿ, ಚತುಸ್ಸಮೆಯ ಸಮುದ್ಧರಣ, ಮಲೆಪರೊಳ್ ಗಂಡ ಮುಂತಪ್ಪ ಬಿರುದಾಂಕಿತ ಶ್ರೀ ಮದ್ವಿಷ್ಣುವರ್ಧನ ಮಹಾಜರ ವಿಜ್ಞಾಪನಾ" (ಕತ್ತೆತ್ತಿ ಮಹಾರಾಜನ ನ್ನೀಕ್ಷಿಸಿ) ಆಯಿತು ಮಹಾ ಸ್ವಾಮಿ.

ವಿಷ್ಣುವರ್ಧನ— ಇಂದಿನ ಉದಯದೋಲಗದಲ್ಲಿ ನಿಮ್ಮ ಸಾಮಂತ ದಾಮೋದರನೆಂದು ಹೇಳಲಾದ ಪತ್ರವನ್ನು ಹೊಯ್ಸಳ ನಾಡಿನ ಮಹಾ ಪ್ರಜೆ ಗಳೆದರು ಮಂಡಿಸಲೆಂದು ತೆರೆದು ಓದಲೆತ್ತಿದಾಗ, ಈ ನಾಡ ಮರ್ಯಾದೆಗೆ

ಭಂಗ ಬರುವಂತಹ ತೆರನಿದ್ದ ಅವರ ಮೇರೊಕ್ಕಣೆಯನ್ನು ನೋಡಿದೊಡನೆಯೆ, ಸಭೆಯ ಮುಂದಿರಿಸದೆ, ಹಿಂದಿರುಗಿಸಿರುವುದನ್ನು ನಿಮ್ಮವರು ನಿಮಗೆ ಬೇರೆಯಾಗಿ ಕೃತಪಡಿಸಿಯಾರು. ಈ ಇಂತಹ ಅನುಚಿತ ವರ್ತನೆಯನ್ನು ಈ ನಾಡ ಮಂದಿ ಬಹು ತೀವ್ರತರವಾಗಿ ಆಲೋಚಿಸುತ್ತಿರುವುದು - ಇದು ಒಂದನೆಯದು.

ನಮಗೆ ಅನುದಿನವೂ ಬರುತ್ತಿರುವ ಜೇಹದೊಂದಷ್ಟನ್ನು ಅವಲೋಕಿಸುವ ದಾವರೆ ನಿಮ್ಮಾಳ್ವಿಕೆಗೆ ಸಂದಿರುವ ಜನ ಹಲವಾರು ಅಧಿಕಾರಿಗಳ ದುರಾಗ್ರಹಕ್ಕೆ ಒಳಪಟ್ಟು, ಕಷ್ಟ ಕ್ಲೇಶ ಕಾರ್ಪಣ್ಯಗಳಿಗೆ ಸಿಕ್ಕಿ ಬಸವಳಿಯುತ್ತಿರುವರಹುದು. ಈ ಇದು ನಮ್ಮ ಸೀಮೆಯ ತೆಂಕಣ ಗಡಿಯಾದ ಗಂಗವಾಡಿಯಿಂದ—ಅಂದರೆ ನೀವು ಕರೆವ ತಲಕಾಡಿನ ಸುತ್ತಣ ಪ್ರದೇಶವಾದ ಮುಡಿಕೊಂಡ ಚೋಳ ಮಂಡಲ—ಒಂದರಿಂದಲೇ ಅಲ್ಲ, ಮೂಡಣದಲ್ಲಿ ನೀವು ಹೆಸರಿಸಿರುವ ವಿಕ್ರಮಚೋಳ ಮಂಡಲದಿಂದ, [illegible] ಚೋಳ ಮಂಡಲದಿಂದ, ಈ ದುಷ್ಟ ಸುದ್ದಿಗಳು ನಮಗೆ ಕೊನೆಯಿಲ್ಲದೆ ಬರುತ್ತಿವೆ— ಎಂಬುದು ಎರಡನೆಯದು.

ಮಹಾರಾಜರು ಎಂದೆನ್ನಿಸಿಕೊಂಡ ಅವರಿಗೇ ಆವರೂ ನಾಡ ಜನದ ಕ್ಷೇಮಚಿಂತನೆ ಅವರ ಜೀವದ ಜೀವಾಳವಾಗಿರಬೇಕು ಎಂಬುದನ್ನು ನಾವು ನಿಮಗೆ ಹೇಳ ಕೆಲಸವಿಲ್ಲ. ನೀವಾ ನಾಡುಗಳಲ್ಲಿ ಶಾಂತಿ ಸುಭಿಕ್ಷೆಗಳು ನೆಲೆಗೊಳ್ಳುವಂತೆ ಮಾಡುವುದೊಂದು, ಆ ನಾಡ ಜನಗಳದೇ ಇಚ್ಛೆಯಂತೆ ನಾಡುಗಳನ್ನು ಹೊಯಿಸಳ ನಾಡಿಗೆ ಬಿಟ್ಟು ಕೊಡುವುದೆರಡನೆಯದು. ಮಂದಿ ಹಾಗೆ ಕೇಳಲು ಬಾಧ್ಯರು. ಅವರ ಒಕ್ಕೂಟವನ್ನು ಮಾಡಿಕೊಳ್ಳಲು ಕನ್ನಡಿಗರು ಎಂದೆಂದಿಗೂ ಎಡೆಗಾರಿಕೆಯುಳ್ಳವರು. ಅಲ್ಲದೆ ಈಗ ನಿಮ್ಮಾಳ್ವಿಕೆಗೆ ಒಳಪಟ್ಟಿರುವ ಕನ್ನಡದ ನಾಡದನ್ನೆಲ್ಲ ಸುಮಾರು ಒಂದು ಸಾವಿರ ವರುಷಗಳ ಕಾಲ ಆಳಿದ ಗಂಗರಸರು ನಮ್ಮ ಮಾತಾಮಹರು. ಏನೋ, ದುರ್ದೈವದಿಂದ ಅದು ಅವರ ಕೈಬಿಟ್ಟಿತು. ಈಗ, ಅವರಾಳಿದ ನಾಡನ್ನೆಲ್ಲವನ್ನೂ ಒಂದುಗೂಡಿಸುವುದು ನಮ್ಮ ಕರ್ತವ್ಯವೂ ಅಹುದು ಎಂಬುದನ್ನು ನೀವು ಮನಗಾಣಬೇಕಾಗಿದೆ.

ಗಡಿಯಲ್ಲಿ ನಿಮ್ಮ ಅಧಿಕಾರಿಗಳು ನಮ್ಮ ಪ್ರಜಾಸಂದೋಹಕ್ಕೆ ಕೊಡುತ್ತಿರುವ ನೋವು, ಮಾಡುತ್ತಿರುವ ನಷ್ಟ ಅಪಾರ. ಅದು ಈ ಒಡನೆ ನಿಲ್ಲಬೇಕು. ನಮಗೇನು ರಕ್ತಪಾತದಿಂದ ತಣಿವ ಆಸೆಯಿದೇನಿಲ್ಲ. ಆದರೆ ಒಂದು ನಾಡಿನ ಹಿತಕ್ಕಾಗಿ ಹಲವಾರು ಮಂದಿಯ ಕೊಲೆ ಅನಿವಾರ್ಯವಾದರೆ ನಾವು ಅದಕ್ಕೂ ಹಿಂಜರಿವವರಲ್ಲ. ನಮ್ಮ ಸ್ನೇಹಹಸ್ತವನ್ನು ಚಾಚಿ ಈ ವಿಜ್ಞಾಪನಾ ಪತ್ರಿಕೆಯನ್ನು ಬರೆಯಿಸಲಾಗಿದೆ. ಹಳೆಯ ಗಂಗವಾಡಿಯದಷ್ಟನ್ನೂ

ರಕ್ತಪಾತವಿಲ್ಲದೆ ಹೊಯ್ಸಳ ಹಳಯಿಗೆಯ ನೆರಳಿನಲ್ಲಿ ಬಾಳಲು ಬಿಟ್ಟುಕೊಡುವುದು ನಿಮ್ಮ ಧರ್ಮ. ಅದಿಲ್ಲದೆ, ನಿಮ್ಮ ಒಂದನೆಯ ರಾಜ ರಾಜರ ಆಣತಿಯಂತೆ ಅವರ ಮಗ ರಾಜೇಂದ್ರ ಚೋಳರು ದಿಗ್ವಿಜಯನ್ನೆತ್ತಿಕೊಂಡು, ತಲಕಾಡಿನ ನಮ್ಮ ರಕ್ಕಸಗಂಗರನ್ನು ಸೋಲಿಸಿ ನಾಡಿಗಧಿಪತಿಯಾದರು ಎಂಬ ಕಾರಣದಿಂದ ಈಗಲೂ ನೀವೇ ಒಡೆಯರು ಎಂಬ ವಾದವನ್ನು ಹೂಡುವಿರಾದರೆ, ಅಂಥವೆ ದಿಗ್ವಿಜಯದ ಆಕಾಂಕ್ಷೆಯುಳ್ಳವರು, ಹೊಯ್ಸಳ ನಾಡವರು ಎಂಬುದನ್ನು ನಿಮಗೆ ನಮ್ಮ ಮೂಲಕ ಸ್ಪಷ್ಟವಾಗಿ ಹೇಳ ಬಯಸುತ್ತಿದ್ದಾರೆ. (ನಾಗಯ್ಯ ಗಂಗರಾಜಾದಿಗಳನ್ನು ನೋಡುವನು)

ನಾಗಯ್ಯ— ಸಾಕೆನಿಸುತದೆ ಪ್ರಭು.

ವಿಷ್ಣುವರ್ಧನ— (ಕರಣಿಕನಿಗೆ) ಸರಿ. ಮುಕ್ತಾಯ ಮಾಡಿಬಿಡು.

ಕರಣಿಕ— " ಇಂತೀ ವಿಜ್ಞಾಪನಾ " (ಎಂದು ಹೇಳುತ್ತಾ, ಬರೆದು ಮುಗಿಸಿ, ಓಲೆ ಕಂಠಗಳನ್ನು ಒಪ್ಪಿಸುವನು)

ವಿಷ್ಣುವರ್ಧನ— (ರಾಯಸಕ್ಕೆ ಅಂಕಿತವನ್ನಿಕ್ಕಿ) ಮಹಾರಾಜ ಮುದ್ರೆಯೊಡನೆ ಈ ಐದು ಇಂದೇ ಸಂಧಿವಿಗ್ರಹಿ ಮಾಧವ ಭಟ್ಟರೊಡನೆ ಸಕಲ ರಾಜಮರ್ಯಾದೆಗಳಲ್ಲಿ ತಲಕಾಡಿನತ್ತ ನಡೆಯಲಿ.

ನಾಗಯ್ಯ— ಅಪ್ಪಣೆ.

ವಿಷ್ಣುವರ್ಧನ — ನಾವು ಯಾವ್ಯಾವ ಬಗೆಯಲ್ಲಿ ಯೋಚಿಸಿದರೂ ಗಂಗರಾಜ, ಈ ಬರೆಹಕ್ಕೆ ದೊರೆವ ಪುರಸ್ಕಾರ ಶುಭವಾಗಿರದು ಎಂದೇ ಅನಿಸುತ್ತದೆ. ಅಂದರೆ ಕಾಳಗ ಸನ್ನಿಹಿತವಾದಂತೆಯೇ. ನಮ್ಮ ಪಡೆಗಳವಾದ್ಯಂತ ಎಚ್ಚತ್ತಿರಲಿ.

ಗಂಗರಾಜ— ಪ್ರಭುವಿನಾಣತಿಯದೊಂದು ತಡ ಒಡೆಯ. ಪಡೆಯದೆಲ್ಲ ಕಾಲಿನ ತುದಿಬೆರಳಿನ ಮೇಲೆ ನಿಂತಿದೆ.

ವಿಷ್ಣುವರ್ಧನ— ಸಂತೋಷ. (ನಾಗಯ್ಯನಿಗೆ) ಮತ್ತದೇನಾದರೂ ಉಂಟೆ ?

ನಾಗಯ್ಯ— ಅಂತಹ ಕಟ್ಟವಸರದ ಕಾರ್ಯವದೇನೂ ಇಲ್ಲ ಪ್ರಭು.

ವಿಷ್ಣುವರ್ಧನ— ಒಳ್ಳೆಯದು. (ಪೀಠದಿಂದಿಳಿದು ಹೊರಡುವನು)

ಉದಯಾದಿತ್ಯ
ಎರೆಯಂಗ } (ಮಹಾರಾಜನ ಹಿಂದಿರುವರು)

ಪರಿವಾರ— (ಹಿಂದೆ ನಡೆಯುವದು)

ತೆರೆ

(' ತಲಕಾಡುಗೊಂಡ ' ನಾಟಕದ ಏಳನೆಯ ದೃಶ್ಯ)

—ಸಮೇತನಹಳ್ಳಿ ರಾಮರಾಯ

೧೫. ಚಾಲುಕ್ಯವಿಕ್ರಮ

ವಿಕ್ರಮಾಭರಣನ ಬಾಲ್ಯ–ಯೌವನಾವಸ್ಥೆಗಳ ೩೦–೪೦ ವರುಷಗಳೆಂದರೆ ಕದನಗಳ ಸುಗ್ಗಿ. ಚೋಳರಿಗೂ ಚಾಳುಕ್ಯರಿಗೂ ಇರುವ ಹಗೆತನವು ಆ ಅವಧಿಯಲ್ಲಿ ಬೆಳೆದು ಬಲಿದು ಫಲಿಸಿ ನಿಲವು ನಿಂತಿತ್ತು. ದಕ್ಷಿಣದಿಂದ ಮೇಲಕ್ಕೊತ್ತಿ ಬರುವ ಚೋಳರ ಕಲಿಮೇಳವನ್ನು ಕತ್ತಿಗೆ ಕೈಗೊಟ್ಟು ತಡೆಯುವುದೆ ವಿಕ್ರಮನ ತಂದೆಯ ಆಯುಷ್ಯದ ಮುಖ್ಯ ಇತಿ ಕರ್ತವ್ಯತೆಯಾಗಿತ್ತು. ಸೋಮೇಶ್ವರನು ಚೋಳರ ಹಾವಳಿಯನ್ನು ಹಿಂಗಿಸುವುದಕ್ಕೆ ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರದ ವರೆಗಿನ ಸೀಮಾಂತ ಪ್ರದೇಶದಲ್ಲಿ ಮೂರು ಭಾಗಗಳನ್ನು ಮಾಡಿದ್ದನ್ನು ಒಂದೊಂದಕ್ಕೆ ತನ್ನ ಒಬ್ಬೊಬ್ಬ ಮಗನನ್ನು ದಂಡನಾಯಕನನ್ನಾಗಿ ನಿಯಮಿಸಿದ್ದನು. ಇದರಿಂದ ಚೋಳ ಚಾಳುಕ್ಯ ಸಾಮ್ರಾಜ್ಯಗಳ ನಡುವೆ ಒಂದು ಅಭೇದ್ಯವಾದ ಗೋಡೆಯನ್ನೇ ಕಟ್ಟಿದಂತಾಗಿತ್ತು. ಚರಿತ್ರನಾಯಕನಾದ ವಿಕ್ರಮಾರ್ಕನನ್ನು ನೊಳಂಬವಾಡಿಯ (ಚಿತ್ರದುರ್ಗ ಮುಂತಾದ ಪ್ರದೇಶದ) ಅಧಿನಾಯಕನನ್ನಾಗಿ ನಿಯಮಿಸಿದ್ದನು. ಚೋಳರ ರೋಷದೃಷ್ಟಿಯು ಈ ನಾಡಿನ ಮೇಲೆಯೇ ಬೀಳುತ್ತಿತ್ತು. ಈ ಮೂಲಕವಾಗಿ ವಿಕ್ರಮನಿಗೆ ಚಿಕ್ಕಂದಿನಲ್ಲಿಯೇ ರಣರಂಗದ ಅನುಭವವು ಲಭಿಸಿತು. ಚೋಳ ರಾಜಾಧಿರಾಜನಿಗೂ ಸೋಮೇಶ್ವರನಿಗೂ ತುಂಗಭದ್ರಾತೀರದ ಕೊಪ್ಪದಲ್ಲಿ ಅತ್ಯುಗ್ರ ಸಂಗ್ರಾಮವೆಸಗಿತು. ಇದರಲ್ಲಿ ವಿಕ್ರಮನೂ ತಂದೆಯೊಂದಿಗೆ ಸಮರದೇವತೆಯ ಪೂಜೆಗೆ ತನ್ನ ಕ್ಷಾತ್ರಾಧಾರೆಯ ಬಲವನು ಎರೆದನು. ಇವರಿಬ್ಬರ ವಿಕ್ರಮತೀರ್ಥಾಭಿಷೇಕದಿಂದ ಭಯಂಕರ ರೂಪಿಣಿಯಾದ ಆ ರಣದೇವತೆಯ ಅಡಿಗಳಲ್ಲಿ ರಾಜಾಧಿರಾಜನು ಎರಗಿ ಪ್ರಾಣಕೊಟ್ಟನು. ಆ ಬಳಿಕ ಚೋಳಕ್ಷೋಣಿಗೆ ಒಡೆಯನಾದವನು ರಾಜಾಧಿರಾಜನ ತಮ್ಮ ರಾಜೇಂದ್ರ. ಈ ವೀರಾಗ್ರೇಸರನಿಗೂ ಸೋಮೇಶ್ವರನಿಗೂ ಇರಿದಾಡಿದಾಗಳೆಲ್ಲ ವಿಕ್ರಮದೇವನೇ ಬಹುಶಃ ಕದನದ ಧುರೀಣತ್ವವನ್ನು ವಹಿಸಿದ್ದನು. ಚೋಳ ಚಾಳುಕ್ಯರ ವೈರವು ಇಷ್ಟರಿಂದಲೇ ಕೊನೆ ಮುಟ್ಟಲಿಲ್ಲ. ರಾಜೇಂದ್ರನ ತರುವಾಯ ೧೦೬೩ ರಲ್ಲಿ ಚೋಳ ಸಿಂಹಾಸನಾಧೀಶ್ವರನಾದ ಭೀಮಪರಾಕ್ರಮಿ ವೀರರಾಜೇಂದ್ರನೂ ಈ ಹಗೆತನದ ಕನಸನ್ನು ಬಿಡಲಿಲ್ಲ. ಆತನು ಐದು ಸಾರೆ ಚಾಳುಕ್ಯರ ಮೇಲೆ ಬಲವೆತ್ತಿ ಬಂದನು. 'ಸಮಬಲರಾದ ಮಹಾಬಲಿಗಳಲ್ಲಾದ ಆ ಭೀಕರ ಸಂಗರಗಳಲ್ಲಿ ವಿಕ್ರಮನೇ ಮುಖಂಡ. 'ಆತನು ಅರಿನೃಪಾಲರನ್ನು ನುಂಗುವ ಕಾಲಮೃತ್ಯುವಿನಂತೆಯೂ ಆಹವದೆಡೆಗೆ ಬೀಸುವ ನಂಜಿನ ಬಿರುಗಾಳಿಯಂತೆಯೂ ಚೋಳರನ್ನು

ಬೆಂಕೊಂಡು ತಿರುತಿರುವಿ ಕೆಡಹಿದನು. ಒಂದೆರಡರಲ್ಲಿ ಚೋಳರಿಗೆ ಜಯವು ಸಿಕ್ಕಿತು.

ಕೊನೆಗೆ ಸೋಮೇಶ್ವರನು ತನ್ನ ಕೈಬರಹದಿಂದ ವೀರರಾಜೇಂದ್ರನಿಗೆ ಯುದ್ಧದ ಆಹ್ವಾನ ಪತ್ರಿಕೆಯನ್ನು ಕಳುಹಿಸಿದನು. ಕೃಷ್ಣಾ ತುಂಗಭದ್ರೆಗಳು ಒಂದನ್ನೊಂದು ಅಪ್ಪಿಕೊಂಡಿರುವ ಕೂಡಲ ಸಂಗಮವು ರಣಕ್ಷೇತ್ರವೆಂದು ಅದರಲ್ಲಿ ಸೂಚಿಸಿದ್ದನು. ವೀರರಾಜೇಂದ್ರನು ಪಡೆಗೊಂಡು ನಡೆತಂದನು. ಕೂಡಲ ಸಂಗಮದಲ್ಲಿ ಒಂದು ತಿಂಗಳವರೆಗೆ ಎದುರಾಳಿಯ ಹಾದಿಯನ್ನು ಕಾಯ್ದನು. ಆದರೆ ತೀಕ್ಷ್ಣ ಜ್ವರಬಾಧೆಯಿಂದ ಸೋಮೇಶ್ವರನಿಗೆ ಬರಲಿಕ್ಕಾಗಲಿಲ್ಲ. ಆತನು ಯುದ್ಧಭೂಮಿಯಲ್ಲಿ ಕುಣಿದಾಡುವ ಬದಲು ತುಂಗಭದ್ರೆಯ ತೊಡೆಯಲ್ಲಿ ಚಿರವಿಶ್ರಾಂತಿಯನ್ನು ಹೊಂದಿದ್ದನು. ಚೋಳನು ಇನ್ನು ಮರಳುವವನಿದ್ದನು. ಅಷ್ಟರಲ್ಲಿ ತಂದೆಯ ಸೇನಾರಥವನ್ನು ನಡೆಯಿಸಿಕೊಂಡು ವಿಕ್ರಮಾದಿತ್ಯನು ಬಂದನು. ಎರಡೂ ದಂಡುಗಳು ಒಂದನ್ನೊಂದು ಎರಗಿ, ಕೆನ್ನೀರಿನ ಹೊಳೆ ಹರಿಯತಕ್ಕುದಿತ್ತು. ವಿಕ್ರಮನು ಚೋಳ ಸೈನ್ಯವನ್ನು ಕಲಕುವವನಿದ್ದನು. ವೀರರಾಜೇಂದ್ರನು ಚಾಳುಕ್ಯರ ದಂಡಿನ ಧೂಳಿ ಹಾರಿಸುವವನಿದ್ದನು. ಆ ಪ್ರದೇಶವೆಲ್ಲ ಪೆಣಮಯವಾಗುವುದಿತ್ತು. ದೈವಲೀಲೆಯನ್ನು ನೋಡಿರಿ! ಒಮ್ಮೆಲೆ ಯುದ್ಧದೃಶ್ಯವು ಹೋಗಿ, ಅದರ ಬದಲು ಅಲ್ಲಿ ವಿವಾಹ ದೃಶ್ಯವಾಯಿತು; ರಣಮಂಟಪವು ಲಗ್ನಮಂಟಪವಾಯಿತು; ಒಬ್ಬರನ್ನೊಬ್ಬರು ತೆಕ್ಕೆಮುಕ್ಕೆಯಲ್ಲಿ ಹಿಚುಕಿ ಅಸುವನ್ನು ಹಿಂಡಲಣಿಯಾದ ವೀರರಿಬ್ಬರು ಒಬ್ಬರನ್ನೊಬ್ಬರು ಬಿಗಿದಪ್ಪಿಕೊಂಡು ಒಬ್ಬರೊಬ್ಬರ ಹೃದಯವನ್ನು ಸೂರೆಗೊಂಡರು. ವೀರರಾಜೇಂದ್ರನ ಗೋಣ್ಮುರಿಯಲು ಚಾಚಿದ್ದ ವಿಕ್ರಮನ ಕೈಯು ಅವನ ಮಗಳ ಪಾಣಿಗ್ರಹಣವನ್ನು ಮಾಡಿತು! ಹೀಗಾಗುವದಕ್ಕೆ ಆಗಿನ ಕಾಲದ ರಾಜಕಾರಣದ ವಿಲಕ್ಷಣ ಪರಿಸ್ಥಿತಿಯೂ ಕಾರಣವಾಗಿತ್ತು.

ಆಗಿನ ಕಾಲದಲ್ಲಿ ಚೋಳರಾಜ್ಯದಲ್ಲಿಯೂ ಕ್ರಾಂತಿ ನಡೆದಿತ್ತು; ಚಾಳುಕ್ಯರಾಜ್ಯದಲ್ಲಿಯೂ ಕ್ರಾಂತಿ ನಡೆದಿತ್ತು; ವೆಂಗಿರಾಜ್ಯದಲ್ಲಿಯೂ ಕ್ರಾಂತಿ ನಡೆದಿತ್ತು. ಚೋಳರಸನ ಮಗಳ ಮಗನಾದ ರಾಜೇಂದ್ರದೇವ ಅಥವಾ ಕುಲೋತ್ತುಂಗನು ಚೋಳರಾಜ್ಯದಲ್ಲಿ ತನ್ನ ಬೆಳಕನ್ನು ಕೆಡಹಬೇಕೆಂದಿದ್ದನು. ಆತನು ವೆಂಗಿಯ ಚಾಳುಕ್ಯವಂಶಜನು. ಆದರೆ ತಾಯಿಯ ತೌರುಮನೆಯಾದ ಚೋಳರಲ್ಲಿಯೇ ಬೆಳೆದಿದ್ದನು. ಆತನು ಉತ್ಕಟ ಮಹತ್ವಾಕಾಂಕ್ಷಿ. ಕೇವಲ ವೆಂಗಿಯನ್ನಾಳುವುದು ಆತನ ಮನಸ್ಸಿನಲ್ಲಿರಲಿಲ್ಲ. ತನ್ನ ಅಜ್ಜನ ಚೋಳ ಸಾಮ್ರಾಜ್ಯಕ್ಕೂ ಚಕ್ರವರ್ತಿಯಾಗಬೇಕೆಂದು ಆತನ ಹವಣಿಕೆ. ವೀರರಾಜೇಂದ್ರನು ವೆಂಗಿಯನ್ನು ತನ್ನ ಅಂಕಿತದಲ್ಲಿಟ್ಟುಕೊಂಡ, ತನ್ನ ವಿಶ್ವಾಸದ ಮಾಂಡಲಿಕನನ್ನು ಅಲ್ಲಿ ನಿಯಮಿಸಬೇಕೆಂದಿದ್ದನು. ಅರ್ಥಾತ್ ಉತ್ತುಂಗಸಾಹಸಿಯಾದ ಕುಲೋತ್ತುಂಗನನ್ನು ವೆಂಗಿಯ ಪಟ್ಟದಲ್ಲಿರಿಸುವುದು ಆತನಿಗೆ ಬೇಡಾಗಿತ್ತು. ಅಂತು ವೆಂಗಿರಾಜ್ಯವನ್ನು ನುಂಗಬೇಕೆಂದು ಆತನ ಹೊಂಚು. ಇತ್ತ ವಿಕ್ರಮನ ತಂದೆಯು ತೀರಿದೊಡನೆಯೇ ಅಣ್ಣನಾದ ಎರಡನೆಯ

ಸೋಮೇಶ್ವರನು ಕಲ್ಯಾಣದಲ್ಲಿ ಸಿಂಹಾಸನಾರೂಢನಾದನು. ಆದರೆ ಆತನು ಲೋಕಪ್ರಿಯನಾಗಿ ಅರಸುಗೈಯುತ್ತಿರಲಿಲ್ಲ. ಪ್ರಜೆಗಳಿಗೂ ಮಾಂಡಲಿಕರಿಗೂ ವಿಕ್ರಮನ ಒಡೆತನವು ಬೇಕಾಗಿತ್ತು. ಅಲ್ಲದೆ ವಿಕ್ರಮನ ವಿಕ್ರಮಕ್ಕೆ ಅಳುಕಿ ಸೋಮೇಶ್ವರನು ಹೊಟ್ಟೆಕಿಚ್ಚು ಪಡುತ್ತಿದ್ದನು. ಈ ಎಲ್ಲಾ ಕಾರಣಗಳಿಂದ ಅಣ್ಣನನ್ನು ಸರಿಸಿ ತಾನು ಚಾಳುಕ್ಯ ಸಮ್ರಾಟನಾಗಬೇಕೆಂದು ವಿಕ್ರಮನ ಎಣಿಕೆ. ಹೀಗೆ ಚೋಳ, ವೆಂಗಿ ಮತ್ತು ಚಾಳುಕ್ಯ ಈ ಮೂರು ರಾಜ್ಯಗಳಲ್ಲಿ ಒಳಗಿಂದೊಳಗೆ ರಾಜಕಾರಣದ ತಂತ್ರಗಳು ನಡೆದಿದ್ದವು. ಒಬ್ಬರ ಸಹಾಯವನ್ನೊಬ್ಬರು ಅಪೇಕ್ಷಿಸುತ್ತಿದ್ದರು. ಕುಲೋತ್ತುಂಗನು ವೀರರಾಜೇಂದ್ರನ ವಿರುದ್ಧವಾಗುವುದಕ್ಕೆ ಚಾಲುಕ್ಯೇಂದ್ರನಾದ ಸೋಮೇಶ್ವರನನ್ನು ಕೂಡಿಸುದು ಸಹಜವಾದ ಮಾತು. ಏಕೆಂದರೆ 'ಇಬ್ಬರ ನ್ಯಾಯ ಮೂರನೆಯವನಿಗೆ ಆಯ' ಎಂಬ ಹಾಗೆ ಚೋಳ ಚಾಳುಕ್ಯರ ರಾಜ್ಯದಲ್ಲಿ ಕುಲೋತ್ತುಂಗನು ತನ್ನ ಮನೋರಥವನ್ನು ಸಿದ್ಧಿಗೊಳ್ಳಬಯಸಿದನು. ಸೋಮೇಶ್ವರನಾದರೂ ತಮ್ಮನ ಆಟವನ್ನೂ ಚೋಳನ ಕಾಟವನ್ನೂ ಅಡಗಿಸುವುದಕ್ಕೆ ಅನುಕೂಲವಾಗಿದ್ದ ಈ ಸಂಧಿಯನ್ನು ಕಳೆದುಕೊಳ್ಳಲಿಲ್ಲ; ಕುಲೋತ್ತುಂಗನ ಮೈತ್ರಿಗೆ ಒಪ್ಪಿಕೊಂಡನು. ಇನ್ನುಳಿದ ವಿಕ್ರಮ ವೀರರಾಜೇಂದ್ರರಿಗೆ ಒಬ್ಬರಿಗೊಬ್ಬರ ನೆರವೇ ಗತಿಯಾಯಿತು. ಗೃಹವೈರಿಯಾದ ಕುಲೋತ್ತುಂಗನು ಸೋಮೇಶ್ವರನನ್ನು ಕೂಡಿಕೊಂಡುದುದರಿಂದ ವೀರರಾಜೇಂದ್ರನು ವಿಕ್ರಮನೊಡನೆ ಗೆಳೆತನವನ್ನು ಇಚ್ಛಿಸಿದನು. ಕುಲೋತ್ತುಂಗನ ಸಂಗಮದಿಂದ ಪ್ರಬಲನಾದ ಅಣ್ಣನಿಗೆ ಉಚ್ಚಾಟಣೆ ಕೊಡುವುದಕ್ಕೆ ವಿಕ್ರಮನು ಚೋಳನ ನೆರವನ್ನು ಕೋರಿದನು. ಹೀಗೆ ಇಬ್ಬರಲ್ಲಿಯೂ ಕಾದಾಟದ ವಿಚಾರಗಳಿದ್ದವು, ಆದುದರಿಂದಲೇ ಒಪ್ಪಿದ ಯುದ್ಧ ನಿಂತುಹೋಯಿತು. ವಿಕ್ರಮನು ಪರಾಕ್ರಮದಿಂದ ಈ ಮೊದಲೇ ವೀರರಾಜೇಂದ್ರನನ್ನು ಮೆಚ್ಚಿಸಿದ್ದನಾದುದರಿಂದ ಅಳಿಯನಾದನು. ಈ ನಂಟತನದಿಂದ ಇಬ್ಬರೂ ಒಂದಾದರು. ಈ ಬಗೆಯಾಗಿ ನಾಲ್ಕು ವೀರ ಪಂಗಡಗಳು ಒಂದನ್ನೊಂದು ಸೇರಿ ಎರಡಾದವು. ಚೋಳವೈರಿಯಾದ ಸೋಮೇಶ್ವರನನ್ನು ಕುಲೋತ್ತುಂಗನೂ ಚಾಳುಕ್ಯವಿರೋಧಿಯಾದ ವೀರರಾಜೇಂದ್ರನನ್ನು ವಿಕ್ರಮನೂ ಕೂಡಿಕೊಂಡು ವಿಲಕ್ಷಣವಾದ ಇತ್ತಂಡಗಳೇರ್ಪಟ್ಟವು.

ವೀರರಾಜೇಂದ್ರನೊಡನೆ ವಿಕ್ರಮನ ಶರೀರಸಂಬಂಧವಾದೊಡನೆಯೇ ಇಬ್ಬರೂ ವೆಂಗಿದೇಶಕ್ಕೆ ಹೋದರು. ಅಲ್ಲಿಯ ರಾಜ್ಯಕಾರಭಾರದಲ್ಲಿ ಕ್ರಾಂತಿಯನ್ನು ಮಾಡಿದರು. ಆ ರಾಜ್ಯಕ್ಕೆ ಕುಲೋತ್ತುಂಗನ ಕಕ್ಕನಾದ ವಿಜಯಾದಿತ್ಯನನ್ನು ಅಧಿರಾಜನನ್ನಾಗಿ ಮಾಡಿ ಮರಳಿ ಬಂದರು. ಆದರೆ ಈ ವಿಜಯವು ಅವರಿಗೆ ದಕ್ಕಲಿಲ್ಲ. ಏಕೆಂದರೆ ಮುಂದೆ ತುಸು ದಿನಗಳಲ್ಲಿ ವೀರರಾಜೇಂದ್ರನು ಮರಣಹೊಂದಿದನು; ಒಡನೆಯೆ ಚೋಳರಾಜ್ಯದಲ್ಲಿಯೂ ರಾಜ್ಯಕ್ರಾಂತಿಗೆ ಆರಂಭವಾಯಿತು. ಆಗ ವಿಕ್ರಮನು ದಕ್ಷಿಣ ದೇಶದಲ್ಲಿಯ ಚಾಳುಕ್ಯ ಮಾಂಡಲೀಕರನ್ನು ತನ್ನ ಕಡೆಗೆ ಒಲಿಸಿ

ಕೊಳ್ಳುವ ಪ್ರಸಂಗ [illegible]. [illegible] ಮರಣವನ್ನು ಕೇಳಿದೊಡನೆಯೆ ಹಿಡಿದ ಕೆಲಸವನ್ನು [illegible] ಕಂಚಿಗೆ ಹೋದನು. ಅಲ್ಲಿಯ ರಾಜ್ಯವ್ಯವಸ್ಥೆಯನ್ನು ಸರಿಪಡಿಸಿ ವಿಕ್ರಮನು ತನ್ನ ಭಾವನನ್ನು ಪಟ್ಟಕ್ಕೆ ಕುಳ್ಳಿರಿಸಿ ತನ್ನ ಕಾರ್ಯಕ್ಕೆ ಹಿಂತಿರುಗಿದನು. [illegible] ವಿಕ್ರಮನಿಗೆ ಬಗ ಅನುಕೂಲವಾಗಿರಲಿಲ್ಲ. ಚೋಳ ರಾಜ್ಯ [illegible] ಸ್ವೀಕರಿಸಿದನು. ಕುಲೋತ್ತುಂಗನಿಗೆ ತಾನಾಗಿ ದೊರೆತ [illegible] ಚೋಳಸಿಂಹಾಸನವನ್ನಾಕ್ರಮಿಸಿದನು. [illegible] ರಾಜ್ಯದ ಆಸೆಯನ್ನು ಬಿಟ್ಟುಕೊಟ್ಟು ತನ್ನ [illegible] ಸಂಪಾದನೆಯ ಕಡೆಗೆ ಪ್ರಯತ್ನವನ್ನು [illegible] ಅವನಿಗೆ ಅನುಕೂಲ ಗಾಳಿ ಬೀಸಿತು. [illegible] ವಿಕ್ರಮನೋ ಆತನಿಗೆ [illegible] ಜನರು ಹಾಗೆ ವರ್ತಿಸಲಿಕ್ಕೆ ಸಿದ್ಧ [illegible] ವಿಕ್ರಮನ ಮೇಲೆ ವಿಶೇಷವಾಗಿತ್ತು. ಆತನ [illegible] ಕಡೆಗೆಯೆ ಇದ್ದನು. ಹೀಗೆ ಸರ್ವ [illegible]. ಜನರಿಗೆ ಪೀಡಾದವನು ಎಷ್ಟು ದಿವಸ [illegible]? ಸೋಮೇಶ್ವರನಿಗೆ ತನ್ನ ರಾಜ್ಯದಲ್ಲಿಯೇ [illegible]. ವಿಕ್ರಮನ ಶತ್ರುವಾದ ಕುಲೋತ್ತುಂಗ [illegible] ಸೋಮೇಶ್ವರನು ತನ್ನ ತಮ್ಮನನ್ನು ಹಣಿಯುವ ಒಳಸಂಚನ್ನು [illegible] ಕ್ಷೇಮ ಸಂಭವಿಸಬಹುದೆಂದು ವಿಕ್ರಮನು [illegible] ಬಿಟ್ಟು ತೆರಳಿದನು. ಅವರನ್ನು [illegible]. ಆ ವೀರಬಂಧುಗಳು ಅವನ್ನು [illegible] ಗರಗರನೆ ಅರೆದಿಕ್ಕಿದರು. ಅವರು [illegible] ಬಿಟ್ಟು ಓಡಿದರು. ವಿಕ್ರಮನಿಗೆ [illegible] ಆತನನ್ನು ಹಿಡಿಯುವುದಾಗಲಿಲ್ಲ. [illegible] ಬಲವನ್ನು ಕೂಡಿಸಿ ತುಂಗಭದ್ರೆಯ [illegible] ಸಮೇತನಾಗಿ ಕುಲೋತ್ತುಂಗನು [illegible]. [illegible]ದಿಂದ ಪರಿವೃತನಾಗಿ [illegible]; ಹೀಗೆ ವಿಕ್ರಮನು ಕತ್ತರಿಯ [illegible] ಒಮ್ಮೆಲೆ ಕತ್ತರಿಸಿ ಗೆದ್ದು ಪಾರಾಗುವುದು [illegible]. ಕತ್ತರಿಯ ಎರಡೂ ಅಲಗುಗಳು [illegible]. ಇಂತಹ [illegible]ನಲ್ಲಿ ಸಿಕ್ಕರೂ ಆ ಧೀರ ವಿಕ್ರಮನು [illegible] ಎದೆಗೆಡಲಿಲ್ಲ. ನಿಕ್ಕಂಕ ಪ್ರತಾಪನಾದ ಆತನು ಎರಡಕ್ಕೂ ಎದೆಗೊಟ್ಟು [illegible] ಸಿದ್ಧನಾದನು.

ವಿಕ್ರಮನು ಮೊದಲು ಕುಲೋತ್ತುಂಗನ ಸೈನ್ಯ ಸರಧಿಗೆ ಟಣ್ಣನೆ ಜಿಗಿದನು. ಕುಲೋತ್ತುಂಗನ ಸುಭಟರು ಈತನನ್ನು ಮುಳುಗಿಸಲು ಒಟ್ಟಾಗಿ ಎಡೆಬಿಡದೆ ತೆರೆಗಳಂತೆ ಹಾಯ್ದರು. ವಿಕ್ರಮನ ನಿಶಿತ ಖಡ್ಗವು ಒಂದೊಂದೆ ಆಕ್ರೋಶನಕ್ಕೆ ಅವುಗಳನ್ನೆಲ್ಲ ಈಂಟಿತು. ಎರಡೂ ಸೇನೆಗಳು ಒಂದನ್ನೊಂದು ಹೊಕ್ಕು ಹೆಣೆದುಕೊಂಡು ಹೋರಾಡಿದುವು. ವಿಕ್ರಮನು ತೊಡಕುಗಳನ್ನು ಕಡಿಕಡಿದು ಕುಲೋತ್ತುಂಗನ ಬಳಿಸಾರಿ ಗರ್ಜಿಸಿದನು. ಇಬ್ಬರ ವೀರಾವೇಶವೂ ಹೆಚ್ಚಿತು. ಅವರು ರಭಸದಿಂದ ಕಾದಿದರು. ಒಮ್ಮೆ ನಿಂದು ಕಾದಿದರು ; ಒಮ್ಮೆ ಬಿತಂದು ಕೈದುಕೈದುಗಳಿಂದ ಕಾದಿದರು ; ಒಮ್ಮೆ ಹೊಸ ಕುದುರೆಗಳನ್ನೇರಿ ಬಂದು ಕಾದಿದರು ; ಒಮ್ಮೆ ತಮುತಮುಗೆ ಒದಗಿದ ಎಡಬಲದ ಪಡಿಬಲವನ್ನು ಕೊಂದು ಕಾದಿದರು ; ಒಮ್ಮೆ ಖಡ್ಗಖಡ್ಗಗಳ ಹತಿಯಿಂದ ನೊಂದು ಕಾದಿದರು : ಒಮ್ಮೆ ಚಳಚಳಿಕೆಯಿಂದ ಸಲೆಸಂದು ಕಾದಿದರು. ಬವರವಿಬ್ಬರಿಗೂ ಸರಿಯಾದುದನ್ನು ಕಂಡು ವಿಕ್ರಮನ ಕೋಪವು ದ್ವಿಗುಣಿತವಾಯಿತು. ಆತನು ಮೀರಿದ ಪರಾಕ್ರಮದಿಂದ ಕುಲೋತ್ತುಂಗನ ಧ್ವಜಛತ್ರಚಾಮರಗಳನ್ನೂ ಚತುರಂಗ ಸೇನೆಯನ್ನೂ ಸವರಿ ಕೈದುಗಳನ್ನು ತರಿದು ಮೈಯನ್ನೂ ಇರಿದು ನೋಯಿಸಿದನು. ಕುಲೋತ್ತುಂಗನು ಪರಿಭವ ಹೊಂದಿ ಕಂಚಿಯ ವರೆಗೆ ಒಂದೇ ಉಸುರಿನಿಂದ ಓಡಬೇಕಾಯಿತು. ಕೂಡಲೆ ವಿಕ್ರಮನು ಹೊಡೆಮರಳಿ ಸೋಮೇಶ್ವರನ ಸೇನಾಕಾನನವನ್ನು ಒಳನುಗ್ಗಿದನು. ಸೋಮೇಶ್ವರನ ದಂಡು ಈತನ ಮೇಲೆ ಕ್ರೂರ ಜಂತುಗಳಂತೆ ಅವಗಡಿಸಿ ಮುತ್ತಿ ಬಂದಿತು. ವಿಕ್ರಮನ ಕೋಪಾಟೋಪವು ಕಾಳ್ಗಿಚ್ಚಿನಂತೆ ಭುಗಿಭುಗಿಲೆಂದು ಅವರೆಲ್ಲರನ್ನು ಸುಡತೊಡಗಿತು. ಅವನಿವನ ಪಡೆಗಳು ಮಸೆವೆತ್ತ ಕೂರ್ಗತ್ತಿಗಳನ್ನು ತೆಗೆತೆಗೆದು ಹೊಡೆದಾಡಿದರು. ತನಿವೀರರಸದ ಪ್ರವಾಹವು ಮೇಲುಕ್ಕಿ ಹರಿಯಿತೋ ಎಂಬಂತೆ ನೆತ್ತರು ಸುರಿಯಿತು. ಇತ್ತಂಡದ ಪಟುಭಟರು ಒಬ್ಬರನ್ನೊಬ್ಬರು ಒತ್ತೊತ್ತಿ ಹೊಡೆದರು ; ಒಬ್ಬರೊಬ್ಬರ ಅಸಿಗಳನ್ನು ಅಸಿಗಳಿಂದ ಕತ್ತರಿಸಿದರು ; ಒಬ್ಬರೊಬ್ಬರಲ್ಲಿ ನಾಟಿಸಿದ ಆಯುಧಗಳನ್ನು ಕಿತ್ತಿದರು ; ಒಬ್ಬರಿಂದೊಬ್ಬರು ಗಾಯವಡೆದು ಬವಳಿಗೊಂಡು ಮತ್ತೆ ಚೇತರಿಸಿಕೊಂಡು ಕೈಗೆಡದೆ ಜಡಿದು ಬೊಬ್ಬಿಟ್ಟರು. ಹೀಗೆ ಆ ಸಮರಧುರಂಧರರಬ್ಬರ ಪಡೆಗಳ ಅಗ್ಗಳಿಕೆಯಿಂದ ಆ ಹುಯ್ಲು ಭೀಕರವಾಯಿತು. ವಿಕ್ರಮನು ಚಂಡಕಿರಣನ ತೇಜಕ್ಕಿಂತಲೂ ಉಗ್ರವಾದ ಪರಾಕ್ರಮದಿಂದ ಪರಸೈನ್ಯವನ್ನು ಪೆರಗಿಕ್ಕಿ ಎಡೆಗೊಡದಟ್ಟಿಕೊಂದನು. ಈ ಅರಾತಿಸಂಹಾರಲಯಾಗ್ನಿಯನ್ನು ಸೋಮೇಶ್ವರನಂತಹ ಪ್ರತಾಪಸಮುದ್ರನಿಂದಲೂ ನಂದಿಸುವುದಾಗಲಿಲ್ಲ. ಸೋಮೇಶ್ವರನ ಅಧರ್ಮಕ್ಕೆ ಮುನಿದು ಯಮಧರ್ಮನೇ ದಂಡವನ್ನೆತ್ತಿ ಬಂದನೋ ಎಂಬಂತೆ ವಿಕ್ರಮಾದಿತ್ಯನ ಆಹವಪ್ರೌಢಿಯು ಮೆರೆಯಿತು. ಸೋಮೇಶ್ವರನ ಕೈತವಕವು ಕುಂದಿತು. ವಿಕ್ರಮನು ಆತನನ್ನು ಸೆರೆಹಿಡಿದನು. ಹೀಗೆ ೨೫–೩೦ ವರುಷ ನಿರಂತರವಾಗಿ ಕಾರವನ್ನು

ತೋರಿಸಿ, ಮರಿಪರ ಸ್ತ್ರೀಗಳನ್ನು ಅಪಹರಿಸಿ, ಮನ್ನೆಯರ ಉರ್ಕನ್ನು ಕಳಚಿ, ಅನ್ಯ ಮಂಡಲೀಕರ ಪದವನ್ನು ಹಿಂಗಿಸಿ ತ್ರಿಭುವನ ಮಲ್ಲನಾಗಿ ಕಲ್ಯಾಣದಲ್ಲಿ ಚಾಳುಕ್ಯ ಸಿಂಹಾಸನವನ್ನೇರಿದನು (೧೦೭೬). ತಮ್ಮನಾದ ಜಯಸಿಂಹನನ್ನು ಬನವಾಸಿ ಪ್ರಾಂತಕ್ಕೆ ನಿಯಮಿಸಿದನು.

ಅಷ್ಟರಲ್ಲಿ ವಿಕ್ರಮಾದಿತ್ಯನ ಕೀರ್ತಿಯು ದಿಗ್ದೇಶಗಳನ್ನು ವ್ಯಾಪಿಸಿತ್ತು. ಆತನನ್ನು ಎದುರಿಸಬಲ್ಲವರು ಯಾರೂ ಉಳಿಯಲಿಲ್ಲ. ಚಾಳುಕ್ಯ ಸಾಮ್ರಾಜ್ಯದೊಳಗಿನ ಮಾಂಡಲಿಕರೆಲ್ಲರೂ ಆತನ ಪದವನ್ನು ಆನಂದದಿಂದ ಮನ್ನಿಸಿದರು. ದೇವಗಿರಿಯ ಯಾದವರೂ, ಹಾನಗಲ್ಲು ಗೋವೆ ಹಲಸಿಗೆಗಳ ಕದಂಬರೂ, ಸವದತ್ತಿ ಬೆಳಗಾವಿಗಳ ರಟ್ಟರೂ, ಉತ್ತರ ದಕ್ಷಿಣ ಕೊಂಕಣಗಳ ಶಿಲಾಹಾರರೂ, ಹೊಯ್ಸಳರೂ ಮುಂತಾದ ಸಾಮಂತ ರಾಜರೆಲ್ಲರೂ ವಿಕ್ರಮನನ್ನೇ ತಮ್ಮ ಚಕ್ರವರ್ತಿಯೆಂದು ಜಯಜಯಕಾರವನ್ನು ಮಾಡಿದರು. ವಿಕ್ರಮನು ಸಕಲ ವಿಬುಧಜನ ಸಂಸ್ತುತನಾದನು; ನಿಖಿಲ ಸಾಮಂತ ಪ್ರಣತನಾದನು. ಇಂತು ಅಖಂಡ ಕುಂತಳ ಭೂಚಕ್ರಕ್ಕೆ ಏಕಾಧಿಪತಿಯಾಗಿ ತನ್ನ ಪಟ್ಟಾಭಿಷೇಕೋತ್ಸವದ ಕುರುಹೆಂದು ತನ್ನ ಶಕವನ್ನಾರಂಭಿಸಿದನು. ಅಂದಿನಿಂದ ಶಾಸನಗಳಲ್ಲಿ ಶಕವರುಷವನ್ನು ಮಾಣಿಸಿ ವಿಕ್ರಮ ವರುಷವೇ ಪ್ರಚಲಿತವಾಗಿ ಬಳಸಿತು. ಆತನ ತರುವಾಯವೂ ಎಷ್ಟೋ ವರುಷ ಚಾಳುಕ್ಯ ವಿಕ್ರಮ ವರುಷವು ಚಲಾವಣೆಯಲ್ಲಿದ್ದು ಮುಂದಿನ ಚಾಳುಕ್ಯ ದೊರೆಗಳು ದುರ್ಬಲರಾದುದರಿಂದ ನಿಂತುಹೋಯಿತು.

ವಿಕ್ರಮಾದಿತ್ಯದೇವನ ಆಯುಷ್ಯದ ವಿಶೇಷವೇನೆಂದರೆ, ಆತನು ಹೂಡಿದ ಕದನ ಕಲ್ಲೋಲವೂ ತೋರಿಸಿದ ಅಸಾಧ್ಯ ಶೌರ್ಯದ ಸಾಹಸವೂ ಪಟ್ಟ ದುರ್ಧರ ಸಂಕಟಗಳೂ ಸಿಂಹಾಸನಾರೋಹಣದೊಡನೆಯೇ ಕೊನೆಗಂಡವು. ಮುಂದೆ ಆತನು ೫೦ ವರುಷ ಅವ್ಯಾಹತವಾಗಿ ರಾಜ್ಯವಾಳಿದರೂ ಯುದ್ಧ ಸಂದರ್ಭಗಳೇ ವಿಶೇಷವಾಗಿ ಒದಗಲಿಲ್ಲ. ಚೋಳ ರಾಜ್ಯದಲ್ಲೊಮ್ಮೆ ಪ್ರವೇಶಿಸುವ ಪ್ರಸಂಗ ಮಾತ್ರ ಬಂದಿತ್ತು. ಹೀಗೆ ಆತನು ನಿಷ್ಕಂಟಕವಾಗಿ ಶಾಂತತೆಯಿಂದ ರಾಜ್ಯಭಾರವನ್ನು ಕೈಕೊಂಡಿದ್ದನು. ಅನ್ಯ ಸಾಮ್ರಾಜ್ಯದ ಮಹಾರಾಜರ ಒಡ್ಡೋಲಗದಲ್ಲಿಯೂ ಈತನ ಯಶೋಗಾನದ ಡಂಗುರ ನಡೆಯುತ್ತಿತ್ತು. ಪರರಾಜ್ಯಗಳ ಅವನೀಶರು ದುರ್ಘಟ ಪ್ರಸಂಗಗಳಲ್ಲಿ ವಿಕ್ರಮನ ಸಹಾಯವನ್ನು ಮೇಲಿಂದ ಮೇಲೆ ಕೇಳುತ್ತಿದ್ದರು. ಉತ್ತರದ ಮೇರೆಯಲ್ಲಿ ನರ್ಮದೆಯೂ ದಕ್ಷಿಣದ ಮೇರೆಯಲ್ಲಿ ತುಂಗಭದ್ರೆಯೂ ಚಾಳುಕ್ಯ ರಾಜ್ಯಕ್ಕೆ ಅಗಳಿಕೆಯಾಗಿದ್ದವು. ಮಾಳವ ಚೇದಿ ಪ್ರಾಂತಗಳಲ್ಲಿ ಆಗ ರಾಜ್ಯಕ್ರಾಂತಿಯು ನಡೆಯುತ್ತಿತ್ತು. ಧಾರಾ ಮತ್ತು ಡಾಹಲೆಯ ಅರಸರು ವಿಕ್ರಮಾದಿತ್ಯನ ಸಹಾಯವನ್ನು ಬೇಡಿದರು. ಈತನು ಬಲ್ಬಂಟರಾದ ದಂಡನಾಯಕರೊಂದಿಗೆ ನರ್ಮದೆಯನ್ನು ದಾಟಿಹೋದನು. ಇವನಿಂದ ಅವರಿಬ್ಬರಿಗೂ ಒಳ್ಳೆಯ ಸಹಾಯವಾಯಿತು. ಅಲ್ಲಿ ಕ್ರಾಂತಿಗಳನ್ನು ಹಿಂಗಿಸಿ ಆ ರಾಜ್ಯಗಳನ್ನು ವಿಕ್ರಮನು

ಸುರಕ್ಷಿತವಾಗಿರಿಸಿದನು. ಮುಂದೆ ಬಂಗಾಲ ಆಸಾಮ ಪ್ರಾಂತಗಳ ಪೃಥ್ವೀಶ್ವರರು ಈತನ ಬೆಂಬಲವನ್ನಪೇಕ್ಷಿಸಿದರು. ಅಲ್ಲಿಯವರೆಗೂ ಹೋಗಿ ಕರ್ಣಾಟಕದ ವಿಕ್ರಮ ವೈಭವವನ್ನೂ ಶ್ರೀವೈಭವವನ್ನೂ ಪ್ರಕಾಶಪಡಿಸಿ ವಿಕ್ರಮನು ಜನ್ಮಭೂಮಿಗೆ ಬಂದನು.

ನಡುವೆ ಹೊಯ್ಸಳರು ಮಾತ್ರ ಸಾಮ್ರಾಜ್ಯದ ನಿಲುವುಗೆಡಿಸಬೇಕೆಂದು ಹವಣಿಸಿದರು. ಹೊಯ್ಸಳರಲ್ಲಿ ವಿಷ್ಣುವರ್ಧನನು ದಿನದಿನಕ್ಕೆ ಪ್ರಬಲನಾಗುತ್ತ ನಡೆದಿದ್ದನು. ಆತನು ಚೋಳರನ್ನೋಡಿಸಿ ಗಂಗವಾಡಿಯನ್ನು ತನ್ನ ನಾಡಿಗೆ ಕೂಡಿಸಿಕೊಂಡಿದ್ದನು. ಆದರೆ ವಿಕ್ರಮಾದಿತ್ಯನು ತನ್ನ ಚಕ್ರವರ್ತಿಯೆಂದು ಆತನು ಒಪ್ಪಿಕೊಂಡನು. ವಿಕ್ರಮಾಂಕನಿಗೆ ಅಚ್ಚುಗಿ ಮುಂತಾದ ರಣನಾಯಕರುಗಳ ಸಹಾಯವಿದ್ದುದರಿಂದಲೂ, ಆತನ ಶೌರ್ಯಕ್ಕೆ ಶತ್ರುಗಳು ಗಡಗಡನೆ ನಡುಗುತ್ತಿದ್ದುದರಿಂದಲೂ ವಿಕ್ರಮಾಂಕನು ೫೦-೫೫ ವರ್ಷಗಳ ಸಾಮ್ರಾಟನಾಗಿದ್ದನು. ಆತನ ಮೇಲೆ ತಿರುಗಿಬೀಳುವದಕ್ಕೆ ಯಾರೂ ಧೈರ್ಯಪಡಲಿಲ್ಲ. ಇದಲ್ಲದೆ ಆತನು ಯಾತಗಿರಿ ವಿಜಾಪುರ ವಿಕ್ರಮಪುರ ಬಳ್ಳಿಗಾಂವಿ ಮುಂತಾದ ಸ್ಥಳಗಳನ್ನು ಉಪರಾಜಧಾನಿಗಳನ್ನಾಗಿ ಮಾಡಿಕೊಂಡು, ಪ್ರಸಂಗ ಬಿದ್ದಾಗೆಲ್ಲ ಅಲ್ಲಿಂದ ರಾಜ್ಯಕಾರಭಾರವನ್ನು ನಡಿಸಿ, ರಾಜ್ಯದಲ್ಲಿ ಸದಾ ಶಾಂತತೆಯನ್ನು ಕಾಯ್ದುಕೊಂಡನು. ವಾರಾಶಿ ಪರ್ಯಂತವಾದ ಧರೆಯೆಲ್ಲವನ್ನು ಏಕಛತ್ರದಿಂದ ಆಳಿ, ದುರ್ದಾಂತರಾದ ಅವನೀಪಾಳರ ಬೇರನ್ನು ಕಿತ್ತು, ಗಲಗಲನೆ ನೀರೊಳಗೆ ಒಗೆದು ಆ ವಿಕ್ರಮಾದಿತ್ಯದೇವನು ತನ್ನ ವಿಕ್ರಾಂತದ ಬಲ್ಪಿನಿಂದ ಮೆರೆದನು.

(ಕರ್ಣಾಟಕ ವೀರರತ್ನಗಳು)

—ಆಲೂರ ವೆಂಕಟರಾಯ

೧೭. ಜಕ್ಕಣ್ಣನ ಜಾತ್ರೆ

‘ಅಗತ್ಯವಿದ್ದರೆ ಮಾತ್ರ ಪ್ರಯಾಣ ಬೆಳೆಸಿರಿ’ ಎನ್ನುವ ರೈಲ್ವೆ ಕಂಪನಿಗೆ ನಮ್ಮಂತಹ ಸಾಹಿತಿಗಳ ಅಸ್ತಿತ್ವದ ಅರಿಕೆ ಇದೆಯೋ ಇಲ್ಲವೋ! ಯಾಕೆಂದರೆ, ನಮ್ಮದು ಸ್ಫೂರ್ತಿಯ ಜಾತಿ; ಸ್ಫೂರ್ತಿ ಬಂದಿತೆಂದರೆ ಹೊರಟೆವು, ಅಗತ್ಯದ ಕಲ್ಪನೆ ಇಲ್ಲ, ಆರ್ಡಿನನ್ಸದ ಹೆದರಿಕೆ ಇಲ್ಲ; ಆ ಕೆಲಸ ಜನಗಳೇ ಬೇರೆ. ಇದಲ್ಲದೆ ಬೇಸಗೆಯಲ್ಲಿಯೆ ನಮಗೆ ಕಾರಣಾಂತರಗಳಾಗಿ— ರಜೆ — ಸಿಕ್ಕುವವು. ಪ್ರವಾಸದ

ಪ್ರಭಾವಕ್ಕೆ [illegible] ಎಂದಿನಂತೆ ಬರೆಯುವುದು ಕಷ್ಟವಲ್ಲ; ಅಷ್ಟೇನು [illegible] ಮುಪ್ಪು ಕಾಲದ ಬರಗಾಲದಂತೆ, ಕೊಂಡು ಓದುವವರು [illegible] ಬರಗಾಲವು. ಹೀಗಾಗಿ ಈ ಸಲದ [illegible] ಸ್ಫೂರ್ತಿ ಬಂದಿತು ನಮಗೆ— 'ನಾವು ಮೂರು [illegible]' —; ಒಬ್ಬರು ಶ್ರೀರಂಗರು, ಇನ್ನಿಬ್ಬರು ರಂಗ [illegible]. ಅಂತೂ ಮೂವ್ವರು ಹೊರಟೆವು [illegible] ಎಂದು.

[illegible] ಮನಸ್ಸು ನನ್ನದು. ತಿಂಗಳಿಗೆ [illegible] ತಿಂಗ–ತಿಂಗಳು [illegible]. ಇದಲ್ಲದೆ [illegible] ಸ್ವಭಾವ ನನ್ನದು. [illegible], ದೂರದಿಂದರೆ ಈ ಮರುಳ [illegible] ಅನುಕೂಲವಾದ [illegible] ಉಪಾಯ [illegible]. ಹೀಗಾಗಿ ಇಂದಿಗೂ [illegible]; ದಾರಿಗನ ಮೇಲಿನ ಗಾಳಿಗಳ [illegible]. ನಾರಾಂತರವೇನೆಂದರೆ, ಒಳ್ಳೇ [illegible].

ಈ [illegible]. ಯಾಕೆನ್ನುವಿರಾ? [illegible] ವಾಗಿ [illegible] ಸಹಜವಾದ, ಸಾಟಿಗೆ [illegible]. ಪ್ರವಾಸದ ಸುಖವನ್ನು ಎಷ್ಟೋ ಸಲ ನಾನು [illegible] ಕಳೆದುಕೊಂಡಿದ್ದೇನೆ. ತೊಂದರೆ [illegible] ಕಟ್ಟಿಕೊಳ್ಳುವುದು— [illegible] ಎಂಬ ಶಬ್ದಕ್ಕೆ ಯಾವ ತತ್ತ್ವ- [illegible] ಸಂಕ್ಷಿಪ್ತವಾದ ವ್ಯಾಖ್ಯೆಯನ್ನು [illegible] ಬಟ್ಟೆಯವರೆಗೆ ಪ್ರತಿಯೊಂ- [illegible] ಭದ್ರವಾಗಿ ಕಟ್ಟುವುದು; [illegible] ಕೈಹಾಕಿದರೆ— ಉಶ್! [illegible]! [illegible] ಬಿಟ್ಟಿದೆ! [illegible] ಪ್ರವರ್ತನವು! [illegible] ಸಾಮಾನುಗಳನ್ನು ಕಟ್ಟಿಕೊಂಡು [illegible]: ಅವಸರವಸರವಾಗಿ ಮತ್ತೊಂದನ್ನು [illegible], ಅದನ್ನು [illegible] ಬಂದಿ

ರುವುದು, ಆ ಮೇಲೆ ' ಪಂಕ್‌ಚುಯಾಲಿಟಿ 'ಯ ಬಗ್ಗೆ ಟಾಂಗಾದ ಕೃಷ್ಣ—ಸಾಮಾನಿನ ಅರ್ಜುನ ಇವರ ಹದಿನೆಂಟು ಅಧ್ಯಾಯ ಪ್ರವಚನ—ಘೂ ! ಅಂತೂ ಗಾಡಿ ಸಿಕ್ಕರೆ ಸಾಕು—ಎಂದು ಎರಡೂ ಟಾಂಗಾಗಳಲ್ಲಿ ಮೆರವಣಿಗೆ ! ಕೊನೆಗೆ ಸ್ಟೇಶನ್ನಿಗೆ ಹೋದ ಮೇಲೆ ಉಸಿರು ಸಾಲದೆ ' ಧಾರವಾಡದ ಟಿಕೆಟ್ಟು ಕೊಡಿರಿ ' ಎಂದು ಕೇಳುವುದು ! ಇದೆಲ್ಲ ತೊಂದರೆಯನ್ನು ನಾನೆಂದಿಗೂ ಸಹಿಸಲಾರೆ. ಆದರೆ ನಾನು ಸಹಿಸುವ ಅಗತ್ಯವಾದರೂ ಎಲ್ಲಿದೆ ? ಆಕೃತಿಯಿಂದರೆ ಅನ್ನವನ್ನು ಹೆದರಿಸು ವಂತಹ ರಂಗರು ; ಮಾತಿನ ಪ್ರವಾಹದಿಂದಲೆ ವಾದದಲ್ಲಿ ಗೆಲ್ಲುವ ಮಂಗರು ; ಇವರ ಜೊತೆ !

ವಾಚಕರಿಗಾಗಿ ಇನ್ನೂ ಒಂದು ಮಾತನ್ನು ಮೊದಲು ಸ್ಪಷ್ಟ ಮಾಡುವೆ ; ಚಿಕ್ಕಂದಿನಿಂದಲೂ ಕಲ್ಲಿಗೂ ನನಗೂ ಯಾವ ತರದ ಸ್ನೇಹಸಂಬಂಧವೂ ಬೆಳೆದಿಲ್ಲ. ಇಂದಿಗೂ ಕಲ್ಲಿನಲ್ಲಿ ಬರೆದಿದ್ದಾಗಲಿ ಕೊರೆದದ್ದಾಗಲಿ ನನಗೆ ವಿಶೇಷ ತಿಳಿಯುವುದೂ ಇಲ್ಲ. ಈ ದೃಷ್ಟಿಯಿಂದ ನಾನು ಸಾಮಾನ್ಯ ಜನತೆಯ ಪ್ರತಿನಿಧಿ ಎಂದು ಹೇಳ ಬಹುದು. ಅದಕ್ಕಾಗಿ ಶಿಲ್ಪಕಲೆಯ ತಜ್ಞತೆಯನ್ನು ವಾಚಕರು ನನ್ನ ಅನುಭವದಲ್ಲಿ ಕಾಣಲಿಕ್ಕಿಲ್ಲ ; ಮುಂಚಿತವಾಗಿಯೆ ಎಚ್ಚರ ಕೊಡುತ್ತೇನೆ. ಆಯಾ ಸ್ಥಳಗಳನ್ನು ನೋಡಬೇಕೆಂಬ ಸ್ಫೂರ್ತಿಗಾಗಿಯೆ ನಾನು ಈ ಇಬ್ಬರು ಗೆಳೆಯರೊಡನೆ ಹೊರಟಿದ್ದು.

ರೈಲು ಸಂಚಾರವು ನನ್ನ ಪ್ರೀತಿಯ ವಿಷಯ ಎಂಬುದು ಅನೇಕ ವಾಚಕರಿಗೆ ಗೊತ್ತಿರಲು ಸಾಕು. ರೈಲು ಸಂಚಾರವೆಂದರೆ ಅದೊಂದು ಪ್ರತಿಭೆ ; ಪ್ರತಿ ಸಲವೂ ನವನವೋನ್ಮೇಷಶಾಲಿನಿಯಾದುದು, ಎಂದರೆ ಹೊಸ ಹೊಸ ಅನುಭವವನ್ನು ತಂದು ಕೊಡುವುದು. ಈ ಸಲವೂ ಹಾಗೆಯೆ. ಮೊದಲನೆಯ ವಿಷಯವೆಂದರೆ ಪ್ರವಾಸಕ್ಕೆ ಹೊರಟವರು ನಾವು ಮೂವ್ವರಲ್ಲ, ನಾಲ್ವರು ಎಂಬುದು. ನಾಲ್ಕನೆಯವನಾರು ಎನ್ನುವಿರಾ ? " ಇಲ್ಲೇ ಕೂತಾರ್ರಿ . . . . ಈಗ ಸ್ಟೇಶನ್ ಬಂದ್ಮ್ಯಾಲೆ ಕೆಳಗಿಳಿ ದಾರ . . . . ಬರ್‍ತಾರ . . . . " ತಿಳಿಯಿತೇ ? ಅವನಿಗಾಗಿ ನಾವು ಸ್ಥಳ ಯಾವಾಗಲೂ ಕಾದಿಡುತ್ತಿದ್ದೆವು. ಕೊನೆಯ ವರೆಗೂ ಅವನು ಬಂದು ಆ ಸ್ಥಳವನ್ನು ಆಕ್ರಮಿಸದಿದ್ದುದು ಅವನ ತಪ್ಪು ; ನಿಲ್ಲಬೇಕಾದವರ ದುರ್ದೈವ. ನಿಲ್ಲುವವರೆಂದಾಕ್ಷಣ ಮತ್ತೊಂದು ಅನುಭವ—ಎರಡನೆಯದು—ಸ್ಮರಣೆಗೆ ಬರುವುದು. ಅಗತ್ಯವಿದ್ದಲ್ಲಿಯೆ ಪ್ರಯಾಣ ಬೆಳೆಯಿಸಬೇಕೆಂಬ ನಿಯಮವಿದ್ದಾಗ, ನಮ್ಮ ದೇಶದಲ್ಲಿ ಎಷ್ಟೊಂದು ಜನ ಪ್ರಯಾಣದ ಅಗತ್ಯವುಳ್ಳವರಿದ್ದಾರೆ ! ಆ ಅಗತ್ಯವಾದರೂ ಎಂತಹದು ! ಟಿಕೆಟ್ಟನ್ನು ಕೊಳ್ಳಲು ಕೂಡ ಪುರಸೊತ್ತಿಲ್ಲ ! ಇಂತಹ ನೂರಾರು ಜನರನ್ನು ಕಂಡಾಗ, ನಿಧಾನವಾಗಿ ಟಿಕೆಟ್ಟನ್ನು ಕೊಳ್ಳುವ ಅವಕಾಶವಿದ್ದ ನಮಗಾಗಿ ನಾಚಿಕೆಯಾಯಿತು.

' ನಾಲ್ಕನೆಯವ 'ನ ಸಲುವಾಗಿ ದಾರಿ ಕಾಯ್ದು ಕಾಯ್ದು ಬೇಸತ್ತಂತೆ ಕೊನೆ

ಗೊಮ್ಮಟ್ರೈನು ನಿಧಾನವಾಗಿ ಹುಬ್ಬಳ್ಳಿಯಿಂದ ಹೊರಬಿದ್ದಿತು. ಎಂತಹ ಪ್ರವಾಸ! ಹುಟ್ಟಿದವನು ಸಾಯಲೇಬೇಕು ಎಂಬ ಗಾದೆಯ ಮಾತಿನ ಬದಲಾಗಿ ಇದ್ದವನು ಪ್ರವಾಸ ಮಾಡಲೇಬೇಕು ಎಂಬುದು ರೂಢಿಯಾದಂತಿದೆ. ಸ್ಟೇಶನ್ ಬಂದಿತೆಂದರೆ ಗದ್ದಲ; ಇಳಿಯುವವರಿಲ್ಲ, ಹತ್ತುವವರು. ಇಳಿಯುವವರು ಇಲ್ಲವೇ ಇಲ್ಲ! ಅದೆಂತಹ ಹಿಂಡು! ತುಂಬಿ ತುಂಬಿದಂತೆ ಇನ್ನೂ ತುಂಬುವುದು! ಮೊದಲು ಬಂದವರು ಕೂಡುವುದು, ತರುವಾಯ ಬಂದವರು ನಿಲ್ಲುವುದು, ಆಮೇಲೆ ಬಂದವರು ನಿಂತವರನ್ನು ಕೂಡುವರ ಮೇಲೆ ಕುಳ್ಳಿರಿಸುವುದು, ಮತ್ತೆ ಬಂದವರು ಈಗ ನಿಂತವರನ್ನು ಕೂಡಿಸುವುದು, ಅನಂತರ ಬಂದವರು ನಿಂತವರ ಮೇಲೆ ನಿಲ್ಲುವುದು, ಇನ್ನೂ ಬರುವವರು ಅವರ ಮೇಲೆ ನಿಲ್ಲುವುದು, ಇಷ್ಟರಲ್ಲಿ ಮೊದಲು ಬಂದು ಕೆಳಗೆ ಕುಳಿತವರು ಉಸಿರುಬಿಡಲು ಸೊರಗಿ ಸವಿದು ಹೋಗುವುದು, ಆಮೇಲೆ ಮತ್ತೆ ಹೊಸತಾಗಿ ವ್ಯೂಹ! ನಿಜ, ನಿಜ. ಹುಟ್ಟಿದವರು ಸಾಯಲೇಬೇಕು ಎಂಬ ಮಾತು ನಿಜ; ಈ ನೋಟ ಅದಕ್ಕೆ ಸಾಕ್ಷಿ.

ಅಂತೂ ಬಂದಿತು ‘ಅಸ್ಕ’ (ಹಾಸನ); ಇದೀಗ ಮೈಸೂರು ಕರ್ನಾಟಕ: “ಆ ಮಹಾದೇವ ನೀಕ್ಷಿಸಲಿ” ಎಂದು ನಾವು ಅಭಿಮಾನದಿಂದ ಕನ್ನಡ ಗೀತವನ್ನು ಹಾಡಿದೆವು; ದೋಸೆಯ ಮಹಿಮೆ ಎಂದರೆ, ಅದನ್ನು ತಿಂದಾಕ್ಷಣ, “ಬಂತೇ— ಜೇಷ್ಟೋ!!!” ಎಂದು ಬಾಯಿ ತಾನಾಗಿಯೇ “ಗಿಜಗಾಯಿ” ಯಾಗುವುದು. ದೋಸೆ ತಿನ್ನುವವರೊಳಗಾಗಿ ನಮ್ಮ ಬಸ್ಸು ಊರೊಳಗೆ ಹೊರಟು ಹೋಗಿತ್ತು. ಬಸ್ಸಿನ ಹಿಂದೆ ನಾವು, ನಮ್ಮ ಹಿಂದೆ ಏಜೆಂಟ್, ಏಜೆಂಟನ ಹಿಂದೆ ಬಸ್ಸು—ಹೀಗೆ ಚಕ್ರಾಕಾರ ಓಡಾಟ ನಡೆಯಿತು. ನಮಗೆ ಅದರಿಂದ ಯಾವ ಶ್ರಮವೂ ಇರಲಿಲ್ಲ. ಯಾಕೆಂದರೆ, ‘ಅಸ್ಕ’ದ ಟ್ರಾವೆಲರ್ಸ್ ಬಂಗಲೆಯಲ್ಲಿ—ಒಬ್ಬ ಪ್ರವಾಸಿಗ ಅಧಿಕಾರಿಯು ಎಷ್ಟೇ ನಿರಾಕರಿಸಿದರೂ—ಅಲ್ಲಿಯ ನೌಕರರ ನಾಲ್ಕಾಣೆಯ ಸೌಜನ್ಯಕ್ಕಾಗಿ ಸ್ನಾನವನ್ನು ಮಾಡಿದೆವು. ಅಂತೂ ಕೊನೆಗೆ ಬಸ್ಸಿನ ಗುಹೆಯಲ್ಲಿ ಸಮಾಧಿಸ್ಥರಾಗಿ ಶ್ರವಣಬೆಳಗೊಳಕ್ಕೆ ಹೊರಟೆವು. ದಾರಿಯುದ್ದಕ್ಕೂ ನನಗೆ ಗೊಮ್ಮಟೇಶ್ವರನ ಮೂರ್ತಿಯೇ ಕಣ್ಣೆದುರು ಕಟ್ಟಿತ್ತು. ಆಶ್ಚರ್ಯದ ಮಾತೆಂದರೆ ಆ ಮೂರ್ತಿಗೆ ಕಿರೀಟ, ಕುಂಡಲ, ವಸ್ತ್ರ! ನೋಡುವತ್ತೆಲ್ಲ ಅದೇ ಮೂರ್ತಿ ಕಂಡಿತು ನನಗೆ! “ಛೀ ಛೀ, ಮೂರ್ಖಾ, ಇಷ್ಟೊಂದು ದೇವಲಂಡತನದಿಂದ ಬರೆದರೂ ನಿನ್ನ ಹೃದಯಾಂತರಂಗದಲ್ಲಿ ಭಕ್ತಿಯ ರೂಪ ಎಂತಹದಿದೆ?” ಎಂದುಕೊಂಡೆ.... ಬಂದಿತು ಶ್ರವಣಬೆಳ್ಗೊಳ. ಎಂಥೆಂಥ ಆಶ್ಚರ್ಯ......ನನ್ನ ಗೊಮ್ಮಟೇಶ್ವರ ಮೂರ್ತಿ ಸರಿಯಾಗಿ......ಎತ್ತರ ಬದಲಾಯಿತು. ದಾರಿಯುದ್ದಕ್ಕೂ ಬಸ್ಸಿಗೆ ಜೋತು ಬಿದ್ದ ಪ್ರವಾಸಿಗಳ ಬಂದು ಹೊರಟಿತು, ನನ್ನ ಭಕ್ತಿಮದ ಇಳಿಯಿತು. ಮಧ್ಯಾಹ್ನದಾಗ ಗುಡ್ಡ ‘ಪಾದರಕ್ಷೆಗಳನ್ನು ಕೆಳಗಿಟ್ಟು’ ಬೆಟ್ಟವನ್ನು ಹತ್ತುವುದು! ಪಾಪಗಳನ್ನು ಕೆಳಗಿಟ್ಟೇ ಹೋಗಿದ್ದರೆ ಸಾಕು ಎಂದು ಆಮೇಲೆ ಎನ್ನಿಸಿತು ನಮಗೆ.

ಅಥವಾ—ಹೋಗಲಿ....ಭಾವಿಕರು ಅನ್ಯಥಾ ಭಾವಿಸದಿದ್ದರೆ ಒಂದು ಮಾತನ್ನು ಹೇಳುವೆ. ಆ ಬಿಸಿಲಿನಲ್ಲಿ ಕಾಲು ಸುಟ್ಟುಕೊಂಡು ಮೇಲೆ ಹತ್ತಿದರೆ, ತಿರುಗಿ ಬರಲು ಕಾಲಿಲ್ಲದಂತಾಗಿ, ನಾವೂ ಅಲ್ಲಿಯೆ ಮೂರ್ತಿಯಾಗಿ ನಿಲ್ಲಬಹುದೆ? ಎಂದಿನ ಕಾಲ ದಲ್ಲಿ ಇಂತಹ ಘಟನೆಯೆ ಆಗಿರಬಹುದೆ?—ಎನ್ನಿಸಿತು. [illegible] ಕಣ್ಣ ಮರು ೫೦ ಅಡಿ ಎತ್ತರ ಮೂರ್ತಿಯನ್ನು ಕಂಡಾಕ್ಷಣ, ಇದನ್ನು ಕಟೆದು ನಿಲ್ಲಿ ಸಿದವರಿಗೆ ಯಾವ ಹುಚ್ಚು ಹಿಡಿದಿತ್ತು ಎನಿಸಿದಾಗ್ಯೂ ನನ್ನ [illegible] ಗಳು ಕಣ್ಣಲ್ಲಿ ಸೇರಿ, ಕಣ್ಣು ಹೃದಯದಲ್ಲಿ ನೆಟ್ಟು, ಬಿಸಿಲು [illegible] ಎಚ್ಚರವೆ ಉಳಿಯಲಿಲ್ಲ. ತಾನು ಎಂತಹ ಕ್ಷೇತ್ರಕ್ಕೆ [illegible] ಕಂಡುಕೊಳ್ಳಲಿಕ್ಕಾದರೂ ಮಾನವನು ಈ ಬೆಟ್ಟವನ್ನು [illegible] ಸೌಂದರ್ಯವನ್ನು ನೋಡಬೇಕು; ಮತ್ತೊಮ್ಮೆ [illegible] ಬೇಕು. 'ಸೃಷ್ಟಿಸೌಂದರ್ಯಕ್ಕಾಗಿ ಸಮಾಧಿಸ್ಥನಾದೆ [illegible] ಸ್ವಾರ್ಥಿಯಾಗಬಾರದು' ಎಂದು ತುಟಿ ಬಿಡದ ಬಾಯಿಂದ [illegible] ಹೇಳುವುದನ್ನು ಕೇಳಿಕೊಳ್ಳಬೇಕು. .... ಆದರೆ [illegible] ಮೂರ್ತಿಯ ಬೆನ್ನಿನಾಸರದಲ್ಲಿ ಉಪಾಹಾರದ ಗಂಟನ್ನು ಬಿಚ್ಚಿದೆವು; [illegible] ಸಾಹೇಬರಿಗಾಗಿ ಕೈಮುಗಿದು, ಬೆನ್ನು ಬಾಗಿ ಬಾಯ್ಬಿಡುವ [illegible] ನಕ್ಕೆವು; ಕಾದ ಕಬ್ಬಿಣದ ಪಾವಟಿಗೆಗಳ ಮೇಲೆ ಬಗ್ಗಿ [illegible] ಳಂತೆ ಕುಣಿಯುತ್ತ ಕೆಳಗಿಳಿದೆವು; ಕಾಫೀ ಕುಡಿದು, ಸಾಹೇಬರಿಗಾಗಿ [illegible] ಸೀಟನ್ನು ಬಿಟ್ಟುಕೊಟ್ಟು ಪ್ರವಾಸಕ್ಕೆ ಅಣಿಯಾದೆವು. ಹಾಸನ [illegible] ದಾರಿಯಲ್ಲಿ ಚೆನ್ನರಾಯ ಪಟ್ಟಣವಿದೆ. ಅಲ್ಲಿ ಎಲ್ಲಿದ್ದೇವೆ [illegible] ಎಂದು ಒಬ್ಬನನ್ನು ಕೇಳಿದರೆ 'ಸ್ವಾಮೀ, ಇದು ಚೆನ್ನರಾಯನ ಪಟ್ಟಣ [illegible] ಚಾಂಡಾಲರಾಯರ ಪಟ್ಟಣ' ಎಂದ! [illegible] ಗೋಡೆಯ ಮೇಲಿದ್ದುದನ್ನು ಕಂಡು ಸುಮ್ಮನಾದೆವು.

ಹಾಸನದಿಂದ ಬೇಲೂರು ಇಪ್ಪತ್ತರಡು ಮೈಲು. [illegible] ೪॥ ಗಂಟೆಯ ಬಸ್ಸಿನಲ್ಲಿ ಹೊರಟೆವು. 'ಸೇವಂಟಿಸೆವೆನ್' [illegible] ಸುವೆ ಎಂದರು ಡ್ರೈವರ ಸಾಹೇಬರು. ಮಿಲಿಟರಿಯಲ್ಲಿ [illegible] ರುವರಂತೆ ಅವರು. ಆದರೆ ಐವತ್ತು ನಿಮಿಷಗಳಿಗೊಮ್ಮೆ ನೀರು, [illegible] ನೀರು ಮೊದಲಾದವುಗಳ ಉಪಚಾರ ಬೇಕು ಈ ಬಸ್ಸಿಗೆ. ಅದಕ್ಕಾಗಿ [illegible] ೬ ಗಂಟೆಗೆ ತಲುಪಿದೆವು. ಟ್ರಾವೆಲರ್ಸ ಬಂಗಲೆಯಲ್ಲಿ ಸ್ನಾನಮಾಡಿಕೊಂಡು [illegible] ಕೇಶವನ ದರ್ಶನಕ್ಕೆ ಹೊರಟೆವು. ಅಲ್ಲಲ್ಲಿ ಬಾಗಿಲುಗಳು ಮುಚ್ಚಿದ್ದರಿಂದ [illegible] ಗೋಡೆಯ ಬೊಂಬೆಗಳನ್ನು ನೋಡಿದೆವು. ಸಾಕಷ್ಟು ಕತ್ತಲಾಗಿದ್ದರಿಂದ, [illegible] ದಣಿದಿದ್ದರಿಂದ ಶಿಲ್ಪಕಲೆ ಸುಂದರವೆಂದು ಕೂಡಲೆ ಒಪ್ಪಿಕೊಂಡು ಹೊರಟೆವು. ಆಗ ಒಂದು ಬಾಗಿಲ ತೆರೆದಿತ್ತು; ಒಳಗೆ ಹೋಗಿ ತಂಪಾದ ದುಂಡುಗಲ್ಲನ್ನು [illegible]

[illegible] ನೋಡುತ್ತ ಕುಳಿತೆವು. ಅಷ್ಟರಲ್ಲಿಯೇ 'ಪೂಜೆ ನಡೆದಿದೆ, [illegible]' ಎಂಬ ಗುಡುಗು ಕೇಳಿಸಿತು......ಅಂತೂ ಹೆಚ್ಚು ಶ್ರಮವಿಲ್ಲದೆ [illegible] ಮಲಗಿದೆವು.

[illegible] ಸಾಲದ ಕಷ್ಟ. ಯಾಕೆಂದರೆ, ಗುಡಿಯಿಂದ ಬಂಗಲೆಗೆ [illegible] ಕಣ್ಣಿಗೂ ನಿದ್ದೆ ಹತ್ತಿತು. (ಕಾಲ್ಗಳಿಗೆ ಈ [illegible].) ಗುಡಿಗೆ ಹೋಗುವ ಮುಂಚೆ ಬಂಗಲೆಯ [illegible] ಊಟವನ್ನು ಒದಗಿಸಿ ತರಲು ಹೇಳಿಕೊಂಡಿದ್ದೆವು. [illegible] ರಾತ್ರಿ ೧೦ ಗಂಟೆಗೆ ಊಟ ತಂದಿಟ್ಟು ಕೂಗಿದಾಗ [illegible] ಏಳಗೊಡಲಿಲ್ಲವು! ಇದೆಂತಹ ನಿದ್ದೆ ಎಂದು ನಾವ್ರೆ [illegible] ಬೆಳಗಾಳಿಗೆ ಗಿಡ ಬಿದ್ದು ವಿದ್ಯುತ್ಪ್ರವಾಹಕ್ಕೆ ತಡೆಯಾಯಿತು, [illegible] ಎಂದು ಬಟ್ಲರ್‌ಸಾಹೇಬರು ನಮ್ಮ ಕಣ್ತೆರೆದರು. [illegible] ಬೆಳಕು ಮತ್ತೆ ಬಂದಿತು; ಆ ಬೆಳಕಿನಲ್ಲಿ ನಾವು [illegible] ನೋಡಿದೆವು ತಟ್ಟನೆ ಕಣ್ಮುಚ್ಚಿದೆವು. ಚೆನ್ನ ಕೇಶವನ [illegible] ಅಂದಿನ ಆಹಾರವನ್ನು ವಕ್ಕಿಸಿಕೊಂಡು ನಾವು [illegible]?

[illegible] ಕಲ್ಲಿನ ಮೇಲೆ ಹಳೆಬೀಡಿಗೆ ಹೊರಟೆವು. ಹನ್ನೆರಡು [illegible]... [illegible] ಸಮಯದಲ್ಲಿ ಹಳೆಬೀಡಿನ ಪ್ರವೇಶ ದ್ವಾರದಲ್ಲಿ '[illegible] ಕೋಠಿ' ಯನ್ನು ಕಂಡೆವು. ಮುಂಚಿನ ದಿವಸದ [illegible], ವಿಶ್ರಾಂತಿ ಹೊಂದುವುದಾದರೆ ಈ '[illegible]' [illegible] ನಿಶ್ಚಯಿಸಿ, ಒಳಹೊಕ್ಕು, ಜನರನ್ನು ಮಾತನಾಡಿಸಿ [illegible]. '[illegible] ಬೇಕೆ, ಸ್ವಾಮೀ?' ಎಂದ ಒಬ್ಬ ಪರಿಜನ (ಇವನಿಗೆ [illegible] ಎಂದು ಹೆಸರು). ತಮ್ಮಲ್ಲಿ ಯಾವ [illegible]. ಅವಕಾಶವೂ ಮಾನವನೊಬ್ಬನಿಗೆ ಇಷ್ಟು ಸೌಜನ್ಯದಿಂದ ನಡೆದು [illegible]! [illegible] ನಾವು ತೃಪ್ತಿಹೊಂದಿ (ಆ ನೀರು ಹೊಲಸು ಕೆರೆಯದು, [illegible] ಶೋಧಿಸುವ ಕೆಲಸ ಇನ್ನೂ ಮುಗಿದಿಲ್ಲವಂತೆ!), ಅವನ [illegible] ದೇವಾಲಯಗಳಿಗೆ ಹೊರಟೆವು. ಮೂರು ಸಾವಿರ [illegible] ಬಸದಿ. ಬಸದಿಯ ಬಾಗಿಲು ಭದ್ರ....ಅರ್ಚಕರು ಎಲ್ಲಿಯೋ [illegible]! ಅವರನ್ನು ಕರೆಕಳುಹಿಸಿದೆವು.... ಇನ್ನೊಂದು ನೋಡಬೇಕೆಂದೆವು. [illegible] ಆಸೆಯನ್ನು ಅರ್ಚಕನಲ್ಲಿ ಹುಟ್ಟಿಸಿದೆವು. ಅವನು ನಮ್ಮನ್ನು [illegible]. ರಾಮಾಯಣ, ಮಹಾಭಾರತ, ದಶಾವತಾರ— ಮೊದಲಾದ [illegible] ಬೊಂಬೆಗಳನ್ನು ತೋರಿಸಿದ; ೧೦ ಅಡಿ ಎತ್ತರ ನಂದಿಯ ಮೇಲೆ [illegible]; ಗುಡಿಗೋಣಗು-ಮಂಗಳ ಮುಗಿಯಿತು. ಇಲ್ಲಿಯೂ

ಒಂದೇ ವಿಚಾರ ನಮಗೆ : ಕಲ್ಲಿಗೂ ಜೀವಕಳೆಯನ್ನು ತುಂಬಿದ ಈ ಕಲೆಗೆ ಸ್ಫೂರ್ತಿ ಯಾವುದು ? 'ಕೊರೆದವನು ಕೂಲಿಯವನಲ್ಲ, ಕಲಾವಿದನು' ಎಂಬುದು ಪ್ರತಿಯೊಂದು ಬೊಂಬೆಯ ಕಣ್ಣು ಮೂಗುಗಳನ್ನು ಕಂಡಾಕ್ಷಣ ಸ್ಪಷ್ಟವಾಗುವುದು. ಕೇವಲ ಭಕ್ತಿಯ ಕೆಲಸವಿದಲ್ಲ ಶುದ್ಧ ಕಲಾವೃಷ್ಟಿಯು ಇವರಲ್ಲಿದೆ. ಇಲ್ಲವಾದರೆ ಬಸದಿಯ ಕಂಬಗಳಲ್ಲಿ ಪ್ರತಿಬಿಂಬದ ವೈಚಿತ್ರ್ಯಕ್ಕಾಗಿ ಯತ್ನಿಸುವುದೇಕೆ ? ಇದಲ್ಲದೆ ನೃತ್ಯ ಮತ್ತು ವಾದನ ಸಾಮಗ್ರಿಗಳ ಪ್ರದರ್ಶನ ಸೋಪಾನದಲ್ಲಿಯೂ ಇದೆ. ಇವರು ಸುಖಜೀವಿಗಳಿದ್ದರೆ ? ಅಗತ್ಯವಿಲ್ಲವಾಗೂ ಈ 'ಹಸ್ತಕೌಶಲ' ತೋರಿಸಿದರೆಂದೇ ಅಂದಿನ ಸಂಸ್ಕೃತಿ ಇಷ್ಟು ಚೈತನ್ಯಮಯವಾಗಿರಬಹುದೇ ?....ಎಳನೀರನ್ನು ಕುಡಿದಾಗ, 'ಆಮ್ವಡಿ'ಯನ್ನು ತಿನ್ನುವಾಗ, ಇಂತಹ ವಿಚಾರಗಳಿಗೆ ನಮಗೆ ಸಾಕಷ್ಟು ಅವಕಾಶ ದೊರೆಯಿತು. ನಮ್ಮ ದುಃಖವೆಂದರೆ ಒಂದೇ, ಊಟದ ವೇಳೆಯಲ್ಲಿ ಯಾವ ಅರ್ಚಕನೂ ಬಾಗಿಲಿಗೆ ಬೀಗ ಹಾಕಿ ಹೊರಟು ಹೋಗುತ್ತಾನೆ. ಉಳಿದವರು, ತಿಳುಹಿಸುವವರು ಇಡೀ ಹಗಲು ಈ ಸ್ಥಳದಲ್ಲಿರುವಂತೆ ಮೈಸೂರು ಸರ್ಕಾರದವರು ವ್ಯವಸ್ಥೆ ಮಾಡಿದರೆ, ಯಾತ್ರಿಕರಿಗೆ ತುಂಬಾ ಅನುಕೂಲವಾದೀತು....

ಬೈಸಿಕಲ್ಲಿನ ಮೇಲೆ ಮಧ್ಯಾಹ್ನ ೨ ಗಂಟೆಯ ಉರಿಬಿಸಿಲಿನಲ್ಲಿ ಬೇಲೂರಿಗೆ ಮರಳಿದೆವು. ಆಗ ನಮ್ಮ ವಿಚಾರಗಳು ಬದಲಾಯಿಸತೊಡಗಿದುವು. 'ಹಳೆಬೀಡಲ್ಲ, ಹಾಳುಬೀಡು' ಎಂದು ಕಾಫಿ ಅಂಗಡಿಯಲ್ಲಿ ಒಬ್ಬ ನುಡಿದ. ಈ ಹಾಳುಬೀಡನ್ನು ಇಂತಹ ಬೈಸಿಕಲ್ಲಿಗೆ ಕಷ್ಟವಾದ ಸ್ಥಳದಲ್ಲಿ ಏಕೆ ನಿಲ್ಲಿಸಿದರು ?— ಎಂದು ನಮ್ಮ ದೂರು............... ಮತ್ತೆ ಅದೇ ಅನುಭವ............ದಾರಿಯಲ್ಲಿ ೧೦–೧೨ ಮನೆಗಳ ಒಂದು ಹಳ್ಳಿ.........ಕುಡಿಯಲು ನೀರು ಕೊಡುವಿರಾ?— ಎಂದರೆ ಯಾರು ನೀರು ಬೇಡಿದ್ರೂ ಮಜ್ಜಿಗೆ ಕೊಡೋ ವಾಡಿಕೆ ಸ್ವಾಮಿ ಎಂದು ಗೌಡರು ತಳಸುಟ್ಟ ಪಾತ್ರೆಯಲ್ಲಿ ಬಿಳಿ ಮಜ್ಜಿಗೆಯನ್ನು ಕೊಟ್ಟರು. ಬೀದಿಯ ಮರದ ಕೆಳಗೆ ಅದನ್ನು ಕುಡಿದು, ಪಾತ್ರೆಯನ್ನು ಅವರಿಗೆ ಒಪ್ಪಿಸಿ, ತೇಕುತ್ತ ತೂಗುತ್ತ ನಾಲ್ಕು ಗಂಟೆಗೆ ಬೇಲೂರನ್ನು ತಲುಪಿದೆವು. ಊಟವನ್ನು ಮುಗಿಸಿಕೊಂಡವರೆ ದೇವಾಲಯಕ್ಕೆ ಹೋದೆವು. ಒಳಗಡೆಯ ಎಲ್ಲ ಬಾಗಿಲುಗಳು ಮುಚ್ಚಿದ್ದುವು. ಮತ್ತೆ ನಮ್ಮ ಬುದ್ಧಿವಂತಿಕೆಯಿಂದ ಹೊರಗೋಡೆಯ ಬೊಂಬೆಗಳನ್ನು ನೋಡುತ್ತ ಸುತ್ತಾಡಿದೆವು.

ಹಳೆಬೀಡಿನ ಮತ್ತು ಬೇಲೂರಿನ ಕೌಶಲದಲ್ಲಿ ಒಂದು ವ್ಯತ್ಯಾಸ ನಮಗೆ ಕಂಡಿತು. ಬೇಲೂರಿನ ದೇವಾಲಯದ ಬೊಂಬೆಗಳಲ್ಲಿ ನವರಸ ವಿಶೇಷ : ಮುಖವಿಕಾರ, ಭಾವಭಂಗಿ ಇವುಗಳನ್ನು ಸೂಕ್ಷ್ಮವಾಗಿ ಪ್ರದರ್ಶಿಸುವ ಕಲಾಕೌಶಲ್ಯವನ್ನು ಇಲ್ಲಿ ಸಾಕಷ್ಟಾಗಿ ಕಾಣಬಹುದು. ಇದಲ್ಲದೆ ಇಲ್ಲಿಯ ಕಲಾವಿದರಲ್ಲಿ ಕವಿತ್ವವೂ ಇದೆ. ಭಯರಸವನ್ನು ಪ್ರದರ್ಶಿಸುವಾಗ, ಯುವತಿಯ ಸೀರೆಯಲ್ಲಿ ಚೇಳನ್ನು ಕಂಡ ದೃಶ್ಯ ಅತ್ಯಂತ ಮಾರ್ಮಿಕವಾಗಿದೆ. ಬೇರೆಯ ಭಂಗಿಗಳೂ

ಬಹಳೇ ಸ್ಫೂರ್ತಿಯುತವಾಗಿವೆ. ಯುದ್ಧದ ಚಿತ್ರಗಳಲ್ಲಿ ತುರುಬು ಕಟ್ಟಿದ ಹೆಣ್ಮಕ್ಕಳು ಕುದುರೆಯ ಸವಾರಿಯನ್ನೇರಿದ್ದಾರೆ. ಇಲ್ಲಿಯೂ ಪ್ರಲ್ಹಾದನ ಕತೆ ಇದೆ, ರಾಮಾಯಣ–ಮಹಾಭಾರತಗಳ ಸಂನಿವೇಶಗಳಿವೆ. ಸ್ವಲ್ಪಾವಧಿಯಲ್ಲಿಯೇ ಎಲ್ಲ ವನ್ನೂ ತಿಳಿದುಕೊಳ್ಳುವ ಸುಯೋಗ ನಮಗೆ ಲಭಿಸಿತು ; ಅರ್ಚಕರು ಬಂದರು ; ಅವರು ಶ್ರೀರಂಗರ ಹೆಸರನ್ನೂ ಕೇಳಿದ್ದರಂತೆ. ಎಲ್ಲವೂ ಅನುಕೂಲವೆ ಆಯಿತು. ಇದಲ್ಲದೆ ಇಲ್ಲಿಯ ಅರ್ಚಕರು ಇತಿಹಾಸದ ದೃಷ್ಟಿಯುಳ್ಳವರು. ಆದ್ದರಿಂದ ನಾಲ್ಕು ಗಂಟೆ ನಮ್ಮನ್ನು ಅವರು ಸುತ್ತಾಡಿಸಿದರೂ ನಮಗೆ ಸಂತೋಷವೆ ಆಯಿತಲ್ಲದೆ, ಶ್ರಮವೆನ್ನಿಸಲಿಲ್ಲ. ಗೋಡೆಯ ಮೇಲೆ ಹತ್ತಿ, ಕಾಲಲ್ಲಿ ಮುಳ್ಳು ನಟ್ಟ ಸುಂದರಿಯ ಮುಖವಿಕಾರವನ್ನು ನೋಡಿದೆವು. ಜಡೆಯಲ್ಲಿ ಬಲೆ, ಅಲ್ಲಿ ನೊಣ ಸಿಕ್ಕಿದೆ. ಅದನ್ನು ತಿನ್ನಲು ಒಂದು ಹಲ್ಲಿ. ಪ್ರತಿಯೊಂದು ಸೂಕ್ಷ್ಮವೂ ಕಲ್ಲಿನಲ್ಲಿದೆ. ಈ ಕಲಾವಿದ ರಿಗೆ ಕಲ್ಲಿನಿಂದ ಯಾವ ತೊಂದರೆಯೂ ಇದ್ದಂತಿಲ್ಲ. ಕಾಗದದಷ್ಟು ತೆಳುವಾಗಿ ಅದನ್ನು ಕೊರೆದಿದ್ದಾರೆ. ಕೈಯಲ್ಲಿಯ ಕಂಕಣ ಸರಿದಾಡುವಂತೆ ಮಾಡಿದ್ದಾರೆ ! ಗುಡಿಯ ಒಳಕ್ಕೆ ಮೇಲಂಗಣದಲ್ಲಿ ಕಮಲಾಕಾರದಲ್ಲಿ ಕತೆಯ ಸನ್ನಿವೇಶಗಳನ್ನು ಕೊರೆದಿದ್ದಾರೆ.... ಈ ಕೌಶಲವನ್ನು ಕಂಡು ಮಾನವನೂ ಬೆರಗಾಗಿ ಕಲ್ಲಿನ ಬೊಂಬೆ ಯಂತೆ ನಿಲ್ಲಬಹುದಾಗಿದೆ. ಒಳಗಿನ ಮೂರ್ತಿಯಾದರೂ ಅಷ್ಟೆ ಸುಂದರ ಮತ್ತು ಸಾತ್ವಿಕವಾದುದು. ಪ್ರಾಕಾರದ ಬಯಲಲ್ಲಿ ೪೦–೫೦ ಅಡಿ ಎತ್ತರದ ದೀಪಗಲ್ಲು (ಇದು ಒಂದೇ ಕಲ್ಲು) ಕೇವಲ ತನ್ನ ಭಾರದಿಂದಲೆ ನಿಂತಿದೆ.... ನೋಡಿದಲ್ಲೆಲ್ಲ, ನೋಡಿನೋಡಿದಂತೆ ಬೆರಗುಗೊಳಿಸುವಂತಹ ಕೃತಿಸೌಂದರ್ಯ. ಬೇಲೂರಿನಲ್ಲಿ, ಹಳೇಬೀಡಿನಲ್ಲಿ ಬಿದ್ದ ಗೋಡೆಗಳಿಂದ ಕಳಚಿದ ಬೊಂಬೆಗಳು ಪ್ರಾಕಾರದ ತುಂಬ ಹರಡಿವೆ. ಕೆಲವನ್ನು ವ್ಯವಸ್ಥಿತವಾಗಿ ನಿಲ್ಲಿಸಿದ್ದಾರೆ. ಗೋಡೆಯಲ್ಲಿ ಅಲ್ಲಲ್ಲಿ ತುಂಡಾದ ಗೊಂಬೆಯನ್ನು ಮತ್ತೆ ಕೊರೆದು ಈಗಿನವರು ನೋಡಿದರಂತೆ, ಮುಂಚಿನ ಕೌಶಲದ ಬದಿಯಲ್ಲಿ ತಮ್ಮದನ್ನು ನೋಡಿ ಈಗ ಅದನ್ನು ನಿಲ್ಲಿಸಿರುವರಂತೆ—ಬೇಲೂರಿನ ಅರ್ಚಕರು ಹೇಳಿದರು ನಮಗೆ. ಆ ಒಂದೆರಡು ಉದಾಹರಣೆಗಳನ್ನು ನೋಡಿ ಒಂದು ಮಾತು ಸ್ಪಷ್ಟವಾಗುವುದು ; 'ಜಕ್ಕಣನ ಶಿಲ್ಪಕಲೆ' ಕರ್ನಾಟಕದಲ್ಲಿ ಉಳಿದಿಲ್ಲ..... ಜಕ್ಕಣನ ಕೃತಿ ಎಂದು ಬೇಲೂರಿನ ಇತಿಹಾಸಜ್ಞರಾದ ಅರ್ಚಕರು ಒಪ್ಪುವುದಿಲ್ಲ ; ಅದು ದಂತಕತೆ, ಪ್ರತಿಯೊಂದು ಬೊಂಬೆಯ ಕೆಳಗೆ ಕೊರೆದವನ ಹೆಸರಿದೆ ಎಂದು ಈಗಲೂ, ವಯಸ್ಸಾದ ಈ ಅರ್ಚಕರು ಉತ್ಸಾಹದಿಂದ ಗೋಡೆಯನ್ನೇರಿ ಓದಿ ತೋರಿಸುತ್ತಾರೆ. ಇದಿಯ ಕರ್ನಾಟಕದ ವೈಭವವೇ ದಂತ ಕತೆಯಂದೆನ್ನಿಸುವ ಈಗಿನ ಕಾಲದಲ್ಲಿ, ಜಕ್ಕಣನ ದಂತಕತೆಯನ್ನೂ ನಂಬಿದರೆ ನಷ್ಟವೇನು ಎಂದೆನಿಸುವುದು ಒಮ್ಮೊಮ್ಮೆ.

ಮೂರು ದಿವಸಗಳ ಪ್ರವಾಸ ನಮ್ಮದು. ಅಗತ್ಯವಿರದಿದ್ದಾಗಲೂ ೫೦ ಗಂಟೆ ಗಳ ವರೆಗೆ ಬಿಸಿಲಲ್ಲಿ ಬಳಲಿದೆವು. ಅದಕ್ಕೆಂದೇ ಇಷ್ಟೊಂದು ಆಲ್ಹಾದದಾಯಕ

ವೆನ್ನಿಸಿತೇನೊ! ಅಂತೂ ಕರ್ನಾಟಕದ ಗತವೈಭವದ ಒಂದಂಶವನ್ನು ನೋಡಿದೆವು. ನೋಡುವಾಗಲೆಲ್ಲ ಸಧ್ಯದ ಕರ್ನಾಟಕ ನಮಗೆ ಸಂಪೂರ್ಣವಾಗಿ ಮರೆಯುತ್ತಿತ್ತೆಂಬುದೇ ಆ ವೈಭವದ ಘನತೆಯನ್ನು ಸೂಚಿಸುತ್ತದೆ. ಹಳೆಯುಗದ ಸೌಂದರ್ಯವನ್ನು ಸುತ್ತಲಿನ ಅರಸಿಕ ಮಾನವ ಜಗತ್ತಿನಿಂದ ಮರೆಮಾಡಿದ ಬೆಟ್ಟದ ಸುತ್ತು - ಸಾಲುಗಳ ರಮಣೀಯತೆಯನ್ನು ಎಷ್ಟು ಸವಿದರೂ ಕಡಿಮೆಯೆ. ಯಾರಿಂದ ರಕ್ಷಿಸಲು ನಮ್ಮ ಪೂರ್ವಜರು ಇಂತಹ ನಡುಬೆಟ್ಟದ ಮಧ್ಯದಲ್ಲಿ ಈ ಸೌಂದರ್ಯವನ್ನು ಕಟ್ಟಿದರು? ಮುಸಲ್ಮಾನರಿಂದಲೆ? ಶತ್ರುರಾಜರಿಂದಲೆ? ಅಥವಾ ಬೆಟ್ಟಗಳಾಚೆ ಇದ್ದ ಇಡಿಯ ಮಾನವ ಪ್ರಪಂಚದಿಂದಲೆ? ಯಾವ ಉದ್ದೇಶಕ್ಕಾಗಿ ನೂರಾರು ವರ್ಷಗಳ ವರೆಗೆ ಸಾವಿರಾರು ಜನರನ್ನು ದುಡಿಸಿ, ಕಲ್ಲಿನಲ್ಲಿ ಈ ಚಿತ್ರಗಳನ್ನು ಬಿಡಿಸಿದರು? ವೈಭವದ ದರ್ಪಕ್ಕಾಗಿಯೆ? ಗುಲಾಮರನ್ನು ಹಣಿಸುವದಕ್ಕಾಗಿಯೆ? ಭಕ್ತಿಯನ್ನು ಸಾರುವುದಕ್ಕಾಗಿಯೆ? ಅಥವಾ—ಹೃದಯದೊಳಗಿನ ಒಂದು ಸೌಂದರ್ಯ ಕಲ್ಪನೆಯನ್ನು ಇಲ್ಲವೆ ಧ್ಯೇಯಸಾಧನೆಯನ್ನು ತೃಪ್ತಿಗೊಳಿಸುವದಕ್ಕಾಗಿಯೆ? ಈ ಎಲ್ಲ ಮಾತುಗಳಿಗೆ ಉತ್ತರವಿದೆ; ಶಬ್ದಗಳಲ್ಲಿ ಬರೆದು ಪ್ರಕಟಿಸುವ ಉತ್ತರವಲ್ಲ. ಆ ಬೊಂಬೆಗಳನ್ನು ಇದಿರಿಸುವವನ ಕಿವಿಯಲ್ಲಿ ಹೇಳುವಂತಹದು. ಅನಂತಕಾಲದ ಯೋಗದಿಂದಲೆ ಆ ಬೊಂಬೆಗಳು ಇಂದಿಗೂ ಉತ್ತರವನ್ನು ಸಾರುತ್ತಿವೆ. ಅದನ್ನು ಅನುಭವಿಸಲಾದರೂ ನಾವು ಅಲ್ಲಿಯವರೆಗೆ ಹೋಗಬೇಕಾಗುತ್ತದೆ.

ಮೂರು ದಿವಸಗಳ ಕನಸಿನ ಸಾಮ್ರಾಜ್ಯ ಕೆಳಗಾಯಿತು. ಮತ್ತೆ ನಮ್ಮ, ಸತ್ತ ಪಶುಗಳಂತೆ ಒಂದರ ಮೇಲೊಂದು ಮನುಷ್ಯರನ್ನು ಹೇರಿ ಹೊರಡುವ ಆ ಜನಸಂದಣಿ ಮತ್ತೆ, ಹಿಂದಿನ ವೈಭವವನ್ನು ಒಂದೇಟಿಗೆ ಮರೆಮಾಡುವ ಧೂಳಿನ ಅಂತಃಪಟ, ಮತ್ತೆ 'ಕ್ರೌಡ್', ಮತ್ತೆ 'ಹೋಲ್ಡಾನ್', ಮತ್ತೆ ಟಿಕೀಟು ಸಾಬಿಯ ಕೂಡ ಬುದ್ಧಿಯ ಲೆಕ್ಕದ ಕುಸ್ತಿ, ಸ್ಟೇಶನ್ನಲ್ಲಿ ಕೂಲಿಯವನನ್ನು ಹುಡುಕುವುದು—ಗಾಡಿ ಬಂದ ಮೇಲೆ ಸ್ಥಳವನ್ನು ಹುಡುಕುವುದು—ಸ್ಥಳ ದೊರೆತ ಮೇಲೆ ಕೂಲಿಯವನನ್ನೂ ಸಾಮಾನನ್ನೂ ಹುಡುಕುವುದು — ಅವು ದೊರೆತ ಮೇಲೆ ಮತ್ತೆ ಸ್ಥಳವನ್ನು ಹುಡುಕುವುದು—ಮತ್ತೆ—ಮತ್ತೆ .... ಕಳೆದ ವೈಭವವನ್ನು ಮರಳಿ ತರಲಾರದ ಜನತೆಯ ಯೋಗ್ಯತಾ ಸೂಚಕಗಳು ಎಲ್ಲಾ ಅವು!

([illegible])

— ಶ್ರೀರಂಗ

೧೮. ಸಾಹಿತ್ಯ ಸಂಪಾದನೆ

[illegible] ಅನ್ನಮಯದಿಂದ ಆನಂದಮಯಕ್ಕೆ ಕರೆದೊಯ್ಯುವ ದಿವ್ಯ ದ್ವಾರ. ಈಗ ಅನ್ನಮಯವೇ [illegible] ಬೆಳೆಯುತ್ತಲಿದೆ—ಆನಂದಮಯಕ್ಕೇ [illegible] ಇದ್ದಾರೆ. ಅವರಲ್ಲಿ ನಿಜಾಂಶ ವಿಲ್ಲದೆ [illegible] ಎಂದು ಕನ್ನಡ ನಾಡಿನ [illegible] ತೊಂಭತ್ತು ಜನರಿಗೆ ಬಿಗ್ಗಿನ ಬುಗ್ಗೆ [illegible] ಮೊರೆಯಾಗಿ ಕೂಳಿತಿವೆ! [illegible] ಪ್ರಕಾರ ಅವನ್ನು ಪಾರಲೌಕಿಕವತ್ತ [illegible] ಈಗ ಸುಳ್ಳು ವೈರಾಗ್ಯವೇ [illegible] ಜಗತ್ತಿನಲ್ಲಿ ಆಸಕ್ತಿ ಹುಟ್ಟಿಸುವ ಸಾಹಿತ್ಯ [illegible] ಈ ಸಮಾಜವನ್ನು ಸುಟ್ಟು ಬಿಡು!' [illegible] ನಿಜವಾಗಿ ನೋಡಿದರೆ ಇದು [illegible] ಅಪ್ರೌಢವಾಗಿ [illegible] ಆಸೆಗಳನ್ನಿಟ್ಟುಕೊಳ್ಳುವುದು—ಅವುಗಳ ಪ್ರಾಪ್ತಿಗಾಗಿ [illegible] ಸಾಮರ್ಥ್ಯವಿಲ್ಲದೆ, ಸ್ಥೈರ್ಯ ವಿಲ್ಲದೆ, [illegible] ಅವರಿವರ ಮೇಲೆ ಹರಿಹಾಯುತ್ತಾ ದೈವ [illegible]—ಕೊನೆಗೆ ಸ್ವಾತಂತ್ರ್ಯವನ್ನೋ-ಶಪಿಸುತ್ತ [illegible] ಪ್ರತಿಕೂಲ ಪರಿಸ್ಥಿತಿಯ [illegible]—ಮನಸ್ಸಿನ ದಾಸನಾಗಿದ್ದಾನೆ! [illegible] ಸಹಿಸದೆ! ಮನಸ್ಸಿನ [illegible] ಪರಿಸ್ಥಿತಿಯ ಮೇಲೆ ವಿಜಯ [illegible] ಸಂಪಾದನೆಯಿಂದಲೇ! "ಮನುಷ್ಯ ನನ್ನು [illegible], ಅವನು ಪರಿಸ್ಥಿತಿಯ ಅಪಮಾನಕಾರಕ [illegible] ಕರ್ತಾರನಾಗಬಲ್ಲನೆಂಬು ದನ್ನು [illegible]."—(ಮ್ಯಾಕ್ಸಿಂ ಗಾರ್ಕಿ)

ಸಾಹಿತ್ಯ [illegible] ಮಹಾದ್ವಾರ— ಹೃದಯವು ಸಾಹಿತ್ಯದ ಗರ್ಭಗುಡಿ. [illegible] ಸ್ವರ್ಗ— ಅದುವೇ ಹೃದಯವೇ ನರಕ! "ಸ ಯಥಾ [illegible] ಸಮುದ್ರ ಏಕಾಯತನಮ್। ಏವಂ ಸರ್ವೇಷಾಂ

ವಿದ್ವಾನಾಂ ಹೃದಯಮೇಕಾಯತನಮ್ ।" — (ಬೃಹದಾರಣ್ಯಕ). ಆದರೆ ಹೃದಯದಲ್ಲಿ ಅಮೃತವೂ ಇದೆ, ಹಾಲಾಹಲವೂ ಇದೆ. ಸಾಹಿತ್ಯ ಹೃದಯದ ಹಾಲಾಹಲವನ್ನೂ ಹೀರುತ್ತದೆ — ಹರನಂತೆ; ಅದರ ಅಮೃತವನ್ನೂ ಹಂಚುತ್ತದೆ—ಮೋಹಿನೀ ರೂಪದ ಹರಿಯಂತೆ. ನಮ್ಮ ಹೃದಯದಲ್ಲಿಯೇ ಅಮೃತವಿದ್ದರೂ ಅದು ನಮಗೆ ದೊರಕುವುದು ಸಾಹಿತ್ಯದ ಮೂಲಕವೇ. ಆಕಳ ಕೆಚ್ಚಲಲ್ಲಿ ಹಾಲೂ, ಆ ಹಾಲಿನಲ್ಲಿ ತುಪ್ಪವೂ ಅಡಕವಾಗಿದ್ದು ಆಕಳ ಗಾಯಕ್ಕೆ ಆ ತುಪ್ಪವೇ ಔಷಧವಾಗಿದ್ದರೂ ಅದನ್ನು ಹೊರದೆಗೆದು ಹಚ್ಚುವವರಿದ್ದರೆ ಆ ಗಾಯ ಮಾಯುದು. ಕಟ್ಟಿಗೆಯಲ್ಲಿ ಬೆಂಕಿ ಅಡಗಿದೆಯೆಂಬ ಮಾತ್ರಕ್ಕೆ ಒಣ ಕಟ್ಟಿಗೆಯಿಂದಲೇ ಅಡುಗೆಯಾಗದು. ಮರ ಮರ ಮಥನಿಸಿದರೆ ಅಗ್ನಿ ಹುಟ್ಟುದು, ಅಡುಗೆಯಾಗದು. ಹಾಗೆಯೇ ನಮ್ಮ ಹೃದಯದಲ್ಲಿಯೇ ಇರುವ ಅಮೃತ ನಮಗೆ ಒದಗಬೇಕಾದರೆ ಹೃದಯ ಮಥನವೇ ಹಾದಿ. ಸಾಹಿತ್ಯವು ಅದನ್ನೇ ಮಾಡುತ್ತದೆ. ಸಾಹಿತಿಯ ಹೃದಯದಲ್ಲಿ ಅವನ ಸುತ್ತುಮುತ್ತಲಿನ ಸಹಸ್ರಾವಧಿ ಹೃದಯಗಳ ಸಹೃದಯೀಕರಣವೂ ಮಂಥನವೂ ಆಗಿ, ಅಮೃತ ಹುಟ್ಟಿ ಮೃತ ಸಂಜೀವಿನಿಯಾಗುತ್ತದೆ. ಅದನ್ನು ಕುಡಿದ ಮಾನವ ಮೃತ್ಯುಂಜಯನಾಗುತ್ತಾನೆ. ಈ ಅಮೃತ ಬೇಕಾದರೆ ಸಾಹಿತ್ಯ ಸಂಪಾದನೆಯೇ ಮಾರ್ಗ. ಗೀತೆಯ, "ಸರ್ವಭೂತಸ್ಥಮಾತ್ಮಾನಂ, ಸರ್ವಭೂತಾನಿ ಚಾತ್ಮನಿ ।"— ಇದೇ ಆ ಮಾರ್ಗ.

ವ್ಯಾಪಾರವು ವಣಿಕನಾಗೆಂದು ಹೇಳುತ್ತದೆ; ರಾಜ್ಯವು ರಕ್ಷಕನಾಗೆಂದು ಹೇಳುತ್ತದೆ; ಸಾಮ್ರಾಜ್ಯವು ಶೋಷಕನಾಗೆಂದು ಹೇಳುತ್ತದೆ; ವಿಜ್ಞಾನವು ಶೋಧಕನಾಗೆಂದು ಹೇಳುತ್ತದೆ; ಧರ್ಮವು ಬೋಧಕನಾಗೆಂದು ಹೇಳುತ್ತದೆ; ಮನೋವಿಜ್ಞಾನವು ವಿಶ್ಲೇಷಕನಾಗೆಂದು ಹೇಳುತ್ತದೆ; ಯೋಗವು ಸಾಧಕನಾಗೆಂದು ಹೇಳುತ್ತದೆ; ಯಾವುದು ಏನೇ ಹೇಳಿದರೂ ಸಾಹಿತ್ಯ ಮಾತ್ರ ರಸಿಕನಾಗೆಂದು ಹೇಳುತ್ತದೆ. ಬದುಕಿನ ಬೇಸರವನ್ನು—ಬದುಕಿನಲ್ಲಿ ಎಷ್ಟೆಯೂ ಬೇಸರ ಹುಟ್ಟಿವವರಾರು ?—ಕಳೆದು ಬಾಳಿಗೆ ಬಣ್ಣವನ್ನೂ ಬೆಳಕನ್ನೂ ನೂತನತೆಯನ್ನೂ ಮೋಹಕತೆಯನ್ನೂ ಮಾಧುರ್ಯವನ್ನೂ ಸೌಂದರ್ಯವನ್ನೂ ಅರ್ಥವನ್ನೂ ಸಾರ್ಥಕತೆಯನ್ನೂ ಉದ್ದೇಶವನ್ನೂ ಉದ್ದೀಪನವನ್ನೂ ರುಚಿಯನ್ನೂ ಮತಿಯನ್ನೂ, ಸಮತೆಯನ್ನೂ ಕ್ಷಮತೆಯನ್ನೂ ಹುರುಪನ್ನೂ ಬಿಸುಪನ್ನೂ ತಂದು ಕೊಡುವುದು ಇದೇ ರಸಿಕತೆಯೇ. ಇದೊಂದಿಲ್ಲದಿದ್ದರೆ ನಾವು ಬಾಲವಿಲ್ಲದ ದ್ವಿಪಾದ ಪಶುಗಳೇ! ರಸಿಕನಾಗಬೇಕೆನ್ನುವವನು, ತುಂಬಿ ಬಾಳನ್ನು ಬಾಳಿ ಜೀವನದ ಮಾಧುರ್ಯವನ್ನು ಕಬ್ಬಿನ ಹೊರಗಣ ಗರಿಯನ್ನೇ ಮೇಯುತ್ತಿರುವ ಅಲ್ಪ ಸುಖಕ್ಕೆ ಸೋಲುವ ಕುರಿಯಂತೆ ಅಲ್ಲ, ಕಬ್ಬಿನೊಳಗಣ ರಸದ ಸವಿಗಾಗಿ ಮದಗಜದಂತೆ ಸವಿಯಬೇಕೆನ್ನುವ ಮದಗಜವಲ್ಲದು ಸಾಹಿತ್ಯ ಸಂಪಾದನೆ ಮಾಡಲೇ ಬೇಕು.

[illegible] ಒಂದು ಕಾರಣವನ್ನು ಹೇಳುತ್ತಾರೆ; 'ಅತಿ [illegible] ಅದು. ಕೂಸು ಹುಟ್ಟಿ ಬೆಳೆಯು ವಾಗ [illegible] ಕೈಗೆ [illegible] ಸಿಕ್ಕಿದರೂ ನೋಡಿ ಆಡಿ ನಲ ವಾಂತು [illegible] ತನ್ನ ತಲ್ಲೀನತೆ, ಆನಂದಮಯತೆ, ಆಹ್ಲಾದ ಕರತೆ[illegible] ಮಾಡುತ್ತದೆ. ಏಕೆ? ಅದರ ವಿಸ್ಮಯಭಾವ ಆಶ್ಚರ್ಯ ಭಾವ [illegible] (Sense of Wonder) ಇನ್ನೂ ಜಾಗ್ರತವಾಗಿ[illegible] ಅದಕ್ಕೆ ಜಗತ್ತಿನ ಪ್ರತಿಯೊಂದು ವಸ್ತುವೂ ಹೊಚ್ಚ [illegible], ವಿಚಿತ್ರ-ವಿಚಿತ್ರವಾಗಿ ಕಂಡು ಆನಂದ [illegible] ಜಗತ್ತೂ ಜೀವನವೂ ಅವನ ಪಾಲಿಗೆ [illegible] ಅವುಗಳ ಬಗ್ಗೆ ಅವನ [illegible] ಹೋಗುತ್ತವೆ. ತತ್ಪರಿಣಾಮವಾಗಿ ಬದುಕಿ ನಲ್ಲಿ [illegible] 'O world' 'O life' ಎಂಬ ನಿರಾಶಾವಾದ ತಲೆಯೆತ್ತು ತ್ತದೆ. [illegible] ಜಗತ್ತು ಜೀವನಗಳ ಚೆಲುವುಗಳ ಮೇಲೆ [illegible] ಮುಸುಕನ್ನೆತ್ತಿ, ಅವು ಗಳ [illegible] ಸೌಂದರ್ಯದ ದರ್ಶನ ನಮಗೆ ಮಾಡಿಸಿ, ಜಗತ್ತು [illegible] ಆಕರ್ಷಕ ಆಹ್ಲಾದಕರಗಳಾಗು ವಂತೆ [illegible] ಸಾಮಾನ್ಯದ ಹಿಂದಿರುವ ಅಸಾ ಮಾನ್ಯದ [illegible] ದೇವತೆಗಳನ್ನಾಗಿ ಮಾಡುತ್ತದೆ; ಅಸಾ ಮಾನ್ಯದ [illegible] ದೇವತೆಗಳನ್ನು ಮನುಷ್ಯರನ್ನಾಗಿ [illegible] ಜಗತ್ತು ಜೀವನ ಬೇಡಾಗಿ [illegible] ಸಾಹಿತ್ಯ.

[illegible] ಸುರನ ವಿಕಟಾಟ್ಟಹಾಸ. [illegible] ಜಗತ್ತು ರುದ್ರ- [illegible] ಈ [illegible] ಸಂಸ್ಕಾರಗಳ ನಡುವೆ ಧರ್ಮ [illegible] ಗೀತಾಚಾರ್ಯನ ಸಮ್ಮುಖ ದಲ್ಲಿ [illegible] ರಕ್ತಬೀಜನ ಸಂತತಿಯಂತೆ [illegible] ಲಾಲಸೆಗಳ ವಿಷಮ [illegible] ಸಿಕ್ಕಿದ ಹೊರೆವಾಲನ್ನೂ [illegible] ಸಾರ್ಥಸಾರಥಿಯಾದ ಸಾಹಿತ್ಯವು [illegible] ರಸಮಾಡಿ, ವಿಷವಿಕ್ಕಿದವ [illegible] ಗಳನ್ನು ದಮನದಿಂದಲ್ಲ, ಶಮನ ದಿಂದಲ್ಲ, [illegible], [illegible] ಅಲ್ಲ—ಉದಾತ್ತೀಕರಣದಿಂದಲೇ.

ವಶಪಡಿಸಿಕೊಳ್ಳಿರೆಂದು ಸಾಹಿತ್ಯವು ಸಾರುತ್ತದೆ. ಈಪ್ಸಿತಗಳು–ಆಸೆಗಳು, ಅಭಿಲಾಷೆಗಳು–ಲಾಲಸೆಗಳು, ವಾಸನೆಗಳು–ಕಾಮನೆಗಳು ಜೀವನ ವೃಕ್ಷಕ್ಕೆ ಒಡೆದ ಶಾಖೋಪಶಾಖೆಗಳು, ಶಾಖೆಗಳನ್ನೆಲ್ಲ ಸವರಿ ಒಗೆದರೆ ಉಳಿಯುವುದು ಮೋಟು ಕೊರಡು! ಉಪಾಯವಾವುದು ಹಾಗಾದರೆ? ವಿಕಾರಗಳ ಉದಾತ್ತೀಕರಣವೇ ಉಪಾಯ. "ಹಾರೈಸು, ಹಾರೈಸು, ಹಾರೈಸು ಜನ!" ಎಂದೇ ಹೇಳುತ್ತದೆ ಸಾಹಿತ್ಯ. ಆದರೆ ಏನನ್ನು ಹಾರೈಸೆಂದು ಹೇಳುತ್ತದೆ? "ಹಾರೈಸು ನೀನಾಗುವನ್ನಿಗಂ ದೇವ?" ಎಂದೇ ಅಲ್ಲವೆ? ಅಕ್ಕನ ಅಮೃತವಾಣಿಯನ್ನು ಆಲಿಸಿರಿ—

ಗಿರಿಯಲ್ಲದೆ ಹುಲ್ಲುಮೊರಡಿಯಲ್ಲಾಡುವುದೆ ನವಿಲು?
ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ?
ಕಳಿತ ಫಲವಲ್ಲದೆ ಕಸುಗಾಯಿಗೆಳಸುವುದೆ ಗಿಳಿ?
ಚೆನ್ನಮಲ್ಲಿಕಾರ್ಜುನನಲ್ಲದೆ ಅನ್ಯಕ್ಕೆಳಸುವುದೆ ಎನ್ನ ಮನ?

ಬಯಸುವುದು ಜೀವಗುಣ; ಬಯಸಲಿ! ಆದರೆ ಉದಾತ್ತವಾದುದನ್ನು ಉನ್ನತವಾದುದನ್ನು–ಒಳ್ಳಿತಾದುದನ್ನು–ವಿಶುದ್ಧವಾದುದನ್ನು–ಶ್ರೇಯಸ್ಕರವಾದುದನ್ನು–ಹಿತವಾದುದನ್ನು–ಮಿತವಾದುದನ್ನು–ಶಿವವಾದುದನ್ನು–ಸುಂದರವಾದುದನ್ನು–ಭದ್ರ ಶುಭಮಂಗಲವಾದುದನ್ನು–ಅಭ್ಯುದಯ ನಿಃಶ್ರೇಯಸಕರವಾದುದನ್ನು ಆಸು, ಅಪೇಕ್ಷಿಸು, ಅಳವಡಿಸಿಕೊ; ಆದರಿಸು, ಆಚರಿಸು, ಹಬ್ಬಿಸು, ಹರಡಿರೆಂದು ಹೇಳುತ್ತದೆ ಸಾಹಿತ್ಯ. ಎಂತಲೇ ಸಾಹಿತ್ಯವನ್ನು 'ಉದಾತ್ತೀಕರಿಸಲ್ಪಟ್ಟ ವಿಚಾರಶಕ್ತಿ' ಎಂದು ಕರೆದಿದಾನೆ ವರ್ಡ್ಸ್‌ವರ್ಥ್. ಬರಿ ವಿಚಾರಶಕ್ತಿಯಲ್ಲ, ಉದಾತ್ತೀಕರಣಹೊಂದಿ (Irradiated by imagination and sublimation) ಅಮೃತ ಆನಂದ ರೂಪವಾದ ಪ್ರಕಾಶವಾದ ವಿಚಾರಶಕ್ತಿ. "ಮಹಾನಂದರೂಪಂ, ಆನಂದ ಪ್ರಕಾಶ ಸ್ವರೂಪಂ". ಈ ಆನಂದ ಅಮೃತ ಪ್ರಕಾಶ ಯಾರಿಗೆ ಬೇಡ? "ಸ್ವರ್ಗಃ ಪ್ರಕಾಶ ಇತ್ಯಾಹುಃ ನರಕಂ ತಮ ಏವ ಚ". ಅಂಧತಮಸ್ಸಿನಿಂದ ನರಕವಾಗಿರುವ ಈ ಲೋಕವನ್ನು ಪ್ರಕಾಶಮಾನವಾದ ಸ್ವರ್ಗವನ್ನಾಗಿ ಜ್ಯೋತಿರ್ಲೋಕವನ್ನಾಗಿ ಮಾರ್ಪಡಿಸಲು ಹವಣಿಸುವ ಹೆಣಗುವ ಹೋರಾಡುವ ಸಾಹಿತ್ಯ [illegible]?

ವಿಕಾರಗಳನ್ನೇ ಅಮೃತ ಮಾಡಿ ಕತ್ತಲನ್ನು [illegible] ಮರ್ತ್ಯಲೋಕವನ್ನೇ ದೇವಲೋಕವನ್ನಾಗಿ ಮಾಡುವುದು [illegible]? ಶೀಲವೇ ಸಕಲ ಶ್ರೇಯಸ್ಸಿಗೂ ಮೂಲ. [illegible] ದಿಂದಲೇ ಧರ್ಮ ಸತ್ಯ ಬಲ ಸಂಪತ್ತು— ಎಲ್ಲ. [illegible] ದೈವ' ಎನ್ನುತ್ತಾನೆ. 'ಶೀಲ ಹೋದರೆ, ಎಲ್ಲ ಹೋದಂತೆ' [illegible] ಇದನ್ನೇ ಸಾರುತ್ತದೆ. ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಪರಿಗ್ರಹ— ಇವು 'ಯಮ', ಶೌಚ, ಸಂತೃಪ್ತಿ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ— ಇವು 'ನಿಯಮ'; ಇವೆಲ್ಲ 'ಶೀಲ'ವೆಂಬ ಒಂದೇ ಮಾತಿನಲ್ಲಿ ಅಡಕವಾಗಿವೆ. ಜಾತಿಯೇ

ಶೀಲಪೂರ್ಣತರಾಗಿ [illegible] ಒಂದೇ ಸಾಹಿತ್ಯವೂ ಸಾರುತ್ತದೆ. ಶೀಲಸಂಪಾದನೆ ಸಾಹಿತ್ಯ[illegible] [illegible] ಪದಗಳು. ಶೀಲದ ಸ್ವರೂಪನಿರ್ಣಯ, ಶೀಲಸಂಪಾದನೆಯ [illegible] [illegible]ದರ್ಶನಗಳೇ ಸಾಹಿತ್ಯಸೃಷ್ಟಿಯ ಮೂಲ[illegible]. [illegible] [illegible]ಸಂಪಾದನೆಗಾಗಿಯಾದರೂ ಸಾಹಿತ್ಯಸಂಪಾದನೆ ನಡೆಯ[illegible].

[illegible] ಕಾರಣ[illegible] ಕೃತ್ಯಗಳು ವಿಂಗಡಿಸಿರುವುದನ್ನು ಸಾಹಿತ್ಯ [illegible] [illegible]ಸುತ್ತದೆ. ವರ್ಣ ವಂಶ ರಾಜ್ಯ ಧರ್ಮ [illegible] [illegible] ಹೋಳಾಗಿರುವ ಮಾನವತೆ ಸಾಹಿತ್ಯ [illegible] ಮರೆತು, ಒಂದೇ ಸಹೃದಯತೆಯಲ್ಲಿ ಒಂದಾ[illegible] [illegible] ಸವಿಯುತ್ತದೆ. ಇದಕ್ಕೆ ಕಾರಣ ಸಾಹಿತ್ಯ[illegible] [illegible] [illegible]ಯತೆಯೇ ಸಾಹಿತ್ಯ. ಅಣುವಿನಿಂದ ಆಕಾಶದ [illegible] [illegible] [illegible]ಯುಕ್ತ—ಅನುಪಯುಕ್ತ, ತಾರಕ—ಮಾರಕ [illegible] ಜ್ಞಾನ—ಅಜ್ಞಾನ ಯುಗದಲ್ಲಿ ಮಾನವೀಯ [illegible] [illegible]ಯನ್ನೆಸಗುತ್ತಿರುವುದು ಈ ಯುಗದ [illegible], [illegible] ಒಂದು, ವಿರೋಧಾಭಾಸಗಳಲ್ಲಿ ಒಂದು. ಸಾಹಿತ್ಯ[illegible] [illegible] — ಮನುಜ ನೇಹವೇ ಧರ್ಮ. [illegible] [illegible] ಬೇಕು, ರಕ್ಷಣೆಯೂ ಬೇಕು; [illegible] [illegible], [illegible]ಕಾರಿಗೂ ಬೇಕು. ಸಂಯುಕ್ತ ರಾಷ್ಟ್ರ [illegible] ಹೊರಟಿದೆ; ಅದರ ಇನ್ನೊಂದು [illegible] [illegible] ಬೇಕಿದೆ ಆ ಕಾರ್ಯ ಮಾಡುತ್ತಿದೆ. '[illegible]' [illegible] [illegible]ತ್ತಿರುವುದೇ ಸಾಕ್ಷಿ ಇದಕ್ಕೆ. [illegible] ಕಲಿಸುವ ಗುರುವಾದರೆ ಕಾಂತಾಸಮ್ಮಿತಿ [illegible] ಕಲಿಸುವ ಗುರುವೆಂದು ಹೇಳಬಹುದು.

[illegible] [illegible] ಮಾತನ್ನಾಡುವದು ಕರ್ತವ್ಯ [illegible] [illegible] ಬಂದನ್ನೆಸಗಿ ತಿಳಿಸಿರನ್ನು [illegible] [illegible] ಸಂಶೋಧನೆಯ, ವಿಮರ್ಶೆಯ, [illegible] [illegible] ಕಾಲಿಡುತ್ತಲಿದೆ. ಇಂಥ ಕಾಲ[illegible] [illegible] [illegible]ಕಾಗುತ್ತದೆ. [illegible] [illegible]ಕಾರಣ, ಜಾತಿಜಾತಿಗಳಲ್ಲಿ ಸೇತು [illegible] ಸಾಹಿತ್ಯ [illegible]ಯಲ್ಲಿ [illegible] ಬಿದ್ದಿರುವ [illegible] [illegible] [illegible]ವಾಗದ, ಮತಮತ ಗಳಲ್ಲಿ [illegible] [illegible]ವನ್ನು ಹುಟ್ಟಿಸುವ, ಕಲಹ ಕುಂಭ

ಕರ್ಣನನ್ನೆಚ್ಚಿಸುವ ರಾಕ್ಷಸಾಯುಧವಾಗುತ್ತದೆ! ಯಾವ ಸಂಗತಿಯು ಶೋಧವಾಗುವವರಿಂದ ಸಮಾಜದಲ್ಲಿ ನೆಲೆಸಿರುವ ಸಹೋದರತೆ ಸೌಹಾರ್ದ್ರ ಭಾವನೆಗೆ ಕೊಡಲಿಯ ಪೆಟ್ಟು ಬೀಳುವ ಅಂಜಿಕೆಯಿದೆಯೋ ಆ ಸಂಗತಿ ಶೋಧವಾಗದಿರುವುದೇ ಮೇಲು! ಶೋಧವಾದರೂ ಪ್ರಕಟವಾಗದಿರಲಿ! ಸ್ಪಾರ್ಟನರಲ್ಲಿ ವಿಕಲಾಂಗರೂ ಸುಂಕು ರೋಗಿಗಳೂ ಆದ ಕೂಸುಗಳು ಹುಟ್ಟಿದರೆ ಅವು ಸಮಾಜಸ್ವಾಸ್ಥ್ಯಕ್ಕೆ ವೈರಿಗಳಾಗದಿರಲೆಂದು ಅವುಗಳನ್ನು ಹುಟ್ಟುತ್ತಲೇ ಕಡಿದೊಗೆಯುವ ಪರಿಪಾಠವಿದ್ದಿತಂತೆ! ಲೇಖನ ವ್ಯವಸಾಯದಲ್ಲಿರುವವರೂ ತಮ್ಮ ಲೇಖನಿಯಿಂದ ಸಮಾಜದಲ್ಲಿ ಕೋಲಾಹಲವನ್ನೂ ಕಳವಳವನ್ನೂ ದ್ವೇಷಾಸೂಯೆಗಳನ್ನೂ ಹುಟ್ಟಿಸುವ ಶನಿಸಂತಾನವೇನಾದರೂ ಹುಟ್ಟಿದರೆ ಅದನ್ನು ಹಿಂದೆಮುಂದೆ ನೋಡದೆ ಹಿಂದೂ ಮಹಾಸಾಗರಕ್ಕೆ ಎಸೆದುಬಿಡುವ ಪರಿಪಾಠವನ್ನಿಟ್ಟುಕೊಳ್ಳಲಿ! ಕನ್ನಡ ಸಾಹಿತ್ಯದ ಪುನರುಜ್ಜೀವನ ಕಾರ್ಯದಲ್ಲಿ ಮುಂದಾಳುಗಳಾಗಿದ್ದ, ಈಗಿರುವ ದಿವಂಗತ ಶ್ರೀಕಂಠಯ್ಯನವರೂ, ಬಸವನಾಳರೂ, ವೆಂಕಣ್ಣಯ್ಯನವರೂ, ಶ್ರೀನಿವಾಸಮೂರ್ತಿಗಳೂ, ಶ್ರೀಗಳಾದ ಶ್ರೀನಿವಾಸರೂ, ಬೇಂದ್ರೆ ಗೋಕಾಕರೂ, ಕುವೆಂಪು ಕೃಷ್ಣಶಾಸ್ತ್ರಿಗಳೂ, ರಂಗನಾಥ ದಿವಾಕರರೂ, ರಾಜರತ್ನಂರೂ, ತಿ. ಶೆ. ಭೀಮಸೇನರಾಯರೂ, ಮಾನ್ವಿ ನರಸಿಂಗರಾಯರೂ, ಅನ್ಯಮತೀಯರ ಸಾಹಿತ್ಯವನ್ನು ಆ ಮತೀಯರಿಗಿಂತಲೂ ಹೆಚ್ಚು ಶ್ರದ್ಧೆ ವಿಶ್ವಾಸಗಳಿಂದ ಓದಿ ಅದರ ಸಾರ ಸಂಗ್ರಹವನ್ನು ಸಕಲರಿಗೆ ನೀಡುವ ಅನುಕರಣೀಯವಾದ ಪರಂಪರೆಯನ್ನು ಹಾಕಿಕೊಟ್ಟಿದ್ದಾರೆ. ಅದನ್ನು ಬಲಿಸಿ ಬೆಳೆಸುವುದೇ ಸಾಹಿತ್ಯಕರ್ಮಿಯ ಧರ್ಮ. ನಮ್ಮ ಸಾಹಿತ್ಯ ಪರಂಪರೆಯು ನಮ್ಮ ಮೇಲೆ ಹೊರಿಸಿರುವ ನೈತಿಕ ಹೊಣೆ ಕರ್ತವ್ಯ ಉತ್ತರದಾಯಿತ್ವವದು. ಜಾತೀಯತೆ ಇನ್ನೆಲ್ಲಿಯಾದರೂ ಬದುಕಿರಲೊಲ್ಲದೇಕೆ—ಸಾಹಿತ್ಯದಲ್ಲಿ ಮಾತ್ರ ಸರ್ವಥಾ ಸರ್ವಥಾ ಆ ಪಿಶಾಚಿಯನ್ನು ತರಬೇಡಿರಿ, ತರಬೇಡಿರಿ, ತರಬೇಡಿರಿ! ಇದೇ ನನ್ನ ನಮ್ರ ಬಿನ್ನಹ, ಪ್ರಾರ್ಥನೆ, ಮೊರೆ ನಿಮಗೆ!

ವಿಶ್ವವಿಖ್ಯಾತ ದಾರ್ಶನಿಕನಾದ ಕಾಂಟ್ ಮೂರು ಮೂಲಭೂತ ಪ್ರಶ್ನೆಗಳನ್ನು ಕೇಳಿದ್ದಾನೆ. ೧. ನಾವು ಏನನ್ನು ತಿಳಿದುಕೊಳ್ಳಬಲ್ಲೆವು? ೨. ನಾವು ಏನು ಮಾಡಬೇಕು? ೩. ನಾವು ಏನನ್ನು ಆಶಿಸಬೇಕು? ಈ ಮೂರು ಪ್ರಶ್ನೆಗಳಲ್ಲಿ ಮಾನವನ ಮೂರು ಮುಖ್ಯ ಸಮಸ್ಯೆಗಳು ಅಡಕವಾಗಿವೆ. ಮೊದಲನೆಯ ಪ್ರಶ್ನೆಗೆ ಉತ್ತರವಾಗಿ—

ತಿಳಿಯುವುದೆ ಒಲಿಯುವುದು, ಒಲಿಯುವುದೆ ತಿಳಿಯುವುದು;
ಒಂದು ಹಿಡಿದರೆ ಸಾಕು, ಇನ್ನೊಂದು ದೊರೆಯುವುದು;
ತಿಳಿಯದಲೆ ಒಲವಿಲ್ಲ, ಒಲಿಯದಲೆ ತಿಳಿವಿಲ್ಲ;
ಒಂದು ಬಿಟ್ಟರೆ ಇನ್ನೊಂದು ಅರೆಯಹುದು;
ಸತ್ಯಮಂದಿರದಲ್ಲಿ ಉರಿವ ಜ್ಯೋತಿಯ ಜ್ಞಾನ,

[illegible] ಪ್ರೀತಿ ಸ್ನೇಹ ;
[illegible] ಜಗತ್ತೆ,
[illegible] ಪ್ರೇಮ !

ಎಂಬ [illegible] ಪ್ರಶ್ನೆಗೆ ಉತ್ತರವಾಗಿ—"ಹೊಸ ಲೋಕ [illegible] ಜಗದ ತಾಯಿತಂದೆ !" ಎಂದು ಆದೇಶ [illegible] ಪ್ರಶ್ನೆಗೆ ಉತ್ತರವಾಗಿ—"ಶಿವಮಸ್ತು ಸರ್ವ ಜಗತಃ [illegible] ದೋಷಾಃ ಪ್ರಯಾಂತು ನಾಶಂ ಸರ್ವತ್ರ [illegible]" ಎಂದು ಆಶಿಸುತ್ತದೆ ಸಾಹಿತ್ಯ. ಉಳಿದ [illegible] ಸಾಹಿತ್ಯವು ನೀಡುವ ಈ ಉತ್ತರಗಳು ಹೆಚ್ಚು ಸಮಾ[illegible], ಸಂತೋಷಜನಕವಾಗಿಯೂ ಆಗಿ ಸಾಹಿತ್ಯವು [illegible] ತೋರುತ್ತವೆ.

[illegible] ಇದಷ್ಟು ಅನಾವಶ್ಯಕವೇ ! ಆದರೆ [illegible] ಉದಾಹರಿಸಲ್ಲದೆ ಮಾಡಬೇಕಾಗಿ ಬಂದಿತು. [illegible] ರೀತಿನೀತಿಗಳನ್ನಷ್ಟು ನೋಡೋಣ. ಪ್ರತಿಭೆ [illegible] ಸಮಾನಗಳೇ ಸಾಹಿತ್ಯಸಂಪಾದನೆಯ [illegible]. [illegible], ಕಾವ್ಯವಿದ್ಯಾಪ್ರಚಯ ಪರಿಚಯ, [illegible], ಕಾವ್ಯಜ್ಞಶಿಕ್ಷಯಾಭ್ಯಾಸ, ಕವಿತೆಗೆ ನಿಯತಂ ಕಾರಣಂ [illegible] ಎನ್ನುತ್ತಾನೆ. ಪ್ರತಿಭೆಯು ಜ್ಯೋತಿಯಂತೆ [illegible], ಶಕ್ತಿ, ಬುದ್ಧಿಗಳು—ಕಾವ್ಯಜ್ಯೋತಿ ಪ್ರಕಾಶಿಸಲು. [illegible] ಪ್ರಜ್ಞಾನವಾಗಿ ಪ್ರತಿಭೆ. "ತಸ್ಯ [illegible] ನಿರ್ಮಾಣ ಕ್ಷಮತ್ವಂ". ಈ [illegible] ಪ್ರಜ್ಞೆಯು ಪರಮಾತ್ಮನ ವರ. ಆದರೆ [illegible] ತೊಂಬತ್ತು ಪಾಲೆನ್ನುತ್ತಾನೆ ಗಟೆ. [illegible] ಕ್ಷಮತ್ವವೇ ಪ್ರತಿಭೆಯೆನ್ನುತ್ತಾನೆ. [illegible] ಭಗವಂತನು ಅನುಗ್ರಹಿಸುವ ಪ್ರತಿಭೆ [illegible] ಪಡೆಯಬಹುದೆನ್ನುತ್ತಾನೆ ದಂಡಿ. [illegible]

[illegible] ತತ್ತ್ವ. ಇಂಥ ರಸವಿದ್ಯೆಯನ್ನು [illegible] ಹೇಗೆ ಸಾಧ್ಯವಾ[illegible], [illegible], [illegible], ಸಂಕಲ್ಪಶುದ್ಧಿ, ವಸ್ತು[illegible] [illegible]ಗಳೇ ಸ್ಫುರಣ, ಅನುಕರಣ, ಅಭ್ಯಾಸ, [illegible] ಹಾಗೂ ಕಾಂತಾಸಂಮಿತೋಪದೇಶಗಳೆಂಬ ಪಂಚವಿಧಾನ

ಗಳಲ್ಲಿ ಕಲಾನುಭವವು ಕಲಾಕೃತಿಯಾಗಿ ರೂಪಾಂತರಗೊಂಡಾಗ [illegible] ಮೂಲಕ ಮನುಕುಲದ ಆತ್ಮವು— ಅರವಿಂದರು ನಿದರ್ಶಿಸಿರುವ [illegible] ಸೂರ್ಯ, ರಸ ಆನಂದಗಳ ಚಂದ್ರ, ಜೀವನದ ಉಸಿರಿನ ವಾಯು, [illegible] ಅಗ್ನಿ, ಅನುಭೂತಿಯ ವರುಣರ ಸತ್ವಾವೇಶಗಳನ್ನು [illegible]ಗಾಗಿ ಸೆರೆಹಿಡಿಯಲು ತೀರ್ಥಯಾತ್ರೆಗೆ ಹೊರಡುತ್ತದೆ. [illegible] ಗಳಾದ ಸತ್ಯ, ರಸ (ಸೌಂದರ್ಯ), ಆನಂದ, ಚೈತನ್ಯಶಕ್ತಿ ([illegible]) ಮತ್ತು ಆತ್ಮಗಳೊಡನೆ ಸಮೃದ್ಧ ಸಮಾಸ್ವಾದವನ್ನು [illegible] ಸಾಹಿತ್ಯ-ತೀರ್ಥದ ಪ್ರಾದುರ್ಭಾವ.

ಧ್ರುವನು ಧ್ರುವತಾರೆಯಾದ ರೀತಿಯಲ್ಲಿ ಮುಂದಾಗಬೇ[illegible] ನಮ್ಮ ಜೀವನದ ಧ್ರುವತಾರೆಯಾದೀತು. ಮನುವಿನ [illegible]ನವು ಶತರೂಪಿಣಿಯೆಂದು ಇದರ ಅರ್ಥ. ಅವರಿಗೆ [illegible]ನಾದ ರೆಂದು ಇಬ್ಬರು ಮಕ್ಕಳು. ಉತ್ತಾನಪಾದನ [illegible] ಎಂದರೆ ಅಡಿಯ ಮುಂದಿಡಬೇಕೆನ್ನುವವನಿಗೆ [illegible]ವನಾಗಿಯೂ ಸುನೀತಿ ಮತ್ತು ಸುರುಚಿಗಳು ಸಹಧರ್ಮಿಣಿಯರಾಗಿಯೂ [illegible]ಬೇಕಲ್ಲವೆ? ಸುರುಚಿ ಮತ್ತು ಸುನೀತಿಗಳ ಸಮ್ಮಿಳನವೇ ಶ್ರೇಷ್ಠ [illegible]. ಆದರೆ ಸುರುಚಿಯು ಸವತೀಭಾವದಿಂದ ತನ್ನ ಮಗನೇ ಉತ್ತಮ; [illegible]ನ್ನೇರಲು ಯೋಗ್ಯನು—ಎಂದು ತಿಳಿದು ತಾನೂ [illegible] ಬಂದ ಧ್ರುವನನ್ನು ಮೂದಲಿಸಿ ಕಳಿಸಿದಳು. ನೊಂದು ಬಂದ [illegible] ಹೇಳಿದ ಮಾತು ಸುನೀತಿ ಸಾರವೇ ಆಗಿದೆ.—"ಎರಡನೆಯವರು [illegible] ಅವರಿಗೆ ಅಮಂಗಲವನ್ನು ಬಯಸಬೇಡ ಮಗು! [illegible] ಬೆಳೆಯನ್ನು ತಾನೇ ಒಕ್ಕಬೇಕಾಗುತ್ತದೆ ಮನುಷ್ಯನಾದವನು! [illegible]ನ್ನೇ ನುಡಿದಿದ್ದಾಳೆ. ನೀನು ಬೇಡಾದ ಸುನೀತಿಯು [illegible]! ಕಾರಣ ಹರಿಯನ್ನು ಮೆಚ್ಚಿಸಿ ಆ ಉನ್ನತ ಸ್ಥಾನವನ್ನು ಪಡೆ." [illegible] ತಿಳಿಸಿ ಹೇಳಿದಂತೆ ತಪಸ್ಸು ಮಾಡಿ ಸ್ವರಾಜ್ಯವನ್ನು ಪಡೆದು[illegible] ಕಳಿಸಿದ್ದ ಮಲತಾಯಿ ಎಂಬ ಭೇದಭಾವನೆ [illegible]. ಸುರುಚಿಯ ಎದೆಯೂ ಕರಗಿ ಅವನನ್ನು ಅಪ್ಪಿಕೊಂಡಳು. [illegible] ಸರಿಯೆ—ಮುದ್ದಾಡಿ ಮುಂಡಾಡಿದಳು. ದೇವದರ್ಶನ [illegible] ನಕ್ಷತ್ರರತ್ನವನ್ನು ಸುರುಚಿ ಸುನೀತಿಯರಲ್ಲಿದ್ದ ಮಾತೃತ್ವವನ್ನು [illegible]ಸಿದ ಧ್ರುವನು ಧ್ರುವತಾರೆಯಾದನು ಲೋಕಕ್ಕೆ. ಹಾಗೆಯೇ [illegible]ಯನ್ನೂ ಮಾನವಧರ್ಮದ ಸುನೀತಿಯನ್ನೂ ಒಂದಾಗಿಸಿದಾಗಲೇ [illegible]ಕ್ಕೆ ಧ್ರುವತಾರೆಯಾಗಬಲ್ಲ ಧ್ರುವಸಾಹಿತ್ಯ ಹುಟ್ಟುತ್ತದೆ.

ಉತ್ತಮ ಕೃತಿಗಳಲ್ಲಿ ಧ್ವನಿ, ರಸ, ಭಾವ, ಅಲಂಕಾರ, [illegible]ಗಳೆಂಬ

[illegible] ವ್ಯಕ್ತವಾಗಬೇಕು. ಸಾಹಿತ್ಯದ ಆತ್ಮ ಧ್ವನಿ; [illegible] ವರು ಸತ್ಯ. ಮಾನವ ವ್ಯಕ್ತಿತ್ವದ ಸ್ಥಾಯೀ ಭಾವ [illegible] ಭಾವನೆಗಳೊಡನೆ ಬೆರೆತುಗೊಂಡು ಪಾಕ [illegible] ಭಾವನೆಗಳ ಉತ್ತರೋತ್ತ[illegible]. [illegible] ಅಲಂಕಾರವೆಂದರೆ ರೂಪ; ಆಕೃತಿ, [illegible] ಅಭಿವ್ಯಕ್ತಿಯಲ್ಲಿ ಅಪೂರ್ತ [illegible] ಬಾಗುಹಂಕೆ. ಔಚಿತ್ಯ ಇಲ್ಲವೆ [illegible] ಬುದ್ಧಿ—ಸಾರಾಸಾರ— [illegible] ಸತ್ಯ ಸಪ್ರಮಾಣ ಸಮನ್ವಯವೇ [illegible] ನಿಜರೂಪ.

(ಪ್ರಬಂಧ ಮಾಲೆ)

—ಪುರಾಣಿಕ ಸಿದ್ಧಯ್ಯ.

೧೯. ಅಕ್ಕಸಾಲಿ ತಿಮ್ಮಪ್ಪ

[illegible] ಎಂದು ಕೇಳಿದರೆ [illegible] ಈಗ ನಲವತ್ತರ ಮೇಲೆ [illegible] ಇರುವದೆ ಅದಿ ಗಾತ್ರದ [illegible] ನಮ್ಮೂರ ವಾಣಿಕೆಯಂತೆ [illegible] ಎರಡು 'ಭರ್ಜರಿ,' [illegible] ನಾನೊಂದು ಕಡಿಮೆಯಲ್ಲ [illegible] ಎದೆಯ ಮೇಲೆ [illegible] ಇಲ್ಲವಾದರೆ ಇಲ್ಲ; ಆದರೆ [illegible] ವಿಶೇಷಕೂ [illegible] ಕಾಣುವ ಎದೆ [illegible] ಜಸಿವಾರ. [illegible] "ಅಕ್ಕಸಾಲಿ, ತೇರು ಯಾವಾಗ?" ಎಂದು ಕೇಳುವವರುಂಟು. [illegible] "[illegible]ಗೆ-ತಿಂಗಳಲ್ಲಿ" ಅಂದರೆ, "ಹಾಗಾದರೆ

‘ ಮಿಣಿ ’ ಈಗಲೇ ಹೊರಗೆ ತೆಗೆದು ಹೆಗಲಮೇಲೆ ಹಾಕಿಬಿಟ್ಟಿದ್ದೀನು ?” ಎಂದು ನಕಲಿಮಾಡುತ್ತಾರೆ.

ತಲೆಯಿಂದ ಎದೆಗೆ ಬಂದು, ಕಾಲಿಗೆ ಇಳಿದರೆ ಅಲ್ಲೂ ಅಲಂಕಾರವಿದೆ. ಒಕ್ಕಾಲಿಗೊಂದು ಬೆಳ್ಳಿಸರಿಗೆ. ವೆಂಕಟರಮಣನಿಗೊಂದು ಹರಕೆ. ವೆಂಕಟರಮಣ ತಿರುಪತಿಯಿಂದ ಈ ತಿಮ್ಮಪ್ಪನನ್ನು ಕಾಣಲು ಬರುವ ಹಾಗೂ ಇಲ್ಲ. ಈ ತಿಮ್ಮಪ್ಪ ತಿರುಪತಿ ತಿಮ್ಮಪ್ಪನನ್ನು ನೋಡಲು ಹೋಗುವ ಹಾಗೂ ಇಲ್ಲ. ಹೀಗಾಗಿ ಹುಟ್ಟಿದ ಒಂದು ವರ್ಷದಲ್ಲಿ ತೊಟ್ಟ ಸರಿಗೆ ಇಷ್ಟು ವರ್ಷದ ಬಳಿಕವೂ ಅಲ್ಲೇ ಇದೆ. “ ಯಜಮಾನರು ತಿರುಪತಿಗೆ ಹೋಗುವಾಗ ಕಲಿಯುಗ ಮುಗಿಯುತ್ತದೆ ” ಎಂದು ಅವನ ಹೆಂಡತಿ ಹೇಳುತ್ತಾಳೆ.

ಚಿನ್ನವನ್ನೂ ಬೆಳ್ಳಿಯನ್ನೂ ಬೆಣ್ಣೆಯಂತೆ ತೀಡಬಲ್ಲ ಕುಶಲಿಗರು ತಿಮ್ಮಪ್ಪನನ್ನು ಬಿಟ್ಟರೆ ನಮ್ಮ ಊರಿನಲ್ಲಿ ಯಾರೂ ಇಲ್ಲ; ಸುತ್ತಮುತ್ತಲೂ ಇರಲಿಕ್ಕಿಲ್ಲ. ಅಲ್ಲವಾದರೆ ನಾಲ್ಕು ಸುತ್ತಲಿನ ಹಳ್ಳಿಯವರು ತಿಮ್ಮಪ್ಪನ ಮನೆಯ ಜಗಲಿಯ ತನಕ ಜೀವಬಿಟ್ಟು ಬರುತ್ತಿರಲಿಲ್ಲ. ಅವನ ಮನೆಯಲ್ಲಿ ಕೆಲಸಗಾರನೆಂದರೆ ಅವನೊಬ್ಬನೇ. ಉಬಿದಾರ ನೇವಳ ನೇಯುವುದಾದರೆ ಅವನ ಹೆಂಡತಿ ಸಹಾಯಕಳಾಗುತ್ತಾಳೆ. ಅವನಿಗೆ ಮಕ್ಕಳು ಇಲ್ಲವೇ—ಎಂದರೆ ‘ ಉಂಟು ’. ಆರು ವರ್ಷದ ಒಂದು ಕೂಸು. ಅದರಿಂದ ಲೂಟಿಯೇ ಹೊರತು ಸಹಾಯವಿಲ್ಲ. ಅವನ ಈ ಕುಮಾರಕಂಠೀರವನಿಂದಾಗಿ ಮದ್ದಲೆಗೆ ಆರು ಸಾರಿ ಚರ್ಮ ಹಾಕಿಸಬೇಕಾಯಿತು. ಅಗ್ಗಿಷ್ಟಿಕೆ ಹತ್ತು ಸಾರಿ ಹೊಸದಾಗಿ ಬಂದಿತು. ‘ಅಬ್ಬಾ, ಇದು ಯಾವ ಕುಲದಲ್ಲಿ ಹುಟ್ಟಿತು!” ಎಂದು ಮಗನನ್ನು ಕಂಡು ತಾನು ವಿಸ್ಮಯಪಡುವ ಪ್ರಸಂಗ ತಿಮ್ಮಪ್ಪನಿಗೆ ದಿನಕ್ಕೆ ಎಂಟು ಸಾರಿ ಬರುತ್ತದೆ. ಕೊನೆಗೆ ‘ ಮಕ್ಕಳ ಜಾತಿಯಲ್ಲವೆ ! ’ ಎಂದು ತೀರ್ಮಾನಿಸಿ ತನಗೆ ತಾನೆ ಸಮಾಧಾನ ತಂದುಕೊಳ್ಳುತ್ತಾನೆ.

ತಿಮ್ಮಪ್ಪನ ಕೆಲಸದ ಸಂಗತಿಯನ್ನು ತುಸು ನಿಧಾನವಾಗಿ ತಿಳಿದರೂ ಚಿಂತೆಯಿಲ್ಲ. ಅವನ ಮದ್ದಲೆಯ ಸಂಗತಿಯನ್ನು ನೋಡಬೇಕಲ್ಲವೇ. ಅಕ್ಕಸಾಲಿ ತಿಮ್ಮಪ್ಪ ಎಂದು ಕರೆಯುವ ಬದಲು ಮದ್ದಲೆ ತಿಮ್ಮಪ್ಪನೆಂದರೆ ಅವನಿಗೆ ತುಂಬ ಸಂತೋಷ. ಅವನ ಕಸಬೇ ಮದ್ದಲೆಯದು. ಅಕ್ಕಸಾಲಿ ‘ ಹಿನ್ನಪ್ಪ ’ ಎಂಬುದೂ ತಪ್ಪಿಲ್ಲ. ಅಲ್ಲದೆ ಚಿನ್ನದ ಕೆಲಸ ಎಂದರೆ ಯಾರಾರ ಮನೆಯ ಹೆಂಗಸರನ್ನು ಮೆರೆಯಿಸುವ ಕೆಲಸ; ಹೊಟ್ಟೆಯ ಪಾಡಿನ ದುಡಿತ. ಬರಿದಾದರೆ ಹಾಗೇನು ? ಹೊಟ್ಟೆಗಿರಲಿ, ಇಲ್ಲದಿರಲಿ—ನಿತ್ಯ ಸಾಗಿಸುವ ಬದುಕು.

ತಿಮ್ಮಪ್ಪ ಅಕ್ಕಸಾಲಿಯ ಮನೆಗೆ ಸಮೀಪವಾಗಿ ಬಿಟ್ಟಬಲದ ಬಳಿ ಹೋದ್ದಾರೆ, ಗ್ರಹಚಾರಹಿಡಿದೋ, ಮನೆ ಅದಿ ಮಾಡಿಕೊಂಡು ನಿಂತುಕೊಂಡಿದ್ದಾರೆ. ಮಧ್ಯಾಹ್ನ ಮುಸ್ಸಂಜೆ ಮಧ್ಯರಾತ್ರಿಯೆಂಬ ಭೇದವಿಲ್ಲದೆ—ಅವನ ಮನೆ ಜಗಲಿಯಲಿ ಬದ್ಧವಿಸಿ, ಅಂಗಳಕ್ಕೆ ಧುಮುಕಿ, ಬೇಲಿಹಾಯ್ದು ನೆರೆಮನೆಯ ಅಂಗಳವನ್ನು

ಸೇರುವ ಅವನ [illegible] ಧ್ವನಿ ಯಾವ ದಿವಸವೂ ನಿಂತುದೆಂಬುದಿಲ್ಲ. ಆ ನೆರೆ [illegible] ರಸ್ತೆಯಲ್ಲಿ ಸಂಚರಿಸುವ ಮೋಟರು ಹಾರ್ನು, ಘರ್ಜನೆ ಗಳು ಅವನಿಗೆ [illegible] ಇಲ್ಲ. ಕಿವಿ ಅಷ್ಟು ಕೆಪ್ಪು ಹಿಡಿದು ಹೋಗಿದೆ. [illegible] ತಿಮ್ಮಪ್ಪನಿಗೆ ತಪ್ಪಿದುದಲ್ಲ. ಶಪಿಸಿ, ಶಪಿಸಿ [illegible] ಇಲ್ಲವೆಂದು ಕಾಣುತ್ತದೆ' ಎಂಬುದು [illegible] ಮದ್ದಲೆ [illegible] ಸಾಕು. ಇಂಥ [illegible] ಹೇಳಬಲ್ಲರು. 'ಯಾರು [illegible]—ಅಲ್ಲ ... ಬಿದ್ದೋರು ಯಾರೋ . . . . [illegible]

[illegible] ಬಲು ಚುರುಕಿನದು. ಆ ಬೆರಳುಗಳು [illegible] ಎಂದರೆ 'ಅಜ್ಜಾ' ಎಂದು ತಬ್ಬಿಬ್ಬಾಗ ಬೇಕು. [illegible] ಎಂಬ ತರಾತುರಿ ಆ ಬೆರಳು [illegible] ನಿಜ—ಅಂದರೆ ತಿಮ್ಮಪ್ಪನು ಮನೆಯಲ್ಲಿ [illegible] ಎಲ್ಲಾದರೂ ಆಗುವ ತಾಳ ಮದ್ದಲೆ [illegible] ತಾಳಮದ್ದಲೆ ಕೂಟದವರೂ ತಿಮ್ಮಪ್ಪನನ್ನು [illegible] ತಿಮ್ಮಪ್ಪನ ಜಾಣ್ಮೆ ಸರಿಯಲ್ಲ. [illegible]. ಆದರೆ ಅವನ ಮೆಚ್ಚಿಕೆಯ ಅರ್ಥಗಳೆಲ್ಲ ಸ್ತ್ರೀ [illegible], ಒಂದೂ ದ್ರೌಪದಿ, ಒಂದೂ ಸೀತಾಮ್ಮನವರು [illegible] ಕುಳಿತು, ತುರುಬಿಗೆ ಮಲ್ಲಿಗೆ ಹೂವಿನ [illegible] 'ಅಜಾ, ನನ್ನ ನಾಥಾದಿನಾಥಾ' ಎಂದು ಧ್ವನಿ ಹೊರ [illegible]' ಎಂಬ ಬೆರಗು ಸಭೆಗೆ ಉಂಟಾಗಬೇಕು.

[illegible] 'ತಿಮ್ಮಪ್ಪ, ನಿನಗೆ [illegible] ಎಂದು ಕೇಳಿದರೆ ಲೆಕ್ಕ ಮಾಡಿಯೇ ಹೇಳಬೇಕು. [illegible]; ಇಲ್ಲವಾದರೆ ಇಲ್ಲ. ಇದ್ದ ದಿವಸ [illegible] ಒಂದು ಜಾವದ ಬಳಿಕ; ರಾತ್ರಿಯ ಊಟ— [illegible], ಪೇಟೆಗೆ ಹೋಗಿ, ಅಕ್ಕಿ ತಂದು, ಮದ್ದಲೆ ಹಿಡಿದು [illegible], ಕುರುಡು ದೀಪದ ಬೆಳಕಿಗೆ ಏನಾದರೂ 'ಕೊಟ [illegible]. ಆದರೆ ಮದ್ದಲೆಯನ್ನು ದಿವಸಕ್ಕೆ ಮೂರು [illegible] ತಿಕ್ಕಿ, ತೀಡಿ, ಬಡಿಯಬೇಕು.

[illegible] ತಿಮ್ಮಪ್ಪನನ್ನು ಬಿಟ್ಟರೆ ಇಲ್ಲ. ಅವನ ಜಾತಿಯವರಲ್ಲಿ ಅವ ನಿಗೆ [illegible] ಜನರೇ ಇಲ್ಲ. ಯಾವಾಗಲಾದರೂ ಒಂದು ದಿವಸ [illegible] ಬಂದು, "ತಿಮ್ಮಪ್ಪ, ಅದ್ಯಾರು, ನಿನ್ನೆ ಪ್ರಾಣ ಹೋಗು

ವವರ ಹಾಗೆ ಮದ್ದಲೆ ಬಡಿಯುತ್ತಿದ್ದವರು ? ಹಾಗೆ ಮಾಡಿದರೆ ಕೈ ಉಳಿದೀತಾ ? ಕರ್ಣ ಹ್ಯಾಗೂ ಉಳಿಲಿಕ್ಕಿಲ್ಲ ಅಷ್ಟೆ” ಎಂದು ಪೂರೈಸುತ್ತಾರೆ. ತಿಮ್ಮಪ್ಪ ನಗುತ್ತ, “ ಅದೇ . . . ನಮ್ಮ ಅಕ್ಕನ . . . ಅಂದರೆ ದೊಡ್ಡ ಚಿಕ್ಕಮ್ಮನ ಮೊಮ್ಮಗನು . . . ಅವಳು . . . ತಿಳಿಯಲಿಲ್ಲವೇ ? ಕಾನೇರು ಮನೆಗೆ ಹೆಣ್ಣು ಕೊಟ್ಟಿದ್ದು, ಆ ಮನೆಯವರಿಗೆ ಬಹಳ ಸಮೀಪ ”.

“ ಮದ್ದಲೆ ಎಂದರೆ ಅಭ್ಯಾಸ. ಇನ್ನೂ ಕೈ ತಿದ್ದಿದರೆ ಸುಮಾರು ಬಾರಿಸ್ಯಾ ದಾನು. ಭಾರೀ ಚುರುಕಿನ ಕೈ. ಬಾರಿಸಿಯಾನು ಮುಂದಕ್ಕೆ. ಅಂದರೆ ಹಾಡಿನ ಗತ್ತು ಬಲ್ಲ. ”

ಅವನ ಮನೆಗೆ ನಂಟುತನ ಎಣಿಸಿಕೊಂಡು ಯಾರೇ ಬರಲಿ, ಅವರ ವಿಷಯ ದಲ್ಲಿ ತಿಮ್ಮಪ್ಪನಿಗೆ ತುಂಬ ಆತ್ಮೀಯತೆ. ಅವನ ಮನೆಗೆ ಬರುವ ನಂಟರ ಸಂಖ್ಯೆ, ಅವರು ಬಂದಾಗ ಮನೆಯಲ್ಲಾಗುವ ಗದ್ದಲ — ಇವುಗಳನ್ನೆಲ್ಲ ನೋಡಿದರೆ, ‘ ನಂಟರು ಬಂದಾಗಲೇ ತಿಮ್ಮಪ್ಪನಿಗೆ ಊಟ, ಉಳಿದ ದಿನ ಉಪವಾಸವೇ ’ ಎಂಬ ಸಂಶಯ ನಮಗೆ. ಆದರೆ ಆತನು ತನ್ನ ಕೆಲಸ ಮನಸ್ಸು ಇಟ್ಟು ಮಾಡಿದರೆ ದಿನಕ್ಕೆ ಎರಡು ರೂಪಾಯಿಗಳನ್ನಾದರೂ ದುಡಿದಾನು. ಕೈಯೂ ಚುರುಕು ; ಕೆಲಸವೂ ನಾಜೂಕು.

ನಮ್ಮ ಗ್ರಾಮದಲ್ಲಿ ಚಿನ್ನದ ಗಿರ ಯಾರಾರಿಗೆಲ್ಲ ಇದೆಯೋ ಅವರು ವಾರ ಕ್ಕೊಮ್ಮೆಯಾದರೂ ತಿಮ್ಮಪ್ಪನ ಚಾವಡಿ ತುಳಿಯದೆ ಹೋಗುವವರಲ್ಲ.

“ ತಿಮ್ಮಪ್ಪ, ಕಳೆದ ಕೊಡಿ ಹಬ್ಬಕ್ಕೆ ಕೊಟ್ಟ ನೆನಪಿದೆ : ಏನು, ನಾಳೆ ನಮ್ಮ ಮಗಳ ಮದುವೆ ಸಮಯಕ್ಕಾದರೂ ಸಿಕ್ಕೀತೇ ಹೇಗೆ ? ಮಗಳ ಚಿನ್ನ ಹಬ್ಬದಲ್ಲೇ ಮಾಡಿಸುವ ಎಂದಿತ್ತು, ಕೊಟ್ಟರೆ ಮದುವೆ ಮುಗಿದರೂ ಸಿಗಲಿಕ್ಕಿಲ್ಲ ಎಂಬುದು ಕಂಡಿತ. ”

ಇನ್ನು ಮಗಳ ಮದುವೆಗೆಂದು ಚಿನ್ನ ಮಾಡಿಸಲು ಕೊಟ್ಟವರ ಅವಸ್ಥೆಯನ್ನು ಕೇಳುತ್ತೀರಾ ? ಮದುವೆ ನಾಳೆಗೆಂದರೆ ಇಷ್ಟೊತ್ತು ಮಧ್ಯಾಹ್ನದ ತನಕ ಕೆಂಪು, ಬುಗುಡಿ, ತಾಳಿ ಯಾವುದೂ ಆಗಿರುವದಿಲ್ಲ. ಈಗ ಬಂದು ನೀವು ಮನೆಯ ಹತ್ತೆ ತಿಮ್ಮಪ್ಪನಿಗೆ ಮಂಗಳಾರತಿ ಮಾಡಿ ಹೋದಿರಿ ಎಂದರೆ ಅವನು ಕುಳಿತಲ್ಲಿಂದಲೇ ಬದಿಗೆ ತಿರುಗಿ ತಂಬುಲವನ್ನು ಹಲ್ಲಿನೆಡೆಯಿಂದ ಧಾರೆಯಾಗಿ ಚಿಮ್ಮಿ ಎದ್ದು ನಿಮ್ಮ ಮುಖ ನೋಡಿ, “ ಹೂಂ, ನಿಮ್ಮ ಗಡಿಬಿಡಿ ಕಂಡರೆ ಏಕ್ಕಿಲ್ಲ. ನಾಳೆ ಗೋಧೂಳಿಗೆ ಲಗ್ನ. ನಿಮಗೆ ಲಗ್ನಕ್ಕೆ ಹರಕತ್ತು ಆಗದಿದ್ದರೆ ಸಟೆಯಲ್ಲ. ದಿಬ್ಬಣದ ಗರ್ನಾಲು ಹಾರಿತು ಎಂತಾದ ಕೂಡಲೆ ಜನ ಬರಲಿ ” — ಎಂದು ಆಶ್ವಾಸನ ಕೊಟ್ಟು ಕಳುಹಿಸುತ್ತಾನೆ. ಅವರ ಎದುರಿಗೇನೇ ಅವರ ಚಿನ್ನ ಕಾಯಿಸಿ, ನೋಡಿ, ಬಡಿಯ ತೊಡಗುತ್ತಾನೆ. ಅವರು ಬೆನ್ನುಹಾಕಿದ ತಕ್ಷಣ, ಕೂಡಲೆ ಅದನ್ನು ಅಲ್ಲಿ ಮೂಲೆ ಗಿರಿಸಿ ಇನ್ನೇನಾದರೂ ತರಾತುರಿಯ ಕೆಲಸ ತೆಗೆದುಕೊಳ್ಳುತ್ತಾನೆ. ಅದಕ್ಕೆ

ಕಾದು [illegible] ಇರುತ್ತಾರೆ.

[illegible] ಹೀಗೆ ಒಮ್ಮೊಮ್ಮೆ ಮೂರು ನಾಲ್ಕು ಲಗ್ನದ ಕುಳುವಾರುಗಳ ಜುಟ್ಟು ಅವನ [illegible] ತ್ತದೆ. ಆ ರಾತ್ರಿಯೂ ಮದ್ದಲೆಯನ್ನು ಹೊರತೆಗೆಯುತ್ತಾನೆ. ಅವನ [illegible] ನಾಳೆ ಚಿನ್ನ ಸಿಗುತ್ತದೆ ಎಂದು ಆಸೆ ಮಾಡಿದವರ ಎದೆ [illegible] ಆಗುತ್ತಿರುತ್ತದೆ. ನಡುರಾತ್ರಿ ಕಳೆದ ಮೇಲೆ, ಮದ್ದಲೆಯನ್ನು [illegible] ತೂಗಿ, ಅಪ್ಪಣೆ ಕುಟ್ಟಲು ಕೊಡುತ್ತಾನೆ. [illegible] ಕಾಯಿಸುವದು, ಕುಟ್ಟುವುದು, ನಡವೆ ತಂಬೂಲ ತುಪ್ಪ [illegible] ಬೆಳಗಿನ ತನಕ ನಡೆಯುತ್ತದೆ. ಬೆಳಗಿನ ಜಾವದ ನಿದ್ರೆ [illegible] ಅವನ ಕುಳುವಾರುಗಳು ಸುತ್ತಿಯ ಬಡಿತ ಕೇಳಿ ತುಸು [illegible].

[illegible] ಮಧ್ಯಾಹ್ನವಾಯಿತು, ಹೊತ್ತು ತಿರುಗಿತು ; ಗೋಧೂಳಿಗೆ [illegible] ಮದುವೆ ದಿಬ್ಬಣ ಬಂದಿತು. ಮೊದಲಿನ ಗರ್ನಾಲು ಗಗನಕ್ಕೆ [illegible] ಮೊದಲೆ ಮೇಲುಸಿರು ಸಿಕ್ಕಿದ ಮೂವರು ಮದುವೆ ಕುಳುವಾರುಗಳು ತಿಮ್ಮಪ್ಪನ ಅಗ್ಗಿಷ್ಟಿಕೆಯ ಮುಂದೆ ಪಿಳಿಪಿಳಿ ನೋಡುತ್ತಿರುತ್ತಾರೆ. '[illegible] ಬಂದರು' ಎಂದು ತಿಮ್ಮಪ್ಪನ ಮನಸ್ಸು ಹೇಳತ್ತದೆ ಒಳಗಿಂದೊಳಗೆ.

" [illegible] ಒಪ್ಪೆ ಹಾಕಿದರಾಯಿತು . . . . "

[illegible] ಅವಸರದಲ್ಲಿ ಒಂದಕ್ಕೊಂದು ಮಾಡಿ

ಹೂಂ . , . . ನಿನ್ನನ್ನು [illegible] . . . . " ಎಂದು ಅವರು ತಳಮಳಿಸುವದನ್ನು [illegible]. ಅದನ್ನು [illegible] ಹಾಗೆ ತಿಮ್ಮಪ್ಪನ ಕೈ ಕುಣಿಯುವದನ್ನು ನೋಡಬೇಕು. '[illegible] ಅನಾಥ ರಕ್ಷಕ ತಾನು' ಎಂಬ ಹೆಮ್ಮೆಯಿಂದ ತಿಮ್ಮಪ್ಪನು [illegible] ಮುಂದುವರಿಸುತ್ತಾನೆ.

[illegible] ಉಜ್ಜುತಿದ್ದಾನೆ ; ಅಷ್ಟರಲ್ಲೆ ಹರಕತ್ತಿನ ಕುಳುವಾರು [illegible] . . . . ದಿಬ್ಬಣ ಚಪ್ಪರ ಹೊಕ್ಕಿತು ; ಮದುಮಗನಿಗೆ [illegible] ಸಿಂಗಾರ ? ಮುಹೂರ್ತ ಕೆಡಿಸುತ್ತೀ ನೀನು " ಅನ್ನುತ್ತಾನೆ.

ತಿಮ್ಮಪ್ಪ [illegible] " ಹರಕತ್ತು ಎಂದರೆ ಒಬ್ಬರ ಚಿನ್ನ ಒಬ್ಬರಿಗಾಗಬಾರದಲ್ಲ. ಹೂಂ [illegible], ಗಡಿಬಿಡಿಯಲ್ಲಿ ಒಂದು ವೀಳೆಯ ಹಾಕಿ " ಎನ್ನುತ್ತಾನೆ.

" [illegible]; ಅವಸರ ಅಂದರೆ ಇವನಿಗೆ ತಮಾಷೆ. ಇಲಿಗೆ ಪ್ರಾಣಸಂಕಟ — [illegible] ಅಂದ ಹಾಗೆ."

" [illegible], ಯಮನಾದರೂ ಈ ರೀತಿ ಮಾಡಲಿಕ್ಕಿಲ್ಲ. ನೋಡಿ— ನಿನ್ನೆ [illegible] ಇನ್ನೂ [illegible]. ಈಗಷ್ಟೆ ತಂಬೂಲ ತುಪ್ಪುತಿದ್ದೇನೆ"— ಹೀಗೆಂದು [illegible] ಎಲೆ ಅಡಿಕೆ ಮದ್ದು, ಚಿನ್ನ ತೂಗಿ ಅವರ ಮುಂದೆ ಇರಿಸಿ,

“ ಇದು ಹಣವೂ ಬೇಳೆ, ಈ ಬೆಳ್ಳಿ ಮೂರುವರೆಯೂ ಹಾಗೆ. . . . ” ಎಂದು ಲೆಕ್ಕ ಹಾಕಿ ಅವರಿಗೆ ಒಪ್ಪಿಸಿ ಏನು ಎಂದು ತಿಳಿದಿರಿ ? ತಿಮ್ಮಪ್ಪ ಎಲ್ಲ ಅಕ್ಕಸಾಲಿಗರಂತೆ ಎಂದು ತಿಳಿದಿರಾ ? ಎಂದು ವೀರನಾಕ್ಕನನ್ನಾಮನಾಗ ಕುಳುವಾರುಗಳಲ್ಲಿ ? ಅವರು ಜಗುಲಿ ಇಳಿದು, ತೋಡುಮೂ ದಾಟಿ, ಮನೆಹಾದಿಯಲ್ಲಿ ಅರ್ಧ ಸಾಗಿಯಾಯಿತು.

ಅಲ್ಲಿಂದ ತಿಮ್ಮಪ್ಪ ಕಾಲು ಸಡಿಲಿಸಿ, ಆಕಳಿಕೆ ತೆಗೆದು ‘ ಹೂಂ, ಬಾವಳೇ ’ ಎಂದು ಯಜಮಾನಿಯನ್ನು ಕೂಗಿದರೆ ಅಡಿಗೆಮನೆಗೆ ಬೀಗ. ಅವಳು ಎದ್ದು ದಿಬ್ಬಣ ಎದುರುಗೊಳ್ಳುವದನ್ನು ನೋಡಲು ನಾಲ್ಕು ಗಂಟೆಗೆ ಮೊದಲೇ ಹೋಗಿದ್ದಾಳೆ. ತಿಮ್ಮಪ್ಪನ ಕೋಪಕ್ಕೆ ಯಾರೂ ಇಲ್ಲದಾಗ ಆರ್ಭಟೆ ಅಧಿಕ. “ ನೀವು ಮನುಷ್ಯರಲ್ಲ ; ಇಲ್ಲಿ ನಾನು ಅನ್ನ ನೀರಿಲ್ಲದೆ ಸತ್ತರೆ ನಿಮಗೇನು ? ನಿಮಗೆಲ್ಲ ಯಾರಾರ ಮನೆಯ ದಿಬ್ಬಣಕ್ಕೆಂದು ಥಕಥಕ ಮಾಡಿ ಹೋಗಿಯಾಯಿತು. ಇಷ್ಟಿಷ್ಟು ಸುಖ ದುಃಖ.... ” ಎಂದುಕೊಂಡು ಅಲ್ಲೇ ಸಿಟ್ಟನ್ನು ನುಂಗುತ್ತಾನೆ.

ನಿಜಕ್ಕೆ ತಿಮ್ಮಪ್ಪನ ಹೊಟ್ಟೆ ವೈಶಾಖ ಮಾಸದ ಮಧ್ಯಾಹ್ನದ ಹೊಯಿಗೆಯ ಹಾದಿ ಕಾದಂತೆ ಕಾದಿದೆ. ಒಳಗೆ ತಾನೇ ಹೋಗಿ ಅಡುಗೆಮನೆ ಪತ್ತೆ ಮಾಡಿದರೆ, ಅಲ್ಲಿ ಬೆಳಗಿನಿಂದ ಬೆಂಕಿ ಹೊತ್ತಿಸಿದ ಕುರುಹೇ ಇಲ್ಲ. ತಂದಿರಿಸಿದ ಅಕ್ಕಿ ಬೇಕಲ್ಲ. ಈಗ ಬಂದ ಮಜೂರಿಯಲ್ಲಿ ನಾಲ್ಕಾಣೆ ಹೊತ್ತುಕೊಂಡು ಪೇಟೆಗೆ ಹೋಗಿ ಒಂದು ಸೇರು ಅಕ್ಕಿ ತರಬೇಕು ಅವನು. ಅದಕ್ಕೂ ಉದಾಸೀನನಾಗಿ ‘ ಹಾಳಾಗಲಿ ಸಂಸಾರ ’ ಎಂದು ಕಾಲು ಕಟ್ಟಿ ಜಗುಲಿಯ ಮೇಲೆ ಕುಳಿತುಬಿಟ್ಟ. ಆ ಬಳಿಕ ಸ್ಫೂರ್ತಿಯಿಂದ ‘ ತಮ್ಮಾ.... ಅಡವಿ ಕಲ್ಮುಳ್ಳುಗಳು ಕಾಣುತಿಹೆವೇ ಕಷ್ಟಾ.... ’ ಎಂದು ಪಂಚವಟಿಯ ರಾಮನ ವಿಲಾಪವನ್ನು ತಾನು ನುಡಿದು ಪೆಟ್ಟಿಯ ಹತ್ತಿರಕ್ಕೆ ಹೋಗಿ, ಶ್ರುತಿ ಸರಿಯುಂಟೋ ಎಂದು ನೋಡಲಿಕ್ಕೆ ಕುಳಿತ.

ತಿಮ್ಮಪ್ಪನಿಗೂ ನಮ್ಮ ಊರಿಗೂ ಏನು ಸಂಬಂಧ ಎಂದು ಕೇಳಿದರೆ ಒಂದೇ ಉತ್ತರ—‘ ಅದ್ಗಣಿ ಬಡಿಯುವದು ; ಕರ್ಣ ತೀಡುವುದು ; ಅಷ್ಟು—ಕರ್ಣ ತೀಡುವುದು, ಅದ್ಗಣಿ ಕುಟ್ಟುವುದು ’.

(ಹಳ್ಳಿಯ ಹತ್ತು ಸಮಸ್ತರು)

—ಶಿವರಾಮ ಕಾರಂತ

೧೧. ಅನುಭಾವ ಸಿದ್ಧಿ

ಸುತ್ತಲೂ ದಟ್ಟವಾದ ಅಡವಿ. ಬಯಲು ನಾಡಿನಲ್ಲಿ ಬೆಳೆದ ಮುಗ್ಧ ರಾಮ ಎಂದೂ ಈ ಬಗೆಯ ಅಡವಿಯನ್ನು ಕಂಡವನಲ್ಲ. ಬಯಲು ನಾಡಿನ ನವಣೆಯ ಹೊಲದ ಬಳಿ, ಕಲ್ಲು ಹೊಂಡಗಳ ಬಯಲಲ್ಲಿ ಕಾಲಕಳೆದವನ ಕಣ್ಣಿಗೆ ಇದುವರೆಗೂ ಸಣ್ಣಗೆ ಮಾತ್ರ ಕೇಳಿಬಂದಿದ್ದ ಗುಡ್ಡಗಳು, ಅಂತಹ ಕಾಡು ತುಂಬ ಭಯಂಕರವಾಗಿರುತ್ತವೆ ಎಂದು ಕೇಳಿದ್ದನಷ್ಟೆ. ಈಗ ಎತ್ತ ನೋಡಿದರೂ ಹೆಮ್ಮರಗಳು. ಅತ್ತಿತ್ತ ಕಣಿವೆಯ ನಾಲಗೆಗಳು, ದಟ್ಟನಾಡಿನ ಅಂತರಂಗದಲ್ಲಿ ಎಲ್ಲೋ ಹರಿಯುವ ತೊರೆಗಳ ಮಂಜುಳ ರಾಗತರಂಗಗಳು. ಬಗೆಬಗೆಯ ಹಕ್ಕಿಗಳ ಪಲುಕುದನಿ. ಯಾವುದೋ ಗಂಭೀರ ಸ್ವಪ್ನ ಪ್ರಪಂಚವೊಂದನ್ನು ಪ್ರವೇಶಿಸಿದಂತಾಯಿತು ಆತನಿಗೆ. ಆಗೊಮ್ಮೆ ಈಗೊಮ್ಮೆ ಬೇಗನೆ ಹಾದಿ ಬಿಡುವಂತಾಗಿ ಓಡುವ ಪುಲ್ಲೆಗಳ ಹಿಂಡು, ಕಟಕಟನೆ ಬಾಗಿರುವ ಕೊಂಬೆಯನ್ನು ಕುಕ್ಕಿ ಸದ್ದುಮಾಡುವ ಮರಕುಟಿಕದ ತಾಳ; ಕಾನನದ ವನಸಿರಿಯ ಕಣ್ಣ ತಣಿಸುವ ಚೆಲುವನ್ನು ಹೀರಿ ರಾಗದ ಬಲೆ ನೆಯ್ಯುವ ಕೋಗಿಲೆಗಳ ಕೂಜನ. ಬಾನು ಮುಟ್ಟಲೆಂದು ಬಿಂಕದಿಂದ ಮೇಲೆದ್ದು ಮುಗಿಲನ್ನು ತುಡುಕುವ ಸ್ಪರ್ಧೆಗಳೊಡನೆ ಬೆಳೆದ ಹೆಮ್ಮರಗಳ ವೃಕ್ಷಪಂಕ್ತಿಯಲ್ಲಿ, ಬಗೆಬಗೆಯ ಬಳ್ಳಿಗಳು ಹೆಣೆದು ಸೂರ್ಯಕಿರಣಗಳಿಗೊಂದು ಚಪ್ಪರವನ್ನು ನಿರ್ಮಿಸಿ ನೆಳಲು–ಬೆಳಕಿನ ರಂಗೋಲಿಯನ್ನು ಬರೆದಿತ್ತು. ದಾರಿ ದಾರಿ ತರಗೆಲೆಗಳನ್ನು ತುಳಿದು ನಡೆದ ಸಿದ್ಧರಾಮನಿಗೆ ಮಲ್ಲಯ್ಯನ ಚಿಂತೆಯೊಂದೇ ತುಂಬಿಕೊಂಡಿದ್ದುದರಿಂದ ಸುತ್ತಣ ಪ್ರಕೃತಿ ವ್ಯಾಪಾರಗಳ ಕಡೆಯ ಗಮನವಾಗಲಿ, ಅವನ್ನು ಕಂಡ ಭೀತಿಯಾಗಲೀ ಇರಲಿಲ್ಲ.

ಬೆಳಗಿನ ಬಿಸಿಲು ಮರಗಳ ಬಲೆಯಲ್ಲಿ ಸುಸುಳಿ ಜಾರಿ ಇಳಿದು ತರಗೆಲೆಗಳ ಮೈಯನ್ನು ಸುಡುತ್ತಿತ್ತು. ಆಗಾಗ ಸುಳಿಗಾಳಿಗೆ ಮರದ ಎಲೆಯ ಬೊಗಸೆಯಲ್ಲಿ ನಿಂತ ಇಬ್ಬನಿಗಳು ಪಟಪಟನೆ ಉದುರಿ ಬೀಳುತ್ತಿದ್ದುವು. ಅಲ್ಲೇ ಒಂದು ಕಡೆ ವಿರಳವಾದ ಪ್ರದೇಶದಲ್ಲಿ ಒಂದು ಬಂಡೆಯ ಮೇಲೆ ಸಿದ್ಧರಾಮನು ಕುಳಿತು ತಾನು ಅಲ್ಲಿಗೆ ಬಂದ ಬಗೆಯನ್ನು ಕುರಿತು ಆಲೋಚಿಸತೊಡಗಿದನು. ಕಳೆದ ದಿನಗಳ ನೆನಪಿನ ಸುರುಳಿ ಕಣ್ಣೆದುರು ಬಿಚ್ಚತೊಡಗಿತು . . . .

ನವಣೆಯ ಹೊಲದ ಬಳಿಯಿಂದ ಹೊರಟಿದ್ದು ಕೆಲವು ವಾರಗಳ ಹಿಂದೆ. ಆ ಸಂಜೆ, ಕಂಡು ಕಾಣದಾದ ಮಲ್ಲಯ್ಯನನ್ನು ಹುಡುಕಿಕೊಂಡು ಅಳುತ್ತ ಹೊರಟಿದ್ದನು. ಕೊಂಚ ಹೊತ್ತಿನಲ್ಲಿಯೇ ಸಂಜೆಯಾಯಿತು. ದೂರ ಗುಡ್ಡದ ತೋಳು ಕೈ ಬೀಸಿದಂತಾಯಿತು. ಮಲ್ಲಯ್ಯ, ಮಲ್ಲಯ್ಯ ಎಂದು ಅಳುತ್ತ ಹೊರಟನು.

‘ಮಲ್ಲಯ್ಯ’—ಎಂಬುದೇ ಮಂತ್ರವಾಯಿತು. [illegible] ಕರಗಿತು. ತಾನು ಎಲ್ಲಿಗೆ ಹೋಗುತ್ತಿದ್ದೇನೆ ಎಂಬುದರ [illegible]. ಆ ಕಗ್ಗತ್ತಲ ರಾತ್ರಿಯಲ್ಲಿ, ನಕ್ಷತ್ರಗಳ ನಸುಬೆಳಕಿನಲ್ಲಿ, ‘ಮಲ್ಲಯ್ಯ ಮಲ್ಲಯ್ಯ’ ಎಂದು ಹಂಬಲಿಸುತ್ತ ನಡೆದನು. ನಕ್ಷತ್ರಗಳು [illegible] ವಾದ ನಿಧಿಯನ್ನು ಎದೆಯಲ್ಲಿ ಬಚ್ಚಿಟ್ಟುಕೊಂಡು [illegible] ವಂತೆ ನಕ್ಷತ್ರಗಳು ಕಣ್ಣುಮಿಟುಕಿಸುತ್ತಿದ್ದುವು. [illegible] ಆತನಿಗೆ ಆ ಕತ್ತಲ ಹಾದಿಯು ಅಂತನಲ್ಲ [illegible] ದುವು. ಮೂಡಣ ಹಣೆಯಲ್ಲಿ ತಿಲಕದಂತೆ [illegible] ಕರಗಿತು. ಆ [illegible] ಕರಗಿ ಬೆಳಕಿನ [illegible] ಎಂಬಂತೆ ಮೂಡಣದಲ್ಲಿ ಬೆಳಕು ಇನ್ನು [illegible] ಹರಿಯತೊಡಗಿತು. ಬೆಳಕಿನ ಬಯಕೆಗಾಗಿ, [illegible] ನಿಶೆ ತನ್ನ ತೊಡವುಗಳನ್ನೆಲ್ಲಾ ಕಿತ್ತು ಎಸೆದಂತೆ ನಕ್ಷತ್ರಗಳೆಲ್ಲ [illegible] ದುವು. ಮಲ್ಲಯ್ಯನು ಹುಟ್ಟಿ ಕಾಸಿಯ ಬಟ್ಟೆಯಂತೆ [illegible] ತುಂಬ ತುಂಬಿತು. ಅಲ್ಲಲ್ಲಿ ದಿಗ್ವಲಯಾಗಿ ನಿಂತ ತುಂಬು [illegible] ಬಂಗಾರದ ಕಿರೀಟದಿಂದ ಲೋಕದ ಕಣ್ಣನ್ನು ತಮ್ಮ [illegible]. ಆ [illegible] ಮೆರವಣಿಗೆಯನ್ನು ಕಂಡು, ಸಿದ್ಧರಾಮನ ಕಣ್ಣಿಗೆ ಮಲ್ಲಯ್ಯನೇ [illegible] ತೋರಿತು. ಆತನ ಅಂತರಂಗದಲ್ಲಿ [illegible] ತುಂಬಿತು. ಕಡೆಗೂ ಮಲ್ಲಯ್ಯ ಮೂಡಿ ಬಂದನಲ್ಲ ಎಂಬ [illegible] ಎದೆಯನ್ನು ತುಂಬಿತು. ಅಲ್ಲೊಂದು ಇಲ್ಲೊಂದು ಹಾಡಿಬಂದ ಹಕ್ಕಿಯ [illegible] ಮೌನದ ತಂತಿಯನ್ನು ಮಿಡಿಯಿತು. ಮೆಲ್ಲ ಮೆಲ್ಲನೆ [illegible] ಮೋಹಕವಾಗಿ ಜ್ಯೋತಿರ್ಲಿಂಗದಂತೆ [illegible], ಸಿದ್ಧರಾಮನು ಆನಂದದಿಂದ ಪುಲಕಿತನಾದನು. ಚಣಕಾಲ ಕಣ್ಣು ಮುಚ್ಚಿದನು.

ಅವನು ಕಣ್ಣುಬಿಟ್ಟು ನೋಡುವ ಹೊತ್ತಿಗೆ ಕಂಡುದೇನು ? [illegible] ಮಂಜಿನ ಘೂಪ ಒಂದು ಎತ್ತರವಾದ ಕೋಟೆಯನ್ನು ಕಟ್ಟತೊಡಗಿತು. ಮೆಲ್ಲ ಮೆಲ್ಲನೆ ಆವರಿಸಿ ಅದುವರೆಗೂ ತೋರಿದ ಸುಂದರ ದೃಶ್ಯವನ್ನು, ದೇಗುಲದ ಗರ್ಭ ಗುಡಿಯ ತೆರೆಯಂತೆ ಮುಚ್ಚಿತು. ಸುತ್ತಮುತ್ತಲಿನ [illegible] ದಿಂದ ಕಲಾಜಗತ್ತಿಗೆ ಏರಿದಂತಾಗಿ ತೈಲಚಿತ್ರಗಳಾದವು ! ಅಚ್ಚರಿಯಂತೆ ಮೂಡಿ ಮುಚ್ಚಿ ಬರುವ ಮಂಜಿನ ತೆರೆ ಬರಬರುತ್ತಾ ಸೂರ್ಯನ ತಾಪದಿಂದ ಕರಗತೊಡ ಗಿತು. ಅದು ವರೆಗೂ ಕನಸಿಗೆ ಏರಿದ ಗಿಡಮರಗಳು ಮತ್ತೆ ನಿಜರೂಪವನ್ನು ತಾಳಿ ನಿಂತವು. ನಾಲ್ಕು ನಿಮಿಷ ಮಂಜಿನ ಮಜ್ಜನದಲ್ಲಿ ಮಗ್ನವಾಗಿದ್ದ ಜಗತ್ತು ಮೊದಲಿ ಗಿಂತ ನೂರು ಮಡಿ ಚೆಲುವಿನಿಂದ ತುಂಬಿತ್ತು. ಅಷ್ಟರಲ್ಲಿ ಮಂಜಿನಲ್ಲಿ ಮರೆಯಾ ಗಿದ್ದ ಯಾವುದೋ ಹಳ್ಳಿಯ ಗುಡಿಯ ಗೋಪುರದ ಕಲಶವೊಂದು ಹೊಂಬಿಸಿಲಿನಲ್ಲಿ

ಹೊಳೆಯತೊಡಗಿತ್ತು.

ಆ ಧೀರವಾದ ಗುಡಿಯು ಗೋಪುರ ಹೊಸ ಭರವಸೆಯ ಗೆಲ್ಗಂಬದಂತೆ ತೋರಿತು ಸಿದ್ಧರಾಮನಿಗೆ. ಬಹುಶಃ ಮಲ್ಲಯ್ಯ ಅಲ್ಲೆಲ್ಲಿಯಾದರೂ ಇದ್ದಾನೋ ಎಂಬ ಶಂಕೆ ಅವನಿಗೆ. ಮೆಲ್ಲನೆ ಊರನ್ನು ಹೊಕ್ಕನು. ಮಾತಿಲ್ಲದೆ ಬಹುದೂರದ ಪ್ರಯಾಣದಿಂದ ಮಲಿನವಾದ ಉಡಿಗೆಗಳನ್ನು ತೊಟ್ಟವನಾಗಿ, ಹರಿದ ಕಂಬನಿ ಗಳಿಂದ ತೊಯ್ದು ಕಪೋಲದಿಂದ ಬೇರೆ ಯಾವುದೋ ಒಂದು ಜಗತ್ತನ್ನು ವೀಕ್ಷಿ ಸುತ್ತಿರುವಂತೆ ತೋರುವ ಈ ಬಾಲಕನನ್ನು ನೋಡಿ, ಹಳ್ಳಿಯ ಜನ ಬೆರಗಾದರು. 'ಪಾಪ ಯಾರದ್ದೋ ಹುಡುಗ....ಪರದೇಶಿ ಇದ್ದೀತು' ಎಂದು ಹಲವರು ಕನಿಕರಿ ಸಿದರು. 'ಹಡೆದ ತಾಯಿ ಇಲ್ಲವೇನೋ'—ಎಂದು ಮರುಗಿದರು ಹೆಂಗಸರು. ಸಿದ್ಧರಾಮ ಯಾರ ಕಡೆಗೂ ಗಮನಕೊಡದೆ ನೇರವಾಗಿ ಗುಡಿಯೊಳಗೆ ಹೋಗಿ ಮೂಲೆಮೂಲೆಗಳನ್ನು ಅರಸತೊಡಗಿದನು. ಗುಡಿಯ ಪಡಸಾಲೆಯಲ್ಲಿ ಇರುಳೆಲ್ಲ ಬೀಡು ಬಿಟ್ಟು ಆಗ ತಾನೇ ಹೊರಡಲು ಸಿದ್ಧವಾದ ಶ್ರೀಶೈಲದ ಯಾತ್ರಿಕರ ತಂಡ ವೊಂದು ಹುಡುಕು ನೋಟದಿಂದ ಗುಡಿಯಲ್ಲಿ ಸುತ್ತುವ ಈ ಹುಡುಗನನ್ನು ಕಂಡಿತು. ಅವರಲ್ಲಿ ಒಂದಿಬ್ಬರು ಬಂದು ಸಿದ್ಧರಾಮನನ್ನು ಮಾತನಾಡಿಸಿದರು.

"ಯಾರ್ಯಾರಪ್ಪ ಮಗೂ?"

ಸಿದ್ಧರಾಮನು ಮಾತನಾಡಲಿಲ್ಲ. 'ಮಲ್ಲಯ್ಯ, ಮಲ್ಲಯ' ಎಂದು ತೊದ ಲಿದನು.

"ಮಲ್ಲಯ್ಯ! ಯಾರಪ್ಪ ಅವನು?" ಎಂದನು ಒಬ್ಬ.

"ಪರ್ವತದ ಮಲ್ಲಯ್ಯ!" ಎಂದು ಬಿಕ್ಕಿದನು ಸಿದ್ಧರಾಮ.

"ಪರ್ವತದ ಮಲ್ಲಯ್ಯ!" ನಾಲ್ಕು ಚಣ ಚಕಿತರಾದರು ಯಾತ್ರಿಕರು. ಒಡ ನೆಯೆ ಏನೋ ಹೊಳೆದಂತಾಗಿ "ಶ್ರೀಶೈಲದ ಮಲ್ಲಿಕಾರ್ಜುನನೇನಪ್ಪ" ಎಂದ ಅವರ ಲ್ಲೊಬ್ಬ. ಸಿದ್ಧರಾಮನ ಕಣ್ಣುಗಳು ಅರಳಿದುವು. ಮ್ಲಾನವಾದ ಮುಖದಲ್ಲಿ ಮಂದಹಾಸ ಮಿನುಗಿತು, ಆಷಾಢದ ಮುಗಿಲಲ್ಲಿ ಚಂದ್ರ ಇಣುಕಿನೋಡಿದಂತೆ.

"ಅವನೇ ಅವನೇ, ಮಲ್ಲಯ್ಯ; ತೋರಿಸುತ್ತೀರಾ" ಎಂದು ಅಂಗಲಾಚಿ ದನು ಸಿದ್ಧರಾಮ. ಯಾತ್ರಿಕರು ಬೆರಗಾದರು.

"ಎಲಲಾ ಇವನ! ಲೋಕದಲ್ಲಿ ಇಂಥ ಹುಡುಗರು ತಾಯಿಗೋ, ತಂದೆಗೋ ಹಂಬಲಿಸುವವನ್ನು ಕಂಡಿದ್ದೇವೆ. ಹದಿನಾರು ತುಂಬದ ಈ ಹುಡುಗನಿಗೆ ಸಂಸಾರದ ಚಿಂತೆಯ ಬದಲು ದೇವರ ಚಿಂತೆ ಹೆಚ್ಚಾಗಿರುವುದು ಈತನ ಹಿಂದಿನ ಜನ್ಮದ ಪುಣ್ಯ" ಎಂದು ತಮ್ಮಲ್ಲಿಯೇ ಮಾತನಾಡಿಕೊಂಡರು.

ಅಷ್ಟು ಹೊತ್ತಿಗೆ ತುತ್ತೂರಿ ಮೊಳಗಿತು; ಕರಡೆವಾದ್ಯ ಮೊರೆಯಿತು. ಭಜನೆ ಕಾರರ ಗುಂಪು ತಾಳ ತಂಬೂರಿ ಮದ್ದಲೆಗಳ ಮೇಳದಿಂದ ಮಲ್ಲಿಕಾರ್ಜುನನ ಕೀರ್ತ ನೆಗೆ ಮೊದಲು ಮಾಡಿತು. ಉನ್ನತವಾದ ನಂದೀಧ್ವಜವನ್ನು ಹೊತ್ತುಕೊಂಡು

ಒಬ್ಬನು ಕುಣಿಯಲಾರಂಭಿಸಿದನು. ನೂರಾರು ಭಕ್ತರ ಸಂಖ್ಯೆ, ಬಗೆ ಬಗೆಯ ವಾದ್ಯಗಡಣದಿಂದ, ಕೀರ್ತನೆಯ ಘೋಷದಿಂದ ಶ್ರೀಶೈಲಾಭಿಮುಖವಾಗಿ ಹೊರಡಲನುವಾಯಿತು. ಸಿದ್ಧರಾಮನನ್ನು ಕೂಡಿಕೊಂಡ ಆ ಇಬ್ಬರು ಯಾತ್ರಿಕರು ಈ ಹೊನಲನ್ನು ಸೇರಿಕೊಂಡರು. ಯಾತ್ರೆ ಹೊರಟಿತು.

ಎಷ್ಟೋ ದಿನಗಳ ನಂತರ ಒಂದು ಸಂಜೆ ಅನತಿದೂರದಲ್ಲಿ ಕಾಣಿಸಿತು, ಶ್ರೀಶೈಲದ ಗಿರಿಶ್ರೇಣಿ. ಭಕ್ತರು ಸಿದ್ಧರಾಮನಿಗೆ 'ಅದೇ ಶ್ರೀಶೈಲ, ಮಲ್ಲಯ್ಯನ ಪರ್ವತ' ಎಂದು ತೋರಿಸಿದರು. ಯಾವುದನ್ನು ಕಾಣಬೇಕೆಂದು ಬಹುಕಾಲದಿಂದ ಹಂಬಲಿಸಿದ್ದನೋ, ಯಾವುದರ ಹೆಸರು ಅವನ ಶರೀರದಲ್ಲಿ ಮಿಂಚಿನ ನಾಳಿಯನ್ನು ಹರಿಸುತ್ತಿತ್ತೋ, ಯಾವುದು ಸೊನ್ನಲಿಗೆಯ ಹಗಲೂ ತನ್ನ ಬಾಲ್ಯದ ಸ್ವಪ್ನವಾಗಿ ತನ್ನ ಹೃದಯವನ್ನು ಆಕರ್ಷಿಸುತ್ತಿತ್ತೋ ಅದೇ ಪರ್ವತ ಇಂದು ಕಣ್ಣ ಎದುರಿಗೇ ಭವ್ಯವಾಗಿ ನಿಂತಿದೆ! ಸಿದ್ಧರಾಮನ ಕಣ್ಣುಗಳಿಂದ ಆನಂದ ಕಣ್ಣೀರೇ ಬಳಬಳನೆ ನೀರು ಸುರಿದವು; ಮೈತುಂಬ ಘಳಾರನೆ ಹಿಡಿದಂತಾಯಿತು. ತನ್ನ ಆದರ್ಶದ ಕನಸು ನನಸಾಗಿ, ಪರ್ವತವಾಗಿ, ತಾಯಿಯ ರೂಪವಾಗಿ, 'ಬಂದೆಯಾ ಮಗು' ಎಂದು ಕರೆಯುವಂತೆ ತೋರಿತು. ಶ್ರೀಶೈಲದ ಮರ ಮರದಿಂದ, ಕಲ್ಲು ಕಲ್ಲಿನಿಂದ, ಯಾವುದೋ ದಿವ್ಯಗೀತವೊಂದು ಮಧುರಸ್ವರದಿಂದ ಹೊಮ್ಮಿ ತನ್ನ ಸುತ್ತ ಬಳಸಿದಂತಾಯಿತು. ಸಿದ್ಧರಾಮನು ಹಾಗೆಯೇ ಆನಂದದಿಂದ ನೆಲಕ್ಕೆ ಉರುಳಿದನು.

ಹಾ! ಹಾ! ಎಂದು ಜಾತ್ರೆಯ ಜನ ಬಿದ್ದ ಬಾಲಕನನ್ನು ಎತ್ತಿದರು. ತಣ್ಣೀರು ತಟ್ಟಿ, ಗಾಳಿ ಬೀಸಿದರು. ಆನಂದಮೂರ್ಛೆಯಿಂದ ಎಚ್ಚತ್ತ ಹುಡುಗ ಕಣ್ಣು ಬಿಟ್ಟು 'ಶ್ರೀಶೈಲ ಶ್ರೀಶೈಲ' ಎಂದು ತೊದಲಿದನು. "ಪಾಪ ಎಷ್ಟು ದಣಿವಾಗಿತ್ತೋ ಏನೋ. ನಡೆದ ಆಯಾಸದಿಂದ ಹಾಗೆ ಮೂರ್ಛೆಹೋಗಿರಬೇಕು" ಎಂದು ಸಮಾಧಾನಗೊಂಡರು ಯಾತ್ರಿಕರು!

'ಜಯ ಮಲ್ಲಿಕಾರ್ಜುನ' ಎನ್ನುತ್ತ ಯಾತ್ರಿಕರ ಗುಂಪು ಶ್ರೀಶೈಲವನ್ನು ಏರತೊಡಗಿತು. ಸಂಜೆಯ ಬೆಳಕಿನಲ್ಲಿ ಅತ್ತಿತ್ತ ನಿಂತ ಬೆಟ್ಟಗಳ ಶ್ರೇಣಿ ಶಿವನ ಸುತ್ತ ಕಾವಲು ನಿಂತ ಭೂತ-ಭೈರವ ಪರಿವಾರದಂತೆ ತೋರಿತು. ಮೇಲೆ ಏರುತ್ತ ಏರುತ್ತ ಹೋದಂತೆ, ರಮ್ಯಾದ್ಭುತ ದಿಗ್ದಿಗಂತಗಳ ಕಾಂತಿ ಸ್ಥಿರವಾಗಿ ಮಿಂಚಿನ ಕಡಲಂತೆ ಗಿರಿಪಂಕ್ತಿಗಳ ಮೇಲೆ ವ್ಯಾಪಿಸಿತ್ತು. ಗಿರಿಯಾಚೆ ಗಿರಿ, ಅಲೆ ಅಲೆಯಾಗಿ ಹರಡಿದ್ದವು. ಮೆಲ್ಲಮೆಲ್ಲನೆ ಸಂಜೆಯ ಬೆಳಕು ಕರಗಿತು. ದಿಗಂತದಲ್ಲಿ ಉಳಿದ ಸಂಜೆಗೆಂಪಿನಲ್ಲಿ ನಾಂದ ಗಿರಿಶಿಖರಗಳು ಶಿವನ ಸೃಷ್ಟಿಲಾಸ್ಯದಿಂದ ಮೂಡುತ್ತಿರುವ ಪ್ರಥಮ ಕೃತಿಗಳಂತೆ ಭಾಸವಾದವು. ಬರಬರುತ್ತ ಅವೂ ಕೂಡ ಪ್ರಳಯ ತಾಂಡವಹತಿಗೆ ಸಿಕ್ಕು ಪುಡಿಪುಡಿಯಾಗಿ ಎಲ್ಲವೂ ವಿಲಯದಲ್ಲಿ ಕರಗಿ ಹೋದಂತೆ ಕಗ್ಗತ್ತಲಲ್ಲಿ ಮುಳುಗಿ ಹೋದುವು. ಯಾತ್ರಿ

ಕರು ಕಕ್ಕದನಗಳನ್ನು ಹತ್ತಿಸಿಕೊಂಡು ಮುನ್ನಡೆದರು. ಮೊದಲಿಗಿಂತ ಇಮ್ಮಡಿ ಯಾದ ಆವೇಶದಿಂದ ಭಜನೆ ಮಲ್ಲಯ್ಯನಿಗಾಗಿ ಶ್ರೀಶೈಲದಲ್ಲಿ ದಾಳಿ ಇಟ್ಟಿತು. ಶ್ರೀಶೈಲದ ನಂದಿಯು ಅರಣ್ಯ ಮೌನವನ್ನು ಭೇದಿಸಿಕೊಂಡು ಯಾತ್ರಿಕರ ಹೊನಲು ಹರಿತು. ಆ ಭಕ್ತಿಯ ರಸಗಂಗೆಯಲ್ಲಿ, ಮಲ್ಲಯ್ಯನನ್ನು ಕಾಣುವ ತವಕದಲ್ಲಿ ಸಿವ ರಾಮನು ತೇಲಿದನು.

ನಡುರಾತ್ರಿ ಶ್ರೀಶೈಲದ ನಡುವಿನ ಒಂದು ಛತ್ರದಲ್ಲಿ ಕೊಂಚ ವಿಶ್ರಮಿಸಿ ಕೊಂಡ ಯಾತ್ರಿಕರ ತಂಡ ಮತ್ತೆ ಬೆಳಗಿನ ಝಾವ ತನ್ನ ಯಾತ್ರೆಯನ್ನು ಮುಂದುವರಿಸಿತು. ಮತ್ತೊಮ್ಮೆ ಕರಡಿವಾದ್ಯದ ಗರಗಟ ಗಿರಿ ಕಂದರ ಅರಣ್ಯ ಗಳಲ್ಲಿ ಮಾರ್ದನಿಗೊಳಿಸಿತು. ಮುಂಜಾವಿನ ಮೌನವನ್ನು ಮಥಿಸುವ ನಾದದ ಕಡೆಗೋಲಿನಂತೆ ಮೊರೆದ ಆ ವಾದ್ಯಗಳ ಗಡಾಪಣೆಯ ಸದ್ದಿಗೆ ಎಚ್ಚೆತ್ತ ಗಿರಿಯ ಶಿಖರಗಳು ಈ ಯಾತ್ರಿಕರನ್ನು ಬೆರಗಿನಿಂದ ನೋಡಿದವು. ದಾರಿ ಯುದ್ದಕ್ಕೂ ಬಗೆಬಗೆಯ ಶಿವಾಲಯಗಳನ್ನು ಕಾಣುತ್ತಾ ಭಕ್ತಿಯ ಪುಲಕದಲ್ಲಿ ನಾಂದು ಸಿವ ರಾಮನೂ ಮುಂದುವರಿದನು. "ಕಡೆಗಾದರೂ ಮಲ್ಲಯ್ಯ ಕಂಡೇ ಕಾಣುತ್ತಾನೆ. ಆಗ ಅವನನ್ನು ಕೇಳಬೇಕು, ಅಂದು ನವಣೆಯ ಹೊಲದ ಹತ್ತಿರ ಬರುತ್ತೇನೆಂದು ಮಾತು ಕೊಟ್ಟು, ಮೋಸಗೊಳಿಸಿದುದು ಸರಿಯೆ ?—ಎಂದು. ಆ ಕಳ್ಳನೆಯ ಮಲ್ಲಯ್ಯ ಕೈಗೆ ಸಿಗಲಿ. ಮತ್ತೆಲ್ಲಿಗಾದರೂ ಹೋಗಿ ಬಾ ಎಂದರೆ ನಾನು ಹೋಗುವುದೇ ಇಲ್ಲ. ಅವನ ಜೊತೆಗೇ ಇದ್ದು ಬಿಡುತ್ತೇನೆ."—ನಾನಾ ಬಗೆಯ ಮುಗ್ಧ ಮನಸ್ಸಿಗೆ ಸಹಜವಾದ ಈ ಬಗೆಯ ಭಾವಗಳು ಅವನಲ್ಲಿ ಮೂಡಿದುವು.

ಬೆಳಗಾಗುವ ಸೂಚನೆ ತೋರಿತು. ದಟ್ಟವಾದ ಮಂಜಿನ ಹೊದಿಕೆ ಮುಗಿಲಿ ನಿಂದ ಇಳಿದು ಅರಣ್ಯ ಗಿರಿ ಕಂದರಗಳನ್ನು ತುಂಬಿತು. ಮುಗಿಲೇ ಕೀಲು ಕಳಚಿ ಬಿಟ್ಟ ಮೇಲೆ ಧೊಪ್ಪನೆ ಬಿದ್ದಂತೆ ಮಂಜು ವಟ್ಟೈಸಿತು. ಮರಗಳೆಲ್ಲ ಥರಥರನೆ ನಡುಗಿದುವು. ಕಣಿವೆಯ ಹರಹನ್ನೆಲ್ಲಾ ಹಾಲ್ಮಂಜು ತುಂಬಿತು. ಎತ್ತರದ ಶಿಖರಗಳು ಮಾತ್ರ ಮಂಜಿನಿಂದ ಮೇಲೆ ತಲೆಯನ್ನೆತ್ತಿ, ಶಿವಲಿಂಗಗಳಂತೆ ಕುಳಿತವು. ಶ್ರೀಶೈಲವೆಲ್ಲಾ ರಜತಪರ್ವತವಾಯಿತು. ಬೆಳ್ಳಿಬೆಟ್ಟದ ಒಡೆಯನಲ್ಲವೇ ಶಿವ ! ಸಿವ ರಾಮನ ಕಣ್ಣಿಗೆ ಮಂಜು ತುಂಬಿದ ಬೆಟ್ಟ ಸಾಕ್ಷಾತ್ ಕೈಲಾಸದಂತೆಯೇ ಕಾಣಿಸಿತು. ಯಾತ್ರಿಕರ ಗುಂಪು ಪ್ರಬಲವಾದ ಪಾರ್ಶ್ಕೆಯಂತೆ ಆ ಮಂಜಿನ ಮುಸುಕನ್ನು ಸೀಳಿಕೊಂಡು ಮುನ್ನಡೆಯಿತು ; ಕಡೆಗೆ ಮಲ್ಲಿಕಾರ್ಜುನನ ದೇಗು ಲದ ಮಹಾದ್ವಾರವನ್ನು ಸೇರಿತು.

ಯಾತ್ರಿಕರ ಸಾಲು ಕಡಲನ್ನು ಕೂಡುವ ನದಿಯಂತೆ ಮಹಾದ್ವಾರವನ್ನು ಪ್ರವೇಶಿಸಿತು. ವಿಸ್ತಾರವಾದ ದೇವಾಲಯದ ತುಂಬ ಗುಂಭವಾದ ತುಂಬು ಮೌನ ಆವರಿಸಿತ್ತು. ಒಳಗೆ ಮಲ್ಲಿಕಾರ್ಜುನನಿಗೆ ಬೆಳಗಿನ ಮಹಾ ಮಂಗಳಾರತಿಯ ಸಿದ್ಧತೆ ಸಾಗಿತ್ತು. ಲೋಭಾನದ ಹೊಗೆ ತುಂಬಿ ಒಂದು ಬಗೆಯ ಪವಿತ್ರಭಾವ

ವನ್ನು ಪಸರಿಸಿತ್ತು. ಬಾಗಿಲಿಗೆ ಮರೆ ಮಾಡಿದ ತೆರೆಯೊಳಗೆ ಮಲ್ಲಿಕಾರ್ಜುನನ ಅಭಿಷೇಕ ಅಲಂಕಾರಗಳು ಜರುಗುತ್ತಿದ್ದುವು. ಜನರೆಲ್ಲರೂ [illegible] ಕಾಯಿ ಹಿಡಿದು ಮೂಕರಾಗಿ ನಿಂತು, ಗರ್ಭಗುಡಿಯ ತೆರೆ ಸರಿದು [illegible] ದರ್ಶನವಾಗು ವವನ್ನೇ ಕಾಯುತ್ತಿದ್ದರು. ಸಿದ್ಧರಾಮನೂ [illegible], ತಾನು ಕಂಡ, ಕಾಣಬೇಕೆಂದಿರುವ ಮಲ್ಲಯ್ಯನ [illegible] ಕಾದು ಚಕಿತನಾಗಿ ಪುಣ್ಯ ಮುಹೂರ್ತವನ್ನು [illegible].

ಕಡೆಗೆ ಒಳಗೆ ಘಂಟಾನಾದವಾಯಿತು. [illegible] ತೆರೆಯ ಮರೆಯಲ್ಲಿ ಕಾಣಿಸಿತು. [illegible] ಭಕ್ತಿ ಚಿತ್ತರಾಗಿ ಕೈಮುಗಿದು ನಿಂತರು. [illegible] ಗಳು ಮಲ್ಲಿಕಾರ್ಜುನನ [illegible]. [illegible] ಪೂಜಾರಿಯ ಕೈಯ ಕರ್ಪೂರದಾರತಿಯ [illegible] ಲಿಂಗದ ದರ್ಶನವಾಯಿತು. ಜನರೆಲ್ಲಾ ಭಕ್ತಿಯಿಂದ [illegible] ಸಿದ್ಧರಾಮನು ಮಾತ್ರ 'ಎಲ್ಲಿ ಮಲ್ಲಯ್ಯ' ಎಂದು [illegible]. "[illegible], ಕಾಣಿಸುವ ದಿಲ್ಲವೇ? ನಾವೆಲ್ಲಾ ನೋಡುತ್ತಿರುವ ಲಿಂಗವೇ ಮಲ್ಲಿಕಾರ್ಜುನ" ಎಂದು ಅವನನ್ನು ಅಲ್ಲಿಗೆ ಕರೆತಂದವನು. [illegible] ಸಿದ್ಧರಾಮನಿಗೆ [illegible], ಜೊತೆಗೆ ಕೋಪವೂ ಬಂದಿತು. "[illegible] ಮಲ್ಲಯ್ಯ" ಎಂದ. ಜನ ರೆಲ್ಲಾ ಅಪ್ರತಿಭರಾದರು. "ಯಾರು ಈ ಹುಡುಗ, ಮಲ್ಲಿಕಾರ್ಜುನನ್ನು [illegible] ನಲ್ಲ ಎಂದು ಮೂದಲಿಸುವವನು? ಇವನಿಗೆಷ್ಟು [illegible] ಹುಡುಗ ನಿಗೆ" ಎಂದು ಮುನಿಸಿಕೊಂಡರು ಪೂಜಾರಿಗಳು. ಸಿದ್ಧರಾಮನಿಗೆ [illegible] ಕೇಳಿಸಲಿಲ್ಲ. ಕಾವಿಯನ್ನು ತೊಟ್ಟು, [illegible] ಮಾತನಾಡಿದ ಆ ಮಲ್ಲಯ್ಯನೆಲ್ಲಿ; [illegible] ಲಿಂಗದ ಮಲ್ಲಯ್ಯನೆಲ್ಲಿ—ಎನ್ನಿಸಿತು. [illegible] ಮಹಾದ್ವಾರದಿಂದ ಹೊರಕ್ಕೆ ನುಗ್ಗಿದನು. [illegible] ಇಲ್ಲದೆ ಮುನ್ನುಗ್ಗಿದನು. ಜನ ಬೆಪ್ಪು ಬೆರಗಾಗಿ ಈ [illegible] ದರು. ಕ್ಷಣಾರ್ಧದಲ್ಲಿ ಸಿದ್ಧರಾಮ ದಟ್ಟವಾದ [illegible] ಮರೆಯಾದನು.

ದಟ್ಟವಾದ ಅರಣ್ಯದ ನಡುವೆ ಕಲ್ಲು ಬಂಡೆಯೊಂದರ [illegible] ಸಿದ್ಧ ರಾಮನಿಗೆ ತಾನು ಬಂದ ಹಾದಿಯ ಚಿತ್ರಗಳೆಲ್ಲಾ [illegible] ತೋರಿ ಮರೆಯಾದುವು. ಓ, ಎಂಥ ಜಗತ್ತು, ಏನು [illegible]—ಎಂದು [illegible]. 'ಆ ಮಲ್ಲಯ್ಯನೇ ಮೋಸಮಾಡಿ ಮರೆಯಾದನು. ಈ ಜನ ಮಲ್ಲಯ್ಯನನ್ನು ತೋರಿ ಸುತ್ತೇವೆಂದು ಕರೆತಂದು ಗುಡಿಯೊಳಗಿನ ಕಲ್ಲು ದೇವರನ್ನು ತೋರಿದರು..... ಎಲ್ಲಾ ವಂಚನೆ, ಎಲ್ಲಾ ಮೋಸ, ಅವನೆಂಥ ಮಲ್ಲಯ್ಯ, ಕೊಟ್ಟ ಮಾತನ್ನು

ಬಳಸಿಕೊಳ್ಳಲಾರದವನು’ ಎಂಬ ಭಾವನೆ ಒಂದು ಕ್ಷಣ ಬಂದರೆ, ‘ಆ ಮಲ್ಲಯ್ಯನನ್ನು ಕಾಣದೆ ಈ ಜೀವಕ್ಕೆ ಶಾಂತಿಯಿಲ್ಲ’ ಎಂಬ ನಿರ್ಧಾರ ಮತ್ತೊಂದು ಕ್ಷಣ ಪಲ್ಲಿ ನಿಲ್ಲುವುದು.

ಮೆಲ್ಲನೆ ಎದ್ದು ಸಿದ್ಧರಾಮನು ಅರಣ್ಯದ ಹಾದಿಯಲ್ಲದ ಹಾದಿಯಲ್ಲಿ ನಡೆದನು. ಗಿಡುಗಿಡುಗಳ ನಡುವೆ ಹೊಕ್ಕು ‘ಮಲ್ಲಯ್ಯ, ಮಲ್ಲಯ್ಯ’ ಎಂದು ಗೋಗರೆದನು; ಬಂಡೆ ಬಂಡೆಗಳ ನಡುವೆ ನುಗ್ಗಿ ‘ಮಲ್ಲಯ್ಯ, ಮಲ್ಲಯ್ಯ’ ಎಂದು ಕರೆದನು. ಕಾಡನ್ನು ಸೀಳಿಕೊಂಡು ಅವನ ದನಿ ಹರಡಿತು; ಗುಹೆ ಗುಹೆಗಳಲ್ಲಿ ಅವನ ಕರೆ ಮರುದನಿಗೊಟ್ಟಿತು. ಇಂತಹ ಕಾಡಿನಲ್ಲಿ ನನ್ನನ್ನು ಹೀಗೆ ತೊಳಲಿಸುವರೇ ತಂದೆ? ಮನೆಮಠಗಳನ್ನು ತೊರೆದು ನೀನೇ ಗತಿಯೆಂದು ಬಂದ ನನಗೆ ಹೀಗೆ ಮಾಡಬಹುದೇ ತಂದೆ? ನಿನಗೆ ಕರುಣೆಯಿಲ್ಲವೇ? ಕಿವಿಯಿಲ್ಲವೆ? ನನ್ನ ಕರೆಗೆ ಏಕೆ ಓ ಎನ್ನದಿರುವೆ? ಓ ದೆಮ್ಮರಗಳೇ, ನನ್ನ ಮಲ್ಲಯ್ಯನನ್ನು ನೀವು ಕಾಣಿರಾ? ಓ ಹಕ್ಕಿಗಳೇ, ಮಲ್ಲಯ್ಯನನ್ನು ನೀವು ಕಾಣಿರಾ? ನನಗೆ ಒಂದೇ ಒಂದು ಸಲ ಮಲ್ಲಯ್ಯನನ್ನು ತೋರಿಸಲಾರಿರಾ?—ಎಂದು ದೈನ್ಯದಿಂದ ಹಲುಬಿದನು. ಅವನ ಗೋಳುದನಿಗೆ ಸಮಸ್ತ ಕಾನನವೇ ನಿಡುಸುಯ್ಯಿತು.

ನಿಷ್ಕರುಣವಾಗಿ ಬಿಸಿಲೇರುತ್ತಿತ್ತು. ಸುತ್ತಣ ಹೆಮ್ಮರಗಳು ಮಿಡುಕದೆ ನೋಡುತ್ತಿದ್ದವು; ಮೇಲೆ ನೀರವವಾದ ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ತುಂಡು ಮೋಡಗಳು ತೇಲಿ ಕರಗಿ ಮರೆಯಾಗುತ್ತಿದ್ದುವು; ಅಳಿಲುಗಳು ಕೊಂಬೆಯಲ್ಲಿ ಚಿನ್ನಾಟವಾಡುತ್ತ ಕೀಚ್ ಕೀಚ್ ಎಂದು ದನಿ ಮಾಡುತ್ತಿದ್ದುವು. ಸುತ್ತನಿಂತ ಪರ್ವತ ಪಂಕ್ತಿಗಳು ಮಧ್ಯಾಹ್ನದ ನಿದ್ದೆಯಲ್ಲಿ ಒರಗಿದ್ದುವು. ಸೃಷ್ಟಿಯಲ್ಲಿ ಯಾವುದೂ ಮಲ್ಲಯ್ಯನನ್ನು ಅರಿತಂತೆ ತೋರಲಿಲ್ಲ; ಯಾವುದೂ ಮಲ್ಲಯ್ಯನಿರುವ ತಾಣವನ್ನು ತೋರಿಸಲು ಸಿದ್ಧವಾದಂತೆ ತೋರಲಿಲ್ಲ. ತಮ್ಮ ಪಾಡಿಗೆ ತಾವು ತಟಸ್ಥನಾದಂತೆ ತೋರಿ ಸಿದ್ಧರಾಮನ ಅಂತರಂಗದ ವಿರಹದ ಉರಿಯನ್ನೂ ಕೆಣಕಿದುವು.

ಮನಸ್ಸು ಶೂನ್ಯವಾಗಿತ್ತು. ಮುಂದೇನು ಎಂಬ ಪ್ರಶ್ನೆ ಆಕಾಶದಷ್ಟು ಅಗಲವಾಗಿ ಚಾಚಿತ್ತು. ‘ಮಲ್ಲಯ್ಯನನ್ನು ಕಾಣದಿದ್ದ ಮೇಲೆ ಬದುಕಿದ್ದು ಏನು ಪ್ರಯೋಜನ? ಯಾರನ್ನು ಹುಡುಕಿಕೊಂಡು ನಾನಿತ್ತ ಬಂದೆನೋ ಆ ಮೂರ್ತಿ ಮರೆಯಾಗಿದ್ದ ಮೇಲೆ ಈ ಜೀವವಿದ್ದೂ ಏನು ಉಪಯೋಗ? ಮಲ್ಲಯ್ಯನನ್ನು ಕಾಣಬೇಕು; ಇಲ್ಲವೇ ಆ ಪ್ರಯತ್ನದಲ್ಲಿ ಈ ಬಾಳು ಮುಗಿಯಬೇಕು’— ಎನ್ನುವ ನಿರ್ಧಾರಕ್ಕೆ ಬಂದಿದ್ದನು ಸಿದ್ಧರಾಮ. ಅತ್ತು ಅತ್ತು ಕಂಬನಿಯೆಲ್ಲ ಬತ್ತಿತ್ತು. ಮನಸ್ಸು ವಜ್ರಕ್ಕಿಂತ ಕಠಿಣವಾಗಿತ್ತು. ದೃಢನಿರ್ಧಾರದ ಹೆಡೆಯಂತೆ ಮುಖ ನೀರವಾಗಿತ್ತು. ‘ಇಲ್ಲ’, ಇನ್ನು ಹಂಬಲಿಸುವದಿಲ್ಲ; ಅತ್ತು ಕರೆದು ಮುಗಿಯಿತು. ಇನ್ನು ಇರುವುದೊಂದೇ ಮಾರ್ಗ. ನನಗೆ ಮರಣವೇ ಶರಣು’—ಎಂದುಕೊಂಡ.

ಅವನು ತನಗರಿಯದೆಯೇ ಶ್ರೀ ಶೈಲದ ರುದ್ರಗಮ್ಮರಿಯ ತುದಿಗೆ ಬಂದಿದ್ದ. ರುದ್ರಗಮ್ಮರಿ ಹೆಸರಿಗೆ ತಕ್ಕಂತೆ ರುದ್ರವಾಗಿತ್ತು. ಆ ಕಮರಿಗೆ ಬರುವವರೆ ಎಲ್ಲ ವೆಲ್ಲ ಪ್ರುವಿ ಪ್ರುವಿ! ಸಿದ್ಧರಾಮ ಆ ಕಮರಿಯ ದರಿಯಲ್ಲಿ ನಿಂದು ನೋಡಿದ. ಕೆಳಗಿನ ಅಗಾಧವಾದ ವಿಸ್ತರದಲ್ಲಿ ರಾಶಿರಾಶಿಯಾದ ಕಾನನರಾಶಿ ಬಿದ್ದಿರುವ ಭೂತಗಣದಂತೆ ಬಿದ್ದಿತ್ತು. ದೂರದೂರದ ದರಿಗಳ ಮೇಗೆ ಉನ್ನತ ಪಶ್ಚಿಮ ಪರ್ವತ ಪಂಕ್ತಿಗಳು ತರೆತರೆಯಾಗಿ ಹರಡಿದ್ದುವು. ಕೆಳಗಿನ ಕಮರಿ 'ಆ' ಎಂದು ಬಾಯ್ದೆರೆದುಕೊಂಡು ಭೈರವನ ಆಕೃತಿಯಂತೆ, ಅನ್ನಕ್ಕಾಗಿ ಬಾಯಿಬಿಟ್ಟ ಸಿದ್ಧರಾಮನನ್ನು ಆಹ್ವಾನಿಸಿತು. 'ಮಲ್ಲಯ್ಯ ಕಾಣದಿದ್ದರೂ ಮೈದೋರದಿದ್ದರೂ ಇದೇ ಕಮರಿಗೆ ತನ್ನ ತನು ಅರ್ಪಿತವಾಗಲಿ' ಎಂದುಕೊಂಡು ಕಟ್ಟಕಡೆಯದಾಗಿ ಕೈಮುಗಿದು, ಕಣ್ಣು ಮುಚ್ಚಿ ಹೇಳಿದನು: 'ಇದೋ ಮಲ್ಲಯ್ಯ, ಇದೇ ನನ್ನ ಕಡೆಯ ಪೂಜೆ. ನಾನು ನಿನಗಾಗಿ ಹಂಬಲಿಸಿ ಬಂದೆ. ನೀನು ದೊರೆಯಲಿಲ್ಲ. ಕಾಣದಿದ್ದರೂ ಮೈದೋರು. ನೀನು ಭಕ್ತವತ್ಸಲನಾದರೆ, ನೀನು ಕೊಟ್ಟ ದಾನವನ್ನು ನೀನೇ ನಡೆಸುವ ಇಚ್ಛೆ ಇದ್ದರೆ, ಬಾ ನನ್ನನ್ನು ಕರೆದುಕೋ.... ಇಲ್ಲ? ಇಲ್ಲ, ನಿನಗೆ ಕರುಣೆಯಿಲ್ಲ; ತೆಗೆದುಕೋ ಈ ದೇಹವನ್ನು....

ಕಾಡು ಕಣಿವೆ ಶಿಖರಗಳು ಹೋ ಹೋ ಎಂದವು. ಆಕಾಶ ಕೆಳಕ್ಕೆ ಬಾಗಿತು! ರುದ್ರಗಮ್ಮರಿಯ ತುದಿಯಲ್ಲಿ ನಿಂತು ಹಾರಲು ಸಿದ್ಧನಾದ ಸಿದ್ಧರಾಮನ ಮೇಲೆ ಭೋರ್ಗರೆಯುವ ಮಿಂಚಿನ ಕಡಲೊಂದು ಹರಿಯಿತು. ತಲೆಕೆಳಗಾದ ಲಕ್ಷ ನಕ್ಷತ್ರಗಳ ಆ ಹೊನಲು ಅವನನ್ನು ಎಲ್ಲಿಗೋ ಕೊಚ್ಚಿಕೊಂಡು ಹೋಯಿತು. ಕೊಂಚ ಹೊತ್ತಿನ ಮೇಲೆ ಅಮೃತಮಯವಾದ ಮಂದಾನಿಲವೊಂದು ಬೀಸಿತು; ಮಂಜುಳವಾದ ರಾಗಾಲಾಪನೆ ಮೊದಲಾಗಿ ಗಂಭೀರವಾದ ಓಂಕಾರದಲ್ಲಿ ಕರಗಿತು. ಸಿದ್ಧರಾಮನು ನೋಡಿದನು. ತಾನಿರುವುದು ರಜತಾಚಲದ ನೆತ್ತಿಯಲ್ಲಿ; ಸುತ್ತಲೂ ಬೆಳದಿಂಗಳ ಕಡಲು! ಅನಂತ ಶಾಂತಿ; ಅನಂತ ತೃಪ್ತಿ. ಶ್ರೀಶೈಲದ ಕಾನನ ಕಂದರವಿಲ್ಲ; ತಾನು ಯಾರು? ಏಕೆ ಬಂದೆ ಎಂಬುದೂ ತಿಳಿಯದು. ಈ ಬಗೆಯ ಸ್ಥಿತಿಯಲ್ಲಿರುವಾಗ ಮಂಜುಳವಾದ ತಂಬೂರಿಯ ಝೇಂಕಾರ ಕೇಳಿಸಿತು. ಎದುರಿನ ಬೆಳುದಿಂಗಳ ತರಂಗದ ಮೇಲೆ ನಡೆದು ಬಂದರು ಮಲ್ಲಯ್ಯ. ಸಿದ್ಧರಾಮನ ಕಣ್ಣು ಅರಳಿದವು; ಅವರೇ ಅವರೇ ಮಲ್ಲಯ್ಯ! ಅದೇ ಮುಖ; ಅದೇ ಮಂದಹಾಸ; ಅದೇ ಕಾವಿಯ ಉಡಿಗೆ; ಅದೇ ಗಾಂಭೀರ್ಯ. ಸಿದ್ಧರಾಮ ಓಡಿಹೋಗಿ 'ಮಲ್ಲಯ್ಯ' ಎಂದು ಅಳುತ್ತಾ ಅವರನ್ನು ಅಪ್ಪಿಕೊಂಡ. ಸಿದ್ಧರಾಮ ಅವರ ತೋಳ ತೆಕ್ಕೆಯಲ್ಲಿ ಬಿದ್ದ; ಮಾತು-ಮೌನಗಳಾಚೆಯ ದಿವ್ಯ ಆನಂದದಲ್ಲಿ ಕರಗಿ ಹೋದ!

ಕೊಂಚ ಹೊತ್ತು ಕಳೆದಿರಬೇಕು. ಸಿದ್ಧರಾಮ ಕಣ್ಣುತೆರೆದು ಕೇಳಿದ— "ಅವತ್ತು ನನ್ನನ್ನೇಕೆ ಬಿಟ್ಟು ಬಂದಿರಿ?" ಮಾತಿನಲ್ಲಿ ಮುನಿಸಿನ ಸೊಗಡು ಸೇರಿತ್ತು.

"ಇಂದು ನೀನೇ ಬಂದಿದ್ದೀಯಲ್ಲ; ನೋಡೋಣ, ನೀನೇ ಬರುತ್ತೀಯೊ ಇಲ್ಲವೊ ಎಂದು ಹಾಗೆ ಮಾಡಿದೆ."

"ಒಳ್ಳೇ ಪರೀಕ್ಷೆ ನಿಮ್ಮದು! ಮತ್ತೊಂದು ಸಲ ಹೀಗೆ ಮಾಡೀರ?" ಮಲ್ಲಯ್ಯ ನಗುನಗುತ್ತ "ಇಲ್ಲ ಮಗೂ, ಮತ್ತೆ ಹೀಗೆ ಮಾಡುವದಿಲ್ಲ" ಎಂದರು.

"ಹಾಗಾದರೆ, ನಾನು ಕರೆದ ಕಡೆ ಬರುತ್ತೀರೋ?"

"ಓ! ಅದಕ್ಕೇನಂತೆ; ಈಗ ನೀನೇ ಮಲ್ಲಯ್ಯ, ನಾನೇ ಸಿದ್ಧರಾಮ."

"ಬರೀ, ತಮಾಷೆ ಮಾಡುತ್ತೀರಿ."

"ಇಲ್ಲ; ಇಲ್ಲ–ನಿಜವಾಗಿಯೂ; ನೀನು ಏನು ಹೇಳಿದರೆ ಅದನ್ನು ನಾನು ಮಾಡುತ್ತೇನೆ."

"ಬನ್ನಿ, ಹಾಗಾದರೆ, ನಮ್ಮೂರಿಗೆ ಹೋಗೋಣ."

"ನಿಮ್ಮೂರಿಗೆ! ಆಗಲಿ; ಬರುತ್ತೇನೆ, ಬಂದರೆ ಹೀಗಲ್ಲ."

"ಮತ್ತೆ?"

"ಲಿಂಗವಾಗಿ ಮೂಡುತ್ತೇನೆ; ನೀನು ಒಂದು ದೇವಸ್ಥಾನವನ್ನು ಕಟ್ಟಿಸು."

"ಲಿಂಗವಾಗಿ? . . . . ಓ! ಶ್ರೀಶೈಲದಲ್ಲಿರುವ ಲಿಂಗವೂ ನೀವೇ ಏನು?

"ಹೌದು ಮಗು, ನಾನೇ, ಲಿಂಗದಲ್ಲಿ ಮಾತ್ರ ಅಲ್ಲ; ಸಚರಾಚರದಲ್ಲೂ ನಾನೇ."

"ನನಗೆ ಗೊತ್ತೇ ಇರಲಿಲ್ಲ. ಮತ್ತೆ ನೀವು ನಮ್ಮೂರಿಗೆ ಈಗಲೇ ಬನ್ನಿ."

"ನಾನು ಬರುವದನ್ನು ನಿನಗೆ ನಿಧಾನವಾಗಿ ತಿಳಿಸುತ್ತೇನೆ. ಆದರೆ ಅದಕ್ಕೆ ಮುನ್ನ ನೀನು ಕಲ್ಯಾಣಕ್ಕೆ ಹೋಗಿ—"

"ಏನು? ಕಲ್ಯಾಣಕ್ಕೆ? ಯಾವ ಕಲ್ಯಾಣಕ್ಕೆ; ಇಲ್ಲ, ನಾನೆಲ್ಲೂ ಹೋಗುವ ದಿಲ್ಲ; ಮತ್ತೆ ನಮ್ಮೂರಿಗೂ ಬೇಡ. ಇಲ್ಲೇ, ನಾನಿಲ್ಲೇ ನಿಮ್ಮ ಹತ್ತಿರವೇ ಇದ್ದು ಬಿಡುತ್ತೇನೆ."

ಮಲ್ಲಯ್ಯ ನಸು ನಕ್ಕರು. "ಹಾಗೆನ್ನ ಬೇಡ ಮಗೂ; ನೀನಿದ್ದಲ್ಲಿ ನಾನಿದ್ದೇ ಇರುತ್ತೇನೆ. ಹೋಗು ಮೊದಲು ಕಲ್ಯಾಣ ನಗರಕ್ಕೆ ಹೋಗು."

ಸಿದ್ಧರಾಮ ಕೊಂಚ ಯೋಚಿಸಿದನು. "ಸರಿ; ಹೋಗಿ ಏನು ಮಾಡಲಿ?"

"ಅಲ್ಲಿ ಚನ್ನಬಸವಣ್ಣನವರಿದ್ದಾರೆ. ಅವರಿಂದ ದೀಕ್ಷೆಯನ್ನು ಕೈಕೊಳ್ಳ ಬೇಕು." "ಇನ್ನೆಂಥ ದೀಕ್ಷೆ; ನನಗೇತಕ್ಕೆ ದೀಕ್ಷೆ? ಸರಿ; ಕೊಡಲೇ ಬೇಕು ಎನ್ನುವದಾದರೆ ನೀವೇ ಕೊಡಿ."

"ಹಾಗಲ್ಲ ಮಗು; ನಾನೇ ನಿಜವಾಗಿಯೂ ಗುರುವಾದರೂ, ಮರ್ತ್ಯದಲ್ಲಿ ಹುಟ್ಟಿದ ಮೇಲೆ ಅಲ್ಲಿನ ನರಗುರುವೊಬ್ಬನಿಂದ ದೀಕ್ಷೆಯನ್ನು ಕೈಕೊಳ್ಳಬೇಕಾದುದು ಲೌಕಿಕ ಮತ. ನೀನೂ ಅದನ್ನು ಮೀರಬಾರದು."

"ಆ ಆನಂತರ ಇಲ್ಲಿ, ನಾನು ಮಾಡಬೇಕಾದ್ದೇನು?"

" ಕರ್ಮಯೋಗ . . . . . "

" ಕರ್ಮಯೋಗ ! ಹಾಗೆಂದರೆ . . . . . "

" ಕರ್ಮವೇ ಯೋಗ ; ಯೋಗವೇ ಕರ್ಮ ; ಏನು ಮಾಡಿದರೂ ಅದೆಲ್ಲಾ ಕರ್ಮವೇ, ಕಾಯಕವೇ. ಕಾಯಕವೆಲ್ಲವೂ ಪೂಜೆಯೇ. ಇದರ ವಿವರ ನಿನಗೇ ನಿಧಾನವಾಗಿ ಅರಿವಾಗುತ್ತದೆ."

" ಹೇಗೆ ? "

" ಹೇಗೆ? ಹರಿಯುತ್ತಾ ಹರಿಯುತ್ತಾ ಹೊಳೆ ತನ್ನ ಪಾತ್ರವನ್ನು ನಿರ್ಮಿಸಿಕೊಳ್ಳುವಂತೆ, ಹೋಗುತ್ತಾ ಹೋಗುತ್ತಾ ಕಡಲನ್ನು ಕಾಣುವಂತೆ, ಮಾಡುತ್ತಾ ಮಾಡುತ್ತಾ ಕರ್ಮದ ಮಹತ್ವ ತಿಳಿಯುತ್ತದೆ."

" ನೀವು ನನ್ನನ್ನು ಅಗಲಬಾರದು.........ಭಾಷೆ ಕೊಡಿ. "

" ನಾನು ನಿನ್ನನ್ನು ಅಗಲುವುದೆ !........ ನಾನೇ ನೀನು, ನೀನೇ ನಾನು." ಸಿದ್ಧರಾಮ ಅವಾಕ್ಕಾಗಿ ನಿಂತ. ಮತ್ತೆ ಮಲ್ಲಯ್ಯ ನುಡಿದರು --

" ಮೊದಲು ಕಲ್ಯಾಣಕ್ಕೆ, ಚೆನ್ನಬಸವನಲ್ಲಿಗೆ—"

" ಹೋಗಲೇಬೇಕೆ ? "—ಗೋಗರೆದನು ಸಿದ್ಧರಾಮ.

" ಹ್ಞೂ, ಹೋಗಿ ಬಾ ; ಸೊನ್ನಲಿಗೆಯಲ್ಲಿ ಮಾಡಬೇಕಾದುದು ಬಹಳ ಇದೆ."

" ಸರಿ ; ಇನ್ನೇನು ಮಾಡುವದು ; ಹೋಗುತ್ತೇನೆ."

ಮಂಗಳದ ಬೆಳದಿಂಗಳ ತೆರೆ ಮೆಲ್ಲನೆ ಕರಗಿದುವು. ಅದರೊಡನೆ ಮಲ್ಲಯ್ಯನೂ ಕರಗಿದನು. ಮೆಲ್ಲನೆ ದೃಶ್ಯವೆಲ್ಲವೂ ಕರಗಿತು. ಸಿದ್ಧರಾಮನಿಗೆ ಎಚ್ಚರವಾಯಿತು. ಮೈಮೇಲೆ ತಂಗಾಳಿ ಕೈಯಾಡಿಸುತ್ತಿತ್ತು. ಸುತ್ತ ನೋಡಿದ ; ಶುಭ್ರಗಮ್ಮರಿಯ ಮೇಲೆ, ಒಂದು ಮರದ ನೆಳಲಲ್ಲಿ, ಹಸಿರು ಮೆತ್ತೆಯ ಮೇಲೆ ತಾನು ಮಲಗಿರುವದು ತಿಳಿಯಿತು. ದೇಹದ ಆಯಾಸವಾಗಲೀ ಮಾನಸಿಕ ಬೇಸರವಾಗಲೀ ಒಂದಿನಿತೂ ಇರಲಿಲ್ಲ. ಯಾವುದೋ ದಿವ್ಯಪರಿವರ್ತನೆಯೊಂದು ತನ್ನಲ್ಲಿಯೂ ಸುತ್ತಿನ ಸೃಷ್ಟಿಯಲ್ಲಿಯೂ ಆದಂತೆ ತೋರಿತು. ಮೊದಲು ಮನವನ್ನು ದಹಿಸುತ್ತಿದ್ದ ಮಲ್ಲಯ್ಯನ ವಿರಹದ ಉರಿ, ಈಗ ಆರಿ ಅನಂತ ತೃಪ್ತಿಯೊಂದು ಅಂತರಂಗವನ್ನು ತುಂಬಿತ್ತು. ಸಿದ್ಧರಾಮ ಸುತ್ತಲೂ ನೋಡಿದ. ಗಿಡಮರಗಳಲ್ಲಿ, ತೃಣಲತೆಗಳಲ್ಲಿ, ಎಲ್ಲೆಲ್ಲಿಯೂ ಒಂದು ಬಗೆಯ ಮಂದಹಾಸ ಮನೆಮಾಡಿದಂತೆ ತೋರಿತು. ಸುತ್ತ ಶಿಖರಗಳು ಧ್ಯಾನಾನಂದದಲ್ಲಿ ಮೈಮರೆತ ಯೋಗಿಗಳಂತೆ ಕಂಡವು ; ಶುಭ್ರಗಮ್ಮರಿಯ ಅಗಾಧ ಪಾದ ಹಸಿರು ಕಣಿವೆ ಚೈತನ್ಯದ ಉಸಿರಾಡುವಂತೆ ತೋರಿತು. ಮತ್ತೆ ಹಿಂದಿನ ಅನುಭವವನ್ನು ನೆನೆದನು. " ಅದೇ ಶುಭ್ರಗಮ್ಮರಿಯ ಶಿಖರದಲ್ಲಿ ನಾನು ನಿಂತಿದ್ದೆನಲ್ಲವೆ ? ಹಾರಲೆಂದು ನೆಗೆದಾಗ ಯಾವುದೋ ಮಿಂಚಿನ ಕಿರಣವೊಂದು ಮೇಲೆ ಹರಿದು ರಜತಗಿರಿಯ ಮೇಲೆ ಮಲ್ಲಯ್ಯನನ್ನು ತೋರಿಸಿತಲ್ಲವೆ ? ಅದೇನು ಕನಸೋ ಮನಸ್ಸಿನ ಭ್ರಾಂತಿಯೋ !" ಎಂದುಕೊಂಡ ಸಿದ್ಧರಾಮ ಸುತ್ತಲೂ ನೋಡಿದ.

ಶ್ರೀಶೈಲದ ಗಿರಿ ಕಂದರಗಳು ಮೌನವಾಗಿ ನೋಡಿದುವು.-" ಅಲ್ಲ ; ಕನಸಲ್ಲ ಅದು ; ಕನಸಿಗಿಂತ ಬೇರೆಯಾದ ಏನೋ ಒಂದು ! ಆ ! ಎಂತಹ ನೋಟ. ಕಡೆಗೂ ಮಲ್ಲಯ್ಯ ಮೈದೋರಿದನಲ್ಲ. ಅವನು ಹೇಳಿದುದೇನು ? " ನಾನೇ ನೀನು, ನೀನೇ ನಾನು ". " ಲಿಂಗದಲ್ಲಿ ಮಾತ್ರವಲ್ಲ, ಸಚರಾಚರದಲ್ಲೂ ನಾನೇ ! " ಮಾಡಬೇಕಾದುದು " ಕರ್ಮಯೋಗ, ಹೌದು—ಕರ್ಮಯೋಗ ". " ಅದಕ್ಕೆ ಮೊದಲು ಕಲ್ಯಾಣಕ್ಕೆ........ಚೆನ್ನಬಸವನಲ್ಲಿಗೆ ".

ಸಿದ್ಧರಾಮನು ಸ್ವಪ್ನಾನುಭವದಂತಿದ್ದ ಅನುಭಾವಸಿದ್ಧಿಯ ಸನ್ನಿವೇಶವನ್ನು ನೂರು ಸಾರಿ ಚಿತ್ರಿಸಿಕೊಂಡನು. ಅಂತರಂಗದಲ್ಲಿ ಚಿನ್ಮಯವಾದ ದೀಪ್ತಿಯೊಂದು ಅರಳಿ, ಕಣ್ಣುಗಳಲ್ಲಿ ಬೆಳಗುತ್ತಿತ್ತು. ಸುತ್ತಣ ಕಾನನ ಕಂದರ, ಪರ್ವತಶಿಖರಗಳು ಅನಂತ ತೃಪ್ತಿಯಿಂದ ನೋಡಿದುವು.

(ಕರ್ಮಯೋಗಿ)
—ಜಿ. ಎಸ್. ಶಿವರುದ್ರಪ್ಪ



೨೧. ಮುದ್ದು

ಅಂದು ಬೆಳಗಿನಲ್ಲಿ ವಸಂತನನ್ನು ಎಚ್ಚರಗೊಳಿಸಿದುದು ಮುದ್ದುವಿನ ಬಗಳುವಿಕೆ.

ಅವನು ಕಣ್ದೆರೆದು ಬಲಗಡೆ ತಿರುಗಿಕೊಂಡಾಗ ಗೂಡಿನಲ್ಲಿನ ಗಡಿಯಾರದಲ್ಲಿ ಏಳು ಗಂಟೆಯಾದುದು ಕಾಣಿಸಿತು. ಪ್ರತಿದಿನವೂ ಆ ವೇಳೆಯೊಳಗಾಗಿ ಅವನ ತಾಯಿ ಕಮಲಮ್ಮ ಬಂದು ಅವನನ್ನೆಬ್ಬಿಸುವುದು, ವಸಂತ ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿ ಮುದ್ದುವಿಗೆ ರೊಟ್ಟಿ ಹಾಕಿ ತಾನೂ ತಿಂಡಿ ತಿಂದು ಚಹ ಕುಡಿದು ಶಾಲೆಗೆ ಹೊರಡುವುದು ವಾಡಿಕೆಯಾಗಿತ್ತು. ಆದರೆ ಆ ದಿನ ಮಾತ್ರ ಅವನ ತಾಯಿ ಅವನನ್ನೆಬ್ಬಿಸಲು ಬಂದಿರಲಿಲ್ಲ. ಅವನು ಎಚ್ಚರಗೊಂಡುದು ಮುದ್ದುವಿನ ಬಗಳುವಿಕೆಯಿಂದ.

ಅವನು ಎದ್ದು ಅಡುಗೆಮನೆಗೆ ಅಡಿಯಿರಿಸುತ್ತಲೂ, ಸ್ನಾನಮಾಡುತ್ತಲಿದ್ದ ಅವನ [illegible] ರಂಗಣ್ಣ ಹೇಳಿದ :

" ಇವತ್ತು ಶಾಲಿಗೆ ಹೋಗುವದಕ್ಕೆ ಅವಸರ ಮಾಡಬ್ಯಾಡ ವಸಂತಾ. ಒಂದೆರಡು ತಾಸು ಬಿಟ್ಟು ಇಬ್ಬರೂ ಕೂಡಿ ಹೋಗೋಣು."

ವಸಂತ ವಿಸ್ಮಿತನಾಗಿ ಕೇಳಿದ :

" ನೀನೂ ಬರ್ತೀಯಾ ಅಪ್ಪಾ ನಮ್ಮ ಶಾಲೆಗೆ ? "

" ಹೌದಪ್ಪ, ನಿನ್ನ ಲೀವಿಂಗ್ ಸರ್ಟಿಫಿಕೇಟು ತಗೊಳ್ಳಬೇಕಲ್ಲ ನಾವು. "

" ಸರ್ಟಿಫಿಕೇಟು ? ಯಾಕೆ ? "

" ಯಾಕಂದರೆ ನಾಳೆಯೇ ಈ ಊರು ಬಿಟ್ಟು ಹೊರಡಬೇಕಲ್ಲ ನಾವು."

" ಊರು ಬಿಡಬೇಕು ? ಯಾಕೆ ? "

ಎಂಟು ವರ್ಷದ ಆ ಹಸುಳೆಗೆ ಏನು ಹೇಳುವುದೆಂಬುದೇ ತಿಳಿಯಲಿಲ್ಲ ರಂಗಣ್ಣನಿಗೆ. ಆ ವಿಚಾರ ಮಾತನಾಡುವುದಕ್ಕೂ ಅವನಿಗಿಷ್ಟವಿರಲಿಲ್ಲ. ಆಹಾರ ಧಾನ್ಯಗಳ ಮೇಲಿನ ನಿಯಂತ್ರಣವನ್ನು ಸರಕಾರ ರದ್ದುಗೊಳಿಸಿದುದರಿಂದ ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾದ ರೇಶನಿಂಗ್ ಇಲಾಖೆಯ ಸಾವಿರಾರು ಜನ ಗುಮಾಸ್ತೆಯರಲ್ಲೊಬ್ಬ ರಂಗಣ್ಣ. ನಿನ್ನೆಯಷ್ಟೇ ಆ ತಿಂಗಳಿನ ವೇತನವನ್ನು ಪಡೆದುದಾಗಿತ್ತು. ಜಡವಾಗಿದ್ದ ಹೃದಯದಿಂದ ಕಚೇರಿಗೆ ಕೊನೆಯ ನಮಸ್ಕಾರ ಹೇಳಿ ಬಂದುದಾಗಿತ್ತು. ಇನ್ನು ಆ ನಗರವನ್ನು ತ್ಯಜಿಸಿ, ಮನೆಯನ್ನು ಬಿಟ್ಟು ಸಂಸಾರವನ್ನು ಕಟ್ಟಿಕೊಂಡು ಹಳ್ಳಿಗೆ ಹೊರಡಬೇಕು. ಮುಂದೆ ? ಮುಂದಿನದು ಕೇವಲ ಅಂಧಕಾರ.

ಚಹದ ನೀರಿಗೆ ಸಕ್ಕರೆ ಹಾಕುವುದರಲ್ಲಿ ತೊಡಗಿದ್ದ ಕಮಲಮ್ಮ ಹೇಳಿದಳು : " ಇವರ ನೌಕರಿ ಹೋಯ್ತಪಾ ವಸಂತಾ. " ಒಡನೆಯೇ ಅವಳ ಕಣ್ಣುಗಳಲ್ಲಿ ನೀರು ಚಿಮ್ಮಿ ಬಂತು.

ನೌಕರಿ ಹೋದರೇನಾಗುವುದೆಂಬುವನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳ ಬಲ್ಲ ವಯಸ್ಸು ವಸಂತನದಲ್ಲ. " ಅಂದರೆ ? ನಾವು ಮತ್ತೆ ಹಳ್ಳಿಗೆ ಹೋಗೋಮು? "

" ಹೌದು ಮಗೂ. "

ತುಂಬಾ ಸಂತೋಷವಾಯಿತು ವಸಂತನಿಗೆ. ತಮ್ಮ ಹಳ್ಳಿಯೆಂದರೆ ಅವನಿಗೆ ಬಹಳ ಪ್ರೀತಿ. " ಹಳ್ಳಿಯೊಳಗಿರುವ ಮಜಾ ಶಹರದಾಗ ಎಲ್ಲಿಂದ ಬಂದೀತು ! " ಎಂದು ಎಷ್ಟೋ ಸಲ ಆತ ತನ್ನ ಸಹಪಾಠಿಗಳ ಹತ್ತಿರ ಅಂದಿದ್ದ. ಹಳ್ಳಿಯಲ್ಲಿನ ಹೊಲಗದ್ದೆಗಳು, ಹಸುರು ಮುರಿಯುವ ಪೈರು, ಸೀತೆನೆ, ಕಡಲೇಕಾಯಿ, ಮಾವಿನಕಾಯಿ, ನೆಲ್ಲಿಕಾಯಿ, ಬೋರೆಯಕಾಯಿ, ಹಳ್ಳಿಯ ಹಿಂಭಾಗದಲ್ಲಿನ ಗುಡ್ಡ, ಅಲ್ಲಿನ ಬಗೆಬಗೆಯ ಹಣ್ಣುಗಳು, ಹಗಲಿರುಳೂ ಹಾಡುವ ಹಕ್ಕಿ ಪಕ್ಷಿಗಳು, ಹತ್ತಿರದಲ್ಲಿಯೇ ಹರಿಯುವ ಹೊಳೆ, ಅಲ್ಲಿನ ಈಜಾಟ ಜಿಗಿದಾಟ ಕುಣಿದಾಟ ! ಈ ಸಲ ಮುದ್ದು ಬೇರೆ ತನ್ನ ಜತೆಗಿರುವುದು. ಅದನ್ನು ಕರೆದುಕೊಂಡು ಗುಡ್ಡದಲ್ಲೆಲ್ಲ ಸುತ್ತಬಹುದು ; ಮೊಲಗಳನ್ನೂ ನರಿಗಳನ್ನೂ ಕಿರುಬಗಳನ್ನೂ ಬೆದರಿಸಬಹುದು.

ಆಹಾ....ಎಂಥ ಸೊಗಸು....

ಹಾಗೆ ಯೋಚಿಸುತ್ತ ವಸಂತನೆಂದ:

"ಊರಿಗೆ ಹೋದ ಕೂಡಲೆ ಮುದ್ದೂನ್ನ ಕರಕೊಂಡು ನಾ ಬ್ಯಾಟೆಗೆ ಹೋಗುತ್ತೀನಿ ಅಪ್ಪಾ!"

ರಂಗಣ್ಣ ಮಾತನಾಡಲಿಲ್ಲ. ದಡಬಡನೆ ನೀರು ಸುರಿದುಕೊಳ್ಳತೊಡಗಿದ. ಕಂಬನಿಗಳನ್ನು ಒರಸಿಕೊಳ್ಳುತ್ತ ಚಹ ಕಾಯಿಸತೊಡಗಿದಳು ಕಮಲಮ್ಮ.

ಮುಖ ತೊಳೆದುಕೊಂಡು, ರಾತ್ರಿ ಉಳಿದಿದ್ದ ರೊಟ್ಟಿಯನ್ನು ಕೈಯಲ್ಲಿ ಹಿಡಿದುಕೊಂಡು ಪಡಸಾಲಿಗೆ ಧಾವಿಸಿದ ವಸಂತ. ಅವನ ಅಡಿಗಳ ಸದ್ದು ಕೇಳಿ ಮುದ್ದು ಎದ್ದು, ಮುಖದ ಮೇಲೆ ಆನಂದವನ್ನೂ ಪ್ರೀತಿಯನ್ನೂ ತುಳುಕಿಸುತ್ತ ಸುತ್ತಲೂ ನೆಗೆದಾಡತೊಡಗಿತು. ಅದರ ದೊಡ್ಡ ದೊಡ್ಡ, ಕಂದುಬಣ್ಣದ ಕಣ್ಣುಗಳಲ್ಲಿ ಮೂಕ ಕೃತಜ್ಞತೆ ಮೂಡಿಬಂದಿತ್ತು.

ನಾಯಿಮರಿಗೆ ರೊಟ್ಟಿ ತಿನ್ನಿಸಿಯಾದ ಬಳಿಕ ಅದನ್ನು ತೋಳುಗಳಲ್ಲಿ ತಬ್ಬಿ ಹಿಡಿದುಕೊಂಡು ಅದರ ನೆತ್ತಿ ಬೆನ್ನು ಕಾಲುಗಳ ಮೇಲೆಲ್ಲ ಅಕ್ಕರತೆಯಿಂದ ಕೈಯಾಡಿಸಿದ ವಸಂತ. "ನಾಳೆನೇ ನಾವು ಹಳ್ಳಿಗೆ ಹೋಗೋದಪ್ಪಾ ಮುದ್ದೂ. ಅಲ್ಲಿ ಗುಡ್ಡ ಐತೆ, ಮರಡಿ ಐತೆ, ತೋಳ ಅದಾವೆ, ನರಿ ಅದಾವೆ; ನಿನಗ ಮಜಾನೇ ಮಜಾ ಇನ್ನು ನೋಡು. ನೀನೇ ರಾಜಪ್ಪ ಇನ್ನು ನಮ್ಮ ಗುಡ್ಡಕ್ಕೇ" ಎಂದು ಹೇಳುತ್ತಾ, ಕಡುಗಪ್ಪು ಬಣ್ಣದ ತಲೆಯ ಮೇಲೆ, ಮೂಗಿನಿಂದ ನೇರಕ್ಕೆ ಹರಡಿದ್ದ ಬಿಳಿಯ ಪಟ್ಟೆಯನ್ನು ಪ್ರೀತಿಯಿಂದ ಮುದ್ದಿಸಿದ. ಅವನ ಮಾತು ಅರ್ಥವಾಗದಿದ್ದರೂ ಅವನು ಹೇಳುವುದರಲ್ಲಿ ಏನೋ ವಿಶೇಷವಿರಬೇಕೆಂದು ಆ ನಾಯಿ ಮರಿಗೂ ಅನ್ನಿಸದಿರಲಿಲ್ಲ. ತನ್ನ ಉದ್ದವಾದ ನಾಲಿಗೆಯನ್ನು ಹೊರದೆಗೆದು ವಸಂತನ ಕಾಲುಗಳನ್ನು ನೆಕ್ಕುತ್ತ ತನ್ನ ಹರ್ಷವನ್ನು ಪ್ರದರ್ಶಿಸತೊಡಗಿತು, ಮುದ್ದು.

ಹೆಸರಿಗೆ ತಕ್ಕ ಹಾಗೆ ನಿಜಕ್ಕೂ ಮುದ್ದಾದ ನಾಯಿಮರಿ ಮುದ್ದು. ಅಲ್ಲಲ್ಲಿ ಬಿಳಿ ಪಟ್ಟೆಗಳಿಂದೊಡಗೂಡಿದ ಅದರ ಕಪ್ಪು ಬಣ್ಣದ ಕೋಮಲ ದೇಹ, ಪುಟ್ಟ ಪುಟ್ಟ ಕಾಲುಗಳು, ಸೊಗಸಾಗಿ ಸೆಟೆದೆದ್ದು ನಿಲ್ಲುವ ಉದ್ದವಾದ ಬಾಲ ಇವೆಲ್ಲ ಮೊದಲ ನೋಟಕ್ಕೇ ವಸಂತನ ಬಾಲಮನಸ್ಸನ್ನು ಸೂರೆಗೊಂಡಿದ್ದುವು. ಎರಡು ತಿಂಗಳುಗಳ ಹಿಂದೆ ಒಂದು ಸಾಯಂಕಾಲ ಶಾಲೆಯಿಂದ ಬರುತ್ತಿದ್ದಾಗ, ತಿಪ್ಪೆಯಲ್ಲಿ ಬಿದ್ದುಕೊಂಡು ಹಸುಳೆದನಿಯಿಂದ ರೋದಿಸುತ್ತಿದ್ದ ಆ ತಬ್ಬಲಿ ಮರಿಯನ್ನು ಕಂಡು, ಕನಿಕರಗೊಂಡು ಅದನ್ನೆತ್ತಿಕೊಂಡು ಮನೆಗೆ ತೆಗೆದುಕೊಂಡು ಬಂದಿದ್ದನಾತ. ಬಡತನದ ಸಂಸಾರದಲ್ಲಿ ನಾಯಿಮರಿಯನ್ನು ಸಾಕುವ ಸೌಕರ್ಯವಿಲ್ಲದಿದ್ದರೂ, ತಂದೆತಾಯಿ ಪುತ್ರನ ಮನಸ್ಸನ್ನು ನೋಯಿಸಲಿಷ್ಟವಿಲ್ಲದೆ ಅವನ ಬೇಡಿಕೆಗಳಿಗೆ ಸಮ್ಮತಿಸಬೇಕಾಗಿದ್ದರು. ಮರಿಗೆ 'ಮುದ್ದು' ಎಂದು ಹೆಸರಿಟ್ಟು, ತಾಯಿಯಿಂದ ತನಗೆ ದೊರೆಯುತ್ತಿದ್ದ ಹಾಲನ್ನೇ ಅದಕ್ಕೆ ಹಾಕಿ ಅದನ್ನು

ಬೆಳೆಸಿ ದೊಡ್ಡದನ್ನಾಗಿ ಮಾಡಿದ್ದ ವಸಂತ. ವಾರಕ್ಕೊಂದುಬಾರಿ ಪ್ರತಿ ಭಾನುವಾರ ಬಿಸಿನೀರಿನಿಂದ ಅದರ ಮೈಯನ್ನೂ ತೊಳೆಯುತ್ತಿದ್ದ. ಮುದ್ದುವಿಗೆ ರೊಟ್ಟಿ ಅನ್ನ ಹಾಕಿದ ತರುವಾಯವೆ ಆತ ಊಟಕ್ಕೇಳುತ್ತಿದ್ದುದು. ಎಷ್ಟೋ ಸಲ ವಸಂತ ನೊಡನೆ ಅವನ ಶಾಲೆಯವರೆಗೂ ಹೋಗಿ, ಶಾಲೆ ಬಿಡುವವರೆಗೂ ಹೊರಗಡೆ ಕಾದಿದ್ದು, ಅವನ ಜತೆಯಲ್ಲಿಯೇ ಮನೆಗೆ ಬರುತ್ತಿತ್ತು ಮುದ್ದು. ಗೆಳೆಯರೊಡನೆ ಅವನು ಆಟಪಾಟಗಳಿಗಾಗಿ ಹೊರಗಡೆ ಹೊರಟಾಗಲೂ ಅವನ ಜತೆಗೆ ಹೋಗಿ ಬರುತ್ತಿತ್ತು. ರಾತ್ರಿಯ ಊಟ ಮುಗಿದ ಬಳಿಕ ವಸಂತ ಪಡಸಾಲೆಗೆ ಬಂದು, ಮುದ್ದು ಮಲಗುವ ಗೋಣಿಚೀಲ ಸರಿಯಾಗಿದಿಯೋ ಇಲ್ಲವೊ ಎಂದು ನೋಡಿ ಕೊಂಡು, ಅದರ ಮೇಲೆ ಮುದ್ದುವನ್ನು ಮಲಗಿಸಿ, ಒಂದೆರಡು ಸಲ ಅದರ ಬೆನ್ನು ಸವರಿ, "ರಾತ್ರಿಯಾತು, ಇನ್ನು ಮಲಗಿಕೋ ಮುದ್ದು" ಎಂದು ಅಕ್ಕರೆ ಮಾತು ಆಡಿದ ತರುವಾಯವೆ ತಾನು ಮಲಗಿಕೊಳ್ಳಲು ಹೋಗುತ್ತಿದ್ದ. ಆ ನಾಯಿಮರಿ ಯೊಂದಿಗಿದ್ದ ಅವನ ಗಾಢ ಸ್ನೇಹವನ್ನು ಕಂಡು ಅವನ ಶಿಕ್ಷಕರು ಆಗಾಗ ತಮಾಷೆ ಮಾಡುತ್ತಿದ್ದರು. "ಇದೇನೋ ನಿನ್ನ ಒಡಹುಟ್ಟಿದ ತಮ್ಮನ ಹಾಗಿದೆಯಲ್ಲೋ!" ಎಂದು. "ಹೌದು ಇದು ನನ್ನ ತಮ್ಮನೇ" ಎನ್ನುತ್ತಿದ್ದ ವಸಂತ.

೨

ಅಂದಿನ ಇರುಳು ಉರುಳಿ ಬೆಳಗಾಯಿತು.

ಮಧ್ಯಾಹ್ನದ ರೈಲಿಗೆ ಊರಿಗೆ ಹೊರಡುವುದೆಂದು ಮೊದಲೇ ಗೊತ್ತುಮಾಡಿದ್ದುದರಿಂದ ವಸಂತನ ತಂದೆ ತಾಯಿಗಳಿಬ್ಬರೂ ಬೆಳಗಿನ ಜಾವ ಮೂರು ಗಂಟೆಗೆ ಎದ್ದು ಸಾಮಾನುಗಳನ್ನು ಗಂಟು ಕಟ್ಟತೊಡಗಿದ್ದರು. ಗೋಣಿಚೀಲಗಳಲ್ಲಿ ಪಾತ್ರೆ ಪದಾರ್ಥಗಳನ್ನು ತುಂಬಿದುದಾಗಿತ್ತು. ಹಾಸಿಗೆಗಳನ್ನು ಸುರುಳಿ ಸುತ್ತಿ ಹಗ್ಗದಿಂದ ಬಿಗಿಯುವುದಷ್ಟು ಉಳಿದಿತ್ತು.

"ಮುದ್ದೂನ ಗೋಣಿಚೀಲ ತರಲೇನು ಅಪ್ಪಾ?" ಎಂದ ವಸಂತ.

ಕೆಲಸವನ್ನು ಕಳೆದುಕೊಂಡಂದಿನಿಂದ ಹುಚ್ಚನಂತಾಗಿದ್ದ ರಂಗಣ್ಣನಿಗೆ ಮಗನ ಮಾತಿನಿಂದಾಗಿ ಒಮ್ಮೆಲೆ ಕೋಪವೇರಿತು. ಆತ ಸಂತ್ರಸ್ತ ಸ್ವರದಲ್ಲಿ ನುಡಿದ.

"ಮುದ್ದು .... ಮುದ್ದು .... ಯಾವಾಗಲೂ ಮುದ್ದು ಅಂತ ಬಡಕೊ ಳ್ಳೋದು. ನಿನಗೇನೂ ಬುದ್ಧಿಯಿದ್ದ ಹಾಗೆ ಕಾಣುವುದಿಲ್ಲ. ನಾನೇ ಕೂಳು ಸಿಗದೆ ಉಪವಾಸ ಸಾಯುವ ಪ್ರಸಂಗ ಬರತದೋ ಏನೊ. ಇನ್ನು ಆ ಹಾಳು ನಾಯಿಕುನ್ನಿ ಕಟ್ಟಿಕೊಂಡು...."

ಒಮ್ಮಿಂದೊಮ್ಮೆಲೆ ತನ್ನ ತಂದೆ ಹಾಗೆ ಕುಪಿತನಾದುದೇಕೆಂಬುದೇ ಅರ್ಥ ವಾಗಲಿಲ್ಲ ವಸಂತನಿಗೆ. ದಿಗಿಲುಗೊಂಡು, ವಿಸ್ಫುರಿತ ನೇತ್ರಗಳಿಂದ ಆತ ತಂದೆ ಯನ್ನು ದಿಟ್ಟಿಸುತ್ತ ನಿಂತುಕೊಂಡ.

ಮಗನನ್ನು ಸಂತೈಸುವ ದನಿಯಲ್ಲಿ ಕಮಲಮ್ಮ ಹೇಳಿದಳು: "ನಾವು ಹೋಗೋದು ಟ್ರೈನಿನಲ್ಲಿ ಮಗೂ. ನಾಯಿಮರಿಯನ್ನ ಅದರಲ್ಲಿ ಒಯ್ಯಲು ಬರೋದಿಲ್ಲ."

ಮುದ್ದುವಿನ ವಿರುದ್ಧವಾಗಿ ತನ್ನ ತಂದೆ ತಾಯಿಗಳು ಏನೋ ಪಿತೂರಿ ನಡಿಸಿರಬೇಕೆಂದು ವಸಂತನಿಗೆನ್ನಿಸಿತು. ಬಿಗಿದು ಬಂದ ಕಂಠದಿಂದ ಆತ ಕೇಳಿದ: "ಯಾಕಮ್ಮಾ, ಯಾಕೆ ಒಯ್ಯಲು ಬರೋದಿಲ್ಲ?"

"ಟ್ರೈನಿನವರು ನಾಯಿಗಳನ್ನ ಗಾಡಿಯಲ್ಲಿ ಸೇರಿಸೋದಿಲ್ಲ, ವಸಂತಾ."

"ಅದ್ಯಾಕೆ ಸೇರಿಸೋದಿಲ್ಲಮ್ಮಾ? ಸುಳ್ಳು, ಎಲ್ಲಾ ಸುಳ್ಳು. ಮುದ್ದೂನ್ನ ಬಿಟ್ಟು ನಾನೆಂದೂ ಬರುವವನಲ್ಲ," ಎಂದು ದೃಢ ಸ್ವರದಲ್ಲಿ ನುಡಿದ ವಸಂತ. ಒಡನೆಯೆ ಅವನ ಎದೆಯಿಂದ ದುಃಖ ಧಾರೆಯಾಗಿ ಪುಟಿಯತೊಡಗಿತು. ತಾಯಿ ಏನನ್ನು ಹೇಳಿದರೂ ಅವನ ಅಳು ನಿಲ್ಲಲಿಲ್ಲ. ರೈಲಿನ ಸಮಯ ಸಮೀಪಿಸುತ್ತ ಬಂತು. ಇನ್ನೂ ಊಟವಾಗಬೇಕು. ವಸಂತ ಊಟಕ್ಕೂ ಏಳದಾದ.

"ಹುಡುಗ ಹಟ ಹಿಡಿದಿದ್ದಾನೆ. ಮುದ್ದು ಅಂದರೆ ಪ್ರಾಣ ಇವಗೆ. ಅದನ್ನೂ ಒಯ್ದು ಬಿಡೋಣ. ಪಾಪ. ಮತ್ತೆ ಪರದೇಶಿಯಾಗುತ್ತದೆ ಕುನ್ನಿ," ಕಮಲಮ್ಮ ತಡೆತಡೆಯುತ್ತ ಹೇಳಿದಳು.

ರಂಗಣ್ಣ ಹುಬ್ಬು ಗಂಟು ಹಾಕಿ,— "ನೀನೂ ಕೂಡ ಹುಡುಗರ ಹಾಗೇ ಮಾತಾಡ ಹತ್ತಿದೆಯಲ್ಲ! ನೌಕರಿ ಊರಿಗೆ ಎಲ್ಲಾದರೂ ವರ್ಗವಾಗಿ ಹೊರಟಿದ್ದಾಗಿದ್ದರೆ ಇದನ್ನು ಒಯ್ಯಬಹುದಾಗಿತ್ತು. ಆದರೆ . . . ನಾಳೆ ಹ್ಯಾಗೊ . . . ನಾವಿನ್ನು ಹ್ಯಾಗೋ . . . ನಮ್ಮದೇ ನಮಗೆ ಭರವಸೆಯಿಲ್ಲ. ಇನ್ನು ಇದಕ್ಕೆಲ್ಲಿಂದ ಹಾಕೋಣ? ಟ್ರೈನಿನಲ್ಲಿ ನಾಯಿ ಒಯ್ಯಲು ಇದನ್ನು ಸಾಗಿಸೋದೆಂದರೆ ಹುಡುಗಾಟವಲ್ಲ. ದೊಡ್ಡ ಚಾರ್ಜ ಬೀಳುತದೆ. ಎಲ್ಲಿಂದ ತರೋದು ರೊಕ್ಕಾ?" ಎಂದು ಬಡಬಡನೆ ಮಾತನಾಡಿಬಿಟ್ಟ.

ಕಮಲಮ್ಮ ಮತ್ತೆ ದನಿಯೆತ್ತಲಿಲ್ಲ. ಎಂದೂ ಮಗನನ್ನು ಹೊಡೆಯದಿದ್ದ ರಂಗಣ್ಣ ಅಂದು ಅವನ ಅಳುವನ್ನು ನಿಲ್ಲಿಸಲೆಂದು ಎರಡು ಏಟು ಬಿಡಬೇಕಾಯಿತು. ಅದರಿಂದ ವಸಂತನ ಅಳುವನ್ನು ಹೆಚ್ಚಿತೇ ವಿನಾ ನಿಲ್ಲಲಿಲ್ಲ. ಅವನು ಊಟವನ್ನು ಮಾಡಲಿಲ್ಲ. ಆತನು ಅಳುವದನ್ನಾಲಿಸುತ್ತಲೂ ಪಡಸಾಲೆಯಲ್ಲಿ ನಾಯಿಮರಿಯೂ ಗೋಳಿಡಲು ಮೊದಲು ಮಾಡಿತ್ತು. ಕಮಲಮ್ಮ ಎದ್ದು ಹೋಗಿ ಅದರ ಮುಂದೆ ಎರಡು ರೊಟ್ಟಿಗಳನ್ನಿಟ್ಟು ಬಂದಳು. ಮುದ್ದು ಅವುಗಳನ್ನು ಮುಟ್ಟದೆ ವಸಂತನಿಗಾಗಿ ಕಾಯತೊಡಗಿತು. ಕೊನೆಗೂ ವಸಂತ ಊಟ ಮಾಡಲಿಲ್ಲ. ಮಗನನ್ನು ಬಿಟ್ಟು ಕಮಲಮ್ಮನಾದರೂ ಹೇಗೆ ಊಟ ಮಾಡಿಯಾಳು? ಬುತ್ತಿ ಗಂಟು ಕಟ್ಟಿ, ಬಿಸಿ, ರೊಟ್ಟಿಯೊಂದಿಗೇ ನಿಲ್ದಾಣಕ್ಕೆ ಹೊರಟುಬಿಡಬೇಕಾಯಿತು.

ವಸಂತನನ್ನು ಮನೆಯಿಂದ ಹೊರಡಿಸುವದಕೆ ಮೊದಲೇ ರಂಗಣ್ಣ ನಾಯಿ

ಮರಿಯ ಕೊರಳ ಸರಪಳಿಯನ್ನು ಬಿಡಿಸಿ ಅದನ್ನು ಬೆದರಿಸಿ ಹೊರಗೆ ಓಡಿಸಲು ಯತ್ನಿಸಿ ವಿಫಲನಾಗಿದ್ದ. ಮನೆಯ ಮುಂದೆ ಕುದುರೆಗಾಡಿ ಬಂದು ನಿಲ್ಲುತ್ತಲೂ ಅಳುತ್ತಿದ್ದ ಮಗನನ್ನೆತ್ತಿಕೊಂಡು ಕಮಲಮ್ಮ ಪಡಸಾಲೆಗೆ ಬಂದಳು. ನಾಯಿಮರಿ ಊಳಿಡುವದನ್ನು ನಿಲ್ಲಿಸಿ ಹರ್ಷಾತಿರೇಕದಿಂದ ನೆಗೆದು ವಸಂತನ ಕೈಕಾಲುಗಳನ್ನು ಮೂಸಿನೋಡಿ ನೆಕ್ಕತೊಡಗಿತು. ತನ್ನ ಪುಟ್ಟ ದೇಹದಲ್ಲಿನ ಶಕ್ತಿಯನ್ನೆಲ್ಲ ಉಪಯೋಗಿಸಿ ತಾಯ ಹಿಡಿತದಿಂದ ತಪ್ಪಿಸಿಕೊಂಡು ಕೆಳಕ್ಕಿಳಿದು ಮುದ್ದು ಮರಿಯನ್ನೆತ್ತಿ ಅಪ್ಪಿಕೊಂಡು ಕಂಬನಿಗರೆಯತೊಡಗಿದ ವಸಂತ. ಅವನ ಎದೆಯ ಮೇಲೆ ಮುಖ ವಿಟ್ಟು ಆನಂದದಿಂದ ಚೀತ್ಕಾರ ಮಾಡತೊಡಗಿತು ಮುದ್ದು. ಕಮಲಮ್ಮನ ತಾಯ ಹೃದಯ ಕರಗಿಹೋಯಿತು. ನಾಯಿಮರಿಯನ್ನು ಜತೆಗೆ ಕೊಂಡೊಯ್ಯುವ ಬಯಕೆ ಆಕೆಗೂ ಇತ್ತು. ಆದರೆ. . . .

"ಹೊತ್ತಾಯ್ತು ಹೊರಡಿರಿನ್ನು," ಎಂದ ರಂಗಣ್ಣ.

ವಸಂತನ ಆಲಿಂಗನದಿಂದ ನಾಯಮರಿಯನ್ನು ಬಿಡಿಸಿ ಅವನನ್ನು ಕುದುರೆ ಗಾಡಿಗೇರಿಸಬೇಕಾದರೆ ಸಾಕುಸಾಕಾಗಿ ಹೋಯಿತು ರಂಗಪ್ಪನಿಗೆ. ಹುಡುಗನ ಕೆನ್ನೆಗೆ ನಾಲ್ಕು ಏಟು ಬಿಗಿದು ಬಲವಂತದಿಂದಲೇ ಅವನನ್ನೆಳೆದೊಯ್ಯಬೇಕಾಯಿತು. ಪಡಸಾಲೆಯಲ್ಲಿದ್ದ ರೊಟ್ಟಿಗಳನ್ನು ಹೊರಗಡೆ ಬಿಸುಟು ನಾಯಿಮರಿಯನ್ನು ಹೊರ ದೂಡಿ ಬಾಗಿಲು ಮುಚ್ಚಿ, ಮನೆಯನ್ನು ನೆರೆಮನೆಯಲ್ಲಿದ್ದ ಅದರ ಮಾಲೀಕರಿಗೊಪ್ಪಿಸಿ ಗಾಡಿ ಹತ್ತಿದ.

ರೈಲು ನಿಲ್ದಾಣ. ಪ್ಲಾಟಫಾರ್ಮು. ರಂಗಣ್ಣನ ಪರಿವಾರ ರೈಲನ್ನೇರಿದುದೂ ಆಯಿತು. ಜನರ ಕಾಲುಗಳ ನಡುವೆ ನುಸುಳಿಕೊಂಡು ಮುದ್ದು ಪ್ಲಾಟ-ಫಾರ್ಮಿಗೆ ಪ್ರವೇಶಿಸಿ ವಸಂತನಿದ್ದ ಡಬ್ಬಿಯನ್ನೇರಲು ಯತ್ನಿಸತೊಡಗಿತು. ತನ್ನೆದೆಯಲ್ಲಿನ ದುಃಖವೆಲ್ಲ ಕಿತ್ತುಬರುವಂತೆ ಬಗುಳತೊಡಗಿತು. ಒಳಗಡೆ, ಡಬ್ಬಿಯಲ್ಲಿ ಅದಕ್ಕಿಂತಲೂ ಗಟ್ಟಿಯಾಗಿ ದನಿ ತೆಗೆದು ಆಕ್ರೋಶ ಮಾಡುತ್ತಿದ್ದ ವಸಂತ. ಅವನನ್ನು ಬಿಗಿಯಾಗಿ ಹಿಡಿದುಕೊಂಡು ಕುಳಿತಿದ್ದ ರಂಗಣ್ಣ ಆಗಾಗ ನಾಯಿಯ ಕಡೆ ತಿರುಗಿ, ಇಷ್ಟವಿಲ್ಲದಿದ್ದರೂ "ಹಚೀ ಹಚೀ" ಎಂದು ಅದನ್ನು ದೂರ ಓಡಿಸಲು ಯತ್ನಿಸುತ್ತಿದ್ದ. ಅದರ ಆತ್ಮೀಯತೆಯ ಪಟವನ್ನು ಕಂಡು ಅವನ ಕರುಳೂ ಮರುಗುತ್ತಿತ್ತು. ಏನಾದರೇನು, ಅದನ್ನು ಜತೆಗೆ ಕರೆದೊಯ್ಯುವಂತಿರಲಿಲ್ಲ.

ಸಿಳ್ಳು ಹಾಕಿ ಮುಂದೆ ಹೊರಟಿತು ರೈಲು. ತಾಯಿಯನ್ನು ಕಳೆದುಕೊಂಡು ಗೋಳಿಡುವ ತಬ್ಬಲಿ ಕೂಸಿನಂತೆ ರೋದಿಸುತ್ತ ಮುದ್ದು ರೈಲಿನ ಪಕ್ಕದಲ್ಲಿ ಓಡತೊಡಗಿತು. ಪ್ಲಾಟಫಾರ್ಮನ್ನು ಹಿಂದೆ ಹಾಕಿ ಒಂದು ನಿಮಿಷದಲ್ಲಿಯೇ ರೈಲು ನಿಲ್ದಾಣವನ್ನು ತ್ಯಜಿಸಿ ದೂರ ಹೋಗಿ ಕಣ್ಮರೆಯಾಯಿತು. ಒಂದು ಒಂದೂವರೆ ಮೈಲಿನ ವರೆಗೂ ರೈಲು ದಾರಿಯಲ್ಲೇ ಓಡುತ್ತಾ ಹೋಗಿ ಅನಂತರ ಶಕ್ತಿ ಕುಗ್ಗಿ ಸೋತು ತೇಕುತ್ತ ನಿಂತುಕೊಂಡಿತು ಮುದ್ದು; ನಾಲಗೆಯನ್ನು ಹೊರಚಾಚಿದು

ದೀರ್ಘವಾಗಿ ಉಸಿರಾಡುತ್ತ ಕಿರುಗಣ್ಣು ತೆರೆದು ಎಷ್ಟೋ ಹೊತ್ತು ಅಲ್ಲಿಯೇ ಬಿದ್ದುಕೊಂಡಿತು. ಅನಂತರ ಮೇಲಕ್ಕೆದ್ದು ನಿಧಾನವಾಗಿ ನಡೆದುಕೊಂಡು ಮತ್ತೆ ನಿಲ್ದಾಣಕ್ಕೆ ಹಿಂದಿರುಗಿ ಬಂದು ಪ್ಲಾಟ್‌ಫಾರ್ಮಿನ ಮೇಲೆ ಐದಾರು ಬಾರಿ ಸುತ್ತಿತು. ಮತ್ತೆ ವೇಗವಾಗಿ ಓಡುತ್ತಾ ಮನೆಗೆ ಧಾವಿಸಿತು. ಮುಚ್ಚಿದ ಬಾಗಿಲಿನಾಚೆ ನಿಂತು ಎಷ್ಟೋ ಹೊತ್ತಿನ ವರೆಗೂ ಅತ್ತುಕೊಂಡಿತು. ವಸಂತ ಶಾಲೆಗೆ ಹೋಗಿರಬಹುದೆಂದು ಅನ್ನಿಸಿತೋ ಏನೋ, ಥಟ್ಟನೆ ಅತ್ತ ಧಾವಿಸಿತು. ಅಲ್ಲಿಯೂ ಅವನನ್ನು ಕಾಣದೆ, ತನ್ನ ಗೆಳೆಯನೊಡನೆ ಅವನು ಆಡುತ್ತಿದ್ದ ಸ್ಥಳಗಳನ್ನೆಲ್ಲ ಸುತ್ತಿ ಹುಡುಕಿತು. ಸಾಯಂಕಾಲದ ವರೆಗೂ ನಗರದಲ್ಲೆಲ್ಲ ತಿರುಗಿ ಕತ್ತಲಾಗುತ್ತಲೂ ಮನೆಗೆ ಹಿಂದಿರುಗಿ ಬಂದು ಸುಮ್ಮನಾಗಿ ರೋದಿಸುತ್ತ ಕಟ್ಟೆಯ ಮೇಲೆ ಬಿದ್ದುಕೊಂಡಿತು. ಬೆಳಗಿನಿಂದ ಹೊಟ್ಟೆಗೇನೂ ಬಿದ್ದಿರಲಿಲ್ಲವಾದರೂ ಆಗ ರೊಟ್ಟಿಯ ನೆನಪಿರಲಿಲ್ಲ ಮುದ್ದುವಿಗೆ. ವಸಂತನನ್ನು ಕಳೆದುಕೊಂಡ ಶೋಕಾವೇಗದಲ್ಲಿ ಅದಕ್ಕೆ ಬೇರಾವ ಪರಿವೆಯೂ ಇರಲಿಲ್ಲ. ಆ ಮನೆಯೊಡೆಯ ಹೊರಗೆ ಬಂದು ಮರಿಯನ್ನು ಕಂಡು ಕನಿಕರಪಟ್ಟು ರೊಟ್ಟಿಯೊಂದನ್ನು ತಂದು ಹಾಕಿದ. ಮುದ್ದು ಒಂದು ಬಾರಿ ಆ ರೊಟ್ಟಿಯತ್ತ ದೃಷ್ಟಿ ಹರಿಸಿತು; ಮತ್ತೆ ಮುಖವನ್ನು ಹಿಂಗಾಲುಗಳಲ್ಲಿ ಮುಚ್ಚಿಕೊಂಡು [illegible] ರೋದಿಸತೊಡಗಿತು.

೩

[illegible] ಆಹಾರವನ್ನು ಮುಟ್ಟಲಿಲ್ಲ ಮುದ್ದು. [illegible] ಬಿದ್ದುಕೊಳ್ಳುವುದು, ಬೆಳಗಾಗುತ್ತಲೂ [illegible] ಕಿವಿಗಳನ್ನು ನಿಗುರಿಸಿ ಕಣ್ಣುಗಳನ್ನಗ-[illegible] ಓಡುವುದು, ಒಂದರ್ಧ ತಾಸು [illegible] ಅವನ ಶಾಲೆಗೆ ಹೋಗುವುದು, ಹುಡುಗ[illegible] ಗುಂಪಿನಲ್ಲಿ ವಸಂತನನ್ನು ಅರಸಿ [illegible] ಪ್ಲಾಟ್‌ಫಾರ್ಮಿಗೆ ನುಗ್ಗಿ ಅಲ್ಲಿ ನಿಂತ [illegible] ಅಲೆಯುವುದು, [illegible] ಮೇಲೆ ಬಿದ್ದುಕೊಳ್ಳುವುದು.

[illegible] ಆ ಮನೆಗೆ ಇನ್ನೊಂದು [illegible] ಮತ್ತೆ ಬಂದರೆಂಬ [illegible] ನುಗ್ಗಿತು. [illegible] ಅಟ್ಟಿಬಿಟ್ಟರು. [illegible] ಆ ಮನೆಯೆದುರಿನ [illegible]

ಮೂರನೆಯ ದಿನ ಮಾತ್ರ ಮುದ್ದುವಿಗೆ ಹಸಿವೆಯನ್ನು ತಡೆಯಕೊಳ್ಳಲಾಗಲಿಲ್ಲ. ಬಳಿಯಲ್ಲಿದ್ದ ಕಸದ ಗುಂಡಿಗೆ ಹೋಗಿ ತಾನು ತಿನ್ನಬಹುದಾದವನ್ನೆಲ್ಲ ತಿಂದು ಮತ್ತೆ ಗಿಡದ ಬುಡಕ್ಕೇ ಬಂದು ಎದುರು ಮನೆಯ ಕಡೆಗೇ ದೃಷ್ಟಿಯಿಟ್ಟು ಬಿದ್ದುಕೊಂಡಿತು.

ಒಂದು ತಿಂಗಳು ಹಾಗೆ ಕಳೆಯಿತು. ಮುದ್ದು, ಆ ಮನೆಯೆದುರಿನ ಜಾಗದಿಂದ ಕದಲಲಿಲ್ಲ. ಇಂದಿಲ್ಲ ನಾಳೆಯಾದರೂ ತನ್ನ ಪುಟ್ಟ ಒಡೆಯ ಬಂದೇ ಬರುವನೆಂಬ ನಂಬಿಕೆ ಅದರದು.

ಅಷ್ಟರಲ್ಲಿ ಮಳೆಗಾಲ ಪ್ರಾರಂಭವಾಗಿತ್ತು. ಎಂಟು ತಿಂಗಳ ವರೆಗೆ ಮನೆಯೊಳಗಡೆ ಬೆಚ್ಚನೆಯ ಸ್ಥಳದಲ್ಲಿ ಗೋಣಿ ಚೀಲದ ಮೇಲೆ ಮಲಗುತ್ತ ಪ್ರೇಮಪೂರಿತ ಆರೈಕೆಯಲ್ಲಿ ಬೆಳೆದು ಬಂದಿದ್ದ ಮುದ್ದು ಈಗ ಮಳೆಯಲ್ಲಿ ತೋಯಿಸಿಕೊಂಡು ನರಳತೊಡಗಿತಾದರೂ ಆ ಗಿಡವನ್ನು ತ್ಯಜಿಸಲಿಲ್ಲ. ಕಸದ ತೊಟ್ಟಿಯಲ್ಲಿ ಬಿದ್ದುದರಿಂದಾಗಿ ಅದರ ದೇಹಕ್ಕೆಲ್ಲ ಚರ್ಮರೋಗ ಅಂಟಿಕೊಂಡಿತು. ಉಪವಾಸ, ಕೊರಗು, ರೋಗ ಎಲ್ಲವೂ ಸೇರಿ ಮುದ್ದು ಅರ್ಧಕ್ಕರ್ಧ ಸೊರಗಿ ಬಡವಾಯಿತು. ಮೊದಲಿನ ಅದರ ಅಂದ ಚೆಂದಗಳೆಲ್ಲ ಮುಸುಳಿಸಿ ಹೋದುವು. ದಿನಗಳುರುಳಿದ ಹಾಗೆ ಮರಿಯ ಮೈಗೆ ಹುಣ್ಣುಗಳಾಗಿ ಕೀವು ತುಂಬಿ ದುರ್ವಾಸನೆ ಹೊಡೆಯ ತೊಡಗಿತು. ಎದ್ದು ನಾಲ್ಕು ಹೆಜ್ಜೆ ನಡೆಯುವುದರೊಳಗಾಗಿಯೆ ಬಳಲಿಕೆಯಾಗತೊಡಗಿತು. ಅಂಥ ಸ್ಥಿತಿಯಲ್ಲೂ ವಸಂತನ ಶೋಧಕ್ಕಾಗಿ ಅಲೆಯುವುದನ್ನು ನಿಲ್ಲಿಸಲಿಲ್ಲ ಮುದ್ದು. ಅವನು ಧರಿಸುತ್ತಿದ್ದಂಥ ಅಂಗಿ ಚಣ್ಣಗಳನ್ನು ಧರಿಸಿ ಕಂಕುಳಲ್ಲಿ ಪುಸ್ತಕದ ಚೀಲ ಹಿಡಿದು ಶಾಲೆಗೆ ಹೋಗುವ ಬಾಲಕರನ್ನು ಕಂಡೊಡನೆ ಆತುರತೆಯಿಂದ ಎದ್ದು ಕುಂಟುತ್ತ ಕುಂಟುತ್ತ ಅವರನ್ನು ಹಿಂಬಾಲಿಸಿಕೊಂಡು ಹೋಗಿ ಅವರನ್ನೆಲ್ಲ ಮೂಸಿ ನೋಡಿ ತನ್ನ ಒಡೆಯನನ್ನು ಅಲ್ಲಿ ಕಾಣದೆ ದುಃಖದಿಂದ ಹೊರಳಿ ಬಂದು ನೆಲದ ಮೇಲೆ ಮುಖ ಚೆಲ್ಲಿ ಬಿದ್ದುಕೊಳ್ಳುತ್ತಿತ್ತು.

ಒಂದು ಸಾಯಂಕಾಲ ಶಾಲೆಯ ಬಾಲಕರು ಕೆಲವರು ಬೀದಿಯಲ್ಲಿ ಓಡುತ್ತ ಬರುತ್ತಿದ್ದಾಗ ವಸಂತನೇ ಶಾಲೆಯಿಂದ ಬಂದನೆಂದು ಭಾವಿಸಿ ಮುದ್ದು ಧಿಗ್ಗನೆದ್ದು ಬಂದಿತು. ಅದರ ವಿಕಾರ ರೂಪವನ್ನು ಕಂಡು ಅಸಹ್ಯಪಟ್ಟುಕೊಂಡ ಬಾಲಕರು ಓಟ ನಿಲ್ಲಿಸಿ ನಿಂತು ಅದರ ಕಡೆ ಕಲ್ಲು ಬೀಸಿದರು. ತಾನು ಅವರಿಗಾವ ಅಪಾಯ ಮಾಡದಿದ್ದರೂ ಅವರು ಕಲ್ಲೆಸೆಯುವುದನ್ನು ಕಂಡು ಕೆರಳಿದ ಮುದ್ದು ಅವರ ಮೇಲೆರಗಿ ಒಬ್ಬ ಹುಡುಗನನ್ನು ಕಚ್ಚಿ ಗಾಯಗೊಳಿಸಿತು. "ಹುಚ್ಚುನಾಯಿ .... ಹುಚ್ಚುನಾಯಿ ...." ಎಂದು ಆಕ್ರೋಶ ಮಾಡುತ್ತಾ ಹುಡುಗರು ಓಡಿಹೋದರು.

ಅಂದಿನಿಂದ ಪ್ರತಿ ದಿನವೂ ಅವರು ಮುದ್ದುವನ್ನು ಕಂಡೊಡನೆಯೇ ಕಲ್ಲುಗಳನ್ನೆಸೆಯ ತೊಡಗಿದರು. ಆ ಮನೆಯೆದುರಿನ ಜಾಗದಿಂದ ಹೊರಡಿಸಿ ಆ ಬೀದಿಯಿಂದ ಅದನ್ನು ಓಡಿಸಿಬಿಡುವುದೆಂದೇ ಅವರು ಗಟ್ಟಿ ಮಾಡಿಕೊಂಡಿದ್ದರು.

ಮುದ್ದು ಮಾತ್ರ ತನ್ನ ಸ್ಥಳ ಬಿಟ್ಟು ಹೋಗಲಿಲ್ಲ. ಹೊಡೆಯ ಬಂದವರನ್ನು ಕಚ್ಚಿ ಪ್ರತಿಭಟಿಸಿ ಹೋರಾಡತೊಡಗಿತು. ಹಾಗೆ ಅದು ಐದಾರು ಹುಡುಗರನ್ನು ಕಚ್ಚುತ್ತಲೂ ಬೀದಿಯುದ್ದಕ್ಕೂ ಹಾಹಾಕಾರವೆಬ್ಬಿಸಿತು. ಬೀದಿಯ ಹಿರಿಯರನೇಕರು ಒಂದು ಬೆಳಗ್ಗೆ ಅದನ್ನು ಹೊಡೆದೋಡಿಸಿ ದೂರ ಅಟ್ಟಿಬಿಟ್ಟರು.

ಕತ್ತಲಾಗುವ ವರೆಗೂ ಅಲ್ಲಿ ಇಲ್ಲಿ ಅಲೆಯುತ್ತಿದ್ದು, ಅನಂತರ ಆ ಬೀದಿಗೇ ಬಂದು ತನ್ನ ಸ್ಥಳದಲ್ಲೇ ಮಲಗಿಕೊಂಡಿತು ಮುದ್ದು. ಬೆಳಗಾಗುತ್ತಲೂ ಮತ್ತೆ ಅದನ್ನು ಕಂಡ ಜನರು ತಮ್ಮತಮ್ಮಲ್ಲಿ ಮಾತನಾಡಿಕೊಂಡು ಅದನ್ನು ತೀರಿಸಿಬಿಡುವುದೇ ಸರಿಯಾದ ಉಪಾಯವೆಂದು ನಿರ್ಧರಿಸಿ ಪೋಲೀಸು ಕಚೇರಿಗೆ ದೂರು ಕಳಿಸಿದರು.

ನಗರದಲ್ಲಿ ಪೋಲಿ ನಾಯಿಗಳ ಹಾವಳಿ ಬಹಳವಾಗಿದ್ದುದರಿಂದ ಅವುಗಳನ್ನು ತೀರಿಸಿಬಿಡುವುದಾಗಿ ಪೋಲೀಸು ಖಾತೆ ಕೆಲ ದಿನಗಳ ಹಿಂದೆಯೆ ಪತ್ರಿಕೆಯಲ್ಲಿ ಪ್ರಕಟನೆ ಹೊರಡಿಸಿತ್ತು. "ಸಾಕು ನಾಯಿಗಳನ್ನು ಅವುಗಳೊಡೆಯರು ಸರಪಳಿಗಳಿಂದ ಕಟ್ಟಿ ಮನೆಯೊಳಗಡೆ ಇಟ್ಟುಕೊಳ್ಳಬೇಕು. ಬೀದಿಯಲ್ಲಿ ಕಾಣಿಸುವ ಭಿಕಾರಿ ನಾಯಿಗಳನ್ನೆಲ್ಲ ಪೋಲೀಸರು ಗುಂಡಿಕ್ಕಿ ಕೊಲ್ಲುವರು" ಎಂಬುದು ಆ ಪ್ರಕಟನೆಯ ತಾತ್ಪರ್ಯವಾಗಿತ್ತು.

ಪತ್ರಿಕೆಯಲ್ಲಿ ಬಂದ ಪ್ರಕಟನೆಯ ವಿಚಾರ ಮೂಕಪ್ರಾಣಿ ಮುದ್ದುವಿಗೆ ತಿಳಿಯುವುದಾದರೂ ಹೇಗೆ? ತನ್ನನ್ನು ಸಾಕಿ ಸಲಹಿದವರು ಒಂದಲ್ಲೊಂದು ದಿನ ಬಂದೇ ಬರುವರೆಂಬ ಆಸೆಯಿಂದ ಗಿಡದ ಕೆಳಗೆ ಮಲಗಿಕೊಂಡು ಎದುರು ಮನೆಯತ್ತ ತನ್ನ ದೃಷ್ಟಿ ಹರಿಸಿ ಮುಚ್ಚಿದ ಕಿಟಕಿ ಬಾಗಿಲುಗಳನ್ನು ದಿಟ್ಟಿಸಿ ಕಾತರದಿಂದ ಕಾದಿದ್ದ ಮುದ್ದುವಿಗೆ ಸಾವು ತನ್ನ ಸಮೀಪದಲ್ಲೇ ನಡೆದುಬರುತ್ತಿದ್ದುದರ ಅರಿವಿರಲಿಲ್ಲ.

ಒಂದು ಭಾನುವಾರ ಬೆಳಿಗ್ಗೆ ವ್ಯಾನಿನ ಮೇಲೆ ಹೊರಟು ಬೀದಿ ಬೀದಿ ಸುತ್ತಿ ಪೋಲಿ ನಾಯಿಗಳನ್ನು ಗುಂಡಿಕ್ಕಿ ಕೊಲ್ಲುತ್ತಾ ನಡೆದಿದ್ದ ಪೋಲೀಸು ಅಧಿಕಾರಿ ಮುದ್ದುವಿನ ಎದುರಿಗೆ ಬಂದಾಗ ನರಳುತ್ತಿದ್ದ ಹಾಗೆ ಆಯಾಸದಿಂದ ಜಡವಾಗಿದ್ದ ಅದರ ದೃಷ್ಟಿ ಅವರತ್ತ ತಿರುಗಿತು. ಬಂದೂಕನ್ನು ಅದರ ಕಡೆ ಗುರಿಯಿಟ್ಟು ಗುಂಡು ಹಾರಿಸಿದ ಅಧಿಕಾರಿ. ಮುದ್ದುವಿನ ರಕ್ತವು ಮರಳಿನ ಬೀದಿಯ ಪಟ್ಟಿಯನ್ನು ತೊಯ್ಸಿ ಹರಿದು ಒಣಗಿಹೋಯಿತು. ಅದರ ಸಂಕಷ್ಟ ಮುಗಿದು ಒಮ್ಮೆಲೆ ಪ್ರಶಾಂತವಾಯಿತು.

('ಬಿರುಗಾಳಿ' ಸಣ್ಣ ಕತೆಗಳ ಸಂಗ್ರಹ)

—ಬಸವರಾಜ ಕಟ್ಟೀಮನಿ

೨೨. ವಿದ್ಯಾರಣ್ಯರ ವಿಜಯ ಮಂತ್ರ

ನನ್ನ ಕನ್ನಡ ಕವರರೇ,

ಕನ್ನಡಿಗರಾದ ನೀವು ಇಂದು ಕಣ್ದೆರೆದು ಹಿಂದಿನ ವೈಭವದ ಅವಶೇಷಗಳನ್ನು ಕಂಡು ಕಳೆಮುಂಬತೊಡಗಿದ್ದೀರಿ; ಗತಿಸಿದ ವಿಭೂತಿಗಳನ್ನು ಸ್ಮರಿಸಿ ಹುರುಪುಗೊಳ್ಳುತ್ತಿದ್ದೀರಿ ; ಹಾಳು ಹಂಪೆಯನ್ನು ಕಂಡು, ಅದು ವಿಜಯನಗರದ ಪೂರ್ವ ಚಿಹ್ನವೆಂಬಂತೆ ಪುಲಕಗೊಳ್ಳುತ್ತಿದ್ದೀರಿ ; ವಿದ್ಯಾರಣ್ಯನನ್ನು ಮಾಧವಾಚಾರ್ಯನೆನ್ನದೆ ಕನ್ನಡ ಕುಲದ ಯತಿವರನೆಂದು ಬರೆಯುತ್ತಿದ್ದೀರಿ ; ಕರ್ನಾಟಕದ ಅಧಿದೈವತವಾದ ಭುವನೇಶ್ವರಿಯನ್ನು ವಂದಿಸಿ ಪುನೀತರಾಗುತ್ತಿದ್ದೀರಿ; ಕನ್ನಡದ ನಾಡಗುಡಿಯ ಕೆಳಗೆ ಕನ್ನಡಿಗರೆಲ್ಲರೂ ನೇರಿ ಒಕ್ಕೊರಲಿನಿಂದ "ಎಲ್ಲಿರೂ ಒಂದೇ ! ಒಂದೇ" ಎಂದು ಉಗ್ಗಡಿಸುತ್ತಿದ್ದೀರಿ ; ಆರು ನೂರು ವರುಷಗಳ ಹಿಂದೆ ವಿದ್ಯಾನಗರವನ್ನು ಕಟ್ಟಿದಂತೆ, ಇಂದೆಯೂ, ವಿದ್ಯಾನಗರವನ್ನು ನಿರ್ಮಿಸುವ ಎತ್ತುಗಡೆಯಲ್ಲಿದ್ದೀರಿ. ಇದೆಲ್ಲವೂ ಒಳ್ಳೆಯ ಲಕ್ಷಣವೆಂದೇ ಹೇಳುವೆನು.

ನನ್ನ ಎಣಿಕೆಯಿಂದ ಕನ್ನಡ ಕುಲದಲ್ಲಿ ಇಂದು ಎರಡು ವಿಭಾಗಗಳನ್ನು ಮಾಡಬಯಸುವೆನು. ಕಲಿತ ಕುಲ ಒಂದು, ಕಲಿಯದ ಕುಲ ಇನ್ನೊಂದು. ಕಲಿತ ಕುಲವು ತಾವು ಅರಗಿಸಿಕೊಂಡ ವಿದ್ಯೆಯ ಪ್ರಭಾವವನ್ನು ತುಂಬಿಕೊಂಡು ಪ್ರಯತ್ನವಾದಿಯಾಗಿದೆ; ಕಲಿಯದ ಕುಲವು ಹಳೆಯ ಸಂಸ್ಕಾರವನ್ನೇ ಒಳಗೊಂಡು ದೈವವಾದಿಯಾಗಿದೆ. ಇಂದಿನ ಪರಿಸ್ಥಿತಿಗೆ ಎರಡೂ ವಿಚಾರಗಳು ಅಪೂರ್ಣವಾಗಿವೆಯೆಂದೇ ನಾನು ತಿಳಿಯುತ್ತೇನೆ. ಪ್ರಯತ್ನವಾದವಾಗಲಿ, ದೈವವಾದವಾಗಲಿ ಸುಳ್ಳಿನ ಸುರುಳಿಯಲ್ಲ ; ಅವು ಸತ್ಯಪೂರ್ಣವಾಗಿವೆ. ಆದರೂ ಎರಡೂ ಪರಸ್ಪರ ಪೂರಕಗಳಾಗಿವೆಯೆಂದು ಕನ್ನಡಿಗರಿಗೆ ಮನವರಿಕೆಯಾಗಬೇಕಾಗಿದೆ. ತನ್ನಲ್ಲಿದ ವಾದವು, ತನ್ನ ವಾದದಷ್ಟೇ ಸತ್ಯವಾಗಿದ್ದು ನಿನ್ನ ಸತ್ಯಗಳು ಒಟ್ಟಾಗಿ ನಿಕ್ಷೇಪ— ಸಂಪೂರ್ಣ ಸತ್ಯವಾಗಿ ಸಂಸ್ಕಾರಗೊಂಡಾಗ ಕನ್ನಡ ಕುಲವು ಗೆಲುವಿನ ನಿಲುವಿಗೆ ಬರುತ್ತದೆ.

ಜಗತ್ತಿನಲ್ಲಿ ಪ್ರತಿ ಒಂದು ವ್ಯಕ್ತಿಯನ್ನು ಮೂರು ಶಕ್ತಿಗಳು ನಡೆಸಿಕೊಂಡು ಹೋಗುತ್ತಲಿವೆ. ಆ ಮೂರು ಶಕ್ತಿಗಳು ಯಾವವೆಂದರೆ—ವಿಶ್ವಶಕ್ತಿ, ವ್ಯಕ್ತಿತ್ವಶಕ್ತಿ, ಆತ್ಮಶಕ್ತಿ. ನಿರಂತರವಾಗಿ ಪ್ರವಹಿಸುತ್ತಿರುವ ವಿಶ್ವಶಕ್ತಿಯು ವ್ಯಕ್ತಿಯನ್ನಾಗಲಿ, ಜನಾಂಗವನ್ನಾಗಲಿ ಸಹಜವಾದ ಪ್ರಗತಿಯ ದಾರಿಯಲ್ಲಿ ನಡೆಯಿಸಿಕೊಂಡು ಸಾಗಿರುತ್ತದೆ. ಅದು ಸಹಜ ಪ್ರಗತಿಯಾಗಿರುವದರಿಂದ ಅದರ ಗತಿ ಮಂದವೆನ್ನೋಣ. ಇನ್ನು, ವ್ಯಕ್ತಿಯ ಇಲ್ಲವೆ ಜನಾಂಗದ ಒಳಿತು ಕೆಡಕುಗಳು,

ಮಿತ್ರರಿಂದ [illegible] ಒದಗಿ ಬರುತ್ತಲಿರುವದು ಪ್ರಾರಬ್ಧಕರ್ಮಶಕ್ತಿ ಯಿಂದ. ವಿಶ್ವಶಕ್ತಿಯ ಪ್ರವಾಹಕ್ಕೆ ಪ್ರಾರಬ್ಧಕರ್ಮಶಕ್ತಿಯ ಇನ್ನೊಂದು ಪ್ರವಾಹವು ಕೂಡಿಕೊಳ್ಳುತ್ತದೆ. ಪ್ರಾರಬ್ಧಕರ್ಮಶಕ್ತಿಯು ಹಿತಕರವಾಗಿ ಕೂಡಿಕೊಂಡರೆ ವಿಶ್ವ ಶಕ್ತಿಯ ವೇಗವು [illegible]ವಾಗುತ್ತದೆ; ಅದು ಅಹಿತಕರ ರೀತಿಯಲ್ಲಿ ಕೂಡಿ ಕೊಂಡರೆ ವಿಶ್ವಶಕ್ತಿಯು [illegible] ಹೆಚ್ಚುಗೊಂಡು ಹೋದಲಿಗಿಂತ ಮಂದವಾಗು ತ್ತದೆ; [illegible] ಕುಂಠಿತವಾಗುತ್ತದೆ. ಈ ಎರಡು ಶಕ್ತಿ ಪ್ರವಾಹಗಳ ಸಂಗಮವನ್ನು [illegible] ವೇಗವತ್ತರವಾಗಿ ಉಚಿತಮಾರ್ಗದಲ್ಲಿ ಸಾಗಿಸುವ [illegible]. ಇದೇ ಪೌರುಷವು. ಅದು ವಿವೇಕ ಪೂರ್ವ[illegible] [illegible] ಸಂಪಾದಿಸಿರುವದರಿಂದಲೂ ಅದಕ್ಕೆ [illegible]ತ್ತಾರೆ. ಅದು ಪ್ರತಿಬಂಧ ಕರ್ಮ ವನ್ನು [illegible] ಶಕ್ತಿಯಿಂದಲೂ ಆಸಿಸಿಕೊಳ್ಳುವದು. ಇಂಥ ಪ್ರಯತ್ನವನ್ನು [illegible] ಎಡೆಬಿಡದೆ ಮಾಡುತ್ತಿರುವಲ್ಲಿ, ಪರಮೇಶ್ವರನ ಅನುಗ್ರಹ[illegible] ಪರಮೇಶ್ವರನ ಅನುಗ್ರಹದ ಒಂದು [illegible] ಕಂಡುಕೊಳ್ಳಬಹುದು. ಅಲ್ಲಿ [illegible] ಕಂಗೊಳಿಸುತ್ತಾರೆ.

[illegible] ಅಘಟಿತ ಘಟನೆಗಳನ್ನು [illegible]; ಬರದು ಹಯು [illegible] ಬಸವಣ್ಣನವರೆಂದಂತೆ— "[illegible] ದೇವನ ಭಾಷೆ"ಯು ಅದಕ್ಕೆ [illegible] "ಯು ಪ್ರಬಲತರವಾಗಿ [illegible] ದೈವಕ್ಕೆ ಹೆದರದೆ, [illegible] ವರ್ತಿಸುವವರಿ, ವಿಜಯವು [illegible]?

[illegible] ಮುಕ್ತಿ ಮಾತ್ರ[illegible] ಪರಿಹರಸಾಗಿ [illegible] ಅದು ಅವಶ್ಯವೆನಿಸಿದ್ದ ರಿಂದ [illegible]. [illegible] ಇಂದು ಭಾರ ತೀಯ[illegible] ಸಂಘಟನೆಯೂ ಅವಶ್ಯ ವೆಂದು [illegible]. ಇನ್ನು ಮುಂದೆ [illegible] ಅದಕ್ಕೆ ಸಹಾಯಕ ವಾಗುತ್ತವೆ. [illegible]ವಾಗಿದೆ. ಅದಕ್ಕೆ ಮೊದಲು [illegible].

ಕನ್ನಡಕುಲವು ಶ್ರೀ ವಿರೂಪಾಕ್ಷದೇವರ ಸಂತಾನವು: ಇಂದಿನ ಮಾತಿನಲ್ಲಿ ಕನ್ನಡ ಬಾವುಟದ ಕೆಳಗೆ ಕೂಡಿರುವ ದಳ ಅದು. ಕರ್ನಾಟಕವು ಅಂದು ವಿರೂಪಾಕ್ಷ ದೇವರದೆನಿಸಿದಂತೆ, ಇಂದು ಕನ್ನಡತಾಯಿಯದೆಂಬ ಅರಿವು ನಿರಂತರವಾಗಿರತಕ್ಕದ್ದು. ರಾಜ್ಯವೇ ದೇವಾಲಯವೆಂದೂ ನಾಡಧರ್ಮವೇ ಅದರಲ್ಲಿಯ ಪೂಜ್ಯವಾದ ಧರ್ಮ ವೆಂದೂ ಕನ್ನಡಕುಲದ ಭಾವನೆಯು ದೃಢವಾಗಬೇಕಾಗಿದೆ. ವ್ಯವಹಾರ ಧರ್ಮವು ಐಹಿಕಫಲ ಪ್ರಧಾನವಾಗಿದ್ದರೂ ಅದಕ್ಕೂ ವೇದವೇ ಮೂಲವೆಂಬ ಮಾತು ಇಂದಿಗೂ ಸತ್ಯವಾಗಿಯೇ ಉಳಿದಿದೆ. ಧರ್ಮದ ಸ್ವರೂಪವು ಎಂದಿಗೂ ಒಂದೇ ಆದರೂ ಅದರ ಪ್ರಕಾಶವು ಜನರ ಸ್ಥಿತಿ ಸಂದರ್ಭಗಳಿಗೆ ತಕ್ಕಂತೆ ಆಗಿನದಾಗ ವ್ಯಾಪಾರವಾಗುವದರಿಂದ ಇಂದಿನ ಸ್ಥಿತಿಗೆ ಒಂದುಗೂಡುವ ಧರ್ಮವೆಂದರೆ ನಾಡ ಧರ್ಮವೇ ಸರಿ.

ನಾಡಧರ್ಮದ ಜೀವಾಳವೆಂದರೆ ಬದುಕಿ ಬದುಕಿಸುವದು ; ತಾನು ಬದುಕುವ ದಕ್ಕೆ ಪರರನ್ನು ಪಾತಾಳಕ್ಕೊತ್ತಬೇಕಾಗಿಲ್ಲ. ಮೆಟ್ಟಬಂದವರನ್ನು ತಿರುಗಿ ಮೆಟ್ಟುವ ಉಪಾಯವು ಯುಕ್ತವಲ್ಲ. ಅಂಥ ಪ್ರತೀಕಾರವನ್ನು ಪಡೆಯುವದಕ್ಕೆ ಹಿಂಜರಿಯ ಬಾರದು. ಆದರೆ ಅನ್ಯರು ಮಾಡುವ ನಿಂದ್ಯಕಾರ್ಯವು ತಾನು ಮಾಡುವಾಗ ಅದು ಶ್ಲಾಘ್ಯ ವೇಗೆ ?

ಸಂನ್ಯಾಸಧರ್ಮವು ಅದೆಷ್ಟು ಶ್ರೇಷ್ಠವಾಗಿದ್ದರೂ ವಿಶಾಲಸಂಸಾರವನ್ನು ಕಟ್ಟಿ ಕೊಳ್ಳದಿದ್ದರೆ ಅದಕ್ಕೆ ಸಾರ್ಥಕತೆಯಿಲ್ಲ. ಒಬ್ಬನ ಜೀವನವನ್ನು ಮಾತ್ರ ಸಾರ್ಥಕ ಗೊಳಿಸುವದಕ್ಕೆ ನೂರು ವರುಷದ ಆಯುಷ್ಯವನ್ನು ಬಯಸುವ ಕಾರಣವೇನು ? ಹಾಳೆಹದ್ದಿನಂತೆ ಜೀವ ಹಿಡಿದುಕೊಂಡಿರುವ ಶತಾಯುವಿಗಿಂತ ವಿಶಾಲವಾದ ರಾಷ್ಟ್ರಪ್ರಪಂಚದ ಒಂದು ಶಕ್ತಿಯಾಗಿ ಜೀವಿಸುವದರಲ್ಲಿ ತುಂಬ ಅರ್ಥವಿದೆ. ಸಂನ್ಯಾಸಧರ್ಮವು ವ್ಯಕ್ತಿಯನ್ನು ಒಂದು ಮೆಟ್ಟು ಮೇಲಕ್ಕೆತ್ತುವದಕ್ಕೆ ಸಮರ್ಥವಾ- ಗಿರುವಂತೆ, ರಾಷ್ಟ್ರವನ್ನು, ಮಾನವ ಜನಾಂಗವನ್ನು ಒಂದು ಮೆಟ್ಟು ಮೇಲಕ್ಕೆತ್ತಲೂ ಸಹಾಯಕವಾಗಬಲ್ಲುದು. ಸಂಸಾರಿಗೆ ಸಂನ್ಯಾಸವು ಬೇಕಾಗಿರುವಂತೆ, ಸಂನ್ಯಾಸಿಗೆ ಸಂಸಾರವು ಬೇಕೇಬೇಕು. ಸಂಸಾರವನ್ನು ತೊರೆಯುವ ಸಂನ್ಯಾಸವಾಗಲಿ ಸಂನ್ಯಾಸವನ್ನು ತೊರೆಯುವ ಸಂಸಾರವಾಗಲಿ ಜೀವನಕ್ಕಿರುವ ದೊಡ್ಡ ಕೊರತೆ. ಯಾರೂ ಜೀವನಕ್ಕೊಂದು ಕೊರತೆಯನ್ನು ತಂದೊಡ್ಡದಿರಲಿ.

ನಾಡನ್ನು ಕಟ್ಟುವದಕ್ಕೆ ವಸಿಷ್ಠಾದಿ ಋಷಿಗಳ ಒಂದಾದರೂ ಮಹಾಜೀವನವಿಲ್ಲದೆ ಗತ್ಯಂತರವಿಲ್ಲ. ಅವನು ರಾಷ್ಟ್ರವನ್ನೂ, ಜನಾಂಗವನ್ನೂ ತೂಗಿಸಿಕೊಂಡು ಹೋಗುವದಕ್ಕೆ ಸಮರ್ಥನಾಗಿರುತ್ತಾನೆ. ಸಿದ್ಧಪುರುಷನ ಜ್ಞಾನವು ರಾಜ್ಯಸೂತ್ರ ವನ್ನು ನಿರೂಪಿಸಬಲ್ಲುದು ; ಸಮಾಜ ಸುಧಾರಣೆಯನ್ನು ಸಾಧಿಸಬಲ್ಲುದು. "ಜ್ಞಾನಿ- ನಾಚರಿತುಂ ಶಕ್ಯಂ ಸಮ್ಯಗ್ ರಾಜ್ಯಾದಿಲೌಕಿಕಂ" ಎಂಬುದು ಸನಾತನ ಸತ್ಯ ವಾಗಿದೆ.

[illegible] ಪರಿಷ್ಕರಿಸಿ ಪರಿಪೂರ್ಣಗೊಳಿಸುವದೇ
[illegible] ವಾಗಲಿ.

ಇಂತು— ತಮ್ಮ
ವಿದ್ಯಾರಣ್ಯ.

(ಸ್ವರ್ಗದೋಲಿಗಳು)
—ಸಿಂಪಿ ಲಿಂಗಣ್ಣ.

ಪದ್ಯ ವಿಭಾಗ

೧. ವಸಂತ ಋತು

[illegible] ಕಮಲಾಕ್ಷನಿಗಕ್ಕಾ– ।
[illegible] ಕಾಮನೀಚನಿ– ॥
[illegible] ನಾಳುವಂ– ।
[illegible] ॥ ೧ ॥

[illegible] ಪೊಂದು ಕೆ– ।
[illegible] ಕಸ– ।
[illegible] ಮಸ್ತಕಂ ।
[illegible] ವಸಂತದೊಳ್ ॥ ೨ ॥

[illegible] ತೆಂಬೆರಲ್ ।
[illegible] ವಸಂತದೊಳ್ ॥
[illegible] ವಸಂತದೊಳ್ ।
[illegible] ॥ ೩ ॥

[illegible] ।
[illegible] ಬಂದ ಪೂ– ॥
[illegible] ಚಳಿ– ।
[illegible] ವಸಂತಮಾಸದೊಳ್ ॥ ೪ ॥

[illegible] ವು– ।
[illegible] ॥
[illegible] ವಿಪೋ– ।
[illegible] ॥ ೫ ॥

([illegible]ಮಾರ್ಜುನ ವಿಜಯಂ)
—ಪಂಪ

೨. ದುರ್ಯೋಧನನ ಛಲ

ನಿಮಗೆ ಪೊಡೆವಟ್ಟು ಪೋಪುದೆ
ಸಮಕಟ್ಟಿ[ನ] ಬಂದೆನೆಪಿತರೊಳ್ ಸಂಧಿಯನೇಂ ।
ಸಮಕೊಳಿಸಲೆಂದು ಬಂದೆನೆ
ಸಮರದೊಳೆನಗಪ್ಪ ಪೋಱುವಾಪ್ಪುದು ಕಜ್ಜಂ ॥

ನೆಲಕಿಱಿಸೆಂದು ಬಗೆವಿರೆ
ಛಲಕಿಱಿಪೆಂ ಪಾಂಡುಸುತರೊಳೀ ನೆಲನಿದು ಪಾ- ।
ೞ್ಕೆಲನೆನಗೆ ದಿನಪತನಯನಂ
ಕೊಲಿಸಿದ ನೆಲನೊದವಿ ಪುತ್ತೆ ಪ್ರಮಾಣಬ್ಬೆನೇ ॥

ಅನುಜಶತ್ಯೋತನೇಕಾಂತಕ
ತನಯನೊಳನುಜಪ್ರತಿತನೀಗಳ್ ದುರ್ಯೋಣ- ।
ಧನನಳಿಪಿ ಸಂಧಿಗೆಯ್ವುದೆ
ಮುನಿವರ ಪೆಚ್ಚುಪರ ನುಡಿಗೆ ಸಕ್ಕಾಗಿಸಿನೇ ॥

ಕೂಡಿ ವಿರೋಧಿಯಂ ರಣದ ತಪ್ಪಲನಾಂಸಡೆ ಘೂರ್ಘೋಜನಂ
ಮಾಡದೆ ಪೈರಿಪಾರನಿತಾವನನಾಂಬುದುಮಾಗಳಂ ಪೇ- ।
ರ್ಮಾಣದೆ ಬಂಧುಶೋಕದೊಳೆ ಪೊಣರ್ದವ ಬಂಧುಜನಕ್ಕೆ ಸುತೇನಂ
ಮಾಡದೆ ಸಂಧಿಮಾಡುವಿನೆ ಪಾಂಡವರೊಳ್ ಛಣೆರಾಜಶೇಖರನಾ ॥

ಬಾಡಮುನಿಮ್ಮು ಸನರ್ ಮುಂ
ಪೇಡಿಯೊಡಾಸಿತ್ತಸಿಸ್ತ ರಾಜ್ಯಾರ್ಧಮುಮಾಂ ।
ಪೇಡಿಯುಮರಲ್ಲಿಗಟ್ಟಿದೆ-
ದೇಟಿಸಿ ಜೋಡಿಸಿಸಿ ಪವನಪಂದನನಿಪ್ಪಂ ॥

ಎನ್ನೆಣಂಗಾಣೆನ್ನೆಣಗಿದಮ್ಮನಸಿತ್ಯ ಬಾಡ್ಲಾಧ್ಯಮುಡು-
ಳ್ಳನ್ನಿಗಮಿಟ್ಟಿ ನಿನ್ನೊಡತೆಳಳ್ಕುಸುಸ್ತು ಸಮುಜ್ಜ ಸೆಟ್ಟಿಮು ।
ಮುನ್ನಮಮಂದಿರಿಬಿನರುಮನಿಕ್ಕುಸನಿಕ್ಕೆ ಬಲಕ್ಕೆ ಸಂಧಿನ-
ಯ್ಪಂ ನೆಗಟ್ಟಿಂತಕಾತ್ರೆ ಜನೊಳ್ನೆಬಾಳೊಜೆಕೊಣಾಗದೋಕೆನೇ ॥

ಖಂಡಿತಮೆನಿಸುವರ ಮಹೀ-
ಮಂಡಲಧವಳಾತಪತ್ರ ಸಂಪದಮೆನಗೇಂ ।
ಖಂಡಮುಮನೊಲ್ಲೆನೊಲ್ಲೆನ-
ಖಂಡಿತಮಖಿಳಾವನಿಯುಮನೆ ಬಲ್ಪಿನಿಡಿಪೆಂ ॥

ಪುಟ್ಟಿದ ಸೋದರರುಮೆನ್ನೊಡ-
ಪುಟ್ಟಿದ ಸೋದರರುಮಿಂದಿರ್ದ ಸತ್ತೊಡೆ ಕೋಪಂ ।
ಪುಟ್ಟಿ ಪೊದಳ್ದುದು ಸತ್ತರ್
ಪುಟ್ಟಿರೆ ಪಾಂಡವರೊಳಿಱಿದು ಪಲವುಮೆ ಮೆಚಿಸೆಂ ॥

ಕಾದದಿರೆನಜ್ಞ ಪಾಂಡವ-
ರಾದರ್ ಮೇಣೆಂದಿನ್ನೊಂದೆ ಸಮರದೊಳಾಂ ಮೇ- ।
ಣಾದೆನದಱಿಂದೆ ಪಾಂಡವ-
ಗಾರ್ದುದು ಮೇಣಾಯ್ತು ಕೌರವಂಗವನಿತಳಂ ॥

(ಗದಾಯುದ್ಧ)
—ರನ್ನ

೩. ಸತ್ಯನಿಷ್ಠ ಹರಿಶ್ಚಂದ್ರ

ಘನಸತ್ಯವೇ ಜೀವವೆಂದಿರ್ದ ನಿನ್ನ ಹೊಲಿ
ಯನ ಸೇವೆ ಗುರುಸೇವೆ ಹೊತ್ತ ಹೊರೆಯೆನ್ನ ವಾ
ವಸಿಪ್ರನಾಡಿಸ್ವ ಸುಮನಾದ ರತ್ನಸಿಂಹಾಸನ ತಾ ಯಜ್ಞರಕ್ಷೆಯಿರವು
ಅನುಪಮದ ಘುಂಟಿಸಿದ ರವದ ರಿರವಿಕ್ರಯ-
ಸ್ಥಾನಹೋದ ಚಾಂಡಾಲ್ಯಮಂ ಪುತ್ರನಿಧನ ಜ-
ನ್ಮನಿತಾಪದ ವಂಗನಾಮರಣ ಮಹಾದುಃಖದನುಭವಂ ಜಯಿಸಿದೆಂದವನು

ಅತಿ ಹುಸಿವ ಯತಿ ಹೊರೆವ ಹುಸಿಯುಡಿದ ದೊರೆಯೆನು
ಸ್ಮತಯತಿವರನು ಹುಸಿದು ಮಾಡುವ ಮಹಾಯಜ್ಞ
ಕೆತಪಿಸ್ತು ಪಂಚಪಾತಕ ಸತ್ಯದಿಸಿವನ್ಯಾಯವನು ಲಿಂಗಾರ್ಚನೆ ।

ಶ್ರುತಿಮತವಿದೆನ್ನಾಜ್ಞೆ ನಿನ್ನಂತೆ ಸತ್ಯರೀ
ಕ್ಷಿತಿಯೊಳಿನ್ನಾರುಂಟು ಹೇಳೆಂದು ಪಾರ್ವತೀ
ಪತಿ ಹರಿಶ್ಚಂದ್ರನಂ ತಲೆದಡವಿ ಬೋಳೈಸಿ ಕಾಶಿಕಂಗಿಂತೆಂದನು ॥ ೨ ॥

ನುಡಿಯೊಳನೃತಂ ತೋರಿದಂತೆ ನಿನ್ನಲಿಗೆ ಸಿಂ-
ಪಡೆ ಮುಷ್ಟಿ ಮೇಲೇನ ಕೊಡುವೆನೆಂದೆಂದೆಯುದ
ಕೊಡು ಬೇಗದಿಂದ ವಿಶ್ವಾಮಿತ್ರ ಎಂದಡಾಸ್ಯೈವತ್ತುಕೋಟಿ ವರುಷ ।
ಬಿಡದೆ ಮಾಡಿದ ತಪಃಫಲದೊಳರ್ಧವನಾಂತೆ
ಕಡು ಮುಳಿದು ಕಾದಿ ನೋಯಿಸಿದನು ಮೆಚ್ಚಿದೆನಿನ್ನು
ಒಡಿಯೆಂದುನಿರ್ದ ಫಲವೆಲ್ಲವಂ ಕೊಟ್ಟನರಸಂಗೆ ಮುನಿನಾಥದೇವನು ॥ ೩ ॥

ಪೊಡವಿಪನ ವಾಕ್ಯದೊಳು ಹುಸಿಯ ನೀಂ ಹಿಡಿದೆಯ- ।
ದಡೆ ನಾನು ಮುನಿತನವನುಳಿದು ನರಕಿರದೋಡ
ಒಡಿದು ಮಪ್ಪಿಯಾಗಿ ತೆಂಕಮುಖವಹೆನೆಂದು ದೇವಸಭೆಯೊಳಗೆ ನಾನು ।
ನುಡಿದು ಭಾಷೆಯನಿತ್ತೆ ನೀನೆನ್ನ ಭಾಷೆಯಂ
ನಡಸಿ ರಕ್ಷಿಸಿದೆ ಸತ್ಯವ ಮೆರೆದೆಯೆಂದು ತಲೆ-
ದಡವಿ ತನ್ನಂ ಕೊಟ್ಟನೀಶನ ಸಮಕ್ಷದೊಳು ವಾಸಿಷ್ಠನವನಿಪತಿಗೆ ॥ ೪ ॥

ಧರೆಯೊಳು ಹರಿಶ್ಚಂದ್ರ ಚಾರಿತ್ರಮಂ ಕೇಳ್ದ
ನರರೇಳು ಜನ್ಮದಿಂ ಮಾಡಿರ್ದ ಪಾತಕವು
ತರಣಿಯುದಯದ ಮುಂದೆ ನಿಂದ ತಿಮಿರದ ತೆರದೆ ಹರಿಯುತಿಹುದೇಕೆಂದಡೆ ।
ಹರನೆಂಬುದೇ ಸತ್ಯ ಸತ್ಯವೆಂಬುದು ಹರನು
ಎರಡಿಲ್ಲವೆಂದು ಶ್ರುತಿ ಸಾರುತಿರಲಾ ವಾಕ್ಯ-
ವರಿಕೆ ನಿರುತವ ಮಾಡಿ ಮೂಜಗಕೆ ತೋರಿದ ಹರಿಶ್ಚಂದ್ರಕಥೆಗೇಳ್ದತೆ ॥ ೫ ॥

ಅನೃತವನರಿಯದ ಪೊರೆಯುವಂ ನೆನೆಯೆ ಪುಣ್ಯಮಂ
ಪಡೆ ಸೂರ್ಯಕುಲಜ ಕಲಿ ದಾನಿ ಸತ್ಯಂ ವಸಿ
ಷ್ಠನ ಶಿಷ್ಯನಧಿಕಶೈವಂ ಕಾಶಿಯೊಳ್ ಮೆರೆದ ದೇವಬ್ರಾಹ್ಮಣಪ್ರಮುಖ
ಘನನೃಪ ಹರಿಶ್ಚಂದ್ರನೆಂದಡಾತನ ಪೊಗಳ್ದು
ಜನ ಬದುಕಬೇಕೆಂದು ಕಾವ್ಯಮುಖದಿಂ ಪೇಳ್ದ
ನನಪೇಕ್ಷೆಯಿಂದ ಕವಿರಾಘವಾಂಕಂ ಮಹಾ ಲಿಂಗಭಕ್ತರ ಭಕ್ತನು ॥ ೬ ॥

(ಹರಿಶ್ಚಂದ್ರ ಕಾವ್ಯ)

—ರಾಘವಾಂಕ

೪. ಮಾಯಾದೇವಿಯ ಬಾಲ್ಯ

ಶಿಶುವ ನೋಡಿದ ಕಣ್ಗೆ ಮಾಯವೆ
ಮುಸುಕುವುದು ಮನ ಮೆಚ್ಚುವುದು ಮೋ-
ಹಿಸುವುದೀ ಪರಿ ಜನನಿ ಜನಕಾದ್ಯರುಗಳೆಲ್ಲರಿಗೆ ।
ವಸುಮತೀಪತಿ ಬಳಿಕಲತಿಸಂ-
ತಸದಲಾತ್ಮಜೆಗಖಿಲ ವಿಭವದಿ
ಹೆಸರನಿಟ್ಟನು ಮಾಯೆಯೆಂಬ ನವೀನ ನಾಮವನು ॥ ೧ ॥

ಉಲಿವ ಗೆಜ್ಜೆಯ ಕಾಲ ಕಡಗದ
ಘುಲುಘುಲಿಸುವಂದುಗೆಯ ರತುನದ
ಉಳಿಯ ಕಟಿಸೂತ್ರದ ಝಣತ್ಕಾರಿಸುವ ಕಂಕಣದ ।
ಹುಲಿಯುಗುರ ಬಂದಿಯ ಸುಢಾಳದ-
ಲೊಲೆವ ಮಾಗಾಯಿಗಳ ಪೊಳೆವರ-
ಳೆಲೆಯ ಮಿಸುಗುವ ಬಾಲದೊಡಿಗೆಯ ಮಾಯೆಗಿಕ್ಕಿದರು ॥ ೨ ॥

ಹಲಗೆ ಮಾಣಿಕದೊಟ್ಟಿಲಲಿ ಮು-
ಗ್ಗಲಿಸಿ ಮಲಗಿ ನಿರೀಕ್ಷಿಸುತೆ ಮಾ-
ರ್ಪೊಳೆವ ತನ್ನನೆ ಕಂಡು ನಲಿಯುತೆ ನಗುತೆ ಕೈದುಡಿಕಿ ।
ಸೆಳೆದು ತೆಗೆದಿರೆ ಬಾರದಿರಲಾ
ನೆಳಲನೊದೆವುತೆ ಕಾಲಗೆಜ್ಜೆಗ-
ಳುಲುಹನಾಲಿಪ ಮಾಯೆ ಮೆಱೆದಳು ಬಾಲಲೀಲೆಯೊಳು ॥ ೩ ॥

ಆಡಿಸುವ ಪಾಡಿಯರ ಸಂಜ್ಞೆಯ-
ಲಾವಿ ಪದಪ್ಪಪ್ಪಿಸುತ್ತಲಿ
ಕೂಡೆ ನಡೆಕಂಪಪ್ಪಿ ಮೇಲುವ ಸೆಱಗಿನೊಳಗವಗಿ ।
ನೋಡುತಲಿ ದಾ ಎನುತೆ ಚ್ಚೈಮುಂ-
ದಾಪಿ ಮುಂಪರಿವಿಡಿಮ ಕುಣಿಕುಣಿ-
ದಾಪಿ ಸೌಖ್ಯವನೀಯುತಿರ್ದಳು ಮಾಯೆ ಮೋಹಿನಿಗೆ ॥ ೪ ॥

ಒಮ್ಮೆ ಮಮಕಾರವನಿಪನನೊ-
ಮ್ಮೊಮ್ಮೆ ಮೋಹಿನಿದೇವಿಯನು ಮ-
ತ್ತೊಮ್ಮೆ ತನ್ನುವನಾಡಿಸುವ ತರುಣಿಯರ ತಂಡವನು ।

ಹೆಮ್ಮೆಗೊಳಿಸುತೆ ಸುಖವುಖವ ಹೊಜಿ
ಹೊಮ್ಮಿಸುತೆ ನಿಜ ಬಾಲಲೀಲೆಯ
ಸೊಮ್ಮ ಸೂಱೆಯ ಕೊಡುತಲಿರ್ದಳು ಮಾಯಿ ಮನೆಯೊಳಗೆ ॥ ೫ ॥

ಬೀಱುತಿರ್ದಳು ಮುದ್ದುತನವನು
ಹೇಱುತಿರ್ದಳು ಸಕಲ ಚೆಲುವನು
ತೋಱುತಿರ್ದಳು ಜಗದ ಜಂಗುಳಿಗಾಡುವೊಲನಾಗಿ ।
ಸಾಱುತಿರ್ದಳು ಸಕಲ ನೊಬಗನು
ಮೀಱುತಿರ್ದಳು ದಿನದಿನಕೆ ಕಳೆ
ಯೇಱುತಿರ್ದಳು ಮಾಯಿ ವಿವಿಧವಿಲಾಸವೃತ್ತಿಯಲಿ ॥ ೬ ॥

ಒಡಿ ಹಿಡಿದುಕೊಂಡರ್ಥಿಯಲಿ ಜೆಂ-
ಬಡದೆ ಶಿಕ್ಷಾಚಾರ್ಯತನದಲಿ
ಜಡಿದು ಜಂಕಿಸಿ ಮುದ್ದುತನ ಮಿಗೆ ಮಾಯಿ ತನ್ನಂತೆ ।
ನಡೆಯೆ ಕಲಿಸಿದಳಂಚೆವಿಂಡಿಗೆ
ನುಡಿಯೆ ಕಲಿಸಿದಳರಗಿಳಿಗೆ ಸರ-
ವಿಡಲು ಕಲಿಸಿದಳಾಕೆ ತನ್ನರಮನೆಯ ಕೋಗಿಲೆಗೆ ॥ ೭ ॥

(ಪ್ರಭುಲಿಂಗಲೀಲೆ)
—ಚಾಮರಸ

೫. ದ್ರೌಪದಿಯ ಉದ್ವೇಗ

ಎಲೆ ಸಮೀರಕುಮಾರ ಸಂಪ್ರತಿ
ಗೆಳಸಿದ್ಯೆ ಕಲಿತನವ ನೀಚರೊಳು
ಕಲಕಿದ್ಯೆ ಕೈವಾರವಾದುದೆ ಕೌರವೇಂದ್ರನಲಿ
ಸಲಿಸಿದ್ಯೆ ಕೃಷ್ಣಂಗೆ ನೀತಿಯು
ಬಳಸಿದ್ಯೆ ಬಹುಮತವ ನರಕದೊ
ಳಿಳಿಸಿದ್ಯೆ ಶಶಿಕುಲವನೆಂದನಿಲಜನ ನೋಡಿದಳು ॥ ೧ ॥

[illegible] ಸುಯೋಧನ
[illegible]
[illegible] ಕೃಷ್ಣನೇ ಸಂಧಾನವನು ನಿಮಗೆ
[illegible] ಕೌರವ ನೃಪಾಲನ
[illegible] ಭೀಮಸೇನನ
[illegible] ಸೋದರರ ಸೇರುವೆಗೆ ॥ ೨ ॥

[illegible] ಸಪ್ತ ಕೋಷ
[illegible] ಧರ್ಮ
[illegible] ಮನಸಿರಿಗುವುದ ಕಾಳಗಕೆ
[illegible] ವಿರೋಧಿ
[illegible] ಕೊಂತೀ
[illegible] ರಾಜ್ಯವಾಳುವುದು ॥ ೩ ॥

[illegible] ಕೌರವರ ಸಮ
[illegible] ಪಾಂ
[illegible] ನಲುಗೆಯೇಕೆಮಗೆ
[illegible] ಜ
[illegible] ಕ್ಷಿತಿ
[illegible] ಪರಮ ಪರಿಣಾಮ ॥ ೪ ॥

ಭೀಮ ಬಲವದರಾತಿ ಸೇನಾ
[illegible] ಕುಸುಮ ಮಾರ್ಗಣ
[illegible] ಮಾನಾಪಮಾನಗಳ
[illegible] ಘನ ಸಂ
[illegible]
[illegible] ಪ್ರಾಸದೀಪೇಪಿ ॥ ೫ ॥

[illegible]
[illegible] ಕೆಡುಹುವ
[illegible] ನಾವದು ಪಂಥವುಳ್ಳವರು
[illegible] ನಿಮ್ಮ
[illegible]
[illegible] ನೋಡುವದೆ ॥ ೬ ॥

ಮುಂದಲೆಯ ಪಿಡಿದೆಳೆದು ಸಭೆಯೊಳು
ತಂದು ಸೀರೆಯ ಸುಲಿದವನ
ಮುಂದೆ ಮೌನದೊಳಿದ್ದ ದಲ್ಲಿದೆ ಪತಿಗಳ [illegible]
ಅಂದು ನೀ ಹಿಂಡಿಕ್ಕಿ ಕೊಂಡುದ
ನಿಂದು ಮರೆದ್ಯೆ ಸಂಧಿಗೋಸುಗ
ಮುಂದುವರಿದ್ಯೆ ಕೃಷ್ಣ ಯೆಂದಳು ಪಾ[illegible] ॥ ೭ ॥

ತನಯರೈವರು ಪಿತೃ ಸಹಿತ
ವನು ಘಟೋತ್ಕಚನೀ ಸುಭದ್ರಾ
ತನಯನೆಮ್ಮಯ ತಂದೆ ಮುಂದೆ [illegible]
ಇನಿಬರೇ ಕಾದುವರು ದುಶ್ಯಾ
ಸನನ ರಕುತವ ಕುಡಿದು ಕುರುಕುಲ
ವನಪ ಸುಡುವರು ನಿಮ್ಮ ಹಂಗೇಕೆಂದ [illegible] ॥ ೮ ॥

ಪರಸತಿಯ ಬಸುಸುಯ್ಲು ಗಾ[illegible]
ಳುರಿ ಚಡಾಳಿಸೆ ರೋಷಮಯದ
ಬ್ಬರದೊಳಾಡೊತ್ತಿದನು ಹಿಡಿದನು [illegible]
ತರುಣಿ ಸೈರಿಸು ಸೈರಿಸಿನ್ನೀ
ಸುರಿವ ಕಂಬನಿಗಳಿಗೆ ಶತ ಸಾ
ವಿರ ಮಡಿಯ ಕಂಬನಿಯ ಸುರಿಸುವೆ [illegible] [illegible]

ಉರಿ ಹೊಗುವ ವಿೀನಸಗಳ [illegible]
ಮುರುಹಿ ವಾಮದ ಕರದಿ ತರುಣಿಯ
ಕುರುಳ ಸಂತೈಸಿದನು ಕಿಡಿಕಿಡಿಯೋಗಿ [illegible]
ನರಕಮರ್ದನ ಕೇಳು ಕೌರವ
ನರಿಗಳಿವಿರೇ ಕೀಳುವೆನು ಕುಲ
ಗಿರಿಗಳನು ತೊಡೆವೆನು ಕೃತಾಂತನ [illegible] [illegible]

ಯಮಸುತನ [illegible]
ಕ್ರಮಕೆ ಮೊಗದಿರುಹಿದೆನು [illegible]
ಕಮಲವದನೆಯ ಹರಿಬವೆನ್ನದು [illegible]
ಎಮಗೆ ಸಂಪ್ರತಿಗಿಲ್ಲ ಮನ ಘನ
ಸಮರವೇ ಸ್ವಾರ್ಥ ಕೋಪ
ಕ್ರಮಕೆ ರಿಪುರುಧಿರಾಂಬು [illegible] ॥ ೧೧ ॥

ಕೆಡಹಿ ರಿಪುವನು ಕರುಳ ದಂಡೆಯು
ಮುಂಡಿಸುವೆನು ಮಾನಿನಿಗೆ ರಕುತವ
ಕುಡಿಯುರೆರೆವೆನು ಶಾಕಿನಿಯರಿಗೆ ತತ್ಸಹೋದರರ
ನಡೆದು ಸಂಧಿಯ ಮಾಡಿ ಮುರರಿಪು
ಕೊಡಿಸು ನಾಕೈಮೂರುನಿವರಿಗೆ
ಎಡೆಯುದಾನೆದಮೂರ ಕೊಂಜೆನು ಕೌರವೇಂದ್ರನಲಿ ॥ ೧೨ ॥

(ಕರ್ನಾಟ ಭಾರತ ಕಥಾಮಂಜರಿ)
— ಕುಮಾರವ್ಯಾಸ

೬. ಕಲ್ಯಾಣ ದೇಶ

ಎತ್ತ ನೋಡಿದೊಡೆ ನಿಗಮಂಗಳಿಂ ಪೊಂಗಳಿಂ ।
ದೆತ್ತ ನೋಡಿದೊಡೆ ಗ್ರಾಮಂಗಳಿಂ ಪೆಂಗಳಿಂ ।
ದೆತ್ತ ನೋಡಿದೊಡ ನಗರಾಳಿಯಿಂ ಶಾಳಿಯಿಂ ದ್ರೋಣಾಮುಖಾಳಿಯಿಂದೆ ॥
ಎತ್ತಲುಂ ಪತ್ತನ ಸಮಾಜದಿಂ ಭೂಜದಿಂ ।
ದೆತ್ತಲುಂ ಪರ್ವಡನಿಕಾಯದಿಂ ಗೇಯದಿಂ ।
ದೆತ್ತಲುಂ ಕಡಂಬದ ಸಘಾಡದಿಂ ಜೇಡದಿಂದಾ ನಾಡ ಸಿರಿ ಮೆರೆದುದು ॥ ೧ ॥

ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮೆಳೆಗಳಿಂ ।
ದಲ್ಲಿಗಲ್ಲಿಗೆ ವನಸ್ಥಳಗಳಿಂ ಕೊಳಗಳಿಂ ।
ದಲ್ಲಿಗಲ್ಲಿಗೆ ದಸ್ವದೆರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ ॥
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ ।
ದಲ್ಲಿಗಲ್ಲಿಗೆ ನೆರೆದ ಶುಕಗಳಿಂ ಪಿಕಗಳಿಂ ।
ದಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂದಾ ದೇಶಮೊಪ್ಪಿರ್ದುದು ॥ ೨ ॥

ಕಂಜ ಕುಮುದಂಗಳೆಲ್ಲಿಪ ನವಂ ಸರದಿಂದೆ ।
ರಂಜಿಸವ ಶುಕಪಿಕಂ ಶುಕಪಿಕಂಗಳ್ಗೆ ಫಲ ।
ಮಂಜರಿಯನೀಯುದಿಹ ಮಾವು ಮಾವುಗಳನಪ್ಪದ ಬಳ್ಳಿ ಬಳ್ಳಿಗಳೊಳು ॥

ಮಂಜುಳಧ್ವನಿಗುಡಿಪ ಪರಮ ಪದಮಿಗೆ ಸಂತ ।
ಸಂ ಜನಿಸಪರಲರಲ ನವಪರಿಮಳಂಗಳಿಂ ।
ದಂ ಜಡಿಯುಪೆಳಗಾಳಿಯೊಳಗಾಡಿಯುಲ್ಲಿಸಿಪ ... ॥ ೩ ॥

ದೇವಮಾತೃಕ ನದೀಮಾತೃಕದೊಳಂ ಪೆಳಿದ್ದ ।
ಪಾವ ಚೋದ್ಯಂ ಗಿರಿ ಕಡಗಾಂಕಿದೊಡೆ ಬಿಳ್ಳಿಸಿದು
ಮಾಪಣ್ಣ ತಸಿರಸಿದ ... ।
ತೀವಿದೆಳಸೀರ ಚಜ್ಜಿನ ನಾರದಿಂ ಪಕಿದ್ದ ।
ಪಾವಗಂ ಪಾಮರೀಮುಳಿರಿಗೊಸ ... ।
ಗ್ರಾವ ನಿರ್ಮಲಜಲದ ಪೂರದಿಂ ... ॥ ೪ ॥

ಶಾಳಿಗೆರಗಿದ ಗಿಳಿಗಳಂ ನೋಡ ಪಾಮ ... ।
ಜಾಳದೊಂದುಲಿಪ್ರಮಂ ಕೋಲಿ ... ।
ದೇಳಿದಂಗೆಯುದ್ದ ತೊಲಗಡೆ ಸಿಂಡ ... ।
ಭೂಲಲನೆಗಾ ಕಳಮ ಪ್ರಸವೋತ್ಸವ ... ।
ಮೇಳಿಸಿದ ಕೆಂಪ್ರಗೂಡಿದ ಹಸುರು ಪಟ್ಟಿಯು ... ।
ಶಾಲವಸನದ ಮುಸುಕಿದೆಂಬಿನಂ ... ॥ ೫ ॥

ಪಲಪು ಕಾಲಂ ಪೆಳಿದಿದೇಂ ಫಲಂ ... ।
ತಲೆಗೊಯ್ದು ಕೊಂಬುದೆಂದುಂ ... ।
ತಲೆವಾಗಿದುವೊ ಪುತ್ರಮೋಹದಿಂ ... ।
ಸಲಹಿದೀ ಭೂದೇವಿಗಂ ನಮಿಸಿ ಭಕ್ತಿ ... ।
ನಲಿದು ಬಾಗಿದುವೊ ಪೇಳೆಂಬನಂ ... ।
ಫಲಭಾರದಿಂ ಕೊರಲ್ವಾಗಿ ... ॥ ೬ ॥

ತುಂದುತುಂಡಾಗಿ ಕತ್ತರಿಸಿ ಗಾಣದೊಳಡು ।
ಹಿಂಡಿ ರಸಮಂ ತೆಗೆದು ಕಾಸಿ ... ।
ಖಂಡಶರ್ಕರೆಯಾದೆಸ್ಸ್ನೊಡಂ ... ।
ದಿಂಡುರುಳ್ದು ಡೆವಾಳ್ದಿಗಿದಿರಾದರಂ ... ।
ದಂಡರೂಹಿಂ ಸ್ವಾಮಿಹಿತಕಿನ್ನು ... ।
ದ್ದಂಡತೆಯ ಬಿರುದೆತ್ತಿತೆನೆ ಸೋಗೆವಡೆದ ... ॥ ೭ ॥

(...)

—ಶಿವರಾಮ ಕಾರಂತ

೭. ಚಂದ್ರಹಾಸ

ಕುಂತೀಕುಮಾರ ಕೇಳಾ ಮಹಾವತ್ತನದೊ ।
ಳಿಂತರ್ಭಕರೊಳಾಡುತಿಹ ವಸುಳೆಗೈದು ಬರಿ ।
ಸಂ ತುಂಜಿತಾ ಸಮಯದೊಳ್ ಪ್ರಬಲದಿಂ ಪ್ರವರ್ತಿಪ ದುಷ್ಟಬುದ್ಧಿಯೆಂಬ ॥
ಕುಂತಳೇಂದ್ರನ ಮಂತ್ರಿ ತನ್ನ ಮನೆಯೊಳ್ ವಿಪ್ರ ।
ಸಂತರ್ಪಣಂಗೆಯ್ಸಲಾ ದ್ವಿಜರ್ ಭೋಜನಾ ।
ನಂತರದೊಳ್ಪಿಡೆ ಸತ್ಕೃತರಾಗಿ ಕುಳ್ಳಿರ್ದು ಪರಸುತಲ್ಲಿರುತಿರ್ದರು ॥ ೧ ॥

ಅಲ್ಲಿ ಕೆಳೆಯರೊಡನಾಡುತಿರ್ದ ಶಿಶುವಂ ಕಂಡ ।
ರುಲ್ಲಾಸದಿಂದೆಸೆವ ಭೂಸುರರ್ ಬಾಲಕನ ।
ಸಲ್ಲಲಿತ ರಾಜಲಕ್ಷಣಕೆ ಬೆರಗಾದರವನಂಗಮಂ ನೋಡಿ ನೋಡಿ ॥
ನಿಲ್ಲವನುರಾಗದಿಂದಾರ ಸುತನೀ ತರಳ ।
ನೆಲ್ಲಿಂದ ಬಂದನೆಂದಾ ದುಷ್ಟಬುದ್ಧಿಯಂ ।
ಮೆಲ್ಲನೆ ವಿಚಾರದಿಂ ಕೇಳ್ದೊಡಾ ವಿಪ್ರರ್ಗೆ ನಗುತಾತನಿಂತೆಂದನು ॥ ೨ ॥

ಈ ಪುರದೊಳಿನಿತಿಲ್ಲನಾಥರಾಗಿಹ ಬಾಲ ।
ರೀ ಪರಿಯೊಳಿತ್ತಣವನಾರ ಸುತನೆಂದರಿಯೆ ।
ನಾ ಪಸುಳೆಯಂ ರಾಜಕಾರ್ಯದೊಳಗಿಹೆವಿದರ ಚಿಂತೆ ನಮಗೇತಕೆನಲು ॥
ಆ ಪಾರ್ವರೆಂದಿರ್ದೊಡಿವಂ ಚಾರುಲಕ್ಷಣದೊ ।
ಳೀ ಪೊಳಲ್ಗೀ ಕುಂತಳಾಧೀಶನಾಳ್ವ ನ ।
ಮ್ಮೀ ಸ್ಥಾನಪಿಗೊಡೆಯನಹನೀತನಂ ನೀನಿರಿಸಿಕೊಂಡು ರಕ್ಷಿಪುದೆಂದರು ॥ ೩ ॥

ಕ್ರೂರ ನಕ್ರಾಕುಲದೊಳಿಡಿದಿರ್ದ ಪೆರ್ಮಡು ಗ ।
ಭೀರ ನಿರ್ಮಲ ಜಲದೊಳೆಸೆವಂತೆ ಮನದೊಳ್ ಕ ।
ಠೋರತರ ಭಾವಮಂ ತಳೆದು ಬಹಿರಂಗದೊಳ್ ವಿನಯಮುಳ್ಳಾತನಾಗಿ ॥
ಚಾರು ಲಕ್ಷಣದ ಶಿಶುವಂ ನೋಡಿ ಧರೆಯ ಬ್ಯಂ ।
ವಾರಕರ ಸುವಿಗೊಪ್ಪಿದವ್ರೊಲಿರ್ದು ಬಳಿಕ ಸ ।
ತ್ಕಾರದಿಂದಾ ವಿಪ್ರರಂ ಕಳುಹಿದಂ ದುಷ್ಟಬುದ್ಧಿ ನಿಜಭವನದಿಂದೆ ॥ ೪ ॥

ಈ ಕುಂತಳೇಂದ್ರಂಗೆ ಸುತರಿಲ್ಲ ರಾಜ್ಯಮೆನ ।
ಗೇಕಾಧಿಪತ್ಯಮಾಗಿರ್ದಪುದು ಮುಂದಿವಂ ।
ಭೂಕಾಂತನಾದಪಂ ಗಡ ವಿಪ್ರರೆಂದ ನುಡಿ ತಪ್ಪದೆನ್ನಾತ್ಮಜರ್ಗೆ ॥

ಬೇಕಾದ ಸಂಪದಂ ಬಯಲಾಗಿ ಪೋಪುದೆಂ ।
ದಾ ಕುಮತಿ ಬೇರೊಂದುಪಾಯಮಂ ಚಿಂತಿಸಿ ಭ ।
ಯಾಕಾರದೊಳಲ ಚಂಡಾಲರಂ ಕರೆಸಿ ಬೆಸಸಿದನಾತನರಿಯದಂತೆ ॥ ೫ ॥

ಕಾನನಾಂತರದೊಳೀ ತರಳನಂ ಕೊಂದು ನೀ ।
ವೇನಾದೊಡಂ ಕುರುಪು ತಂದೆನಗೆ ತೋರ್ಪುದೆಂ ।
ದಾ ನರೇಂದ್ರನ ಮಂತ್ರಿ ಬೆಸಸಿದೊಡೆ ಪಶುಘಾತಕಿಗಳಾಡುತಿಹ ಶಿಶುವನು
ಹೀನ ದಯದಿಂದೆ ಪಿಡಿದೆತ್ತಿಕೊಂಡೊಯ್ದರ್ ಭ ।
ಯಾನಕದೊಳೊಂದು ಕೊಲೆಗಳಸಿ ಪ್ರಹ್ಲಾದನಂ ।
ದಾನವೇಶ್ವರನಾಜ್ಞೆಯಿಂ ಕಾಳರಕ್ಕಸರ್ ಬಂದು ಕೈದುಡುಕಿದಂತೆ ॥ ೬ ॥

ಪಾತಕಿಗಳೊಡಲೊಳಿಹ ಪರಮಾತ್ಮನಂತೆ ಯಮ ।
ದೂತರೆಳೆತಂದಜಾಮಿಳನಂತೆ ಕಾಕ ಸಂ ।
ಘಾತದೊಳ್ ಸಿಕ್ಕಿರ್ದ ಕೋಗಿಲೆಯ ಮರಿಯಂತೆ ನಲುಗಿ ಕತ್ತಲೆಯೊಳಿರ್ದ ॥
ಶೀತಲ ಮರೀಚಿಲಾಂಛನನಂತೆ ಬಹಳ ಕೋ ।
ಪಾತಿಶಯದೊಳಿಹ ವಿವೇಕದಂತಾ ಪಶು ।
ಘಾತಕಿಗಳೆತ್ತಿಕೊಂಡೊಯ್ವ ಬಾಲಕನಿರ್ದನನವರತಮೊರೆಯಿಡುತಳುತೆ ॥ ೭ ॥

ಪೆಗಲೊಳೇರಿಸಿ ಬನಕೆ ಚಂಡಾಲರೊಯ್ಯುತಿರೆ ।
ಮಿಗೆ ಬೆದರ್ದು ಭಯದಿಂದೆ ಬಾಲಕಂ ಬಾಯೊಳಾ ।
ವಗನಿರಿಸಿಕೊಂಡಿರ್ದ ದಿವ್ಯ ಸಾಲಗ್ರಾಮದಮಲತರ ಮಹಿಮೆಯಿಂದೆ ॥
ಬಗೆಪೋರಲಾಗ ಮುರಹರ ಕೃಷ್ಣ ಕಮಲಾಕ್ಷ ।
ಖಗರಾಜಗಮನ ಸಲಹೆಂದು ಚೀರಿದೊಡವನ ।
ಮೊಗ ನೋಡಿ ಕರುಣದಿಂ ಕಟುಕರೆದೆ ಕರಗಿದುದದೆಂತೊ ಹರಿನಾಮದೇಳ್ಗೆ ॥ ೮ ॥

ಒಯ್ದು ಪಸುಳೆಯನರಣ್ಯದೊಳಿರಿಸಿ ಮರುಗಿ ನಿಡು ।
ಸುಯ್ದು ಪಶುಘಾತಕಿಗಳಾ ದುಷ್ಟಬುದ್ಧಿಯಂ ।
ಬಯ್ದು ಶಿಶುವಧೆಗಳುಕಿ ನಿಂದು ನೋಡುತೆ ಕಂದರ್ಪನೆಸೆವನ ಕಾಲೊಳು ॥
ಅಯ್ದಲ್ಲದೊಂದು ಬೆರಲಿರ್ಪುದಂ ಬಾಲಕನ ।
ಕುಯ್ದು ಕುರುಪಂ ಕೊಂಡು ತಮ್ಮ ದಾತಾರನೆಡೆ ।
ಗೆಯ್ದಿ ತೋರಿದೊಡವನವರ್ಗಳಂ ಮನ್ನಿಸಿ ಮಹೋತ್ಸವದೊಳಿರುತಿರ್ದನು ॥ ೯ ॥

ಇತ್ತಲಾ ವಿಪಿನದೊಳ್ ತನ್ನ ವದನದೊಳಿರ್ದ ।
ವೃತ್ತಸಾಲಗ್ರಾಮ ಶಿಲೆಯ ಪ್ರಭಾವದಿಂ ।
ದುತ್ತಮಶ್ಲೋಕನಂ ಭಜಿಸೆ ದಯೆಗೈದೆಸೆದ ಕಾಲ ಷಷ್ಠಾಂಗುಲಿಯನು ॥

ಕತ್ತರಿಸಿದೊಡಮುಳಿಯದೆ ಪ್ರೋದರಂತ್ಬರ್ ಬಳಿಕ ।
ತುತ್ತಿಸಿದ ರಾಮು ತೊಲಗಿದ ಕಶಿಪ್ರೋಲಿರ್ದನವ ।
ನೆತ್ತರವು ಜಾಫೆಗಳ್ ನರ ನಿನ್ನ ಮಿತ್ರನಂ ಮರೆವೊಕ್ಕ ಜೀವಿಗಳ್ಗೆ ॥ ೧೦ ॥

ಬಸಿದ ನೆತ್ತರ ಗಾಯವೆಡದಡಿಯ ಪೇವನೆಗೆ ।
ಪಸುರೆ ಸರವರಿಯುಂದೊರಲ್ದು ಕುತ್ತಿರಲ್ ಕಣ್ಣೊ ।
ಳೊಸರ್ವ ಬಾಷ್ಪಂಗಳಿಂ ಕಂದು ಮಿಗಪಕ್ಷಿಗಳ್ ನೊಂದು ಕಮಶೋಕದಿಂದೆ ॥
ಪಸಿವು ನೀರಡಿಕೆಯುಂ ತೊರೆದಲ್ಲಿ ನಿಂದುವೀಕ ।
ರಿಸುತಿರ್ದುವಾ ರತುನನಂ ತೊಡೆಸಿ ಪಾರ್ಥ ಕೇಳ್ ।
ಪಶುವು ಬಿದ್ದೊಳಾರ್ತದಂ ನೋಡಿ ಮಿಗೆ ಮರುಗದಿಹ ಮಾನವಂ ಪಾಪಿಯಲ್ತೆ ॥೧೧॥

(ಕನ್ನಡ ಜೈಮಿನಿಭಾರತ)
—ಲಕ್ಷ್ಮೀಶ

೮. ಭರತೇಶನ ಆರೋಗಣೆ

ಮುಂಗಳ ಮೃದುತರಾಸನವಲ್ಲಿ ಚೌಕ ಸು
ಧಾಂಗವಾಗಿರೆ ನೃಪ ಕುಳಿತ
ಸಂಗಡ ಲಲನೆಗಳಂದದಿ ಬಂದು ಕುಳಿತರಾ
ಮಂಗಳೆಲ್ಲರು ಪಂಕ್ತಿಯಾಗಿ ॥ ೧ ॥

ಹಲವರು ರಾಯನ ಪಂಕ್ತಿಯೊಳೂಟಕೆ
ಕುಳಿತರು ಮತ್ತವರಲ್ಲಿ
ಲಲನೆಯರಾರೋಗಣೆಮಾಡಲನುವಾಗಿ
ಸುಳಿದಾಡುತಿರ್ದರರಮನೆಯೊಳು ॥ ೨ ॥

ಬಟ್ಟ ಹೊಂಬರಿವಾಣದಂಚಿನೊಳಗೆ ಸಾಲು
ಬಟ್ಟಲು ಕೆಲವು ಬಟ್ಟಲೊಳು
ಇಟ್ಟು ಮಾಣಿಕದ ಸೋಟಿಗಗಳಿಸಿಯು ತಿಟ್ಟ
ಪಟ್ಟ ತಿಂತಿಣಿಯೊಳೊಪ್ಪಿದವು ॥ ೩ ॥

ಸಾರವಸ್ತುಗಳ ತಂದಗಲೆಲ್ಲ ತುಂಬುತಂ
ತಾರಯ್ದು ಬಡಿಸಿದ ಮೇಲೆ
ಆ ರತಿ ಪ್ರತಿಯಿಲ್ಲವೆಂಬ ಪಿಂಗಳು ಪತಿ
ಗಾರತಿಯೆತ್ತಿದರೊಸೆದು ॥ ೪ ॥

ಕುಸುಮಾಂಜಲಿ ಮಾಡಿ ಕೈಮುಗಿದೊಡನೊಂದು
ದೆಸೆಗೆ ಸಾರಿದರಬಲೆಯರು
ನಸುನಕ್ಕನಾ ರಾಯನಾ ಸತಿಯರವೊಂದು
ಹೊಸ ಬಗೆ ಭಕ್ತಿಯ ಕಂಡು ॥ ೫ ॥

ಶಾಂತಭಾವದೊಳು ಕಣ್ಮುಚ್ಚಿ ಕಿನಸು ಬೀ[illegible]
ಕಾಂತಕೆ ನಮಿಸಿ ಬಿಡದವನು
ಅಂತರಂಗಕೆ ತಂದು ಪೂಜಿಸಿ [illegible]
ಕಂತು ಸನ್ನಿಭನು ಕಣ್ದೆರೆದ ॥ ೬ ॥

ಜ್ಞಾನಾನ್ನವನಾತ್ಮಗರ್ಪಿಸುತಿವನನ್ನ
ಪಾನವ ಮೃಗೀಪ್ರಿಯನು
ಜ್ಞಾನಿಗಳಲ್ಲದೆ ಭರತೇಶನದೆಯ ನಂ
ಧ್ಯಾನವ ಬಲ್ಲವರಾರು ॥ ೭ ॥

ಎಡೆಮಾಡುವಬಲೆಯರೆಯ್ತಂದು ರಾಯನ
ತ್ತಿಡುವನ್ನದೊಳಗೊಂದು ತುತ್ತ
ತುಡುಕಿ ತೆಗೆದುಕೊಂಡು ಪ್ರೀತಿ [illegible]
ಎಡೆಮಾಡಿದರು ಮರಳಿದು ॥ ೮ ॥

ಎಲ್ಲರು ತುತ್ತಿಟ್ಟ ರವಕೆ ರಾಯನು [illegible]
ಯುಲ್ಲಾಡಿ ತಣಿಪನಿದೆಂತೊಳು
ಅಲ್ಲದೆ ಮತ್ತೇನು ಪರಿಭಕ್ತಿ ಮ[illegible]
ಗೆಲ್ಲಕೆ ಬಹುದೇ ಲೋಕದೊಳು ॥ ೯ ॥

ರಾಜ ಕೈತೊಳೆದನು ಸತಿಯರು ಕೈ[illegible]
ದೋಜೆಯಿಂದಿದಿರೊಳು ನಿಲಲು
ಆ ಜನಪತಿಯೆಡೆಮಾಡಿದ ಸತಿಯರು
ಭೋಜಿಸಲೆಂದು ಸೂಚಿಸಿದ ॥ ೧೦ ॥

ನಮಗಿನ್ನು ಭೋಜನಾಂತದ ಕ್ರಿಯೆ ಕಿರಿದುಂಟು
ಅವರಿಗೆ ಬಡಿಸಿ ನೀವೆಂದು
ಯುವತಿಯರಿಗೆ ಸನ್ನೆಮಾಡಿ ಕಣ್ಮುಚ್ಚಿ ಮಾ
ನವಪತಿ ಯೋಗದೊಳಿದ್ದ ॥ ೧೧ ॥

(ಭರತೇಶ ವೈಭವ)
—ರತ್ನಾಕರವರ್ಣಿ

೯. ಕುಲಜಾತಿ ಖಂಡನೆ

ಕುಲವಿಲ್ಲ ಯೋಗಿಗೆ ಛಲವಿಲ್ಲ ಜ್ಞಾನಿಗೆ ।
ತೊಲೆ ಕಂಬವಿಲ್ಲ ಗಗನಕ್ಕೆ, ಸ್ವರ್ಗದಲಿ ।
ಹೊಲೆಗೇರಿಯಿಲ್ಲ ಸರ್ವಜ್ಞ ॥ ೧ ॥

ಎಲುವಿಲ್ಲ ನಾಲಗೆಗೆ ಬಲವಿಲ್ಲ ಬಡವಂಗೆ ।
ತೊಲೆ ಕಂಬವಿಲ್ಲ ಗಗನಕ್ಕೆ, ದೇವರಲಿ ।
ಕುಲಭೇದವಿಲ್ಲ ಸರ್ವಜ್ಞ ॥ ೨ ॥

ಸತ್ತ ಕತ್ತೆಯ ಹೊತ್ತ ರಿತ್ತಣದ ಹೊಲೆಯನು ।
ಉತ್ತಮನೆಂದು ಹೆರರೊಡವೆ ಹೊತ್ತರವ ।
ನಿತ್ಯವೂ ಹೊಲೆಯ ಸರ್ವಜ್ಞ ॥ ೩ ॥

ಉತ್ತಮರು ಪಾಲ್ಗಡಲೊಳಿತ್ತಿಹರೆ ಜನ್ಮವನು ।
ಉತ್ತಮರು ಅಧಮರೆನಬೇಡ ಹೊಲೆಯಿಲ್ಲ ।
ದುತ್ತಮರು ಎಲ್ಲಿ ಸರ್ವಜ್ಞ ॥ ೪ ॥

ಧಾತು ಬಿಳಿಸು ಕಲೆತು ಭೂತಪಂಚಕವಾಗಿ ।
ಓತು ದೇಹವನು ಧರಿಸಿರ್ದ ಮನುಜರ್ಗೆ ।
ಜಾತಿಯೆತ್ತಣದು ಸರ್ವಜ್ಞ ॥ ೫ ॥

ಕುಡಿವ ನೀರನು ತಂದು ಅಡಿಗೆ ಮಾಡಿದ ಮೇಲೆ ।
ಒಡನುಣ್ಣಲಾಗದಿಂತೆಂಬ ಮನುಜರ ।
ಒಡನಾಟವೇಕೆ ಸರ್ವಜ್ಞ ॥ ೬ ॥

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು ।
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।
ನಡುವೆ ಎತ್ತಣದು ಸರ್ವಜ್ಞ ॥ ೭ ॥

ಅವಯವಗಳೆಲ್ಲರಿಗೆ ಸವನಾಗಿಯಿರುತಿರಲು ।
ಭವಿ ಭಕ್ತ ಶ್ವಪಚ ಶೂದ್ರರಿವರಿಂತೆಂಬ ।
ಕವಸವೆತ್ತಣದು ಸರ್ವಜ್ಞ ॥ ೮ ॥

ಯಾತರದು ಹೂವೇನು ನಾತರದು ಸಾಲದೇ ।
ಜಾತಿವಿಜಾತಿಯೆನಬೇಡ ದೇವನೊಲಿ ।
ದಾತನೇ ಜಾತ ಸರ್ವಜ್ಞ ॥ ೯ ॥

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ ।
ಜಾತಿವಿಜಾತಿಯೆನಬೇಡ ದೇವನೊಲಿ ।
ದಾತನೇ ಜಾತ ಸರ್ವಜ್ಞ ॥ ೧೦ ॥

ಭೂತೇಶಗೆರಗುವನು ಜಾತಿ ಮಾದಿಗನಲ್ಲ ।
ಜಾತಿಯಲಿ ಹುಟ್ಟಿ ಶಿವನಿಗೆ ಶರಣೆನ್ನ ।
ಪಾತ ಮಾದಿಗನು ಸರ್ವಜ್ಞ ॥ ೧೧ ॥

ಸತ್ತುದನು ತಿಂಬಾತ ಎತ್ತಣದ ಹೊಲೆಯನು ।
ಒತ್ತಿ ಜೀವವಿರೆ ಕೊರಳರಿದು ತಿಂಬಾತ ।
ಉತ್ತಮದ ಹೊಲೆಯ ಸರ್ವಜ್ಞ ॥ ೧೨ ॥

ಹೊಲಗೇರಿಯಲಿ ಹುಟ್ಟು ಎಲುವಿನಾ ಗೃಹವಾಸ ।
ಸಲೆ ಧರ್ಮಿ ದಾನಿಯೆನಿಸದೆ ಹಾರುವನು ।
ಕುಲಕೆ ಹೋರಿಹನು ಸರ್ವಜ್ಞ ॥ ೧೩ ॥

ಕೂಳಿಂದ ಕುಲ ಬೆಳೆದು ಬಾಳಿಂದ ಬಲ ಬೆಳೆದು ।
ಕೂಳು ನೀರುಗಳು ನೀಗಿದರೆ ಕುಲಗಳನು ।
ಕೇಳಬೇಡೆಂದ ಸರ್ವಜ್ಞ ॥ ೧೪ ॥

—ಸರ್ವಜ್ಞ ಕವಿ

೧೦. ಚಿಂತೆಯಾತಕೊ ?

ಚಿಂತೆಯಾತಕೊ ಬಯಲ ಭ್ರಾಂತಿಯಾತಕೊ || ಪ ||
ಕಂತುಪಿತನ ದಿವ್ಯನಾಮ ಮಂತ್ರವನ್ನು ಜಪಿಸುವವಗೆ || ಅ. ಪ. ||
ಕಾಲಕಾಲದಲ್ಲಿ ಬಿಡದೆ ವೇಳೆಯರಿತು ಕೂಗುವಂಥ
ಕೋಳಿ ತನ್ನ ಮರಿಗೆ ಮೊಲೆಯ ಹಾಲುಕೊಟ್ಟು ಸಲಹಿತೆ || ೧ ||

ಸಡಗರದ ನಾರಿಯರು ಹಡೆಯುವಾಗ ಸೂಲಗಿತ್ತಿ
ಅಡವಿಯೊಳಗೆ ಹೆರುವ ಮೃಗವ ಹಿಡಿದು ರಕ್ಷಿಸುವರಾರು || ೨ ||

ಘಟ್ಟಿ ಮಣ್ಣ ಶಿಶುವ ಮಾಡಿ ಹೊಟ್ಟೆಯೊಳಗೆ ಇರಿಸಲಿಲ್ಲ
ಕೊಟ್ಟ ದೇವರು ಕೊಂಡು ಹೋದರೆ ಕುಟ್ಟಿಕೊಂಡು ಅಳುವದೇತಕೆ || ೩ ||

ಹೆತ್ತ ತಾಯಿ ಸತ್ತು ಹೋಗಲು ಕೆಟ್ಟೆವೆಂಬರು ಲೋಕಜನರು
ಮತ್ತೆ ಗುರುಗುರಿಸೆ ತಾವು ಹತ್ತರಿದ್ದು ಸಲಹುತಿಹರೆ || ೪ ||

ಪರದಲ್ಲಿ ಪದವಿಯುಂಟು ಇಹದಲ್ಲಿ ಸೌಖ್ಯವುಂಟು
ಗುರು ಪುರಂದರ ವಿಠಲನ ಸ್ಮರಣೆಯನ್ನು ಮರೆಯದವಗೆ || ೫ ||

(ಕೀರ್ತನೆಗಳು)
—ಪುರಂದರದಾಸರು

೧೧. ಕುಲವೆಂದರೇನು ?

ಕುಲ ಕುಲ ಕುಲವೆನ್ನುತಿಹರೋ || ಪಲ್ಲವಿ ||

ಕುಲ ಯಾವುದು ಸತ್ಯ ಸಜ್ಜನರಿಗೆ || ಅನುಪಲ್ಲವಿ ||

ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗರ್ಪಿಸಲಿಲ್ಲವೇ ||
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣಲಿಲ್ಲವೇ || ೧ ||

ಮೃಗಗಳ ಮೈಯಲ್ಲಿ ಪುಟ್ಟಿದ ಕಸ್ತೂರಿ
ತೆಗೆದು ಪೂಸುವರು ಭೂಸುರರೆಲ್ಲರು ॥
ಬಗೆಯಿಂದ ನಾರಾಯಣನಾವ ಕುಲದವ
ಅಗಜಾವಲ್ಲಭನೇತರ ಕುಲದವನು ॥ ೨ ॥

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವ ಪಂಚೇಂದ್ರಿಯ ಕುಲವಾವುದು ॥
ಆತ್ಮಾಂತರಾತ್ಮ ನೆಲೆಯಾದಿ ಕೇಶವ
ಆತನೊಲಿದ ಮೇಲೆ ಯಾತರ ಕುಲವೋ ॥ ೩ ॥

(ಕೀರ್ತನೆಗಳು)
— ಕನಕದಾಸರು

೧೨. ಗುರೂಪದೇಶ

ಶ್ರೀಗುರುವಚನೋಪದೇಶವನಾಲಿಸಿ ।
ದಾಗಳಹುದು ನರರಿಗೆ ಮುಕುತಿ ॥ ಪಲ್ಲವಿ ॥

ದುರಿತಕರ್ಮವನೊಲ್ಲದಿರು ಪುಣ್ಯವನೆ ಮಾಡು ।
ಹರನಡಿವಿಡಿ ಶಾಂತರೊಡನಾಡು ॥
ಕರುಣವಿರಲಿ ಜೀವರೊಳು ನೀತಿವಿದನಾಗು ।
ಪೊರೆ ಪೊರ್ದಿದರನೆಂದು ಬೆಸಸುವ ॥ ೧ ॥

ನಿಂದಿಸಿ ನುಡಿಯದಿರಾರನು ಮನಸಿಗೆ ।
ಬಂದಂತೆ ನಡೆಯದಿರಿಹದಲ್ಲಿ ॥
ಕುಂದುವಡೆಯದಿರು ಕಾಮಾದಿಗಳನು ಜಯಿ ।
ಸೆಂದು ಕೈವಿಡಿದನುಗ್ರಹಿಸುವ ॥ ೨ ॥

ಭವಮಾಲೆಗಲಸು ಪುಸಿಯದಿರೆಡರು ।
ಕವಿಯಲಂಜದಿರು ಸಂಪದದೊಳು ॥
ತವೆ ಮದವಳಿದಿರು ತತ್ವಸಂತತಿಯನು ।
ವಿವರಿಸಿ ನೋಡೆಂದು ತಿಳುಪುವ ॥ ೩ ॥

[illegible] ರನು ಬಾಹ್ಯದಲಿ ನಿ ।
[illegible] ಡಗೂಡು ॥
[illegible] ಗಲಿ ಸ್ಥಿರವಿಫಭಕ್ತಿ
[illegible] ॥ ೪ ॥

[illegible] ವಿಷಯುಸು ಸಂ।
[illegible]
[illegible] ಗಂ ।
[illegible] ॥ ೫ ॥

(ಕೈವಲ್ಯಪದ್ಧತಿ)
-ಶ್ರೀನಿಜಗುಣ ಶಿವಯೋಗಿಗಳು

೧೩. ಬಿಡು ಬಾಹ್ಯದೊಳು ಡಂಭವ

[illegible]
[illegible]
[illegible]
[illegible] ॥ ಪಲ್ಲವಿ ॥

[illegible]
[illegible]
[illegible]
[illegible] ॥ ೧ ॥

[illegible]
[illegible]
[illegible]
[illegible] ॥ ೨ ॥

ಮನದೊಳು ಶಿವ ತಾನು ಮನೆಮಾಡಿಕೊಂಡಿಹ
ಮನ ಮೆಚ್ಚಿ ನಡೆದರೆ ಶಿವ ಮೆಚ್ಚುವ ॥
ಮನಕಂಜಿ ನಡೆಯದೆ ಜನಕಂಜಿ ನಡೆದರೆ
ಮನದಾಣ್ಮ ಗುರುಸಿದ್ಧ ಮರೆಯಾಗುವನಲ್ಲಿ ॥ ೨

(ಕೈವಲ್ಯ ಕಲ್ಪವಲ್ಲರಿ)
— ಶ್ರೀ ಸರ್ಪಭೂಷಣ ಶಿವಯೋಗಿಗಳ

೧೪. ಹುಣ್ಣಿವೆ

ಹುಣ್ಣಿವೆಯಿಂಪನು ನೀಡುತಿರೆ
ಕಣ್ಣಿಗೆ ಹಬ್ಬವ ಮಾಡುತಿರೆ
ಗಾಡಿಯ ಬಿಂಕದಿ ಮೆರೆಯೆ ತಿರೆ
ಬಾಳನು ಬೈಯುತ ಜರೆಯುವರೆ ?

ಬೆಟ್ಟದ ನೆತ್ತಿಯೊಳೊಬ್ಬನೆ ನಿಂತೆನು ದಿಟ್ಟಿಸಿ ದೆಸೆಗಳ ನೋಡುತ್ತ ;
ರೆಕ್ಕೆಯ ರಸಿಕರು ಹಾರಿದರಿಕ್ಕೆಗೆ ಸಂಜೆಯ ಹಾಡನು ಹಾಡುತ್ತ ;
ಪಡುವಣ ದೆಸೆಯೊಳು ಕಂಪನು ಚೆಲ್ಲುತ ಪೈಗಿನ ನೇಸರು ತೊಳಗಿದನು ;
ತೊಳಲುತ ಬೆಳಗುತಲುರುಳುತಲಿಳಿಯುತ ನಾಸ್ತೋಪುತಲಿರೆ ಮುಳುಗಿದನು .

ತಳಿರೊಳು ಕುಳಿರೆಲರಾಡಿದುದು
ಬೈಗಿರುಳೆಲ್ಲಿಯು ತೀಡಿದುದು
ನೆಲವನು ಬಾಂದಳ ತಬ್ಬಿದುದು —
ಮೌನತೆಯೆಲ್ಲಿಯು ಹಬ್ಬಿದುದು !

ನಭದೊಳು ಮೆಲ್ಲನೆ ಮಿಣುಕುತಲಿಣುಕುತ ಚುಕ್ಕಿಗಳೊಮ್ಮೆಯೆ ಮೂಡಿದುವು ;
ಕನಸುಗಳಂದದಿ ಮೋಡಗಳೊಯ್ಯನೆ ತಣ್ಣೆಲರೊಳು ತೇಲಾಡಿದುವು !
ಮೂಡಣ ದೆಸೆಯೊಳು ನಸುಗೆಂಪೆಸೆಯಲು ಕತ್ತಲೆ ಹಿಮ್ಮೆಟ್ಟೋಡಿದುದು ;
ಹೊನ್ನಿನ ಬಣ್ಣದಿ ತುಂಬಿದ ಬಿಂಬದ ಹೊನ್ನಿನ ಸೊನ್ನೆಯು ಮೂಡಿದುದು !

ಚನ್ನದ ಬೆಂಕಿಯ ಕೊಂಡದೊಳೇಳುವ ಶಾಂತಿಯ ದೇವತೆಯಂದದಲಿ,
ಕಬ್ಬಿಗನೆದೆಯೊಳು ಗಬ್ಬವನಾಂತಿಹ ಕಬ್ಬವು ಹೊರಗೊಗೆವಂದದಲಿ,

ನೀಲಾಂಬರದೊಳು ಮೆಲುಮೆಲನೇರುತ ತಿಂಗಳು ಮೂಡಿತು ಚಂದದಲಿ,
ಜೊನ್ನದ ಕಡಲೊಳು ಮುಳುಗುತ ಮೀಯುತ ನಲಿದುದು ತಿರೆಯಾನಂದದಲಿ !

ಗಿರಿಗಳು, ಹೊಲಗಳು, ಕಾಡುಗಳು,
ತೊರೆಗಳು, ನೀರಿನ ಬೀಡುಗಳು,
ಮುದ್ದಿಡುವಿಂದುವಲಂಪಿನಲಿ,
ಮೆರೆದುವು ನಲಿದುವು, ಪೆಂಪಿನಲಿ !

ತಳಿರನು ಚುಂಬಿಸಿ, ಕೊಳದೊಳು ಬಿಂಬಿಸಿ, ಚೆಲುವಿನ ಚಂದ್ರಿಕೆ ಚೆನ್ನಾಯ್ತು !
ಬಾನೊಳು, ತಿರೆಯೊಳು, ಕುಣಿಯುವ ತೆರೆಯೊಳು ತಿಳಿಬೆಳದಿಂಗಳು ಹೊನ್ನಾಯ್ತು!
ಮನದೊಳು ಬೆಳಗಿತು, ಎದೆಯೊಳು ತುಳುಕಿತು, ಜೊನ್ನಿನ ಬಿತ್ತರದಂಬುಧಿಯು !
ಸೊಬಗಿದು, ಸೊಗವಿದು, ಮಾಯೆಯ ಬೆಡಗಿದು? ಚಾಗಕೆ ಮಾಡಿದನೇಂ ಬಿದಿಯು?

ಬಾನೊಳು ತಿಂಗಳು ಬೆಳಗುತಿರೆ
ಮೀನುಗಳಿಣುಕುತ ತೊಳಗುತಿರೆ
ಶಾಂತಿಯು ಸೊಗದಲಿ ತುಂಬಿ ತಿರೆ
ಬಾಳಿದು ಹುಸಿಯೆಂದೆಂಬುವರೆ ?

(ಕೊಳಲು)
—ಕುವೆಂಪು

೧೫. ಮಲೆನಾಡ ಸೆರಗು

ಮಲೆನಾಡ ಸೆರಗಿನ ನೆರೆಗಿದ್ದ ಮನೆಯೊಂದು
ಮಮತೆಯ ಕುರುಹಾಗಿ ತಾ ದೊರಕಿತು
ಅಲ್ಲಿ ಸಂಪಿಗೆಯಿತ್ತು ಪಾರಿಜಾತಕವಿತ್ತು
ಮಾವು ಮಲ್ಲಿಗೆಯಿತ್ತು ಮನೆಯಿದಿರು
ಮುಗಿಲ ಮಲ್ಲಿಗೆಯಿತ್ತು ತೆಂಗಿತ್ತು ಹಲಸಿತ್ತು
ನಿಂಬಿಯ ಇಂಬಿತ್ತು ಎಡೆಎಡೆಗೆ
ಹೊಂಗೆಯ ಸಾಲಿತ್ತು ಕಣ್ಮುಂದೆ ಕೆರೆಯಿತ್ತು
ಗುಡ್ಡದ ನೆರೆಯಿತ್ತು ಅದರಾಚೆಗೆ

ವೃಕ್ಷವಾಟಿಕೆಗಳು ಬಳಬಳಸಿ ಹೋಗುವ
ಹಾದಿಬೀದಿಗಳುಂಟು ನಾಲ್ಕೆಡೆಗು
ತೋಪು ತೋಟಗಳುಂಟು ಜೋಳದ ಹೊಲವುಂಟು
ಭತ್ತದ ಗದ್ದೆಯು ಬದಿಬದಿಗು
ಬನದೇವಿಯೆಡೆಯಾಟಿಕೆಗೊಡುವ ಗುಡ್ಡದ
ಸಾಲಿನ ತೋಳುಂಟು ಪಡುವಲೊಳು
ಶಬರಿ ಪಾಮರಿಯರ ಸುಳಿದಾಟ ನಲಿದಾಟ
ಸುಗ್ಗಿ ಸುಗ್ಗಿಗು ಉಂಟು ಅವರದರೊಳು

ಋತುಗಳ ಏರಿಳಿತ ಕಾಳ ರಿಂಗಣಾಗುಣಿತ
ಬಿಡಿಬಿಡಿಸಿ ಬರೆದಂತೆ ಚಿತ್ರದೊಳು
ಬಡವರ ಅಲೆದಾಟ, ಹೊಟ್ಟೆಯ ಬೆಂಬತ್ತಿ
ಗುಳೆಯೆತ್ತಿ ಹೊರಟವರ ಹೋರಾಟವು
ದುಡಿವರ ತಿರುಕರ ಕೂಲಿ ಕುಂಬಳಿಯವರ
ಜೀವನ ಮೂಡಿರೆ ಹಾದಿಯೊಳೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

ಅಲ್ಲಿರುತಿರಲಾಗಿ ಸಹಜವಾಗಿಯೆ ನನ್ನ
ದೃಷ್ಟಿಯು ನಟ್ಟಿತು ಸೃಷ್ಟಿಯೊಳು
ಮಳೆಯಾಕೆ ಚಳಿಯಾಕೆ ಭೂಮಿಯ ಬೆಳೆಯಾಕೆ
ಬಿಸಿಲಾಕೆ ನನ್ನಾಕೆ ನೆರೆಯಾದರು
ಇರುಳವಳು ಹಗಲವಳು ಬೆಳಕು-ನೆಳಲಿನವಳು
ಬೆಳದಿಂಗಳವಳು ನಮ್ಮವಳಾದಳು
ಗಿಡಮರದ ತೂಗಾಟ ಹಸುಹಕ್ಕಿ ಕೂಗಾಟ
ಚಿನ್ನಾಟ ನನ್ನಾಟ ಒಂದಾದವು.

ಗಾಳಿಯ ಹಾರಾಟ ಏರಾಟ ಚೀರಾಟ
ಭೋರಾಟ ಕುಣಿದಾಟ ತುಳಿದಾಟವು
ಎಳೆದಾಟ ತೂರಾಟ ಎಲೆಗಳ ಕಳೆವಾಟ
ಸುಟ್ಟುರೆಯ ಗಾಳಿಯ ಹುಡಿಯಾಟವು
ಛಂದೋಗತಿಯ ಚೆಂದ, ತಾಳಲಯದಾನಂದ
ಸ್ವಚ್ಛಂದ ಬಂಧವ ಕಲಿಸಿದವು

ನಾಡ ಬೆಳಕೆಯ ನುಡಿಗೆ ಸೋತಿದ್ದ ಮನವನ್ನು
ಹಾಡಿನ ಮೋಡಿಗೆ ಒಲಸಿದವು.

ಹಾವುಗಳರಮನೆ ಹೂವಿನ ತವರ್ಮನೆ
ನಮ್ಮನೆ ನೆರೆಹೊರೆಯವರೆನ್ನಲು
ನರಿ ನಾ೦ಯಿ ಇದಿರಾಗಿ ವಾದಿಸಿ ಬೆಚ್ಚಿಸಿ
ಎಚ್ಚರಿಸಿ ನಿದ್ರೆಗೆ ನೆರವಾದವು
ಕುರಿಯಾಡು ದನಕರು ಓಡಾಡಿ ಕೂಡಾಡಿ
ನಾಡಾಡಿಗಳು ನಾವು ಜೋಡಾದೆವೆ !
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

(ಸಖೀಗೀತ)
— ಅಂಬಿಕಾತನಯದತ್ತ

೧೬. ಸಿಡಿಲು

ಹಣ್ಣು ಬಿತ್ತು ಹಣ್ಣು ಬಿತ್ತು,
ಇಂದ್ರ ವನದ ಹಣ್ಣು ಬಿತ್ತು.
ಅಲ್ಲಿ ಬಿತ್ತು ಇಲ್ಲಿ ಬಿತ್ತು,
ಎಲ್ಲಿ ಬಿತ್ತು ? ಇಲ್ಲೆ ಬಿತ್ತು.

ಆಚೆ ಗಿಡದ ಕೆಳಗೆ ಕೆಲರು,
ಈಚೆ ಗಿಡದ ಬುಡಕೆ ಕೆಲರು.
ಅಲ್ಲಿ ಕೆಲರು ಇಲ್ಲಿ ಕೆಲರು,
ಅಲ್ಲಿಯಿಲ್ಲಿ ಎಲ್ಲೊ ಕೆಲರು.

ಗಾಳಿ ಉಕ್ಕಿ ಒದರಿತಾಗ,
ಗಿಡದ ಸಾಲು ಆದುರಿತಾಗ.
ಅತ್ತ ಇತ್ತ ಅಂಧಕಾರ,
ನೋಡಿದತ್ತ ದುಂದಕಾರ.

ಲೋಕವೆಲ್ಲ ಮೊಬ್ಬುವರಿದು,
ಸರುವ ಜನದ ಮಬ್ಬುಹರಿದು,

ದೊಡ್ಡದೊಂದು ಸಪ್ಪಳಾಗಿ,
ಜಗದ ಮೋರೆ ಸಪ್ಪಗಾಗಿ.

ಗಗನ ಪೃಥ್ವಿ ಏಕವಾಗಿ,
ಲೋಕ ಕಕ್ಕವಿಕ್ಕಿಯಾಗಿ,
ಹಣ್ಣು ಬಿತ್ತು ಹಣ್ಣು ಬಿತ್ತು,
ಇಂದ್ರವನದ ಹಣ್ಣು ಬಿತ್ತು.

ಬಿತ್ತು ಬಿತ್ತು ಇಲ್ಲೆ ಬಿತ್ತು,
ಲೋಕಕೆಲ್ಲ ದಿಗಿಲು ಬಿತ್ತು.
'ಇಲ್ಲೆ ಬಿತ್ತು', 'ಇಲ್ಲೆ ಬಿತ್ತು!'
ಎಲ್ಲರಂದರಿಲ್ಲೆ ಬಿತ್ತು!!

ಬೇಡದವರ ಮೇಲೆ ಬಿತ್ತು
ಬೇಡಿದವರಿಗೆ ಇಲ್ಲ ತುತ್ತು
ಹಸಿಯದವರು ಹಲವು ಮಂದಿ
ಹಸಿದ ಜನರು ಕೆಲವು ಮಂದಿ

ಹಸಿಯದವರಿಗೆ ಅಮೃತ ವಿಷವು
ಹಸಿಯೆ ವಿಷವೆ ಅಮೃತರಸವು
ಬಯಸಿದವಗೆ ಬೇವೆ ಬೆಲ್ಲ
ಬಯಸದವಗೆ ಮೊದಲೆ ಹೊಲ್ಲ

ಬೇಡಿದವರ ಮಗ್ಗುಲಲ್ಲೆ
ಬೇಡಿ ಬಯಸುವವರು ಅಲ್ಲೆ
ಬೇಡಿದಲ್ಲಿ ಬೀಳಲಿಲ್ಲ
ಬೇಡದಲ್ಲಿ ಬಿದ್ದಿತಲ್ಲ!

ಎಲ್ಲೊ ಬಿದ್ದು ಹೋಗಲಿಲ್ಲ
ಇಲ್ಲೆ ಬಿದ್ದು ತನಗೆ ಇಲ್ಲ!!!
ಹಣ್ಣು ಬಿತ್ತು ಹಣ್ಣು ಬಿತ್ತು
ಇಂದ್ರವನದ ಹಣ್ಣು ಬಿತ್ತು!

(ನನ್ನ ನಲ್ಲ)
— ಮಧುರಚೆನ್ನ

೧೭. ಮಾಲೆಗಾರನ ಮಾತು

ಅರಸಿಯರಸಿದೆನು ನಾನು....
ಹುರುಳುಳ್ಳ ಹೂವೊಂದನು
ಮುರುಕು ಗುಡಿಲನು ಕೂಡ
ಅರಮನೆಯೊಲಾಗಿಸುವ
ಸುರಪಾರಿಜಾತಕವನು ! ॥ ೧ ॥

ಹೊರಗಿನಾ ಹೊಳಪ ಕಂಡೆ....
ಮರುಳ ನಾ ಬೆರಗುಗೊಂಡೆ ;
ಸುರಲೋಕದರಳೆಂದೆ
ಬರಿದೆ ಭ್ರಮೆಯಲಿ ಬಿದ್ದೆ
ಸುಧೆಯೆಂದು ಸುರೆಯನು ॥ ೨ ॥

ರಾಯದೋಂಟಗಳ ಬಿಟ್ಟು....
ಸುತ್ತು ಮುಳ್ ಬೇಲಿಯಿಟು ....
ಅಡವಿಯೊಳಗಡಗಿರ್ದ
ಬೆಡಗಿನಲರನು ನೋಡಿ
ನಿಂತೆ ಕಣ್ಮನವ ಕೊಟ್ಟು ! ॥ ೩ ॥

ಬನದ ಹೂವಾದರೇನು ?....
ಎನಿಪೆ ನಿನ್ನಿಂದಮರನು ;
ಧನ ಬೇಡ, ಧರೆ ಬೇಡ,
ಜನ ಬೇಡ, ಜೊತೆ ಬೇಡ !
ಮನಬೇಡುತಿದೆ ನಿನ್ನನು ! ॥ ೪ ॥

ಮುಳ್ಳುಗಳ ಕೊಂಪೆಯಿರಲಿ....
ಕಳ್ಳಿ-ಪೆಳೆ-ಕಂಟಿಯಿರಲಿ.... !
ಪೊಳ್ಳು, ನನ್ನೆದುರೆಲ್ಲ,
ತಳ್ಳಿ, ಹಾಕುವೆನವನು–
ಕೋಟಿ ಕಂಟಕವು ಬರಲಿ ! ॥ ೫ ॥

ನಿನ್ನನೇ ಪಡೆವ ಬಯಕೆ....
ನಿನ್ನನೆ ಮುಡಿವ ಬಯಕೆ !
ನನ್ನ ಮನ ತುಂಬಿಹುದು,
ನನ್ನೆದೆಯ ತುಳಿಯುವುದು,
ನನ್ನ ಕೈಗಿಂದು ನಿಲುಕೆ ॥ ೬ ॥

ಒಡೆಯನಡಿಗೇರಿಸುವೆನು....
ನನ್ನ ಮುಡಿಗೇರಿಸುವೆನು ;
ಬದುಕಿನಲಿ ಬರ್ದಿಲವನು
ಸದೆಗೈದು ತೂರುವೆನು
ಬಾ ಕೈಗೆ ಬೇಗ ನೀನು ! ॥ ೭ ॥

ಅರಸಿಯುರಸಿದೆನು ನಾನು. .
ಹುರುಳುಳ್ಳ ಹೂವೊಂದನು ;
ಮುರುಕು ಮನ-ಮನೆಗಳನು
ಸುರಲೋಕವಾಗಿಸುವ
ಅರಳು ಅಹುದಹುದು ನೀನು ॥ ೮ ॥

(ಒಡನಾಡಿ)
— ಆನಂದಕಂದ

೧೮. ಕಾಡು ನಾಡಿನಿಂ ಮಿಗಿಲು

ಅರಸುಗೆಯ್ಮೆಯ ಭರದಿ ಆತ್ಮತತ್ವವ ತಿಳಿವ
ಪರಿಯ ಮರೆವವು, ಮೊರೆದು ಗರ್ಜಿಸುವೆವು.
ರಾಜ್ಯಗಳನೊತ್ತೊತ್ತಿ ಗೆಲ್ಲವರೆ ಪೊಳಗಿಪೆವು,
ಬಳ್ಳೆಗರಸನಿಹನೆಂಬುದನೆ ಮರೆವೆವು.
ಇಂತು ಗಳಿಸುವ ಬಾಳ ಆಳ್ಕೆಯೆಂಬರೆ ? ಹೇಳ,
ಪಚ್ಚೆ ಹಸುರಿನ ಹೊಲದಿ ಮೇವ ಮಂದೆ

ಒಂದು ಗಳಿಗೆಯು ಸ್ವರ್ಗ ತಿಂದು ಮರೆಯದೆ ಸಾವ ?
ಅವರಂತೆ ನಮ್ಮ ಬಾಳ್ ಮರವೆ—ಮಾಯೆ !

ತಾನೆ ಕುಡಿಯಿಟ್ಟು ಚಿಗುರಿಟ್ಟು ಅರಲಾಗಿ ಮಿಡಿ
ಯಾಗಿ ಬಿಸಿಲುಂಡು ಕೆಂಪಾಗಿ ಹಿಗ್ಗಿ,
ತೂಗಿ ತಂಬೆಲರುಂಡ ನಸು ಜಗುಳಿ ತೊಟ್ಟಿಂದ
ಜಾರಿ ಬೀಳುವ ಹಣ್ಣಿನಂತೆ ಮಾಗಿ,
ಬೀಸುವುದು ತನ್ನೊಳಗೆ ತನ್ನ ಸಾರಸವನುಂಡು
ತೀರಿ [illegible] ಮುಕ್ತಿ,
ತನ್ನ ನೆಲೆಯನು ತಾನು ಸೇರುವುದೇ ಬದುಕು :
ಹಲವು [illegible] ಸೊಗಸು ?

[illegible] ಹುಸಿ ನಗೆಗೆ—ನಾಚುವೆನು ಘೋಷಣೆಗೆ,
ಕಣ್ಣು [illegible] ಬಲಕೆ ಚಲಕೆ
ಆಳಿಂಬ [illegible] ಘೋಷದಿಂ ಗರ್ಜಿಸುವ
ಜಂತು ಯಂತ್ರದ [illegible] ಜಗದ ಸೊಗಕೆ.
ಇಲ್ಲಿ [illegible]—ಮಂದಿಗಳ ಮೊರೆಯಿಲ್ಲ—
[illegible] ಮಿಂಚುವಂತೆ
[illegible] ಹುಬ್ಬುಗಳ ಪಡೆಯು
[illegible]

ಈ [illegible] ಹಲವು ಮುಖ ಮಿಗಿಲೆನಗೆ ;
[illegible]
[illegible]
[illegible]
[illegible]
[illegible]
[illegible] ; [illegible] ರಾಜ ;
[illegible]

[illegible] ;
[illegible]
[illegible] ;
[illegible]

ಒಮ್ಮೊಮ್ಮೆ ಮಧುರ ಮಾಸಗಳ ಮೃದು ಲಾಸ್ಯಗಳು ;
ಮಳೆಯ ಗಾಳಿಯ ತಾಂಡವಂಗಳೊಮ್ಮೆ
ಆವುದಿದೆ ತಪ್ಪು ? ಇನ್ನಾವ ಸಾವಿನ ಮುಪ್ಪು ?
ಈ ಕಾಡೆ ಸ್ವರ್ಗನಂದನವಲ್ಲವೆ ?

(ನಲ್ಕೆ)
— ಕಡೆಂಗೋಡ್ಲು ಶಂಕರಭಟ್ಟ

೧೯. ಹೊಸ ಕಾಲದ ನವಿಲು

ಮನದಣಿ ಕುಣಿಯುತ ಕೇಕೆಯ ಹಾಕುತ
ಮರಡಿಯ ಮೇಲಣ ಹಸುರಲಿ ಹಾರುವ
ಹೊಸ ಕಾಲದ ನವಿಲು.

ಬೇಸಗೆ ಬೇಗೆಯು ಹಳೆಯುದನೆಲ್ಲವ
ಸಾಸಿರ ನಾಲಿಗೆಯಿಂದಲಿ ಸವರಲು
ಪೂಸಿ ಎರೆಯಲಿಳೆ–ತಾಯಿಯ ತನಕದಿ
ಸಾಸಿರ ರೂಪದಿ ಕಾರಿನ ನೀರೆಯು
ವೇಗದಿ ಬಂದಿರಲು
ಕುಣಿವುದು ಹಗಲಿರುಳು
ಹೊಸ ಕಾಲದ ನವಿಲು .

ಬಂದಿತು ಮಳೆಗಾಲವು ಅಳೆಗಾಲವು
ಬಂದಿತು ಎನ್ನುತ ಬನದೊಳಗಿನ ದ್ವಿಜ-
ವೃಂದವು ತಾನೇ ತಾಪೆಯ ಮಾಡಿದ
ಬಂದಿಯ ವಾಸವನೊಡನೆಯೆ ಸೇರಲು
ಒಂದೇ ಬಂದೆಯದು
ಸಂದಿದೆ ಸೊಂಪದೊಳು
ಹೊಸ ಕಾಲದ ನವಿಲು.

ಮೆರೆದೆವು ಮಾಸದ ಬೇಸಗೆ ಬಿಸಿಲಲಿ
ಪೊರೆದೆವು ಜಗವನು ನೆರಳಿನಲೆನ್ನುತ

ಹಿರಿತನದಿಂದಲಿ ನಿಂತಿಹ ಮರಗಳು
ತಿರೆಯನು ಬಿರಿಯುವ ಬಿರಿಮಳೆ ಬಂದಿರೆ

ಅತಿ ಅತಿ ಅದುರಿರಲು
ತನನನ ಉಲಿವುದಿದು
ಹೊಸ ಕಾಲದ ನವಿಲು.

ಪಸೆಯನು ತಂದಿತು ಸಸಿಯನು ತೋರಿತು
ಹೊಸಹೊಸ ಹೂಗಳ ಕಣ್ಣನು ತೆರೆಯಿತು
ಕಸುಕಿನ ನೆಲದಲಿ ಹಸುರನು ಹಾಸಿತು
ಹೊಸ ಕಾಲವಿದೆಂದಾನಂದವಲಿಯೆ

ಮೈಮರೆಯುತ ಮರುಳು
ಕುಣಿವುದು ಹಗಲಿರುಳು
ಹೊಸ ಕಾಲದ ನವಿಲು.

ಕೊಳೆತಿಹ ಹುಳಿತಿಹ ಕಂದಿಹ ಕಸರಿಹ
ಹಳೆಯದ ಜೀವನ ಗಣನೆ ನುಂಗಲು
ಮಳೆಹೋದೆಡೆ ಪಕ್ವಸಸ್ಯವಿರುತಿರೆ
ಸೆಳೆಮಿಂಚಿನ ಹಣ್ಣಗಾಣವಿಸುತಿರೆ

ನಲಿವುದು ಹಗಲಿರುಳು
ನಿಲುವುದು ದಣಿಯದೊಲು
ಹೊಸ ಕಾಲದ ನವಿಲು.

ಬಾನಿನ ಬಯಲೊಳು ನಡೆದಿಹ ಬವರವಿ
ಕಾಣದ ಗುಡುಗಿನ ಗುಟ್ಟನು ಕಂಡೊಲು
ಮಾಣದ ಪ್ರೇಮದ ಹುಚ್ಚು ಬಂದೋ?
ತಾನಿದು ಹೊಸಕಾಲದ ಮೋಡಿಯಿಂದೋ

ತಲೆಯಲಿ ಕೊಡೆಯಿರಿಸಿ
ನಲಿವುದು ಹಗಲಿರುಳು
ಹೊಸ ಕಾಲದ ನವಿಲು.

ಮುಗಿಲದು ಸಡಿಲಿಸಿ ತನ್ನಯ ಮುಸುಕನು
ತೆಗೆದೊಗೆದೊಳ್ಪಿನ ನೇಸರ-ನಗೆಯಲಿ
ಝಗಝಗಿಸುತಿರೆ ಪಂಕದ ಗರುವಿನ
ಬಗೆಬಗೆ ಬಣ್ಣದ ಗರಿಯನು ತೆರೆಯುತ

ಮೆಲ್ಲನೆ ಒಗೆಯುವನು
ತಾಲದಿ ಕಾಲ್ಗಳನು
ಹೊಸ ಕಾಲದ ಸಖನು.

ಗರಿಯಲಿ ಬಗೆಬಗೆ ಬಯಕೆಯ ಹರಹುತ
ಗರುವವ ನಡುವಿನ ಪೊಡೆಯಲಿ ತೋರುತ
ಬರುತಿಹ ಬೆಳೆಯನು ಸಿರದಲಿ ಧರಿಸುತ
ಸರುವರ ಕರೆಯುವ ಕೇಕೆಯ ಹಾಕುತ

ಕುಣಿವುದು ಹಗಲಿರುಳು
ಬೆಳೆಗಾಲದ ಕುರುಹು
ಹೊಸ ಕಾಲದ ನವಿಲು.

(ವಾಸಿಗ)
-ರಂ. ಶ್ರೀ. ಮುಗಳಿ

೨೦. ದಿವ್ಯಜ್ಯೋತಿ

ತಿಳಿ ನೀಲದಲ್ಲಿ ತಾ ನೀಲವಾಗಿ ಅವ ಹೋದ ದೂರ ದೂರ
ಬೆಳಗಿಹುದು ಇಲ್ಲಿ ಅವ ಬಿಟ್ಟ ಬೆಳಕು ; ಇನ್ನೆಷ್ಟು ಏಕೆ ಖಾರ ?

ಅಂದು ಸಂಜೆ ಪ್ರಾರ್ಥನೆಗೆ ದೇವಮಂದಿರದ ದಾರಿಯಲ್ಲಿ
ಆಚೆ ಈಚೆ ಮೊಮ್ಮಕ್ಕಳಿಬ್ಬರಲಿ ಮೈಯ ಭಾರ ಚೆಲ್ಲಿ
ಜಗದ ಕರುಣೆ ನಡೆವಂತೆ ನಡೆದು ಮಂದಿರದ ಪೀಠವೇರಿ
ನಿಂದಲ್ಲೊ–ಜಡವುಳಿದು ಜೀವವೊಂದಾಯ್ತು ದೇವನಲ್ಲಿ

ಎಸೆದ ಗುಂಡಿಗಾ ಕುಸಿದ ದೇಹದಲಿ ವಿಮಲ ರಕ್ತ ಚೆಲ್ಲಿ
ಮೀಯಿಸಿತ್ತು ಈ ಜಗದ ಮನವನೇ ಶೋಕ ಜಲಧಿಯಲ್ಲಿ
ಮುಗಿದ ಕೈಯು ಮುಗಿದಂತೆ ಇತ್ತು : ನೆಲಸಿತ್ತು ಕ್ಷಮೆಯು ಮೊಗದಿ
ಎದೆಯೊಳೆಂಥ ತಿಳಿ ಭಾವವಿತ್ತು ! ಅದನಾವ ಬಲ್ಲ ಜಗದಿ ?

ಹೋದ ಹೋದನವ ತ್ಯಾಗಜೀವನದ ತುತ್ತತುದಿಯನೇರಿ
ಏರಿ ಏರಿದೊಲು ಅಂತರಂಗದೈಸಿರಿಯ ಜಗಕೆ ತೋರಿ

ಸಪ್ತರ್ಷಿಗಳ ಸನ್ನೆಸನ್ನೆ ಕಣ್ಣಿದಿರು ಎತ್ತಿ ತೋರಿ
ಧ್ರುವ ಶೋಧನಾಪಥವ ಏರಿ ಅವ ಹೋದನಾವ ದಾರಿ ?

ಎನಿತು ಸರಳ ನುಡಿ, ಎಷ್ಟು ಸಹಜ ನಡೆ, ಮನದ ಮಹತಿಯೇನು !
ಅವನ ಎದೆಯ ಉನ್ನತಿಯ ನಿಲುಕುವದು ಯಾವ ಗಿರಿಯ ಸಾನು ?
ಇರದೆ ಅವನ ಕರುಣೆಯನು ಧರೆಗೆ ಕರೆವಂಥ ಕಾಮಧೇನು ?
ಅವನು ಸ್ನೇಹ ಸಿರಿಯಲಿ ಲಯಿಸಿತೆಂಥವರ " ನಾನು-ನಾನು ".

ತಿರೆಯಿಂದ ಎತ್ತ ಹಾಯಿಸುದು ನೋಟ ಮೇಲಕ್ಕೆ ಬಾನಿನೆಡೆಗೆ
ಆ ಬಾನ ತಾರೆ ಇಳಿದಂತೆ ಇಹುದು ಬೆಳಕೊಂದು ಕೆಳಗೆ ಇಳೆಗೆ
" ಎನಿತು ಕ್ರಾಂತಿ ? ಕಾಣದಿಹ ಜ್ಯೋತಿ ? " ಎಂಬರುಹು ಮೂಡಲೊಡನೆ
ಆ ಬೆಳಕ ನಂದಿ ಸಿಂಪಿಸನು ಧೀರ ಎದೆ ತೆರೆದು ನಾಡ ಕರೆಗೆ

(ನಕ್ಷತ್ರಗಾನ)
— ದಿ. ಎಸ್. ಕರ್ಕಿ

೨೧. ಭಾವಜೀವಿ

ಕನ್ನಡ ಸಂಸ್ಕೃತಿಯ ಚೆಲು ರಥೋತ್ಸವ ಕಂಡು
ಮನದೊಳೇನೋ ಮಿಂಚಿದಂತೆ ಭಾಸ !
ಅವಳ ರಸಗಂಗೆಯಲಿ ಈಸಿ ಬಹ ಹಂಬಲದಿ
ಜೀವ ಸಾಗುತ ಪಡೆದ ಮಧುಸುಹಾಸ.

ಕ್ಷಾತ್ರ ಶಕ್ತಿ-ಸಂಸ್ಕೃತಿಯ ಹೊಳಹು ತೆರೆಹೊಡೆದಂತೆ
ಭಾವಜೀವಿಯ ಮನವು ಮುಂದೋಡಿತು
ಮುಂಜಾವದ ಹೊಂಬೆಳಕು ಉಷೆಯ ದರ್ಶನವೀಯೆ
ಎದೆಯ ಬಟ್ಟಲು ತುಂಬಿ ತುಳುಕುತಿತ್ತು.

ಸೌಂದರ್ಯದರ್ಶನಕೆ ದೀಪ್ತವಾಗಿಹ ಮನವು
ಪ್ರಕೃತಿಯೌಪಾಸನೆಯ ಕೈಕೊಂಡಿತು
ಬೆಂಗುಲಾಬಿಯ ಪಕಳೆ ಅಕಳಂಕವಾಗಿರುವ
ಭಾವವೀಣೆಗೆ ಬೆರಳನಾಡಿಸಿತ್ತು.

ಹೊನ್ನರಾಶಿಯು ಸುರಿದು ಕೊಂಡುಕೊಳ್ಳಲುಬಹುದೆ ?
ಚೆಲುವಿಕೆಯು ತಾನಲ್ಲಿ [illegible] :
ದೇವದೇವನ ತೇಜದೋಟಿ ಪ್ರಭೆಗೆ ಸಂದು
ಸೃಷ್ಟಿಯುಂ ಮೈದೋರಿ ನಿಂದು "ನವೋನವು"

ವಿಶ್ವಮುನ್ಮೀಲಿಸುವದಾ ತೇಜಃಪುಂಜ
ಆ ಗಭಸ್ತಿಯು ಗರ್ಭಗುಡಿಯು ಬೆಳಕ !
ಒಳಗಣ್ಣ ನಿಮಿಷದಲಿ ಮೂಡಬಹುದಾ ಬೆಳಕು
ಅದಕೆ ಶರಣಾಗಿರಲು ತಿಳಿವುದೆ ನಾಕ.

ಅಣುಕಣದ ಸೌಂದರ್ಯ ಬಿಂಬಿಸುತ [illegible]
ಹಿರಿದು ಕಿರಿದೆಂಬುವದು ಅಲ್ಲಬಿಟ್ಟು ;
ಅಂತರಂಗದ ಶುದ್ಧಿ ಬುದ್ಧಿಗಳು [illegible]
ಭೇದಭಾವಗಳೆಲ್ಲ [illegible].

([illegible])
— ಚೆನ್ನವೀರ ಕಣವಿ

೨೨. ನವಯುಗ !

ಘೋಷಿಸುತಿದೆ ನವಯುಗ ಹೊಸ ಚರಣಂಗಳ ಚೆಲ್ಲಿ
ತೀವ್ರತೆ ತಂಗಿರಣಂಗಳ ಮನದಂಗಳದಲ್ಲಿ !
ಬರುತಿದೆ ನವ ಮನ್ವಂತರದಾಂತರ್ಯದ ತೋಟ
ತರುತಿದೆ ಹೊಸ ಹೊಂಬಿಸಿಲಕೆಂಪು [illegible] ! ॥ ೧ ॥

ಬಾಳಿನ ಕಹಿ ನೋವುಗಳ ಚಿಂತೆ ಹಿಂಗಿಸಿ ತಂಗೊಳಿಸಿ
ನಾಳಿನ ಹೊಸ ಬಾಳಿಗೆ ಸ್ವಪ್ನಂಗಳನೆ ಬಯಸಿ
ಕಳೆದಿಹ ಸವಿಗನಸಿನ ನೆನಪುಗಳ ಸಂಗ್ರಹಿಸಿ
ಮೆಲುಕಾಡಿಸಿ ಮೈಗೂಡಿಸಿ ನವರಸವನು ಸೂಸಿ ! ॥ ೨ ॥

ಬನಬನಗಳು ನರುಗೆಂಪಿನ ತಳಿರುಡಿಗೆಯ ಧರಿಸಿ
ಕುಸುಮಂಗಳು ತಂಗಾಳಿಗೆ ತನಿಗಂಪನು ಬೆರಸಿ

ಪ್ರಕೃತಿಯು ಸರ್ವಾಂಗದಿ ಶೃಂಗಾರವೇ ಮೈದಾಳಿ
ಪುರುಷನ ವ್ರತಭಂಗಕೆ ಅದೊ ಮುಂದಾಗಿದೆ ದಾಳಿ ! ॥ ೩ ॥

ಮಿಂಚುತಲಿದೆ ತಾರುಣ್ಯದ ಸೌಂದರ್ಯದ ಕಾಂತಿ
ಸಂಚಯಿಸಿದೆ ನವಜೀವನದಾಂತರ್ಯದ ಶಾಂತಿ !
ಮನ ಮನದಲಿ ಮಿಡಿಯುತಲಿದೆ ನವಭಾವಮೃದಂಗ
ತನುಮನದಲಿ ಚಿಮ್ಮುತಲಿದೆ ಅನುರಾಗದ ರಂಗ ! ॥ ೪ ॥

ನರ್ತಿಸುತಿದೆ ನಿರ್ಭಯದಿಂ ಹೊಸಗಾಲದ ನವಿಲು
[illegible]ಸಿದೆ ಫ[illegible]ಗದ ನವ ಸಂಗೀತದ ಹೊನಲು !
ಸಿರಿ ಗಾನವ ಹೇಳುತಲಿದೆ ಪ್ರಸ್ಥಾನದ ಗೀತಾ
ಉರುಳುತಲಿದೆ ಕಾಲನ ರಥಚಕ್ರಂಗಳು ನಿರುತಾ ! ॥ ೫ ॥

[illegible]ತಲಿದೆ [illegible]ಯುತಲಿದೆ ದಾರಿಯು ಬಲು ದೂರ !
ಅರುಣೋದಯ ಸಿರಿಮಾಯೆಯು ಅನುಭವಿಸುತ ನೂರ
ಸಾಗಿದೆ ಜ[illegible] ಸಾಹಸ ತೋಳ್ತೊಟ್ಟಿಲದಲಿ ತೂಗಿ
[illegible]ಗಿದೆ ಮನ ಸ್ವಪ್ನದ ಘನತಾನಕೆ ತಲೆವಾಗಿ ! ॥ ೬ ॥

[illegible]ದ ಸುಂದದಾನ ನೀಡಿದೆ ಜಗಕಿಂದು
[illegible] ಸುಮಲ್ಲಿ [illegible] ತನಿರಸವನು ತಂದು !
[illegible]ದಲಿ ನವಾಗಿ ತೊಲಗದೆ ತಾನಿಂದು ?
[illegible]ಯು ಬೆಳಗಿದೆ ನವ ಸಂಸ್ಕರಣಕೆ ಸಂದು ! ॥ ೭ ॥

—ಎಸ್. ಡಿ. ಇಂಚಲ

೨೩. ಸ್ವರಾಜ್ಯ

[illegible] [illegible]ಯು ಹರಿಯಲಿ
[illegible] [illegible] [illegible]ಯಲಿ
[illegible] [illegible]ದು ಭರದಲಿ
[illegible]ರತೆಯಿಲ್ಲ ಸರಿಯಲಿ.

ಪೊಸತು ಆಸೆಯೊದವಲಿ
ರಸದ ಬುಗ್ಗೆ ಚಿಮ್ಮಲಿ
ಹಸಿವು ತೃಷೆಗಳಡಗಲಿ
ಬೆಸನ ಚಿಂತೆ ಕಳೆಯಲಿ.

ಇದ್ದ ವೈರ ಓಡಲಿ
ಬುದ್ಧಿ ಹೃದಯ ಕೂಡಲಿ
ಶುದ್ಧ ವಿದ್ಯೆ ಮೂಡಲಿ
ಸಿದ್ಧಿ ಶುಭವ ನೀಡಲಿ.

ಎದೆಯ ಕದವು ತೆರೆಯಲಿ
ಸದಯತೆಯದು ಮೆರೆಯಲಿ
ಮುದದ ಬೆಳಕು ಸುರಿಯಲಿ
ಹೃದಯ ಕುಸುಮ ಅರಳಲಿ.

ಜ್ಞಾನ ರಾಜನಾಗಲಿ
ಪ್ರೇಮ ರಾಣಿಯಾಗಲಿ
ಸಮತೆ ಮಂತ್ರಿಯಾಗಲಿ
ಸುಸ್ವರಾಜ್ಯ ಸಾಗಲಿ.

(ಕಲ್ಯಾಣಕ್ರಾಂತಿ)
— ಗಂಗಪ್ಪ ವಾಲಿ